ಕರ್ನಾಟಕ ಸರ್ಕಾರ
ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು – 560 001

ಮತ್ತು
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ನೃಪತುಂಗ ರಸ್ತೆ, ಬೆಂಗಳೂರು.
*ಸಹಯೋಗ*
ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,
ಮಲ್ಲೇಶ್ವರಂ, ಬೆಂಗಳೂರು

# ಚೇತನ

## ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ ಪ್ರಶ್ನೋತ್ತರ ಮಾಲಿಕೆ

## ಸಮಾಜ ವಿಜ್ಞಾನ

**ಆಯೋಜಕರು**

**ಶ್ರೀ ಮೊಹಮ್ಮದ್ ಮೊಹಸಿನ್,**
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.

**ಪರಿಕಲ್ಪನೆ**

**ಶ್ರೀಮತಿ ಜೋಹರಾ ಜಬೀನ್ ಎಂ.**
ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.

# ಆಶಯ

ಆತ್ಮೀಯ ಶಿಕ್ಷಕ ಮಿತ್ರರೇ,

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಿಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಅಧಿಕಾರಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಚೇರಿ, ನೃಪತುಂಗ ರಸ್ತೆ,
ಬೆಂಗಳೂರು – 560 001.

# ಮುನ್ನುಡಿ

ಆತ್ಮೀಯ ಶಿಕ್ಷಕ ಮಿತ್ರರೇ,

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ. ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧವ್ಯವಾದಗಳು.

**ಶ್ರೀಮತಿ ಝೋಹರಾ ಜಬೀನ್ ಎಂ.**
**ನಿರ್ದೇಶಕರು,**
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ
ನಿರ್ದೇಶನಾಲಯ, ಆಯುಕ್ತರ ಕಚೇರಿ, ನೃಪತುಂಗ ರಸ್ತೆ,
ಬೆಂಗಳೂರು – 560 001.

## ಸೂಚನೆಗಳು

* ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ ಅದಕ್ಕಾಗಿ ನೀಡಿರುವ 'ಚೇತನ', 'ಸಮೃದ್ಧಿ' ಹಾಗೂ 'ಸಮರ್ಥ' ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.
* ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.
* ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು 'ಚೇತನ' ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುವಂತೆ ಮಾಡುವುದು.
* ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು 'ಚೇತನ' ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ 'ಸಮೃದ್ಧಿ' ಹಾಗೂ ಕೊನೆಯಲ್ಲಿ 'ಸಮರ್ಥ' ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.
* ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು 'ಚೇತನ' ಹಾಗೂ 'ಸಮೃದ್ಧಿ' ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ 'ಸಮರ್ಥ' ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.
* ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.
* ನಿಗಧಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಭೋಧನಾ ಚಟುವಟಿಕೆಗಳನ್ನು ನಡೆಸುವುದು.
* ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.
* ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.
* 'ಚೇತನ', 'ಸಮೃದ್ಧಿ', ಹಾಗೂ 'ಸಮರ್ಥ' ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.
* 'ದಾರಿದೀಪ' : ಸಮಾಜವಿಜ್ಞಾನ ವಿಷಯದ ಫಲಿತಾಂಶದಲ್ಲಿ ಹೆಚ್ಚಿನ ಸಾಧನೆಗೆ ನೆರವಾಗಬಹುದು.

## *ಸಂಯೋಜಕರು :*

* ಶ್ರೀಮತಿ ಮಂಜುಳ ಆರ್, ಹಿರಿಯ ಸಹಾಯಕ ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು.
* ಶ್ರೀ ಮರಿಗೌಡ. ಬಿ. ಎನ್., ಹಿರಿಯ ಸಹಾಯಕ ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿದೇಶನಾಲಯ, ಬೆಂಗಳೂರು.

## ಸಲಹೆ ಮತ್ತು ಮಾರ್ಗದರ್ಶನ

* ಶ್ರೀಮತಿ ಮೈಮುನ್ನಿಸಾಬೇಗಂ, ಉಪನ್ಯಾಸಕರು, ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ, ಮಂಗಳೂರು.

## ಸಂಪನ್ಮೂಲ ಶಿಕ್ಷಕರು

* ಶ್ರೀಮತಿ ಭಾರತಿ ಶಾಸ್ತ್ರಿ, ಇ.ಸಿ.ಓ. ಮೈಸೂರು ಉತ್ತರ ವಲಯ, ಮೈಸೂರು, ಮೊ. 9900402545
* ಶ್ರೀ ಸಿದ್ದೇಗೌಡ, ಸ.ಪ್ರೌ.ಶಾಲೆ, ಕೇರ‍್ಗಳ್ಳಿ, ಮೈಸೂರು ತಾಲ್ಲೂಕು, ಮೈಸೂರು, ಮೊ. 8197817620
* ಶ್ರೀ ರಮೇಶ್ ಎಂ., ಸ.ಪ್ರೌ.ಶಾಲೆ, ಜಿ.ಕೆ.ಹಳ್ಳಿ, ಚೆನ್ನಗಿರಿ ತಾಲ್ಲೂರು, ದಾವಣಗೆಗೆ ಜಿಲ್ಲೆ ಮೊ. 9901867082
* ಲಿಲ್ಲೀ ಜೋಸೆಫ್, ಸ.ಪ್ರೌ.ಶಾಲೆ, ಮೇಲೂರು, ಕೆ.ಆರ್.ನಗರ (ತಾ), ಮೈಸೂರು (ಜಿ), ಮೊ. 9980738211
* ಬಸವರಾಜು, ಸ.ಪ್ರೌ.ಶಾಲೆ, ಹದಿನಾರು, ನಂಜನ ಗೂಡು ತಾಲ್ಲೂಕು, ಮೈಸೂರು, ಮೊ. 9972261467
* ಸಿ.ತೀರ್ಥಲಿಂಗಪ್ಪ, ಸ.ಪ್ರೌ.ಶಾಲೆ, ಕತ್ತಿಗೆ ಹೊನ್ನಾಳಿ (ತಾ) ದಾವಣಗೆರೆ ಜಿಲ್ಲೆ, ಮೊ. 9945912224
* ಮಹೇಶ್ ಕೆ., ಸ.ಪ್ರೌ.ಶಾಲೆ, ನವಿಲೂರು, ನಂಜನಗೂಡು ತಾಲ್ಲೂಕು ಮೈಸೂರು (ಜಿ) ಮೊ. 9844728007

# ಚೇತನ

## ಸಮಾಜ ವಿಜ್ಞಾನ
## ಪ್ರಶ್ನಾಕಾರ್ಡ್‌ಗಳು

## ಕನ್ನಡ ಮಾಧ್ಯಮ

# ಕಾರ್ಡ್ : 1

# ಹತ್ತನೇ ತರಗತಿ

# ಸಮಾಜ ವಿಜ್ಞಾನ

# * ದಾರಿದೀಪ *

# * ಪಾಸಿಂಗ್ ಪ್ಯಾಕೇಜ್ *

## ಕನ್ನಡ ಮಾಧ್ಯಮ

## ಒಟ್ಟು ಅಧ್ಯಾಯಗಳು : 40

## ಒಟ್ಟು ಪುಟಗಳ ಸಂಖ್ಯೆ : 96

## ಅಧ್ಯಾಯ–1 ಭಾರತಕ್ಕೆ ಯೂರೋಪಿಯನ್ನರ ಆಗಮನ

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಹೊಸ ಭೂ ಪ್ರದೇಶಗಳನ್ನು ಅನ್ವೇಷಿಸಲು ಪ್ರೋತ್ಸಾಹ ನೀಡಿದ ರಾಷ್ಟ್ರಗಳು

ಉ. ಎ) ಸ್ಪೇನ್ ಮತ್ತು ಇಟಲಿ ಬಿ) ಪೋರ್ಚುಗಲ್ ಮತ್ತು ಬ್ರಿಟನ್
ಸಿ) ಸ್ಪೇನ್ ಮತ್ತು ಪೋರ್ಚುಗಲ್ ಡಿ) ಬ್ರಿಟನ್ ಮತ್ತು ಫ್ರಾನ್ಸ್

2. ಪ್ಲಾಸಿಕದನ ನಡೆದ ವರ್ಷ

ಉ. ಎ) 1857 ಬಿ) 1758
ಸಿ) 1757 ಡಿ) 1775

3. ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿದವರು.

ಉ. ಎ) ಡೂಪ್ಲೆ ಬಿ) ಸರ್ ಐರ್‌ಕೂಟ್
ಸಿ) ರಾಬರ್ಟ್‌ಕ್ಲೈವ್ ಡಿ) ಲಾರ್ಡ್‌ವೆಲ್ಲೆಸ್ಲಿ

4. ಪ್ಲಾಸಿಕದನದಲ್ಲಿ ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿದವರು

ಉ. ಎ) ಸರ್ ಐರ್‌ಕೂಟ್ ಬಿ) ರಾಬರ್ಟ್‌ಕ್ಲೈವ್
ಸಿ) ಲಾರ್ಡ್‌ವೆಲ್ಲೆಸ್ಲಿ ಡಿ) ಲಾರ್ಡ್‌ಡಾಲ್‌ಹೌಸಿ

5. ಬಂಗಾಳದಲ್ಲಿ ದ್ವಿ ಸರ್ಕಾರವನ್ನು ಜಾರಿಗೆ ತಂದವರು

ಉ. ಎ) ಸಿರಾಜುದ್ದೌಲ ಬಿ) ಡೂಪ್ಲೆ ಸಿ) ರಾಬರ್ಟ್‌ಕ್ಲೈವ್ ಡಿ) ಮೀರ್‌ಜಾಫರ್

6. ವಾಸ್ಕೋಡಿಗಾಮನು ಭಾರತದ ಈ ಪ್ರದೇಶಕ್ಕೆ ಬಂದಿಳಿದನು

ಉ. ಎ) ಕಣ್ಣಾನೂರು ಬಿ) ಕಲ್ಲಿಕೋಟೆ ಸಿ) ಮಾಹೆ ಡಿ) ಕೊಚ್ಚಿನ್

## ಅಧ್ಯಾಯ–2 ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

7. ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಆರಂಭವಾದದ್ದು ಇವರ ಕಾಲದಲ್ಲಿ

ಉ. ಎ) ರಾಜ ಒಡೆಯರು ಮತ್ತು ಚಿಕ್ಕದೇವರಾಜ
ಬಿ) ಕಂಠೀರವ ನರಸರಾಜ ಮತ್ತು ಚಿಕ್ಕದೇವರಾಜ
ಸಿ) ಯದುರಾಯ ಮತ್ತು ಕೃಷ್ಣರಾಯ
ಡಿ) ಕೃಷ್ಣದೇವರಾಯ ಮತ್ತು ಮುಮ್ಮಡಿ ಕೃಷ್ಣರಾಜ

8. ಮೈಸೂರು ರಾಜ್ಯದ ಕೊನೆಯ ಅರಸರು

ಉ. ಎ) ಮುಮ್ಮಡಿ ಕೃಷ್ಣರಾಜ ಬಿ) ಜಯಚಾಮರಾಜ

ಸಿ) ನಾಲ್ವಡಿ ಕೃಷ್ಣರಾಜ ಡಿ) ಚಿಕ್ಕದೇವರಾಜ

9. ಭಾರತದಿಂದ ಹೊರಗೆ ಕಾಲಿಟ್ಟ ಪ್ರಥಮ ದೇಶೀದೊರೆ

ಉ. ಎ) ಲಿಂಗರಾಜ ಬಿ) ಚಿಕ್ಕವೀರರಾಜ

ಸಿ) ದೊಡ್ಡವೀರರಾಜ ಡಿ) ವೀರರಾಜ

10. ಮೂರನೆ ಮೈಸೂರು ಯುದ್ಧಕ್ಕೆ ತತ್‌ಕ್ಷಣದ ಕಾರಣ

ಉ. ಎ) ಇಂಗ್ಲೀಷರು ಮಾಹೆ ವಶಪಡಿಸಿ ಕೊಂಡದ್ದು

ಬಿ) ಟಿಪ್ಪು ತಿರುವಾಂಕೂರಿನ ಮೇಲೆ ದಾಳಿ ಮಾಡಿದ್ದು

ಸಿ) ಇಂಗ್ಲೀಷರು ಹೈದರಾಲಿ ಮೇಲೆ ಆಕ್ರಮಣ ಮಾಡಿದ್ದು

ಡಿ) ಟಿಪ್ಪು ಸಹಾಯಕ ಸೈನ್ಯ ಪದ್ಧತಿ ತಿರಸ್ಕರಿಸಿದ್ದು

11. ಮೊದಲ ಆಂಗ್ಲೋ – ಮೈಸೂರು ಉದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು.

ಉ. ಎ) ಮಂಗಳೂರು ಒಪ್ಪಂದ ಬಿ) ಶ್ರೀರಂಗಪಟ್ಟಣ ಒಪ್ಪಂದ

ಸಿ) ಮೈಸೂರು ಒಪ್ಪಂದ ಡಿ) ಮದ್ರಾಸ್ ಒಪ್ಪಂದ

12. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು

ಉ. ಎ) ಲಾರ್ಡ್‌ವೆಲ್ಲಸ್ಲಿ ಬಿ) ರಾಬರ್ಟ್‌ಕ್ಲೈವ್

ಸಿ) ವಾರನ್‌ಹೇಸ್ಟೀನ್ಸ್ ಡಿ) ಲಾರ್ಡ್‌ಡಾಲ್‌ಹೌಸಿ

13. ಕ್ರಿ.ಶ 1781ರಲ್ಲಿ ಹೈದರಾಲಿಯನ್ನು ಸೋಲಿಸಿದ ಬ್ರಿಟಿಷ್ ಸೇನಾಧಿಕಾರಿ.

ಉ. ಎ) ಕಾಬರ್ಟ್‌ಕ್ಲೈವ್ ಬಿ) ಸರ್ ಐರ್ ಕೂಟ್

ಸಿ) ಲಾರ್ಡ್‌ವೆಲ್ಲೆಸ್ಲಿ ಡಿ) ವಾರನ್ ಹೆಸ್ಟೀನ್ಸ್

## ಅಧ್ಯಾಯ–3 ಜನಪದ ಚರಿತ್ರೆ

14. ಬಳ್ಳಾರಿ ಪ್ರದೇಶದಲ್ಲಿ ಜನಸಾಮಾನ್ಯರ ಮನದಲ್ಲಿ ಇಂದಿಗೂ ಉಳಿದಿರುವ ವ್ಯಕ್ತಿ

ಉ. ಎ) ಟಿಪ್ಪು ಬಿ) ಕೃಷ್ಣದೇವರಾಯ

ಸಿ) ಕುಮಾರರಾಮ ಡಿ) ಪ್ರವಾಸಿಕಥನಗಳು

15. ಮೌಖಿಕ ಚರಿತ್ರೆಯನ್ನು ನಿರೂಪಿಸುವ ಒಂದು ಆಕರ

ಉ. ಎ) ನಾಣ್ಯಗಳು ಬಿ) ಶಾಸನಗಳು

ಸಿ) ಲಾವಣಿಗಳು ಡಿ) ಪ್ರವಾಸಿಕಥನಗಳು

## ಅಧ್ಯಾಯ-4 ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

16. ಲಾರ್ಡ್ ವೆಲ್ಲೆಸ್ಲಿ ಜಾರಿಗೆ ತಂದ ಪದ್ಧತಿ

ಉ. ಎ) ಜಮೀನ್ದಾರಿ ಪದ್ಧತಿ　　ಬಿ) ರೈತವಾರಿ ಪದ್ಧತಿ

ಸಿ) ದತ್ತು ಮಕ್ಕಳಿಗೆ ಹಕ್ಕಿಲ್ಲ　　ಡಿ) <u>ಸಹಾಯಕ ಸೈನ್ಯ ಪದ್ಧತಿ</u>

17. ಮೊದಲ ಆಂಗ್ಲೋ-ಮರಾಠ ಯುದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು.

ಉ. ಎ) ಮಂಗಳೂರು ಒಪ್ಪಂದ　　ಬಿ) ಶ್ರೀರಂಗ ಪಟ್ಟಣ ಒಪ್ಪಂದ

ಸಿ) <u>ಸಾಲ್‌ಬಾಯಿ ಒಪ್ಪಂದ</u>　　ಡಿ) ಬಸ್ಸಿನ್ ಒಪ್ಪಂದ

18. 'ಪಂಜಾಬಿನ ಸಿಂಹ'ನೆಂದು ಪ್ರಸಿದ್ಧನಾಗಿದ್ದವನು

ಉ. ಎ) ಲಾಲ್‌ಸಿಂಗ್　　ಬಿ) <u>ರಣಜಿತ್‌ಸಿಂಗ್</u>

ಸಿ) ದುಲೀಪ್‌ಸಿಂಗ್　　ಡಿ) ಮಾನ್‌ಸಿಂಗ್

19. ರಾಬರ್ಟ್‌ಕ್ಲೈವನ 'ದ್ವಿ ಸರ್ಕಾರ'ವನ್ನು ರದ್ದು ಪಡಿಸಿದ ಶಾಸನ

ಉ. ಎ) ಮಿಂಟೊ-ಮಾರ್ಲೆಶಾಸನ　　ಬಿ) ಪಿಟ್ಸ್ ಇಂಡಿಯಾಶಾಸನ

ಸಿ) <u>ರೆಗ್ಯುಲೇಟಿಂಗ್‌ಶಾಸನ</u>　　ಡಿ) ಇಂಡಿಯನ್ ಕೌನ್ಸಲ್ ಶಾಸನ

20. ಸರ್ವೋಚ್ಚ ನ್ಯಾಯಾಲಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ

ಉ. ಎ) ಭಾರತ ಸರ್ಕಾರದ ಕಾಯ್ದೆ　　ಬಿ) ಪಿಟ್ಸ್ ಇಂಡಿಯಾಶಾಸನ

ಸಿ) <u>ರೆಗ್ಯುಲೇಟಿಂಗ್‌ಶಾಸನ</u>　　ಡಿ) ಇಂಡಿಯನ್ ಕೌನ್ಸಿಲ್ ಕಾಯ್ದೆ

21. ಬಂಡವಾಳ ಶಾಹಿತ್ವ ವ್ಯವಸ್ಥೆಯಿಂದ ಕಣ್ಮರೆಯಾದ ಸಮಾಜದ ಒಂದು ವರ್ಗ

ಉ. ಎ) ವರ್ತಕವರ್ಗ　　ಬಿ) ಪ್ರಭುತ್ವವರ್ಗ

ಸಿ) <u>ಕರಕುಶಲಕರ್ಮಿವರ್ಗ</u>　　ಡಿ) ರೈತಾಪಿವರ್ಗ

22. ಸಹಾಯಕ ಸೈನ್ಯ ಪದ್ಧತಿಯನ್ನು ಮೊದಲು ಅಂಗೀಕರಿಸಿದವರು

ಉ. ಎ) ಮೈಸೂರಿನ ಒಡೆಯರು　　ಬಿ) ಔದ್‌ನ ನವಾಬ

ಸಿ) <u>ಹೈದರಾಬಾದಿನ ನಿಜಾಮ</u>　　ಡಿ) ಬಂಗಾಳದ ನವಾಬ

## ಅಧ್ಯಾಯ-5 ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

23. ಭಾರತ ಇತಿಹಾಸದಲ್ಲಿ 'ಭಾರತೀಯ ನವೋದಯಕಾಲ'ವೆಂದು ಗುರ್ತಿಸಲ್ಪಡುವುದು.

ಉ. ಎ) 17ನೇ ಶತಮಾನ　　ಬಿ) 18ನೇ ಶತಮಾನ

ಸಿ) 16ನೇ ಶತಮಾನ　　ಡಿ) <u>19ನೇ ಶತಮಾನ</u>

24. 'ಭಾರತೀಯ ನವೋದಯ'ದ ಜನಕ

ಉ. ಎ) ದಯಾನಂದ ಸರಸ್ವತಿ　　ಬಿ) ಸ್ವಾಮಿವಿವೇಕಾನಂದ

ಸಿ) <u>ರಾಮಮೋಹನರಾಯ್</u>　　ಡಿ) ಜ್ಯೋತಿಭಾಪುಲೆ

25. ಆರ್ಯ ಸಮಾಜದ ಸ್ಥಾಪಕರು

ಉ. ಎ) ಆತ್ಮರಾಂ ಪಾಂಡುರಂಗ　　ಬಿ) ರಾಮಕೃಷ್ಣ ಪರಮಹಂಸ

ಸಿ) ರಾಮಮೋಹನ್‌ರಾಯ್　　ಡಿ) <u>ದಯಾನಂದಸರಸ್ವತಿ</u>

26. ಆತ್ಮಾರಾಂ ಪಾಂಡುರಂಗರವರು ಸ್ಥಾಪಿಸಿದ ಸಮಾಜ

ಉ. ಎ) ಬ್ರಹ್ಮ ಸಮಾಜ　　ಬಿ) ಆರ್ಯಸಮಾಜ

ಸಿ) <u>ಪ್ರಾರ್ಥನಾ ಸಮಾಜ</u>　　ಡಿ) ಸತ್ಯಶೋಧಕ ಸಮಾಜ

27. ಆರ್ಯಸಮಾಜವನ್ನು ದಯಾನಂದ ಸರಸ್ವತಿರವರು ಸ್ಥಾಪಿಸಿದರೆ, ಬ್ರಹ್ಮಸಮಾಜದ ಸ್ಥಾಪಕರು

ಉ. ಎ) ಜ್ಯೋತಿಭಾಪುಲೆ　　ಬಿ) ಆತ್ಮಾರಾಂ ಪಾಂಡುರಂಗ

ಸಿ) ಎಂ.ಜಿ.ರಾನಡೆ　　ಡಿ) <u>ರಾಮಮೋಹನ್‌ರಾಯ್</u>

28. ಸರ್‌ಸಯ್ಯದ್ ಅಹಮದ್ ಖಾನರವರು ಆರಂಭಿಸಿದ ಚಳುವಳಿ

ಉ. ಎ) ಶುದ್ಧಿ ಚಳುವಳಿ　　ಬಿ) ಪುನರುಜ್ಜೀವನ ಚಳುವಳಿ

ಸಿ) <u>ಅಲಿಘರ್ ಚಳುವಳಿ</u>　　ಡಿ) ನವೋದಯ ಚಳುವಳಿ

29. ತಿಲಕರು ಆರಂಭಿಸಿದ ಪತ್ರಿಕೆ 'ಮರಾಠ'ವಾದರೆ, ಆನಿಬೆಸೆಂಟರು ಆರಂಭಿಸಿದೆ ಪತ್ರಿಕೆ

ಉ. ಎ) ಕೇಸರಿ　　ಬಿ) ಸಂವಾದ ಕೌಮುದಿ

ಸಿ) <u>ನ್ಯೂ ಇಂಡಿಯಾ</u>　　ಡಿ) ಡಿ ಬೆಂಗಾಲ್‌ಗೆಜೆಟ್

30. ವಿವೇಕಾನಂದರ ಚಿಂತನೆಗಳಿಂದ ಗಾಂಧೀಜಿಯವರು ಪ್ರೇರಿತರಾದಂತೆ, ಜ್ಯೋತಿಭಾಪುಲೆರವರ ತತ್ವಗಳಿಂದ ಪ್ರಭಾವಿತರಾದವರು

ಉ. ಎ) ರಾಮಕೃಷ್ಣ ಪರಮಹಂಸ　　ಬಿ) <u>ಡಾ॥ ಬಿ.ಆರ್. ಅಂಬೇಡ್ಕರ್</u>

ಸಿ) ರಾಮಮೋಹನ್‌ರಾಯ್　　ಡಿ) ಆತ್ಮಾರಾಂ ಪಾಂಡುರಂಗ

31. ಇವುಗಳ ಸರಿಹೊಂದುವ ಉತ್ತರದ ಗುಂಪು

ಉ.

| ಎ | ಬಿ |
|---|---|
| 1) ಆರ್ಯ ಸಮಾಜ | ಎ) ಜ್ಯೋತಿ ಭಾ ಪುಲೆ |
| 2) ಸತ್ಯ ಶೋಧಕ ಸಮಾಜ | ಬಿ) ಆತ್ಮಾರಾಂ ಪಾಂಡುರಂಗ |
| 3) ಪ್ರಾರ್ಥನಾ ಸಮಾಜ | ಸಿ) ರಾಮಮೋಹನ್‌ರಾಯ್ |
| 4) ಬ್ರಹ್ಮ ಸಮಾಜ | ಡಿ) ದಯಾನಂದ ಸರಸ್ವತಿ |

ಎ) 1–ಡಿ, 2–ಎ, 3–ಸಿ, 4–ಬಿ　　ಬಿ) 1–ಎ, 2–ಡಿ, 3–ಬಿ, 4–ಸಿ

ಸಿ) 1–ಬಿ, 2–ಎ, 3–ಡಿ, 4–ಸಿ　　ಡಿ) <u>1–ಡಿ, 2–ಎ, 3–ಬಿ, 4–ಸಿ</u>

32. 1917ರಲ್ಲಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದವರು

ಉ. ಎ) ಗಾಂಧೀಜಿ   ಬಿ) ಜವಹರಲಾಲ್ ನೆಹರು

ಸಿ) ಆನಿಬೆಸೆಂಟ್   ಡಿ) ಎ.ಓ.ಹ್ಯೂಮ

33. 'ಗುಲಾಮಗಿರಿ' ಕೃತಿಯನ್ನು ರಚಿಸಿದವರು

ಉ. ಎ) ರಾಮ್‌ಮೋಹನ್‌ರಾಯ್   ಬಿ) ದಯಾನಂದ ಸರಸ್ವತಿ

ಸಿ) ಜ್ಯೋತಿಭಾಪುಲೆ   ಡಿ) ಆತ್ಮಾರಾಂ ಪಾಂಡುರಂಗ

34. ಇವುಗಳ ಸರಿ ಹೊಂದುವ ಉತ್ತರದ ಗುಂಪು

| ಎ | ಬಿ |
|---|---|
| ಉ. 1) ರಾಮ್‌ಮೋಹನ್‌ರಾಯ್ | ಎ) ಗುಲಾಮಗಿರಿ |
| 2) ದಯಾನಂದ ಸರಸ್ವತಿ | ಬಿ) ನ್ಯೂ ಇಂಡಿಯಾ |
| 3) ಆನಿಬೆಸೆಂಟ್ | ಸಿ) ಸಂವಾದ ಕೌಮುದಿ |
| 4) ಜ್ಯೋತಿ ಭಾಪುಲೆ | ಡಿ) ಸತ್ಯಾರ್ಥ ಪ್ರಕಾಶ |

ಎ) 1–ಸಿ, 2–ಡಿ, 3–ಎ, 4–ಬಿ   ಬಿ) 1–ಸಿ, 2–ಡಿ, 3–ಬಿ, 4–ಎ

ಸಿ) 1–ಬಿ, 2–ಡಿ, 3–ಎ, 4–ಎ   ಡಿ) 1–ಡಿ, 2–ಎ, 3–ಸಿ, 4–ಬಿ

35. ಸತಿಸಹಗಮನ ಪದ್ಧತಿಯ ನಿಷೇಧ ಕಾಯ್ದೆಯನ್ನು ಬೆಂಬಲಿಸಿದವರು

ಉ. ಎ) ಲಾರ್ಡ್‌ವಿಲಿಯಂ ಬೆಂಟಿಂಕ್   ಬಿ) ರಾಮ್ ಮೋಹನ್‌ರಾಯ್

ಸಿ) ದಯಾನಂದ ಸರಸ್ವತಿ   ಡಿ) ಸಯ್ಯದ್ ಅಹಮದ್ ಖಾನ್

## ಅಧ್ಯಾಯ–6 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

36. ಇದು ಬ್ರಿಟಿಷರ ಪ್ರಬಲ ಸೇನಾ ನೆಲೆ

ಉ. ಎ) ಬ್ಯಾರಕ್‌ಪುರ   ಬಿ) ಮೀರತ್

ಸಿ) ದೆಹಲಿ   ಡಿ) ಕಾನ್ಪುರ

37. ಬ್ಯಾರಕ್ ಪುರದಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಯನ್ನುಕೊಂದ ಭಾರತೀಯ ಸೈನಿಕ

ಉ. ಎ) ನಾನಾಸಾಹೇಬ   ಬಿ) ತಾತ್ಯಾಟೋಪೆ

ಸಿ) ಮಂಗಲಪಾಂಡೆ   ಡಿ) ನಾರಾಯಣರಾವ್

38. ಬ್ರಿಟಿಷರ ವಿರುದ್ಧ ದಂಗೆಯುದ್ಧ ಝಾನ್ಸಿಯ ರಾಣಿ

ಉ. ಎ) ಓಬವ್ವ   ಬಿ) ಲಕ್ಷ್ಮೀಬಾಯಿ

ಸಿ) ಚೆನ್ನಮ್ಮ   ಡಿ) ಮಲ್ಲಮ್ಮ

39. ಕೈಗಾರಿಕಾ ಕ್ರಾಂತಿಯು ಈ ದೇಶದಲ್ಲಿ ನಡೆಯಿತು.

ಉ. ಎ) ಅಮೆರಿಕಾ ಬಿ) ಫ್ರಾನ್ಸ್ ಸಿ) ರಷ್ಯಾ ಡಿ) ಬ್ರಿಟನ್

40. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ವೆಂಬ ನೀತಿಯಿಂದ ಬ್ರಿಟಿಷರ ವಶವಾದ ಸಂಸ್ಥಾನಗಳು

ಉ. ಎ) ಸತಾರ, ದೆಹಲಿ, ಬಂಗಾಳ, ಝಾನ್ಸಿ

ಬಿ) ಝಾನ್ಸಿ, ಸತಾರ, ಜೈಪುರ, ಉದಯಪುರ

ಸಿ) ಜೈಪುರ, ದೆಹಲಿ, ಉದಯಪುರ, ಝಾನ್ಸಿ

ಡಿ) ಬಂಗಾಳ, ಸತಾರ, ಜೈಪುರ, ಉದಯಪುರ

41. ಕಾನ್ಪುರದಲ್ಲಿ ದಂಗೆ ಎದ್ದ ನಾಯಕರು

ಉ. ಎ) ನಾನಾ ಸಾಹೇಬ ಮತ್ತು ಮಂಗಲಪಾಂಡೆ

ಬಿ) ನಾನಾ ಸಾಹೇಬ ಮತ್ತು ತಾತ್ಯಾಟೋಪಿ

ಸಿ) ತಾತ್ಯಾಟೋಪಿ ಮತ್ತು ಮಂಗಲಪಾಂಡೆ

ಡಿ) ಬಹದ್ದೂರ್‌ಷಾ ಮತ್ತು ತಾತ್ಯಾಟೋಪಿ

## ಅಧ್ಯಾಯ–7 ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು

42. 18ನೇ ಶತಮಾನದಲ್ಲಿ ಉತ್ಪಾದನಾ ಕೇಂದ್ರವಾಗಿದ್ದ ಭಾರತ ಕೇವಲ ಕಚ್ಚಾ ವಸ್ತುಗಳನ್ನು ರಫ್ತು ಮಾಡುವ ಸ್ಥಿತಿ ತಲುಪಿತು ಏಕೆಂದರೆ

ಉ. ಎ) ದೇಶೀ ಉತ್ಪನ್ನಗಳ ಗುಣಮಟ್ಟದ ಕುಸಿತ

ಬಿ) ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ

ಸಿ) ಕಚ್ಚಾ ವಸ್ತುಗಳ ಉತ್ಪಾದನೆಯಲ್ಲಾದ ಹೆಚ್ಚಳ

ಡಿ) ಐರೋಪ್ಯ ಮಾರುಕಟ್ಟೆಯಲ್ಲಾದ ಅಸಮತೋಲನ

43. ಲಾರ್ಡ್‌ಕಾರ್ನ್‌ವಾಲೀಸನು ಜಮೀನ್ದಾರಿ ಪದ್ಧತಿಯನ್ನು ಇಲ್ಲಿ ಜಾರಿಗೆ

ಉ. ಎ) ಕೊಡಗು ಬಿ) ಮದ್ರಾಸ್ ಸಿ) ಮುಂಬೈ ಡಿ) ಬಂಗಾಳ

44. ಇವುಗಳ ಸರಿಯಾದ ಉತ್ತರದ ಗುಂಪು

ಉ.

| ಎ | ಬಿ |
|---|---|
| 1) ಸಂವಾದ ಕೌಮುದಿ | ಎ) ಸುರೇಂದ್ರನಾಥ ಬ್ಯಾನರ್ಜಿ |
| 2) ಕಲ್ಕತ್ತಾ ಜನರಲ್ | ಬಿ) ಈಶ್ವರ ಚಂದ್ರ ವಿದ್ಯಾಸಾಗರ್ |
| 3) ಸೋಮೆಪ್ರಕಾಶ | ಸಿ) ರಾಮ್ ಮೋಹನ್‌ರಾಯ್ |
| 4) ದಿ ಬೆಂಗಾಲಿ | ಡಿ) ಬಕ್ಕಿಂಗ್ ಹ್ಯಾಮ್ |

ಎ) 1–ಸಿ, 2–ಬಿ, 3–ಡಿ, 4–ಎ ಬಿ) 1–ಸಿ, 2–ಡಿ, 3–ಬಿ, 4–ಎ

ಸಿ) 1–ಎ, 2–ಡಿ, 3–ಬಿ, 4–ಎ ಡಿ) 1–ಡಿ, 2–ಬಿ, 3–ಎ, 4–ಸಿ

45. ಮಹಲ್ ಎಂದರೆ

ಉ. ಎ) ಜಿಲ್ಲೆ ಬಿ) ತಾಲ್ಲೂಕು ಸಿ) ಹಳ್ಳಿ ಡಿ) ಮನೆ

46. ಭಾರತದಲ್ಲಿ ಇಂಗ್ಲೀಷ್ ಶಿಕ್ಷಣವನ್ನು ಜಾರಿಗೊಳಿಸಿದವರೆಂದರೆ

ಉ. ಎ) ಲಾರ್ಡ್ ಮೆಕಾಲೆ ಬಿ) ಲಾರ್ಡ್‌ಕರ್ಜನ್

ಸಿ) ಲಾರ್ಡ್‌ವಿಲಿಯಂ ಬೆಂಟಿಂಕ್ ಡಿ) ಲಾರ್ಡ್‌ಕಾರ್ನ್‌ವಾಲೀಸ್

47. ಭಾರತದಲ್ಲಿ ಪ್ರಥಮ ರೈಲು ಸಂಚಾರ ಈ ಎರಡುನಗರಗಳ ನಡುವೆ ಪ್ರಾರಂಭವಾಯಿತು.

ಉ. ಎ) ಮುಂಬೈ ಮತ್ತು ಥಾಣಾ ಬಿ) ಕೋಲ್ಕತ್ತಾ ಮತ್ತು ಅಹಮದಾಬಾದ್

ಸಿ) ಬೆಂಗಳೂರು ಮತ್ತು ಚೆನ್ನೈ ಡಿ) ಸೂರತ್ ಮತ್ತು ಅಹಮದಾಬಾದ್

## ಅಧ್ಯಾಯ-8 ಸ್ವಾತಂತ್ರ್ಯ ಹೋರಾಟ

48. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪಕರು

ಉ. ಎ) ಜವಹರಲಾಲ್ ನೆಹರು ಬಿ) ಡಬ್ಲ್ಯೂ.ಸಿ.ಬ್ಯಾನರ್ಜಿ

ಸಿ) ಎ.ಓ.ಹ್ಯೂಮ್ ಡಿ) ಮಹಮ್ಮದ್ ಆಲಿಜಿನ್ನಾ

49. ಇವರ ಸಂಪತ್ತಿನ ಸೋರುವಿಕೆ ಸಿದ್ಧಾಂತದ ಪ್ರತಿಪಾದಕರು.

ಉ. ಎ) ಬಾಲಗಂಗಾಧರ ತಿಲಕ್ ಬಿ) ಮಹದೇವ ಗೋವಿಂದ ರಾನಡೆ

ಸಿ) ಗೋಪಾಲ ಕೃಷ್ಣ ಗೋಖಲೆ ಡಿ) ದಾದಾ ಬಾಯಿ ನವರೋಜಿ

50. ತಿಲಕ್‌ರವರು ಮರಾಠಿ ಭಾಷೆಯಲ್ಲಿ ಹೊರ ತಂದ ಪತ್ರಿಕೆ

ಉ. ಎ) ಮರಾಠ ಬಿ) ಸಂವಾದ ಕೌಮುದಿ

ಸಿ) ಸತ್ಯಾರ್ಥ ಪ್ರಕಾಶ ಡಿ) ಕೇಸರಿ

## ಅಧ್ಯಾಯ-9 ಸ್ವಾತಂತ್ರ್ಯೋತ್ತರ ಭಾರತ

51. ಭಾರತ ಮತ್ತು ಪಾಕೀಸ್ತಾನ ಎಂಬ ಎರಡು ಸ್ವತಂತ್ರರಾಷ್ಟ್ರಗಳ ಅಸ್ತಿತ್ವಕ್ಕೆ ಕಾರಣವಾದ ವರದಿ

ಉ. ಎ) ಮೌಂಟ್ ಬ್ಯಾಟನ್ ವರದಿ ಬಿ) ಸೈಮನ್ ಕಮಿಷನ್ ವರದಿ

ಸಿ) ಕ್ರಿಪ್ಸ್ ವರದಿ ಡಿ) ಹಂಟರ್ಸ್ ವರದಿ

52. ಭಾರತದ ಪ್ರಥಮ ಪ್ರಧಾನಿ

ಉ. ಎ) ಜವಹರಲಾಲ ನೆಹರು ಬಿ) ವಲ್ಲಭಬಾಯಿ ಪಟೇಲ್

ಸಿ) ಮೌಂಟ್ ಬ್ಯಾಟನ್ ಡಿ) ಡಾ। ರಾಜೇಂದ್ರ ಪ್ರಸಾದ್

53. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಕೊನೆಯ ಗವರ್ನರ್ ಜನರಲ್

ಉ. ಎ) ಲಾರ್ಡ್‌ಡಾಲ್ ಹೌಸಿ ಬಿ) ಮೌಂಟ್‌ಬ್ಯಾಟನ್

ಸಿ) ರ್‍ಯಾಡ್‌ಕ್ಲಿಫ್ ಡಿ) ಇರ್ವಿನ್

54. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು

ಉ. ಎ) ಜವಹರಲಾಲ ನೆಹರು ಬಿ) <u>ಡಾ॥ ರಾಜೇಂದ್ರ ಪ್ರಸಾದ್</u>

ಸಿ) ವಲ್ಲಭಬಾಯಿ ಪಟೇಲ್ ಡಿ) ಲಾಲ್ ಬಹದ್ದೂರ್ ಶಾಸ್ತ್ರಿ

55. ನಮ್ಮ ಸಂವಿಧಾನ ಜಾರಿಗೆ ಬಂದ ವರ್ಷ

ಉ. ಎ) <u>1950, ಜನವರಿ 26</u> ಬಿ) <u>1949, ನವೆಂಬರ್ 26</u>

ಸಿ) 1947, ಆಗಸ್ಟ್ 15 ಡಿ) 1950, ಆಗಸ್ಟ್ 15

56. ಭಾರತದಲ್ಲಿ 'ಉಕ್ಕಿನ ಮನುಷ್ಯ'ನೆಂದು ಖ್ಯಾತರಾದವರು

ಉ. ಎ) ದಾದಾ ಬಾಯಿ ನವರೋಜಿ ಬಿ) <u>ಸರ್ದಾರ್ ವಲ್ಲಭಬಾಯಿ ಪಟೇಲ್</u>

ಸಿ) ಜವಹರಲಾಲ ನೆಹರು ಡಿ) ಗೋಪಾಲಕೃಷ್ಣ ಗೋಖಲೆ

57. ಭಾರತದ ಪ್ರಥಮ ಗೃಹಮಂತ್ರಿ

ಉ. ಎ) ಜವಹರ ಲಾಲ ನೆಹರು ಬಿ) ಮಹಾತ್ಮ ಗಾಂಧೀಜಿ

ಸಿ) ದಾದಾ ಬಾಯಿ ನವರೋಜಿ ಡಿ) <u>ಸರ್ದಾರ್ ವಲ್ಲಭಬಾಯಿ ಪಟೇಲ್</u>

58. ಭಾರತ ಒಕ್ಕೂಟಕ್ಕೆ ಸೇರ್ಪಡೆಗೊಳ್ಳದೆ ಸ್ವತಂತ್ರವಾಗಿ ಉಳಿಯಲು ಇಚ್ಛಿಸಿದ ಕಾಶ್ಮೀರದ ದೊರೆ

ಉ. ಎ) <u>ಹರಿಸಿಂಗ್</u> ಬಿ) ಷೇಕ್ ಅಬ್ದುಲ್ಲ

ಸಿ) ರಜ಼ಾಕ್ ಡಿ) ರಣಜಿತ್ ಸಿಂಗ್

59. 'ಪಾಕ್ ಆಕ್ರಮಿತ ಪ್ರದೇಶ' ಎಂದು ಈಗಲೂ ಕರೆಯಲ್ಪಡುವ ಪ್ರದೇಶ

ಉ. ಎ) ಕಾಶ್ಮೀರದ ಈಶಾನ್ಯ ಭಾಗ ಬಿ) ಕಾಶ್ಮೀರದ ಆಗ್ನೇಯ ಭಾಗ

ಸಿ) <u>ಕಾಶ್ಮೀರದ ವಾಯುವ್ಯ ಭಾಗ</u> ಡಿ) ಕಾಶ್ಮೀರದ ನೈರುತ್ಯ ಭಾಗ

60. 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿ ನಂತರ ರಾಜ್ಯ ಸ್ಥಾನಮಾನಗಳಿಸಿದ ಪ್ರದೇಶ

ಉ. ಎ) <u>ಗೋವಾ</u> ಬಿ) ಪಾಂಡಿಚೇರಿ ಸಿ) ಮಾಹೆ ಡಿ) ಕಾಶ್ಮೀರ

61. ಜಸ್ಟೀಸ್ ಫಜಲ್ ಅಲಿ ಆಯೋಗವು ರಚನೆಗೊಂಡ ವರ್ಷ

ಉ. ಎ) 1935 ಬಿ) 1950 ಸಿ) 1947 ಡಿ) <u>1953</u>

62. 1953ರಲ್ಲಿ ರಚನೆಗೊಂಡ ಮೊದಲ ಭಾಷಾವಾರು ರಾಜ್ಯ

ಉ. ಎ) ಕರ್ನಾಟಕ ಬಿ) ತಮಿಳುನಾಡು ಸಿ) <u>ಆಂಧ್ರಪ್ರದೇಶ</u> ಡಿ) ಕೇರಳ

63. ರಾಜ್ಯ ಪುನರ್ವಿಂಗಡನಾ ಕಾನೂನು ಜಾರಿಗೆ ಬಂದ ವರ್ಷ

ಉ. ಎ) 1973 ಬಿ) <u>1956</u> ಸಿ) 1955 ಡಿ) 1950

64. ಮೈಸೂರು ರಾಜ್ಯ 'ಕರ್ನಾಟಕ'ವೆಂದು ನಾಮಕರಣಗೊಂಡ ವರ್ಷ

ಉ. ಎ) 1956 ಬಿ) <u>1973</u> ಸಿ) 1937 ಡಿ) 1950

# ಅಧ್ಯಾಯ–10

# 20ನೇಯ ಶತಮಾನದ ರಾಜಕೀಯ ಆಯಾಮಗಳು

65. ಮೊದಲನೇ ಮಹಾಯುದ್ಧ ಅಂತ್ಯದಲ್ಲಿ ಈ ಒಪ್ಪಂದವು ಜರುಗಿತು

ಉ. ಎ) ವರ್ಸೈಲ್ ಒಪ್ಪಂದ     ಬಿ) ಪ್ಯಾರಿಸ್ ಒಪ್ಪಂದ
ಸಿ) ಜಿನಿವಾ ಒಪ್ಪಂದ     ಡಿ) ತಾಷ್ಕೆಂಟ್ ಒಪ್ಪಂದ

66. 1905ರಲ್ಲಿ ಜಪಾನ್ ಈ ರಾಷ್ಟ್ರವನ್ನು ಸೋಲಿಸಿತು

ಉ. ಎ) ಅಮೆರಿಕಾ     ಬಿ) ಚೀನಾ     ಸಿ) ರಷ್ಯಾ     ಡಿ) ಟಿಬೆಟ್

67. ಕಾರ್ಲ್‌ಮಾರ್ಕ್‌ನ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದವರು

ಉ. ಎ) ಸ್ಟಾಲಿನ್     ಬಿ) ಲೆನಿನ್     ಸಿ) ರೂಸ್‌ವೆಲ್ಟ್     ಡಿ) ಗೋರ್ಬಚೆವ್

68. 'ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೂ ಯಹೂದಿಗಳೇ ಕಾರಣ' ಎಂದು ಹೇಳಿದವರು

ಉ. ಎ) ಮುಸೋಲಿನಿ     ಬಿ) ಸ್ಟಾಲೀನ್     ಸಿ) ಟ್ರೂಮನ್     ಡಿ) ಹಿಟ್ಲರ್

69. ಇದು ಮುಸೋಲಿನಿ ಸ್ಥಾಪಿಸಿದ ಪಕ್ಷವಾಗಿದೆ.

ಉ. ಎ) ನಾಜಿ ಪಕ್ಷ     ಬಿ) ರಾಷ್ಟ್ರೀಯ ಸೋಶಿಯಲಿಸ್ಟ್ ಪಕ್ಷ
ಸಿ) ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ     ಡಿ) ಡೆಮಾಕ್ರಟಿಕ್ ಪಕ್ಷ

70. ಶೀತಲಸಮರದ ಎರಡು ಬಣಗಳು

ಉ. ಎ) ಅಮೆರಿಕಾ ಮತ್ತು ಇಂಗ್ಲೆಂಡ್     ಬಿ) ಫ್ರಾನ್ಸ್ ಮತ್ತು ಇಂಗ್ಲೆಂಡ್
ಸಿ) ಜರ್ಮನಿ ಮತ್ತಿ ಇಟಲಿ     ಡಿ) ಅಮೆರಿಕಾ ಮತ್ತು ರಷ್ಯಾ

71. ರಷ್ಯಾದ 1917ರ 'ಫೆಬ್ರವರಿ ಕ್ರಾಂತಿ'ಯ ನೇತೃತ್ವ ವಹಿಸಿದ ಪಕ್ಷ

ಉ. ಎ) ಬೊಲ್ಶವಿಕ್     ಬಿ) ಮೆನ್ಶ್ಯವಿಕ್
ಸಿ) ಸಾಮಾಜಿಕ ಪ್ರಜಾವಾದಿ ಪಕ್ಷ     ಡಿ) ಸಂವಿಧಾನಿಕ ಪ್ರಜಾಪಕ್ಷ

72. ರಷ್ಯಾದ 1917ರ 'ಅಕ್ಟೋಬರ್ ಕ್ರಾಂತಿಯ ನೇತೃತ್ವವನ್ನು' ಈ ಪಕ್ಷವಹಿಸಿತು.

ಉ. ಎ) ಸಾಮಾಜಿಕ ಸಮಾಜವಾದಿ ಪಕ್ಷ     ಬಿ) ಬೋಲ್ಶೆವಿಕ್ ಪಕ್ಷ
ಸಿ) ಮೆನ್ಶೆವಿಕ್ ಪಕ್ಷ     ಡಿ) ಸಂವಿಧಾನಿಕ ಪ್ರಜಾ ಪಕ್ಷ

73. ನಾಜಿವಾದ ಹಿಟ್ಲರ್‌ದಾದರೆ, ಪ್ಯಾಸಿಸ್ಟ್‌ವಾದ

ಉ. ಎ) ಕೌಂಟ್‌ಕವೂರ್     ಬಿ) ಗ್ಯಾರಿಬಾಲ್ಡಿ
ಸಿ) ಮುಸೋಲಿನಿ     ಡಿ) ವಿಕ್ಟರ್ ಇಮ್ಯಾನುವೆಲ್

# ರಾಜ್ಯಶಾಸ್ತ್ರ

## ಅಧ್ಯಾಯ–1 ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ದೇಶದಾದ್ಯಂತ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದವರ್ಷ

ಉ. ಎ) 2009 ಬಿ) 1986 ಸಿ) 1961 ಡಿ) 2010

2. ಭಾರತ ಸರ್ಕಾರವು 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಸ್ಥಾಪಿಸಿದ ವರ್ಷ

ಉ. ಎ) 2001 ಬಿ) 2011 ಸಿ) 1988 ಡಿ) 2002

3. ಶಿಕ್ಷಣ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದ ಸಂವಿಧಾನದ ವಿಧಿ

ಉ. ಎ) 42ನೇ ಬಿ) 21 ನೇ ಸಿ) 41 ನೇ ಡಿ) 93 ನೇ

4. ಕರ್ನಾಟಕ ಸರ್ಕಾರ 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮ ಜಾರಿಗೆ ತಂದ ಉದ್ದೇಶ.

ಉ. ಎ) ಭ್ರಷ್ಟಾಚಾರ ನಿರ್ಮೂಲನೆಗಾಗಿ
ಬಿ) ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ
ಸಿ) ನಗರ ಪ್ರದೇಶಗಳ ಮಹಿಳೆಯರ ವಿಕಾಸಕ್ಕಾಗಿ
ಡಿ) ನಗರ ಮತ್ತು ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ

5. 2001ರಿಂದ ದೇಶದಾದ್ಯಂತ 6 ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಗಾಗಿ ಜಾರಿಗೆ ತಂದ ಕಾರ್ಯಕ್ರಮ

ಉ. ಎ) ಕೂಲಿಗಾಗಿ ಕಾಳು ಯೋಜನೆ ಬಿ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ
ಸಿ) ಸರ್ವಶಿಕ್ಷಣ ಅಭಿಯಾನ ಡಿ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ

6. 2011ರ ಜನಗಣತಿಯ ಪ್ರಕಾರ ಭಾರತದ ಸಾಕ್ಷರತೆಯ ಪ್ರಮಾಣ ಶೇಕಡ

ಉ. ಎ) 12% ಬಿ) 26% ಸಿ) 74% ಡಿ) 66%

## ಅಧ್ಯಾಯ–5 ಜಾಗತಿಕ ಸಂಸ್ಥೆಗಳು

7. 'ವಿಶ್ವಸಂಸ್ಥೆ' ಎಂಬ ಶಬ್ಧವನ್ನು ಬಳಕೆಗೆ ತಂದವರು

ಉ. ಎ) ಚರ್ಚಿಲ್ ಬಿ) ಸ್ಟ್ಯಾಲಿನ್ ಸಿ) ಎಫ್.ಡಿ.ರೂಸ್‌ವೆಲ್ಟ್ ಡಿ) ಕೆನಡಿ

8. 2ನೇ ಮಹಾಯುದ್ಧದ ಪರಿಣಾಮವಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆ

ಉ. ಎ) ಸಾರ್ಕ್ ಬಿ) ವಿಶ್ವಸಂಸ್ಥೆ
ಸಿ) ಕಾಮನ್‌ವೆಲ್ತ್ ರಾಷ್ಟ್ರಗಳ ಒಕ್ಕೂಟ ಡಿ) ಅಸಿಯಾನ್

9. ವಿಶ್ವಸಂಸ್ಥೆಯ ಮುಖ್ಯ ಕಛೇರಿ ಇರುವ ಸ್ಥಳ

ಉ. ಎ) ವಾಷಿಂಗ್ಟನ್ ಬಿ) ನ್ಯೂಯಾರ್ಕ್ ಸಿ) ಜೀನಿವಾ ಡಿ) ಹೇಗ್

10. ಸಾರ್ಕ್‌ನ ಕೇಂದ್ರ ಕಛೇರಿ ಇರುವ ಸ್ಥಳ

ಉ. ಎ) ಲಂಡನ್ ಬಿ) ರೋಂ ಸಿ) ಕಾಠ್ಮಂಡು ಡಿ) ಪ್ಯಾರಿಸ್

11. ವಿಶ್ವಸಂಸ್ಥೆ ಅಸ್ತಿತ್ವಕ್ಕೆ ಬಂದ ವರ್ಷ

ಉ. ಎ) 1945 ಅಕ್ಟೋಬರ್ 24 ಬಿ) 1948 ಜನವರಿ 26

ಸಿ) 1945 ಜನವರಿ 26 ಡಿ) 1985 ಮಾರ್ಚ್ 24

12. ವಿಶ್ವ ಸಂಸ್ಥೆಯ ಸ್ಥಾಪನೆಗೆ ಕಾರಣವಾದ ನಾಯಕರ ಗುಂಪು

ಉ. ಎ) ಡಿಗಾಲೆ, ಚರ್ಚಿಲ್, ಟ್ರೂಮನ್

ಬಿ) ಚರ್ಚಿಲ್, ಸ್ಟಾಲಿನ್, ಎಫ್‌ಡಿ. ರೂಸ್‌ವೆಲ್ಟ್

ಸಿ) ಮಾರ್ಷಲ್, ಟ್ರೂಮನ್, ಡಿಗಾಲೆ

ಡಿ) ಟ್ರೂಮನ್, ಚರ್ಚಿಲ್, ಸ್ಟಾಲಿನ್

# ದಾರಿದೀಪ ಪಾಸಿಂಗ್-ಪ್ಯಾಕೇಜ್
# ಸಮಾಜ ಶಾಸ್ತ್ರ

## ಅಧ್ಯಾಯ-1 ಸಾಮಾಜಿಕ ಸ್ತರ ವಿನ್ಯಾಸ

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಅಸ್ಪೃಶ್ಯತಾ ಆಚರಣೆಯನ್ನು ನಿಷೇದಿಸಿರುವ ಸಂವಿಧಾನದ ವಿಧಿ

ಉ. ಎ) 17ನೇ ವಿಧಿ ಬಿ) 19ನೇ ವಿಧಿ ಸಿ) 23ನೇ ವಿಧಿ ಡಿ) 45ನೇ ವಿಧಿ

2. ನಮ್ಮ ದೇಶದಲ್ಲಿ ಸಾಮಾಜಿಕ ಜಾಗೃತಿ ಮಾಡಲು ಕಾರಣವಾಗಿರುವ ಅಂಶ

ಉ. ಎ) ಕೈಗಾರಿಕೀರಣ ಬಿ) ಸಾಕ್ಷರತೆ ಸಿ) ಉದಾರೀಕರಣ ಡಿ) ಜಾಗತೀಕರಣ

## ಅಧ್ಯಾಯ-2 ದುಡಿಮೆ ಮತ್ತು ಆರ್ಥಿಕ ಜೀವನ

3. ಕೇಂದ್ರ ಸರ್ಕಾರವು ಸಮಾನ ವೇತನ ಕಾಯ್ದೆಯನ್ನು ಜಾರಿಗೆ ತಂದ ವರ್ಷ

ಉ. ಎ) 1976 ಬಿ) 1978 ಸಿ) 1980 ಡಿ) 1982

4. ಕೇಂದ್ರ ಸರ್ಕಾರವು ಸಮಾನವೇತನ ಕಾಯಿದೆಯನ್ನು ಜಾರಿಗೆ ತಂದಿರುವ ಪ್ರಮುಖ ಉದ್ದೇಶ

ಉ. ಎ) ಜನರ ಜೀವನ ಮಟ್ಟವನ್ನು ಉತ್ತಮಪಡಿಸುವುದು

ಬಿ) ಸ್ತ್ರೀ ಪುರುಷರ ವೇತನ ತಾರತಮ್ಯವನ್ನು ನಿವಾರಿಸುವುದು

ಸಿ) ಉದ್ಯೋಗವಕಾಶಗಳನ್ನು ಹೆಚ್ಚಿಸುವುದು

ಡಿ) ಮಹಿಳಾ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು

5. ಅಸಂಘಟಿತ ಕೆಲಸಗಾರರಿಗೆ ಉದಾಹರಣೆ

ಉ. ಎ) ಸೈನಿಕರು ಬಿ) ವಿಮಾಕಂಪೆನಿ ಕೆಲಸಗಾರರು

ಸಿ) ಬೀದಿಯಲ್ಲಿ ತರಕಾರಿ ಮಾರುವವರು ಡಿ) ಬ್ಯಾಂಕಿನ ನೌಕರರು

6. ಸಂಘಟಿತ ಕೆಲಸಗಾರರಿಗೆ ಉದಾಹರಣೆ

ಉ. ಎ) ಗೃಹನಿರ್ಮಾಣ ಮಾಡುವವರು ಬಿ) ಗೃಹನಿರ್ಮಾಣ ಕೆಲಸಗಾರರು

ಸಿ) ಸರ್ಕಾರಿ ನೌಕರರು ಡಿ) ಕೃಷಿ ಕಾರ್ಮಿಕರು

7. ಕೂಲಿರಹಿತ ದುಡಿಮೆಗೆ ಉದಾಹರಣೆಯಾಗಿರುವ ಚಟುವಟಿಕೆ

ಉ. ಎ) ಕಾರ್ಖಾನೆಗಳನ್ನು ಕಾರ್ಮಿಕನಾಗಿ ದುಡಿಯುವುದು

ಬಿ) ಕೃಷಿಕಾರ್ಮಿಕನಾಗಿ ಕೆಲಸ ಮಾಡುವುದು

ಸಿ) ವಿಮಾಕಂಪೆನಿಯಲ್ಲಿ ಕೆಲಸ ಮಾಡುವುದು

ಡಿ) ಚಿತ್ರಕಾರನು ಆತ್ಮ ಸಂತೋಷಕ್ಕಾಗಿ ಚಿತ್ರ ರಚಿಸುವುದು.

## ಅಧ್ಯಾಯ–3 ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

8. ಗೊಂದಲವನ್ನು ಸೃಷ್ಟಿಮಾಡುವ ಉದ್ದೇಶವನ್ನು ಹೊಂದಿರುವ ಜನರ ಗುಂಪಿಗೆ ಉದಾಹರಣೆಯಾಗಿರುವುದು

ಉ. ಎ) ಜನಮಂದೆ ಬಿ) ದೊಂಬಿ ಸಿ) ಚಳುವಳಿ ಡಿ) ಸ್ವಸಹಾಯ ಸಮೂಹಗಳು

9. ಈ ಅಣುಸ್ಥಾವರ ಸ್ಥಾಪನೆಯ ವಿರುದ್ಧ ಡಾ.ಶಿವರಾಮಕಾರಂತ ನೇತೃತ್ವದಲ್ಲಿ ಚಳುವಳಿಯನ್ನು ನಡೆಸಲಾಯಿತು.

ಉ. ಎ) ಶ್ರೀಶೈಲಂ ಅಣುಸ್ಥಾವರ ಬಿ) ಕೈಗಾ ಅಣುಸ್ಥಾವರ
ಸಿ) ಕಲ್ಪಾಕಂ ಅಣುಸ್ಥಾವರ ಡಿ) ಕೊಡಂಕುಶಂ ಅಣುಸ್ಥಾವರ

10. 1983ರಲ್ಲಿ 'ಅಪ್ಪಿಕೊ ಚಳುವಳಿ'ಯು ಕರ್ನಾಟಕದ ಈ ಕೆಳಕಂಡ ಜಿಲ್ಲೆಯಲ್ಲಿ ಸಂಘಟಿಸಲ್ಪಟ್ಟಿತು.

ಉ. ಎ) ದಕ್ಷಿಣ ಕನ್ನಡ ಬಿ) ಕೊಡಗು ಸಿ) ಹಾಸನ ಡಿ) ಉತ್ತರಕನ್ನಡ

11. ಈ ಕೆಳಗಿನ ಅಂಶವು ಜನಮಂದೆಗೆ ಉದಾಹರಣೆಯಾಗಿದೆ

ಉ. ಎ) ಚಲನ ಚಿತ್ರ ಮಂದಿರದ ಮುಂದೆ ಸೇರಿರುವ ಜನಸ್ತೋಮ
ಬಿ) ತರಗತಿಯಲ್ಲಿ ಕುಳಿತಿರುವ ವಿದ್ಯಾರ್ಥಿಗಳ ಗುಂಪು
ಸಿ) ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಗುಂಪು
ಡಿ) ಮೈದಾನದಲ್ಲಿ ಆಟವಾಡುತ್ತಿರುವ ಆಟಗಾರರ ಗುಂಪು

12. 'ಚಿಪ್ಕೋ ಚಳುವಳಿಯ ನೇತೃತ್ವವನ್ನು ಸುಂದರಲಾಲ್ ಬಹುಗುಣರವರು ವಹಿಸಿದ್ದರು ಹಾಗಾದರೆ ನರ್ಮದಾ ಬಚಾವೋ ಆಂದೋಲನದ ನಾಯಕತ್ವವನ್ನು ವಹಿಸಿದವರು

ಉ. ಎ) ಶಿವರಾಮಕಾರಂತ ಬಿ) ವಂದನಾಶಿವ
ಸಿ) ಪಾಂಡುರಂಗ ಹೆಗ್ಗಡೆ ಡಿ) ಮೇಧಾಪಾಟ್ಕರ್

## ಅಧ್ಯಾಯ–4 ಸಾಮಾಜಿಕ ಸಮಸ್ಯೆಗಳು

13. ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆ

ಉ. ಎ) ಬಾ ಮರಳಿ ಶಾಲೆಗೆ ಬಿ) ಬಾ ಬಾಲೆ ಶಾಲೆಗೆ
ಸಿ) ಚಿಣ್ಣರ ಅಂಗಳ ಡಿ) ಕೂಲಿಯಿಂದ ಶಾಲೆಗೆ

14. ಸಂವಿಧಾನದ ಈ ವಿಧಿಯ 14 ವರ್ಷಕ್ಕಿಂತ ಕಿರಿಯ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದನ್ನು 'ಶಿಕ್ಷಾರ್ಹ ಅಪರಾಧ' ಎಂದು ಘೋಷಿಸಿದೆ

ಉ. ಎ) 24ನೇ ವಿಧಿ ಬಿ) 26ನೇ ವಿದಿ ಸಿ) 28ನೇ ವಿಧಿ ಡಿ) 30ನೇ ವಿಧಿ

15. ವರದಕ್ಷಿಣೆ ಸಮಸ್ಯೆಯ ಪರಿಹಾರಕ್ಕೆ ಸೂಚಿಸಲಾಗಿರುವ ಸಂವಿಧಾನಾತ್ಮಕ ಕ್ರಮ

ಉ. ಎ) ಬೀದಿ ನಾಟಕಗಳು ಬಿ) ಜನಜಾಗೃತಿ
ಸಿ) ಸ್ವಯಂಸೇವಾ ಸಂಘಟನೆಗಳು ಡಿ) 1961ರ ವರದಕ್ಷಿಣೆ ನಿಷೇಧ ಶಾಸನ

# ಭೂಗೋಳಶಾಸ್ತ್ರ

## ಅಧ್ಯಾಯ–1 ಭಾರತ ನಮ್ಮ ಮಾತೃಭೂಮಿ

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಇದು ಭಾರತದ ಅತ್ಯಂತ ದಕ್ಷಿಣದ ತುದಿಯಾಗಿದೆ.

ಉ. ಎ) ತಿರುವವಂತಪುರ ಬಿ) ಇಂದಿರಾಪಾಯಿಂಟ್

ಸಿ) ತೂತುಕುಡಿ ಡಿ) ಶ್ರೀಲಕ್ಷ ದ್ವೀಪ

2. ಈ ರೇಖಾಂಶವನ್ನು ಆಧರಿಸಿ ಭಾರತದ ವೇಳೆಯನ್ನು ನಿರ್ಧರಿಸಲಾಗುತ್ತದೆ.

ಉ. ಎ) 82 $1/2^0$ ಪಶ್ಚಿಮ ರೇಖಾಂಶ ಬಿ) 82 $1/2^0$ ಪೂರ್ವ ರೇಖಾಂಶ

ಸಿ) $82^0$ ಪೂರ್ವರೇಖಾಂಶ ಡಿ) $82^0$ ಪಶ್ಚಿಮ ರೇಖಾಂಶ

3. ಭಾರತದ ಮಧ್ಯಭಾಗದಲ್ಲಿ ಹಾದು ಹೋಗಿರುವ ಪ್ರಮುಖ ಅಕ್ಷಾಂಶ ಇದಾಗಿದೆ.

ಉ. ಎ) 66 $1/2^0$ ಉತ್ತರ ಅಕ್ಷಾಂಶ ಬಿ) 66 $1/2^0$ ದಕ್ಷಿಣ ಅಕ್ಷಾಂಶ

ಸಿ) 23 $1/2^0$ ಉತ್ತರ ಅಕ್ಷಾಂಶ ಡಿ) 23 $1/2^0$ ದಕ್ಷಿಣ ರೇಖಾಂಶ

4. ಭಾರತವು ಈ ಕೆಳಗಿನ ಯಾವ ರಾಷ್ಟ್ರದೊಂದಿಗೆ ಭೂಗಡಿಯನ್ನು ಹೊಂದಿಲ್ಲ

ಉ. ಎ) ಶ್ರೀಲಂಕಾ ಬಿ) ನೇಪಾಳ ಸಿ) ಪಾಕಿಸ್ತಾನ ಡಿ) ಮಯನ್ಮಾರ್

5. ಇಂದಿರಾ ಪಾಯಿಂಟ್ ಈ ದ್ವೀಪದಲ್ಲಿದೆ.

ಉ. ಎ) ಲಕ್ಷದ್ವೀಪ ಬಿ) ಸೇಂಟ್ ಮೇರಿಸ್ ದ್ವೀಪ

ಸಿ) ಗ್ರೇಟ್ ನಿಕೋಬಾರ್ ದ್ವೀಪ ಡಿ) ಅಂಡಮಾನ ದ್ವೀಪ

## ಅಧ್ಯಾಯ–2 ಭಾರತದ ಪ್ರಾಕೃತಿಕ ಲಕ್ಷಣಗಳು

6. ಹಿಮಾಲಯ ಶ್ರೇಣಿಗಳಲ್ಲಿ ಇದು ಇತ್ತೀಚೆಗೆ ನಿರ್ಮಿತವಾದುದು.

ಉ. ಎ) ಬಿ) ಮಹಾಹಿಮಾಲಯ

ಸಿ) ಶಿವಾಲಿಕ್ ಡಿ) ಹಿಮಾದ್ರಿ

7. ಇದು ಭಾರತದಲ್ಲಿಯೇ ಅತಿ ಎತ್ತರದ ಶಿಖರವಾಗಿದೆ.

ಉ. ಎ) ಮೌಂಟ್ $K_2$– ಗಾಡ್ವಿನ್ ಆಸ್ಟಿನ್ ಬಿ) ಮೌಂಟ್ ಎವೆರೆಸ್ಟ್

ಸಿ) ಧವಳಗಿರಿ ಡಿ) ಕಾಂಚನಗಂಗಾ

8. ಇದು ಭಾರತದ ಭೂಸ್ವರೂಪಗಳಲ್ಲಿ ಅತಿ ಪುರಾತನವಾದುದಾಗಿದೆ.

ಉ. ಎ) ಕರಾವಳಿ ಮೈದಾನ ಬಿ) ಪರ್ಯಾಯ ಪ್ರಸ್ಥಭೂಮಿ

ಸಿ) ಉತ್ತರದ ಮಹಾಮೈದಾನ ಡಿ) ಉತ್ತರದ ಪರ್ವತಗಳು

9. ಪಶ್ಚಿಮ ಘಟ್ಟಗಳನ್ನು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಹೀಗೂ ಕರೆಯುತ್ತಾರೆ.

ಉ. ಎ) ಆನೈಮುಡಿ ಬಿ) ಸಹ್ಯಾದ್ರಿ ಸಿ) ನೀಲಗಿರಿ ಡಿ) ಕರಾವಳಿ

10. ಇದು ದಕ್ಷಿಣ ಭಾರತದಲ್ಲಿಯೇ ಅತ್ಯಂತ ಎತ್ತರದ ಶಿಖರವಾಗಿದೆ.

ಉ. ಎ) ಆನೈಮುಡಿ ಬಿ) ಮೌಂಟ್ ಎವರೆಸ್ಟ್ ಸಿ) ಮಹಾದೇವ ಡಿ) ಅಮರಕಂಟಕ

11. ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳು ಸಂಧಿಸುವ ಸ್ಥಳ

ಉ. ಎ) ನೀಲಗಿರಿ ಬಿ) ಆನೈಮುಡಿ ಸಿ) ಅಣ್ಣಾಮುಡಿ ಡಿ)

12. ಇದು ಗಂಗಾನದಿಯ ಉಗಮ ಸ್ಥಾನವಾಗಿದೆ.

ಉ. ಎ) ಹಿಮಾದ್ರಿ ಬಿ) ಗಂಗೋತ್ರಿ ಸಿ) ಗಂಗಾಮುಖ ಡಿ) ವಿಂಧ್ಯ

13. ಪುಲಿಕಾಟ್ ಸರೋವರ ಈ ರಾಜ್ಯದಲ್ಲಿದೆ.

ಉ. ಎ) ಒರಿಸ್ಸಾ ಬಿ) ತಮಿಳುನಾಡು ಸಿ) ಕರ್ನಾಟಕ ಡಿ) ಕೇರಳ

14. ಇದನ್ನು ಹವಳದ ದ್ವೀಪವೆಂದು ಕರೆಯುತ್ತಾರೆ.

ಉ. ಎ) ಅಂಡಮಾನ್ ದ್ವೀಪ ಬಿ) ನಿಕೋಬಾರ್ ದ್ವೀಪ
ಸಿ) ಲಕ್ಷದ್ವೀಪ ಡಿ) ಸೇಂಟ್ ಮೇರಿಸ್ ದ್ವೀಪ

15. ಚಿಲ್ಕಾ ಸರೋವರ ಈ ರಾಜ್ಯದಲ್ಲಿದೆ

ಉ. ಎ) ಕೇರಳ ಬಿ) ಓಡಿಸ್ಸಾ ಸಿ) ತಮಿಳುನಾಡು ಡಿ) ಕರ್ನಾಟಕ

## ಅಧ್ಯಾಯ–3

## ಭಾರತದ ಮಾನ್ಸೂನ್ ವಾಯುಗುಣದ ಋತುಮಾನಗಳು ಮತ್ತು ಲಕ್ಷಣಗಳು

16. ಭಾರತದಲ್ಲಿ ಅತಿ ಹೆಚ್ಚು ಮಳೆಬೀಳುವ ಪ್ರದೇಶ ಇದಾಗಿದೆ.

ಉ. ಎ) ಆಗುಂಬೆ ಬಿ) ಚೀರಾಪುಂಜಿ ಸಿ) ಮೌಸಿನ್‌ರಾಮ್ ಡಿ) ಹುಲಿಕಲ್

17. ಬಂಗಾಳ ಕೊಲ್ಲಿ ಮತ್ತು ಅರಬ್ಬೀ ಸಮುದ್ರಗಳಲ್ಲಿ ಈ ಅವಧಿಯಲ್ಲಿ ಆವರ್ತಗಾಳಿ ನಿರ್ಮಿತಗೊಳ್ಳುತ್ತವೆ.

ಉ. ಎ) ನೈರುತ್ಯಮಾನ್ಸೂನ್ ಮಾರುತಗಳ ಕಾಲ
ಬಿ) ನಿರ್ಗಮನ ಮಾನ್ಸೂನ್ ಮಾರುತಗಳ ಕಾಲ
ಸಿ) ಬೇಸಿಗೆ ಕಾಲ
ಡಿ) ಚಳಿಗಾಲ

18. ಮಾರ್ಚ್‌ನಿಂದ ಮೇ ತಿಂಗಳವರೆಗೆ ಉತ್ತರಭಾರತವು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ. ಏಕೆಂದರೆ ಅದು

ಉ. ಎ) ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿದೆ.

ಬಿ) ದೀರ್ಘ ರಾತ್ರಿ ಮತ್ತು ಸಮುದ್ರಕ್ಕೆ ಹತ್ತಿರವಾಗಿದೆ.

ಸಿ) ದೀರ್ಘರಾತ್ರಿ ಮತ್ತು ಸಮುದ್ರಕ್ಕೆ ದೂರವಾಗಿದೆ.

ಡಿ) ದೀರ್ಘ ಹಗಲು ಮತ್ತು ಸಮುದ್ರಕ್ಕೆ ಹತ್ತಿರವಾಗಿದೆ.

19. ಬೇಸಿಗೆಯಲ್ಲಿಯೂ ದಕ್ಷಿಣ ಭಾರತದಲ್ಲಿ ಉಷ್ಣಾಂಶದಲ್ಲಿ ಇಳಿಕೆ ಕಂಡುಬರುತ್ತದೆ. ಏಕೆಂದರೆ,

ಉ. ಎ) ಮೂರು ಕಡೆ ಸಾಗರಗಳಿಂದ ಆವೃತ್ತವಾಗಿದೆ

ಬಿ) ಅತ್ಯಧಿಕ ವಾರ್ಷಿಕ ಮಳೆ ಪಡೆಯುತ್ತದೆ

ಸಿ) ದೀರ್ಘ ಹಗಲು ಮತ್ತು ಸಮುದ್ರಕ್ಕೆ ದೂರವಾಗಿದೆ

ಡಿ) ಸೂರ್ಯರ ಓರೆಯಾದ ಕಿರಣಗಳನ್ನು ಪಡೆಯುತ್ತದೆ.

20. ಅಕ್ಟೋಬರ್ ತಿಂಗಳ ಕೊನೆಯ ಭಾಗದಲ್ಲಿ ಉತ್ತರಾರ್ಧಗೋಳದಲ್ಲಿ ಉಷ್ಣಾಂಶವು ಕಡಿಮೆಯಾಗುತ್ತದೆ. ಏಕೆಂದರೆ ಸೂರ್ಯನ ಕಿರಣಗಳು

ಉ. ಎ) ಉತ್ತರಾರ್ಧ ಗೋಳದ ಮೇಲೆ ನೇರವಾಗಿ ಬೀಳುತ್ತವೆ

ಬಿ) ದಕ್ಷಿಣಾರ್ಧ ಗೋಳದ ಮೇಲೆ ಲಂಬವಾಗಿ ಬೀಳುತ್ತವೆ.

ಸಿ) ದಕ್ಷಿಣಾರ್ಧ ಗೋಳದ ಮೇಲೆ ಓರೆಯಾಗಿ ಬೀಳುತ್ತವೆ.

ಡಿ) ಸಮಭಾಜಕ ವೃತ್ತದ ಮೇಲೆ ಲಂಬವಾಗಿ ಬೀಳುತ್ತವೆ.

21. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್‌ನಿಂದ ಹಿಂತಿರುಗಲು ಆರಂಭಿಸುತ್ತವೆ. ಏಕೆಂದರೆ ಒತ್ತಡವು

ಉ. ಎ) ಉತ್ತರಗೋಳಾರ್ಧದಲ್ಲಿ ಕಡಿಮೆಯಾಗಿರುತ್ತದೆ.

ಬಿ) ದಕ್ಷಿಣಗೋಳಾರ್ಧದಲ್ಲಿ ಹೆಚ್ಚಾಗಿರುತ್ತದೆ.

ಸಿ) ಉತ್ತರಗೋಳಾರ್ಧದಲ್ಲಿ ಹೆಚ್ಚಾಗಿರುತ್ತದೆ.

ಡಿ) ಸಮಭಾಜಕವೃತ್ತ ಪ್ರದೇಶದಲ್ಲಿ ಹೆಚ್ಚಾಗಿರುತ್ತದೆ.

## ಅಧ್ಯಾಯ-4 ಭಾರತದ ಮಣ್ಣುಗಳು

22. ಈ ಮಣ್ಣುಗಳು ಕಾಫಿ, ಟೀ ಮುಂತಾದ ತೋಟಗಾರಿಕಾ ಬೆಳೆಗಳಿಗೆ ಸೂಕ್ತವಾಗಿವೆ.

ಉ. ಎ) ಮೆಕ್ಕಲು ಮತ್ತು ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು

ಬಿ) ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು ಮತ್ತು ಪರ್ವತ ಮಣ್ಣು

ಸಿ) ಕಪ್ಪು ಮಣ್ಣು & ಕೆಂಪುಮಣ್ಣು

ಡಿ) ಪರ್ವತ ಮಣ್ಣು ಮತ್ತು ಕಪ್ಪುಮಣ್ಣು

23. ಎ ಪಟ್ಟಿಯಲ್ಲಿ ಮಣ್ಣುಗಳು ಮತ್ತು ಬಿ ಪಟ್ಟಿಯಲ್ಲಿ ಅವುಗಳಿಗೆ ಸಂಬಂಧಿಸಿದ ಮಾಹಿತಿ ನೀಡಲಾಗಿದ್ದು ಸರಿಯಾದ ಉತ್ತರದ ಗುಂಪನ್ನು ಗುರುತಿಸಿರಿ.

ಉ.

| ಎ | ಬಿ |
|---|---|
| 1) ಮೆಕ್ಕಲುಮಣ್ಣು | ಎ) ಡೆಕ್ಕನ್ ಟ್ರಾಪ್ |
| 2) ಕಪ್ಪುಮಣ್ಣು | ಬಿ) ಗಂಗಾನದಿ ಬಯಲು |
| 3) ಕೆಂಪು ಮಣ್ಣು | ಸಿ) ಪಶ್ಚಿಮ ಘಟ್ಟಗಳು |
| 4) ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು | ಡಿ) ರಾಗಿ, ಹೊಗೆಸೊಪ್ಪು ಮತ್ತು ಎಣ್ಣೆ ಕಾಳು |

ಎ) 1–ಡಿ, 2–ಬಿ, 3–ಎ, 4–ಸಿ

ಬಿ) 1–ಬಿ, 2–ಸಿ, 3–ಎ, 4–ಡಿ

ಸಿ) 1–ಎ, 2–ಬಿ, 3–ಬಿ, 4–ಸಿ

ಡಿ) <u>1–ಡಿ, 2–ಎ, 3–ಬಿ, 4–ಸಿ</u>

**24**. ಹೊಂದಿಸಿ ಬರೆಯಿರಿ.

ಉ.

| ಎ | ಬಿ |
|---|---|
| 1) ಪರ್ವತ ಮಣ್ಣು | ಎ) ಅರಾವಳಿ ಶ್ರೇಣಿಯ ಪಶ್ಚಿಮ ಭಾಗ |
| 2) ಮರುಭೂಮಿ ಮಣ್ಣು | ಬಿ) ಹತ್ತಿಬೆಳೆ |
| 3) ಕಪ್ಪು ಭೂಮಿ | ಸಿ) ಪರ್ಯಾಯ ಪ್ರಸ್ಥಭೂಮಿ |
| 4) ಕೆಂಪು ಮಣ್ಣು | ಡಿ) ಕಾಫಿ ಮತ್ತು ಚಹಾ |

ಎ) <u>1–ಡಿ, 2–ಎ, 3–ಬಿ, 4–ಸಿ</u>

ಬಿ) 1–ಎ, 2–ಡಿ, 3–ಸಿ, 4–ಬಿ

ಸಿ) 1–ಸಿ, 2–ಬಿ, 3–ಡಿ, 4–ಎ

ಡಿ) 1–ಡಿ, 2–ಎ, 3–ಬಿ, 4–ಡಿ

25. ರೆಗ್ಯೂರ್ ಮಣ್ಣು ಎಂದು ಕರೆಯಲ್ಪಡುವ ಮಣ್ಣು

ಉ. ಎ) ಕೆಂಪುಮಣ್ಣು ಬಿ) <u>ಕಪ್ಪುಮಣ್ಣು</u>

ಸಿ) ಜಂಬಿಟ್ಟಿಗೆ ಮಣ್ಣು ಡಿ) ಮೆಕ್ಕಲು ಮಣ್ಣು

26. ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ಈ ಮಣ್ಣು ನಿರ್ಮಾಣಗೊಳ್ಳುತ್ತದೆ.

ಉ. ಎ) ಮೆಕ್ಕಲು ಮಣ್ಣು ಬಿ) <u>ಮರುಭೂಮಿ ಮಣ್ಣು</u>

ಸಿ) ಕೆಂಪು ಮಣ್ಣು ಡಿ) ಕಪ್ಪು ಮಣ್ಣು

## ಅಧ್ಯಾಯ–5 ಭಾರತದ ಮಣ್ಣುಗಳು

27. ಭೂರತದಲ್ಲಿ ಅತೀ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ರಾಜ್ಯ

ಉ. ಎ) ಕರ್ನಾಟದ  ಬಿ) <u>ಮಧ್ಯಪ್ರದೇಶ</u>  ಸಿ) ಅಸ್ಸಾಂ  ಡಿ) ಕೇರಳ

28. ಈ ಕೆಳಗಿನ ಯಾವುದು ಉಷ್ಣ ವಲಯದ ಸಸ್ಯ ವರ್ಗಕ್ಕೆ ಸೇರಿಲ್ಲ.

ಉ. ಎ) ಲಾರೆಲ್  ಬಿ) ಬಬೂಲ್  ಸಿ) ಶೀಷಮ್  ಡಿ) ಸಭಾಯ್

29. ಅತೀ ಕಡಿಮೆ ಅರಣ್ಯ ಪ್ರದೇಶ ಹೊಂದಿರುವ ರಾಜ್ಯ

ಉ. ಎ) ಪಂಜಾಬ್  ಬಿ) ಮೇಘಾಲಯ  ಸಿ) <u>ಹರಿಯಾಣ</u>  ಡಿ) ತಮಿಳುನಾಡು

30. ನದಿ ಮುಖಜಭೂಮಿ ಮತ್ತು ನದಿ ಕಣಿವೆಗಳಲ್ಲಿ ಮಾತ್ರ ಕಂಡು ಬರುವ ಸಸ್ಯವರ್ಗ

ಉ. ಎ) ಅಲ್ಪೈನ್  ಬಿ) ನಿತ್ಯಹರಿದ್ವರ್ಣ

ಸಿ) <u>ಮ್ಯಾಂಗ್ರೋವ್</u>  ಡಿ) ಎಲೆ ಉದುರಿಸುವ ಮಾನ್ಸೂನ್

31. ಕಾಜಿರಂಗ ನ್ಯಾಷನಲ್ ಪಾರ್ಕ್ ಈ ರಾಜ್ಯದಲ್ಲಿದೆ

ಉ. ಎ) ಬಿಹಾರ  ಬಿ) ಗುಜರಾತ್

ಸಿ) <u>ಆಸ್ಸಾಂ</u>  ಡಿ) ಕರ್ನಾಟಕ

32. 'ಎ' ಪಟ್ಟಿಯಲ್ಲಿ ರಾಷ್ಟ್ರೀಯ ಉದ್ಯಾನ ವನಗಳನ್ನು 'ಬಿ' ಪಟ್ಟಿಯಲ್ಲಿ ರಾಜ್ಯಗಳ ಹೆಸರನ್ನು ನೀಡಲಾಗಿದ್ದು, ಸರಿಯಾಗಿ ಹೊಂದಿಕೆಯಾಗುವ ಉತ್ತರದ ಗುಂಪನ್ನು ಗುರುತಿಸಿ.

ಉ.

| ಎ | ಬಿ |
|---|---|
| 1) ಕನ್ಹಾ | ಎ) ಗುಜರಾತ್ |
| 2) ಹಜಾರಿಬಾಗ್ | ಬಿ) ಕರ್ನಾಟಕ |
| 3) ಗಿರ್ | ಸಿ) ಮಧ್ಯಪ್ರದೇಶ |
| 4) ತಾಂಡೋವಾ | ಡಿ) ಬಿಹಾರ |

ಎ) 1–ಡಿ, 2–ಸಿ, 3–ಬಿ, 4–ಎ

ಬಿ) <u>1–ಸಿ, 2–ಡಿ, 3–ಎ, 4–ಬಿ</u>

ಸಿ) 1–ಬಿ, 2–ಎ, 3–ಡಿ, 4–ಸಿ

ಡಿ) 1–ಎ, 2–ಡಿ, 3–ಎ, 4–ಬಿ

33. 'ಎ' ಪಟ್ಟಿಯಲ್ಲಿ ವನ್ಯಜೀವಿಧಾಮಗಳನ್ನು 'ಬಿ' ಪಟ್ಟಿಯಲ್ಲಿ ಅವುಗಳಿರುವ ರಾಜ್ಯಗಳನ್ನು ಕೊಡಲಾಗಿದೆ. ಇದಕ್ಕೆ ಸರಿ ಹೊಂದುವ ಉತ್ತರದ ಗುಂಪು.

ಉ.

| ಎ | ಬಿ |
|---|---|
| 1) ಬಿರ್‌ಮೋತಿಬಾಗ್ | ಎ) ರಾಜಸ್ಥಾನ |
| 2) ಜಾಲ್ದಾಪಾರ | ಬಿ) ಆಂಧ್ರಪ್ರದೇಶ |

3) ಕಿವ್ರೋಲಡಿಮೋ	ಸಿ) ಪಶ್ಚಿಮ ಬಂಗಾಳ
4) ನಾಗಾರ್ಜುನ ಸಾಗರ	ಡಿ) ಪಂಜಾಬ್

ಎ) 1–ಡಿ, 2–ಸಿ, 3–ಎ, 4–ಬಿ
ಬಿ) 1–ಡಿ, 2–ಸಿ, 3–ಬಿ, 4–ಎ
ಸಿ) 1–ಬಿ, 2–ಎ, 3–ಸಿ, 4–ಡಿ
ಡಿ) 1–ಎ, 2–ಸಿ, 3–ಡಿ, 4–ಬಿ

## ಅಧ್ಯಾಯ–6 ಜಲಸಂಪನ್ಮೂಲಗಳು

34. ಪಶ್ಚಿಮ ಬಂಗಾಳದ ಕಣ್ಣೀರಿನ ನದಿ
ಉ. ಎ) ಕೃಷ್ಣಾ	ಬಿ) ಗಂಗಾ	ಸಿ) ದಾಮೋದರ್	ಡಿ) ಗೋದಾವರಿ

35. ಓರಿಸ್ಸಾದ ಕಣ್ಣೀರಿನ ನದಿ
ಉ. ಎ) ಮಹಾನದಿ	ಬಿ) ಹೂಗ್ಲಿ	ಸಿ) ದಾಮೋದರ್	ಡಿ) ಬ್ರಹ್ಮಪುತ್ರಾ

36. ಬಿಹಾರಿನ ಕಣ್ಣೀರಿನ ನದಿ
ಉ. ಎ) ಸಟ್ಲೇಜ್	ಬಿ) ಮಹಾನದಿ	ಸಿ) ಕೋಸಿ	ಡಿ) ದಾಮೋದರ್

37. ಭಾರತದಲ್ಲಯೇ ಅತ್ಯಂತ ಉದ್ದವಾದ ಅಣೆಕಟ್ಟು ಇದಾಗಿದೆ.
ಉ. ಎ) ನಾಗಾರ್ಜುನ ಸಾಗರ	ಬಿ) ತುಂಗಭದ್ರಾ
ಸಿ) ಭಕ್ರಾನಾಂಗಲ್	ಡಿ) ಹಿರಾಕುಡ್

38. ಭಾರತದಲ್ಲಿಯೇ ಎತ್ತರವಾದ ಅಣೆಕಟ್ಟು ಇದಾಗಿದೆ.
ಉ. ಎ) ಭಾಕ್ರಾ	ಬಿ) ನಾಗಾರ್ಜುನ ಸಾಗರ
ಸಿ) ಕೃಷ್ಣಾ ಮೇಲ್ದಂಡೆ	ಡಿ) ಕೋಸಿ

39. ಕರ್ನಾಟಕದ ದೊಡ್ಡ ವಿವಿಧೋದ್ದೇಶ ಯೋಜನೆ
ಉ. ಎ) ತುಂಗಭದ್ರಾ	ಬಿ) ಕಾಳಿ
ಸಿ) ಕೃಷ್ಣಾ ಮೇಲ್ದಂಡೆ	ಡಿ) ಶಿವನ ಸಮುದ್ರ

40. 'ಎ' ಪಟ್ಟಿಯಲ್ಲಿ ರಾಷ್ಟ್ರೀಯ ಉದ್ಯಾನ ವನಗಳನ್ನು 'ಬಿ' ಪಟ್ಟಿಯಲ್ಲಿ ರಾಜ್ಯಗಳ ಹೆಸರನ್ನು ನೀಡಲಾಗಿದ್ದು, ಸರಿಯಾಗಿ ಹೊಂದಿಕೆಯಾಗುವ ಉತ್ತರದ ಗುಂಪನ್ನು ಗುರುತಿಸಿ.
ಉ.	ಎ	ಬಿ
1) ಭಾಕ್ರಾನಾಂಗಲ್	ಎ) ಬಿಹಾರ
2) ತುಂಗಭದ್ರಾ	ಬಿ) ಹಿಮಾಚಲಪ್ರದೇಶ
3) ಹಿರಾಕುಡ್	ಸಿ) ಕರ್ನಾಟಕ
4) ಕೋಸಿ	ಡಿ) ಓರಿಸ್ಸಾ

ಎ) 1–ಎ, 2–ಡಿ, 3–ಬಿ, 4–ಸಿ
ಬಿ) 1–ಡಿ, 2–ಬಿ, 3–ಸಿ, 4–ಎ
ಸಿ) 1–ಸಿ, 2–ಬಿ, 3–ಎ, 4–ಡಿ
ಡಿ) <u>1–ಬಿ, 2–ಸಿ, 3–ಡಿ, 4–ಎ</u>

## ಅಧ್ಯಾಯ–7 ಭಾರತದ ಭೂ ಬಳಕೆ ಹಾಗೂ ವ್ಯವಸಾಯ

41. ಭಾರತದ ಗೋಧಿಯ ಕಣಜ
ಉ. ಎ) ಹರಿಯಾಣ ಬಿ) <u>ಪಂಜಾಬ</u>
ಸಿ) ಉತ್ತರ ಪ್ರದೇಶ ಡಿ) ರಾಜಸ್ತಾನ

42. ಭಾರತದಲ್ಲಿ ಅತಿ ಹೆಚ್ಚು ಕಬ್ಬು ಉತ್ಪಾದಿಸುವ ರಾಜ್ಯ
ಉ. ಎ) <u>ಉತ್ತರಪ್ರದೇಶ</u> ಬಿ) ಮಹಾರಾಷ್ಟ್ರ ಸಿ) ಕರ್ನಾಟಕ ಡಿ) ತಮಿಳುನಾಡು

43. ಇವು ಪ್ರಮುಖ ನಾರಿನ ಬೆಳೆಗಳಾಗಿವೆ
ಉ. ಎ) ಹತ್ತಿ–ಹೊಗೆ ಸೊಪ್ಪು ಬಿ) ಸೆಣಬು–ಹೊಗೆಸೊಪ್ಪು
ಸಿ) <u>ಹತ್ತಿ–ಸೆಣಬು</u> ಡಿ) ಸೆಣಬು–ಕಾಫಿ

44. ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯ
ಉ. ಎ) ಪಂಜಾಬ್ ಬಿ) ಆಂಧ್ರಪ್ರದೇಶ
ಸಿ) <u>ಪಶ್ಚಿಮಬಂಗಾಳ</u> ಡಿ) ಓರಿಸ್ಸಾ

45. ಬೆಳೆಬೆಳೆಯುವದರ ಜೊತೆಗೆ ಪಶುಸಂಗೋಪನೆಯನ್ನು ಮಾಡುವುದು
ಉ. ಎ) ವಾಣಿಜ್ಯ ಬೇಸಾಯ ಬಿ) ಸಾಂಧ್ರಬೇಸಾಯ
ಸಿ) ತೋಟಗಾರಿಕೆ ಬೇಸಾಯ ಡಿ) <u>ವಿಶ್ರಬೇಸಾಯ</u>

46. ತೋಟಗಾರಿಕಾ ಕ್ಷೇತ್ರದಲ್ಲಿನ ಪ್ರಗತಿಯನ್ನು ಹೀಗೆನ್ನುವರು.
ಉ. ಎ) <u>ಸುವರ್ಣಕ್ರಾಂತಿ</u> ಬಿ) ಬಿಳಿಕ್ರಾಂತಿ
ಸಿ) ಹಸಿರುಕ್ರಾಂತಿ ಡಿ) ನೀಲಿಕ್ರಾಂತಿ

47. 'ಎ' ಪಟ್ಟಿಯಲ್ಲಿ ಬೆಳೆಗಳ ವಿಧಗಳನ್ನು 'ಬಿ' ಪಟ್ಟಿಯಲ್ಲಿ ಅವುಗಳಿಗೆ ಉದಾಹರಣೆಗಳನ್ನು ನೀಡಿದೆ.

| ಉ. ಎ | ಬಿ |
|---|---|
| 1) ಆಹಾರದ ಬೆಳೆ | ಎ) ಹತ್ತಿ–ಸೆಣಬು |
| 2) ತೋಟಗಾರಿಕೆ ಬೆಳೆ | ಬಿ) ಚಹಾ–ಕಾಫಿ |
| 3) ಪಾನೀಯ ಬೆಳೆ | ಸಿ) ಮಾವು–ಬಾಳೆ |
| 4) ನಾರಿನ ಬೆಳೆ | ಡಿ) ಗೋಧಿ–ಭತ್ತ |

ಎ) 1–ಡಿ, 2–ಸಿ, 3–ಬಿ, 4–ಎ        ಬಿ) 1–ಡಿ, 2–ಬಿ, 3–ಸಿ, 4–ಎ
ಸಿ) 1–ಸಿ, 2–ಸಿ, 3–ಎ, 4–ಬಿ        ಡಿ) 1–ಸಿ, 2–ಡಿ, 3–ಡಿ, 4–ಎ

## ಅಧ್ಯಾಯ–8 ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

48. ಭಾರತದಲ್ಲಿ ದೊರೆಯುವ ಮ್ಯಾಂಗನೀಸ್‌ನ ಮುಖ್ಯ ಅದಿರು

ಉ. ಎ) ಮ್ಯಾಗ್ನಟೈಟ್–ಹೆಮಟೈಟ್        ಬಿ) ಅಂತ್ರಸೈಟ್–ಬಿಟುಮಿನಸ್
ಸಿ) ಮಸ್ಕೋವೈಟ್–ಬಯೋಟೈಟ್        ಡಿ) ಪೈರೋಲೋಸೈಟ್–ಸೈಲೋಮೆಲೆನ್

49. ನಕ್ಷೆಯಲ್ಲಿ ಗುರುತಿಸಿರುವ ಪ್ರದೇಶಗಳಿಗೆ ಸರಿಯಾಗಿ ಹೋಲಿಕೆಯಾಗುವುದು

ಉ. ಎ) 1. ಬಾಂಬೆಹೈ 2. ಸೂರತ್ 3. ನರೋರ
ಬಿ) 1. ಕೈಗಾ 2. ಸೂರತ್ 3. ನರೋರ
ಸಿ) 1. ಕೈಗಾ 2. ಸೂರತ್ 3. ಕಲ್ಪಾಕಂ
ಡಿ) 1. ಬಾಂಬೆಹೈ 2. ತಾರಾಪುರ 3. ನರೋರ




50. ಇದು ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲ

ಉ. ಎ) ಕಲ್ಲಿದ್ದಲು        ಬಿ) ಸೌದೆ        ಸಿ) ಗಾಳಿ        ಡಿ) ಪೆಟ್ರೋಲಿಯಂ

51. ಇದು ಕಬ್ಬಿಣದ ಮಿಶ್ರಲೋಹವಾಗಿದೆ

ಉ. ಎ) ಮ್ಯಾಂಗನೀಸ್        ಬಿ) ಮೆಗ್ನೀಶಿಯಂ        ಸಿ) ಬಾಕ್ಸೈಟ್        ಡಿ) ಅಭ್ರಕ

52. 'ಬಾಕ್ಸೈಟ್' ಈ ಕೆಳಗಿನ ಲೋಹದ ಅದಿರಾಗಿದೆ.

ಉ. ಎ) ತಾಮ್ರ        ಬಿ) ಅಲ್ಯುಮಿನಿಯಂ        ಸಿ) ಕಬ್ಬಿಣ        ಡಿ) ಮ್ಯಾಂಗನೀಸ್

53. ಇದನ್ನು ಅದ್ಭುತ ಲೋಹ ಎಂದು ಕರೆಯುವರು

ಉ. ಎ) ಮ್ಯಾಂಗನೀಸ್        ಬಿ) ಕಬ್ಬಿಣ        ಸಿ) ಬಾಕ್ಸೈಟ್        ಡಿ) ಅಭ್ರಕ

54. ಕರ್ನಾಟಕದಲ್ಲಿ ಬಾಕ್ಸೈಟ್ ದೊರೆಯುವ ಸ್ಥಳ

ಉ. ಎ) ಬೆಳಗಾವಿ        ಬಿ) ಕೋಲಾರ        ಸಿ) ಕುಪ್ಪತೆಗುಡ್ಡ        ಡಿ) ಕುದುರೆಮುಖ

55. 'ಕಾಗೆಬಂಗಾರ' ಎಂದು ಕರೆಯಲ್ಪಡುವ ಖನಿಜ ಅಭ್ರಕವಾದರೆ ಕಪ್ಪು ಬಂಗಾರ' ಎಂದು ಕರೆಯಲ್ಪಡುವ ಖನಿಜ

ಉ. ಎ) ಕಬ್ಬಿಣ        ಬಿ) ಕಲ್ಲಿದ್ದಲು        ಸಿ) ಮ್ಯಾಂಗನೀಸ್        ಡಿ) ಬಾಕ್ಸೈಟ್

56. ಭಾರತದ ಮೊದಲ ತೈಲಬಾವಿ

ಉ. ಎ) ದಿಗ್ಬಾಯ್        ಬಿ) ಬಾಂಬೆಹೈ        ಸಿ) ಲಕಿಮ್‌ಪುರ್        ಡಿ) ಅಂಕಲೇಶ್ವರ

57. ಚಿನ್ನವು ಇಲ್ಲಿ ಬೆಣಚುಕಲ್ಲುಗಳ ಶಿಲಾಸ್ತರಗಳಲ್ಲಿ ಎಳೆಗಳ ರೂಪದಲ್ಲಿ ದೊರೆಯುತ್ತದೆ.
ಉ. ಎ) ಹಟ್ಟಿ ಬಿ) ಕೋಲಾರ ಸಿ) ಅನಂತಪುರ ಡಿ) ಕಪ್ಪತಗುಡ್ಡ

58. ಈ ಸ್ಥಳದಲ್ಲಿ ಭಾರತದ ಅತಿ ದೊಡ್ಡ ತೈಲ ನಿಕ್ಷೇಪವಿದೆ.
ಉ. ಎ) ದಿಗ್ಬಾಯ್ ಬಿ) ಬಾಂಬೆಹೈ ಸಿ) ಅಕಿಮ್‌ಪುರ ಡಿ) ಅಂಕಲೇಶ್ವರ

59. ಭಾರತದ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರ
ಉ. ಎ) ರಾಜಾಸ್ಥಾನದ 'ಬಾರಾಮಾರ್' ಬಿ) ಮಹಾರಾಷ್ಟ್ರದ ಬಾಂಬೆಹೈ
ಸಿ) ತಮಿಳುನಾಡಿನ 'ಕಲ್ಪಕ' ಡಿ) ಕರ್ನಾಟಕದ ರಾಯಚೂರು

60. ನಕ್ಷೆಯಲ್ಲಿ ಗುರ್ತಿಸಿರುವ ಪ್ರದೇಶಗಳಿಗೆ ಸರಿಯಾಗಿ ಹೋಲಿಕೆಯಾಗುವುದು
ಉ. ಎ) 1. ಸೂರತ್, 2. ನರೋರ, 3. ಕಲ್ಪಾಕಂ
ಬಿ) 1. ಬಾಂಬೆಹೈ, 2. ರಾಣಾ ಪ್ರತಾಪಸಾಗರ, 3. ಕೈಗಾ
ಸಿ) 1. ಬಾಂಬೆಹೈ, 2 ರಾಣಾ ಪ್ರತಾಪಸಾಗರ, 3. ಕಲ್ಪಕಂ
ಡಿ) 1. ಬಾಂಬೆಹೈ, 2.ಕೈಗಾ 3. ಕಲ್ಪಕಂ




## ಅಧ್ಯಾಯ–9 ಭಾರತದ ಸಾರಿಗೆ

61. ಭಾರತದ ಹೆಬ್ಬಾಗಿಲು ಎಂದು ಈ ಬಂದರನ್ನು ಕರೆಯುತ್ತಾರೆ.
ಉ. ಎ) ಕೋಲ್ಕತ್ತಾ ಬಿ) ಮುಂಬೈ
ಸಿ) ಚೈನ್ನೈ ಡಿ) ಮಂಗಳೂರು

62. ಭಾರತದ ಅತ್ಯಂತ ಹಳೆಯ ಕೃತಕ ಬಂದರು
ಉ. ಎ) ಚೆನ್ನೈ ಬಿ) ಮುಂಬೈ ಸಿ) ಕೊಲ್ಕತ್ತಾ ಡಿ) ವಿಶಾಖ ಪಟ್ಟಣ

63. ಭಾರತದ ಚಹಾ ಬಂದರು
ಉ. ಎ) ಮಂಗಳೂರು ಬಿ) ನವಶೇವಾ ಸಿ) ಪಾರಾದೀಪ್ ಡಿ) ಕೋಲ್ಕತ್ತಾ

64. ಕೋಲ್ಕತ್ತಾ ಬಂದರಿನ ಒತ್ತಡವನ್ನು ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರು ಇದಾಗಿದೆ.
ಉ. ಎ) ಪಾರಾದೀಪ್ ಬಿ) ಹಾಲ್ದಿಯಾ ಸಿ) ವಿಶಾಖ ಪಟ್ಟಣ ಡಿ) ನವಶೇವಾ

65. ಮುಂಬೈ ಬಂದರಿನ ಒತ್ತಡವನ್ನು ಕಡಿಮೆ ಮಾಡಲು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಿಸಿರುವ ಬಂದರು
ಉ. ಎ) ಕೊಚ್ಚಿ ಬಿ) ಮಂಗಳೂರು ಸಿ) ನವಶೇವಾ ಡಿ) ಕಾಂಡ್ಲಾ

66. ಇದು ಭಾರತದ ನೈಸರ್ಗಿಕ ಬಂದರುಗಳಲ್ಲಿ ಒಂದಾಗಿದೆ
ಉ. ಎ) ಚೆನ್ನೈ ಬಿ) ಹಾಲ್ದಿಯಾ ಸಿ) ನವಶೇವಾ ಡಿ) ವಿಶಾಖಪಟ್ಟಣ

67. ಕಚ್ ಖಾರಿಯಲ್ಲಿರುವ ಬಂದರು ಕಾಂಡ್ಲವಾದರೆ ಝುವಾರಿ ಕೊಲ್ಲಿಯಲ್ಲಿರುವ ಬಂದರು
ಉ. ಎ) ನವಮಂಗಳೂರು ಬಿ) ಮರ್ಮಗೋವಾ ಸಿ) ತೂತುಕುಡಿ ಡಿ) ಕೊಚ್ಚಿ

68. ಹಳ್ಳಿ ಮತ್ತು ಕೃಷಿ ಅಭಿವೃದ್ಧಿಗೆ ಇದು ಹೆಚ್ಚು ಸೂಕ್ತ

ಉ. ಎ) ರೈಲುಮಾರ್ಗ ಬಿ) ಜಲಮಾರ್ಗ ಸಿ) ವಾಯುಮಾರ್ಗ ಡಿ) ರಸ್ತೆಮಾರ್ಗ

69. 'ಎ' ಪಟ್ಟಿಯಲ್ಲಿ ನಗರಗಳನ್ನು 'ಬಿ' ಪಟ್ಟಿಯಲ್ಲಿ ಅಲ್ಲಿನ ವಿಮಾನ ನಿಲ್ದಾಣಗಳ ಹೆಸರುಗಳನ್ನು ನೀಡಿದೆ. ಇವುಗಳ ಸಹಿಹೊಂದುವ ಉತ್ತರದ ಗುಂಪು

| ಎ | ಬಿ |
|---|---|
| 1. ಬೆಂಗಳೂರು | ಎ) ಇಂದಿರಾಗಾಂಧಿ ವಿಮಾನ ನಿಲ್ದಾಣ |
| 2. ದೆಹಲಿ | ಬಿ) ಸುಭಾಷ್‌ಚಂದ್ರ ಬೋಸ್ ವಿಮಾನ ನಿಲ್ದಾಣ |
| 3. ಚೆನ್ನೈ | ಸಿ) ನಾಡಪ್ರಭು ಕೆಂಪೇಗೌಡ ವಿಮಾನ ನಿಲ್ದಾಣ |
| 4. ಕೋಲ್ಕತ್ತಾ | ಡಿ) ಅಣ್ಣಾ ವಿಮಾನ ನಿಲ್ದಾಣ |

ಎ) 1–ಸಿ, 2–ಎ, 3–ಬಿ, 4–ಡಿ

ಬಿ) 1–ಬಿ, 2–ಎ, 3–ಡಿ, 4–ಸಿ

ಸಿ) 1–ಸಿ, 2–ಎ, 3–ಡಿ, 4–ಬಿ

ಡಿ) 1–ಸಿ, 2–ಡಿ, 3–ಬಿ, 4–ಎ

70. ಮುಂಬೈ ವಿಮಾನ ನಿಲ್ದಾಣವನ್ನು ಹೀಗೆಂದೂ ಕರೆಯುವರು

ಉ. ಎ) ಇಂದಿರಾಗಾಂಧಿ ಬಿ) ಸುಭಾಸ್‌ಚಂದ್ರಬೋಸ್

ಸಿ) ಅಣ್ಣಾ ಡಿ) ಸಹರಾ ಮತ್ತು ಸಾಂತ್ರಾಕ್ರೂಜ್

71. 'ಎ' ಪಟ್ಟಿಯಲ್ಲಿ ಬಂದರುಗಳನ್ನು 'ಬಿ' ಪಟ್ಟಿಯಲ್ಲಿ ಅವುಗಳಿರುವ ರಾಜ್ಯಗಳನ್ನು ನೀಡಿದೆ. ಅವುಗಳ ಸರಿಹೊಂದುವ ಉತ್ತರದ ಗುಂಪು.

| ಎ | ಬಿ |
|---|---|
| 1. ಪಾರಾದೀಪ್ | ಎ) ಆಂಧ್ರಪ್ರದೇಶ |
| 2. ತೂತುಕುಡಿ | ಬಿ) ಒರಿಸ್ಸಾ |
| 3. ವಿಶಾಖಪಟ್ಟಣ | ಸಿ) ಗುಜರಾತ್ |
| 4. ಕಾಂಡ್ಲಾ | ಡಿ) ತಮಿಳುನಾಡು |

ಎ) 1–ಸಿ, 2–ಡಿ, 3–ಬಿ, 4–ಎ

ಬಿ) 1–ಬಿ, 2–ಡಿ, 3–ಎ, 4–ಸಿ

ಸಿ) 1–ಬಿ, 2–ಸಿ, 3–ಎ, 4–ಡಿ

ಡಿ) 1–ಡಿ, 2–ಸಿ, 3–ಬಿ, 4–ಎ

72. ನಕ್ಷೆಯಲ್ಲಿ ಗುರ್ತಿಸಿರುವ ಪ್ರದೇಶಗಳಿಗೆ ಸರಿಯಾಗಿ ಹೋಲಿಕೆಯಾಗುವುದು.




ಎ) 1. ಕಾಂಡ್ಲಾ 2. ಹೈದರಾಬಾದ್ 3. ಗೌಹಾಟ

ಬಿ) 1. ಸೂರತ್ 2. ಹೈದರಾಬಾದ್ 3. ಗೌಹಾಟ

ಸಿ) 1. ಸೂರತ್ 2. ಮುಂಬೈ 3. ಗೌಹಾಟ

ಡಿ) ಕಾಂಡ್ಲಾ 2. ತೂತುಕುಡಿ 3. ಕೋಲ್ಕತ್ತಾ

## ಅಧ್ಯಾಯ–10 ಭಾರತದ ಪ್ರಮುಖ ಕೈಗಾರಿಕೋದ್ದಿಮೆಗಳು

73. 'ಎ' ಪಟ್ಟಿಯಲ್ಲಿ ಕೈಗಾರಿಕೆಗಳನ್ನು 'ಬಿ' ಪಟ್ಟಿಯಲ್ಲಿ ಅವುಗಳ ಕಚ್ಚಾವಸ್ತುವನ್ನು ನೀಡಿದೆ. ಅವುಗಳಿಗೆ ಸಹಿಹೊಂದುವ ಉತ್ತರದ ಗುಂಪು

ಉ.

| ಎ | ಬಿ |
|---|---|
| 1) ಹತ್ತಿಬಟ್ಟೆ | ಎ) ಕಬ್ಬು |
| 2) ಸಕ್ಕರೆ | ಬಿ) ಹತ್ತಿ |
| 3) ಅಲ್ಯೂಮಿನಿಯಂ | ಸಿ) ಮರದ ತಿರುಳು |
| 4) ಕಾಗದ | ಡಿ) ಬಾಕ್ಸೈಟ್ |

ಎ) 1–ಬಿ, 2–ಎ, 3–ಡಿ, 4–ಸಿ    ಬಿ) 1–ಬಿ, 2–ಎ, 3–ಸಿ, 3–ಡಿ

ಸಿ) 1–ಸಿ, 2–ಡಿ, 3–ಎ, 4–ಬಿ    ಡಿ) 1–ಡಿ, 2–ಎ, 3–ಸಿ, 4–ಬಿ

## ಅಧ್ಯಾಯ–11 ಸಂಪರ್ಕ

74. ಭೌಗೋಳಿಕ ಮಾಹಿತಿ ವ್ಯವಸ್ಥೆಯು ಮೊದಲು ಈ ರಾಷ್ಟ್ರದಲ್ಲಿ ಆರಂಭವಾಯಿತು.

ಉ. ಎ) ಅಮೆರಿಕಾ    ಬಿ) ಭಾರತ    ಸಿ) ಕೆನಡಾ    ಡಿ) ರಷ್ಯಾ

75. ಈ ಕೆಳಗಿನವುಗಳಲ್ಲಿ ಯಾವುದು ಸಮೂಹ ಮಾಧ್ಯಮವಾಗಿದೆ

ಉ. ಎ) ದೂರವಾಣಿ    ಬಿ) ರೇಡಿಯೊ    ಸಿ) ಅಂಚೆ    ಡಿ) ಇ–ಮೇಲ್

76. ಭಾರತವು ಪ್ರಾದೇಶಿಕ ಜಿ.ಪಿ.ಎಸ್.ವ್ಯವಸ್ಥೆ ಹೊಂದಲು ಉಡಾಯಿಸಿರುವ ಉಪಗ್ರಹಗಳ ಸಂಖ್ಯೆ

ಉ. ಎ) ಆರು    ಬಿ) ಹತ್ತು    ಸಿ) ಇಪ್ಪತ್ನಾಲ್ಕು    ಡಿ) ಏಳು

## ಅಧ್ಯಾಯ–13 ಭಾರತದ ಜನಸಂಖ್ಯೆ

77. ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯ

ಉ. ಎ) ಉತ್ತರ ಪ್ರದೇಶ    ಬಿ) ಬಿಹಾರ    ಸಿ) ರಾಜಸ್ಥಾನ    ಡಿ) ಮಹಾರಾಷ್ಟ್ರ

78. ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯ

ಉ. ಎ) ಪಶ್ಚಿಮ ಬಂಗಾಳ    ಬಿ) ಬಿಹಾರ    ಸಿ) ಕೇರಳ    ಡಿ) ಮಧ್ಯಪ್ರದೇಶ

79. ಭಾರತದಲ್ಲಿ ಅತಿ ಹೆಚ್ಚು ಸಾಕ್ಷರತೆ ಹೊಂದಿರುವ ರಾಜ್ಯ

ಉ. ಎ) ಬಿಹಾರ    ಬಿ) ತಮಿಳುನಾಡು    ಸಿ) ಕೇರಳ    ಡಿ) ಕರ್ನಾಟಕ

80. ಭಾರತದಲ್ಲಿ ಜನಗಣತಿ – ವರ್ಷಗಳಿಗೊಮ್ಮೆ ನಡೆಯುತ್ತದೆ.

ಉ. ಎ) 10 ವರ್ಷ    ಬಿ) 5 ವರ್ಷ    ಸಿ) 15 ವರ್ಷ    ಡಿ) 20 ವರ್ಷ

# ಅರ್ಥಶಾಸ್ತ್ರ

## ಅಧ್ಯಾಯ–1 ಅಭಿವೃದ್ಧಿ

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. 2011ರ ಜನಗಣತಿ ಪ್ರಕಾರ ಭಾರತದ ಲಿಂಗಾನುಪಾತ

ಉ. ಎ) 9333　ಬಿ) 940　ಸಿ) 859　ಡಿ) 917

## ಅಧ್ಯಾಯ–2 ಅರ್ಥವ್ಯವಸ್ಥೆ ಮತ್ತು ಸರ್ಕಾರ

2. ಭಾರತದ ಆರ್ಥಿಕ ಯೋಜನೆಯ ಪಿತಾಮಹ

ಉ. ಎ) ಸರ್.ಎಂ.ವಿಶ್ವೇಶ್ವರಯ್ಯ　ಬಿ) ಜವಹರಲಾಲ್ ನೆಹರು
ಸಿ) ಮಹಾತ್ಮ ಗಾಂಧೀಜಿ　ಡಿ) ಗುನ್ನಾರ್ ಮಿರ್ಡಾಲ್

3. ಭಾರತದ ಹಸಿರು ಕ್ರಾಂತಿಯ ಪಿತಾಮಹ

ಉ. ಎ) ಮಹಾತ್ಮ ಗಾಂಧೀಜಿ　ಬಿ) ಎಂ.ಎಸ್.ಸ್ವಾಮಿನಾಥನ್
ಸಿ) ಡಾ. ನಾರ್ಮನ್ ಬೋರ್ಲಾಗ್　ಡಿ) ವರ್ಗೀಸ್ ಕುರಿಯನ್

## ಅಧ್ಯಾಯ–3 ಗ್ರಾಮೀಣಾಭಿವೃದ್ಧಿ

4. ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ಯಾರು?

ಉ. ಎ) ಜವಹರಲಾಲ್ ನೆಹರು　ಬಿ) ಮಹಾತ್ಮ ಗಾಂಧೀಜಿ
ಸಿ) ಬಿ.ಆರ್.ಅಂಬೇಡ್ಕರ್　ಡಿ) ವಲ್ಲಭಭಾಯಿ ಪಟೇಲ್

5. ಮಹಿಳೆಯರ ಈ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ

ಉ. ಎ) ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆ
ಬಿ) ಕೃಷಿಕ್ಷೇತ್ರದಲ್ಲಿ ಮಾಡುವ ದುಡಿಮೆ
ಸಿ) ಕೈಗಾರಿಕೆಗಳಲ್ಲಿ ಮಾಡುವ ದುಡಿಮೆ
ಡಿ) ಸಾರ್ವಜನಿಕ ಕ್ಷೇತ್ರಗಳಲ್ಲಿ ಮಾಡುವ ದುಡಿಮೆ

## ಅಧ್ಯಾಯ–4 ಸಾಮಾಜಿಕ ಹಣಕಾಸು ಮತ್ತು ಆಯ–ವ್ಯಯ

6. ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆ

ಉ. ಎ) ದೇಣಿಗೆ　ಬಿ) ತೆರಿಗೆ　ಸಿ) ಸಹಾಯಧನ　ಡಿ) ಪ್ರೋತ್ಸಾಹಧನ

7. ಸರ್ಕಾರವು ಸಾರ್ವಜನಿಕ ಹಣಕಾಸನ್ನು ಇದರ ಮೂಲಕ ನಿರ್ವಹಿಸುತ್ತದೆ.

ಉ. ಎ) ಕೋಶೀಯ ನೀತಿ　ಬಿ) ರಾಜಕೀಯ ನೀತಿ
ಸಿ) ವಿದೇಶಿ ನೀತಿ　ಡಿ) ಸಾಮಾಜಿಕ ನೀತಿ

## ದಾರಿದೀಪ ಪಾಸಿಂಗ್–ಪ್ಯಾಕೇಜ್

# ವ್ಯವಹಾರ ಅಧ್ಯಯನ

## ಅಧ್ಯಾಯ–1 ಬ್ಯಾಂಕು ವ್ಯವಹಾರಗಳು

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಇದು ಬ್ಯಾಂಕುಗಳ ಬ್ಯಾಂಕು

ಉ. ಎ) ಇಂಡಿಯನ್ ಬ್ಯಾಂಕು ಬಿ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಸಿ) ರಿಸರ್ವ್ ಬ್ಯಾಂಕು ಡಿ) ಕೆನರಾ ಬ್ಯಾಂಕ್

2. ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವವರು ಈ ಖಾತೆ ತೆರೆಯುತ್ತಾರೆ.

ಉ. ಎ) ಉಳಿತಾಯ ಖಾತೆ ಬಿ) ಆವರ್ತ ಠೇವಣಿ ಖಾತೆ

ಸಿ) ನಿಶ್ಚಿತ ಠೇವಣಿ ಖಾತೆ ಡಿ) ಚಾಲ್ತಿ ಖಾತೆ

3. ಒಂದು ದಿನಕ್ಕೆ ಎಷ್ಟು ಬಾರಿಯಾದರೂ ಹಣಕಾಸಿನ ವ್ಯವಹಾರ ಮಾಡಬಹುದಾದ ಖಾತೆ ಇದಾಗಿದೆ. (ವ್ಯಾಪಾರಸ್ಥರು ಮತ್ತು ಉದ್ಯಮಿಗಳಿಗಾಗಿ)

ಉ. ಎ) ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ

ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

## ಅಧ್ಯಾಯ–2 ವಿಮೆ

4. ವಿಮೆಯಲ್ಲಿ ನಷ್ಟ ಪರಿಹಾರ ಕೊಡಲು ಒಪ್ಪುವವನು

ಉ. ಎ) ವಿಮಾದಾರ ಬಿ) ವಿಮಾ ಏಜೆಂಟ್

ಸಿ) ವಿಮಾ ಕರ್ತ ಡಿ) ವಿಮಾನಿರ್ದೇಶಕ

5. ವಿಮೆಯಲ್ಲಿ ನಷ್ಟ ಪರಿಹಾರ ಪಡೆಯುವವನು

ಉ. ಎ) ವಿಮಾ ನಿರ್ದೇಶಕ ಬಿ) ವಿಮಾ ಕರ್ತ

ಸಿ) ವಿಮಾ ಏಜೆಂಟ್ ಡಿ) ವಿಮಾದಾರ

6. ಇದು ಸಾಮಾನ್ಯ ವಿಮೆಗೆ ಸೇರಿಲ್ಲ

ಉ. ಎ) ವಾಹನವಿಮೆ ಬಿ) ಮನುಷ್ಯನ ಜೀವದ ವಿಮೆ

ಸಿ) ಮನೆಯ ಮೇಲಿನ ವಿಮೆ ಡಿ) ಬೆಳೆವಿಮೆ

7. ವಿಮೆಯು ಇವರ ಮಧ್ಯೆ ಏರ್ಪಡುವ ಒಂದು ಒಪ್ಪಂದ

ಉ. ಎ) ವಿಮಾಸಂಸ್ಥೆ ಮತ್ತು ವಿಮಾದಾರ ಬಿ) ವಿಮಾಜೆಂಟ್ ಮತ್ತು ವಿಮಾದಾರ

ಸಿ) ವಿಮಾಸಂಸ್ಥೆ ಮತ್ತು ವಿಮಾ ಏಜೆಂಟ್ ಡಿ) ವಿಮಾಕರ್ತ ಮತ್ತು ವಿಮಾದಾರ

8. ವಿಮಾ ಪಾಲಿಸಿಯನ್ನು ಪಡೆದುಕೊಳ್ಳಲು ಹಾಕುವ ಅರ್ಜಿ ನಮೂನೆಯನ್ನು ಹೀಗೆನ್ನುತ್ತಾರೆ.

ಉ. ಎ) ವಿಮಾಬಾಂಡ್ ಬಿ) ನಾಮಿನೇಷನ್ ಅರ್ಜಿ

ಸಿ) ಪ್ರಪೋಸಲ್ ಫಾರಂ ಡಿ) ವಿಮಾ ಪಾಲಿಸಿ

## ಅಧ್ಯಾಯ-3 ಉದ್ಯಮಗಾರಿಕೆ

9. 'ಅಪೊಲೋ' ವೈದ್ಯಶಾಲೆಗಳ ಸಮೂಹವನ್ನು ಆರಂಭಿಸಿದವರು.

ಉ. ಎ) ನರೇಶ್ ಗೋಯಲ್ ಬಿ) ಡಾ। ಪ್ರತಾಪ್ ರೆಡ್ಡಿ

ಸಿ) ಅಜೀಂ ಪ್ರೇಮ್‌ಜಿ ಡಿ) ಏಕ್ತಾ ಕಪೂರ್

10. ವಿಪ್ರೋ ತಂತ್ರಜ್ಞಾನ ಸಂಸ್ಥೆಯ ಅಧ್ಯಕ್ಷರು

ಉ. ಎ) ಧೀರು ಭಾಯಿ ಅಂಬಾನಿ ಬಿ) ನಾರಾಯಣ ಮೂರ್ತಿ

ಸಿ) ಕಿರಣ್ ಮುಜಮ್‌ದಾರ್‌ಷಾ ಡಿ) ಅಜೀಂ ಪ್ರೇಮ್‌ಜಿ

11. ಭಾರತದ ಅತಿ ದೊಡ್ಡ ಜೆಟ್ ವಾಯುಮಾರ್ಗ ಸಂಸ್ಥೆಯ ಅಧ್ಯಕ್ಷರು

ಉ. ಎ) ನರೇಶ್ ಗೋಯಲ್ ಬಿ) ವರ್ಗೀಸ್ ಕುರಿಯನ್

ಸಿ) ಏಕ್ತ ಕಪೂರ್ ಡಿ) ಧೀರು ಬಾಯಿ ಅಂಬಾನಿ

12. ಭಾರತದ ದೂರದರ್ಶನ ಕ್ಷೇತ್ರದಲ್ಲಿ 'ಅಧಿಪತ್ಯ ಸಾಧಿಸಿದ ರಾಣಿ' ಎಂದೇ ಹೆಸರು ಮಾಡಿದವರು.

ಉ. ಎ) ಅಜೀಂ ಪ್ರೇಮ್‌ಜಿ

ಬಿ) ಕಿರಣ ಮುಜಮ್ ದಾರ್ ಷಾ

ಸಿ) ಏಕ್ತಾ ಕಪೂರ್

ಡಿ) ಧೀರು ಭಾಯಿ ಅಂಬಾನಿ

13. ಜೀವ ವಿಜ್ಞಾನ ತಂತ್ರಜ್ಞಾನದ 'ಬಯೋಕಾನ್ ನಿಗಮ'ದ ಅಧ್ಯಕ್ಷರು

ಉ. ಎ) ವರ್ಗೀಸ್ ಕುರಿಯನ್ ಬಿ) ನಾರಾಯಣ ಮೂರ್ತಿ

ಸಿ) ಧೀರು ಭಾಯಿ ಅಂಬಾನಿ ಡಿ) ಕಿರಣ್ ಮುಜಮ್‌ದಾರ್ ಷಾ

14. NASDAQ ನಲ್ಲಿ ನೋಂದಾಯಿತಗೊಂಡ ಪ್ರಪ್ರಥಮ ತಂತ್ರಜ್ಞಾನ ಸಂಸ್ಥೆ ಇದಾಗಿದೆ.

ಉ. ಎ) ರಿಲಯನ್ಸ್ ಬಿ) ಬಯೋಕಾನ್

ಸಿ) ವಿಪ್ರೋ ಡಿ) ಇನ್‌ಫೋಸಿಸ್

15. ಗುಜರಾತಿನ ಕೈರಾ ಜಿಲ್ಲೆಯ ಆನಂದ್ ಹೈನುಗಾರಿಕೆಯನ್ನು ಪ್ರಾರಂಭಿಸಿದವರು.

ಉ. ಎ) ಅಜೀಂ ಪ್ರೇಮ್‌ಜಿ ಬಿ) ವರ್ಗೀಸ್ ಕುರಿಯನ್

ಸಿ) ನಾರಾಯಣ ಮೂರ್ತಿ ಡಿ) ಏಕ್ತ ಕಪೂರ್

16. 'ಎ' ಪಟ್ಟಿಯಲ್ಲಿ ಉದ್ಯಮಿಗಳು 'ಬಿ' ಪಟ್ಟಿಯಲ್ಲಿ ಅವರಿಗೆ ಸಂಬಂಧಿಸಿದ ಮಾಹಿತಿ ನೀಡಲಾಗಿದೆ. ಇವುಗಳ ಸರಿ ಹೊಂದುವ ಗುಂಪು

ಉ.

| ಎ | ಬಿ |
|---|---|
| 1) ನಾರಾಯಣ ಮೂರ್ತಿ | ಎ) ಬಿಳಿಕ್ರಾಂತಿಯ ಪಿತಾಮಹ |
| 2) ವರ್ಗಿಸ್ ಕುರಿಯನ್ | ಬಿ) ರಿಲಯನ್ಸ್ |
| 3) ಧೀರು ಬಾಯಿ ಅಂಬಾನಿ | ಸಿ) ಬಾಲಾಜಿ ದೂರದರ್ಶನ ಚಿತ್ರ |
| 4) ಏಕ್ತಾ ಕಪೂರ್ | ಡಿ) ಇನ್ಫೋಸಿಸ್ |

ಎ) 1–ಡಿ, 2–ಎ, 3–ಸಿ, 4–ಬಿ

ಬಿ) 1–ಬಿ, 2–ಸಿ, 3–ಡಿ, 4–ಎ

ಸಿ) 1–ಸಿ, 2–ಡಿ, 3–ಬಿ, 4–ಎ

ಡಿ) 1–ಡಿ, 2–ಎ, 3–ಬಿ, 4–ಸಿ

## ಅಧ್ಯಾಯ–4 ವ್ಯವಹಾರದ ಜಾಗತೀಕರಣ

17. ವಿಶ್ವ ವ್ಯಾಪಾರ ಸಂಘಟನೆಯ ಕೇಂದ್ರ ಸ್ಥಳ

ಉ. ಎ) ಪ್ಯಾರಿಸ್ ಬಿ) ಜಿನೆವಾ

ಸಿ) ನ್ಯೂಯಾರ್ಕ್ ಡಿ) ರೋಂ

18. ಈ ಸಂಸ್ಥೆಯು ವಿಶ್ವದ ವ್ಯಾಪಾರಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನೋಡಿಕೋಳ್ಳುತ್ತದೆ.

ಉ. ಎ) ಅಂತರರಾಷ್ಟ್ರೀಯ ಹಣಕಾಸುಸಂಸ್ಥೆ ಬಿ) ಅಂತರರಾಷ್ಟ್ರೀಯ ಹಣಕಾಸಿನ ತರ್ತುನಿಧಿ

ಸಿ) ವಿಶ್ವವ್ಯಾಪಾರ ಸಂಘಟನೆ ಡಿ) ಅಂತರ ರಾಷ್ಟ್ರೀಯ ಹಣಕಾಸಿನ ತುರ್ತುನಿಧಿ

# ದಾರಿದೀಪ ಪಾಸಿಂಗ್–ಪ್ಯಾಕೇಜ್

# ಇತಿಹಾಸ

## ಅಧ್ಯಾಯ–1 ಭಾರತಕ್ಕೆ ಯೂರೋಪಿಯನ್ನರ ಆಗಮನ

**I. ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿದವರು ಯಾರು?
ಉ. ವಾಸ್ಕೋಡಿಗಾಮ

2. ವಾಂಡಿವಾಷ್ ಕದನದಲ್ಲಿ ಬ್ರಿಟೀಷರನ್ನು ಸೋಲಿಸಿದ ಬ್ರಿಟಿಷ್ ಸೇವಾ ನಾಯಕ ಯಾರು?
ಉ. ಸರ್.ಐರ್.ಕೋಟ್

## ಅಧ್ಯಾಯ–2 ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

3. ಮದ್ರಾಸ್ ಶಾಂತಿ ಒಪ್ಪಂದದ ಷರತ್ತು ಯಾವುದು?
ಉ. ಮೂರನೇ ಶಕ್ತಿಯಿಂದ ಆಕ್ರಮಣಕ್ಕೆ ಒಳಗಾದಾಗ ಬ್ರಿಟೀಷರು ಮತ್ತು ಹೈದರಾಲಿ ಪರಸ್ಪರ ಸಹಾಯ ಮಾಡುವುದು.

4. 2ನೇ ಆಂಗ್ಲೋ–ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?
ಉ. ಮಂಗಳೂರು ಶಾಂತಿ ಒಪ್ಪಂದ

## ಅಧ್ಯಾಯ–3 ಜನಪಚರಿತ್ರೆ

5. ಮೌಖಿಕ ಚರಿತ್ರೆಯ ಆಕರಗಳು ಯಾವುವು?
ಉ. * ಐತಿಹ್ಯ * ಲಾವಣಿ * ಜನಪದಗೀತೆ * ಕಾವ್ಯ

6. 'ಯುಗ' ಈ ಪದವನ್ನು ಅರ್ಥೈಸಿರಿ'.
ಉ. ಒಂದು ಕಾಲ ಚಕ್ರದ ಆವರ್ತನ ಮುಗಿದ ಮೇಲೆ ಇನ್ನೊಂದು ಕಾಲ ಚಕ್ರ ಆವರ್ತನವಾಗುವುದನ್ನು 'ಯುಗ' ಎನ್ನುವರು.

7. ಮೌಖಿಕ ಆಕರಗಳಿಂದ ರಚಿತವಾದ ಚರಿತ್ರೆ ಯಾವುದು?
ಉ. ಜನಪದ ಚರಿತ್ರೆ

## ಅಧ್ಯಾಯ–3 ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

8. ಸಿಖ್ಖರ ಸೈನ್ಯದ ಹೆಸರೇನು?
ಉ. ಖಾಲ್ಸಾ

9. ಭಾರತ ಮೊದಲ ಗವರ್ನರ್ ಜನರಲ್ ಯಾರು?
ಉ. ವಾರನ್ ಹೇಸ್ಟಿಂಗ್

10. ಸರ್ವೋಚ್ಚ ನ್ಯಾಯಾಲಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ ಯಾವುದು?
ಉ. 1773ರ ರೆಗ್ಯೂಲೇಟಿಂಗ್ ಆಕ್ಟ್

11. ಭಾರತದಲ್ಲಿ ಸರ್ವೋಚ್ಛನ್ಯಾಯಾಲಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ ಯಾವುದು?
ಉ. ಕಲ್ಕತ್ತಾ (ಕೋಲ್ಕತ)

12. ಪ್ರಾಂತ್ಯಗಳಲ್ಲಿ ದ್ವಿ–ದಳ ಸರ್ಕಾರವನ್ನು ಜಾರಿಗೆ ತಂದ ಶಾಸನ ಯಾವುದು?
ಉ. 1919ರ ಭಾರತ ಸರ್ಕಾರ ಶಾಸನ (ಮಾಂಟೆಗ್ಯೂ–ಚಮ್ಸ್‌ಫರ್ಡ)

13. ಮತೀಯ ಆಧಾರದಲ್ಲಿ ಪ್ರತೇಕ ಚುನಾವಣಾ ಕ್ಷೇತ್ರಕ್ಕೆ ಅವಕಾಶ ಮಾಡಿಕೊಟ್ಟ ಶಾಸನ?
ಉ. 1909ರ ಮಿಂಟೋ – ಮಾರ್ಲೆಸುಧಾರಣೆಗಳು

14. 1919ರ ಭಾರತ ಸರ್ಕಾರ ಶಾಸನದ ಮತ್ತೊಂದು ಹೆಸರು ಯಾವುದು?
ಉ. ಮಾಂಟೆಗೋ–ಚೆಮ್ಸ್‌ಫರ್ಡ್

15. ಸಿಖ್‌ರಲ್ಲಿನ ಪ್ರಸಿದ್ಧ ದೊರೆ ಯಾರು?
ಉ. ರಣಜಿತ್‌ಸಿಂಗ್

16. ಭಾರತದ ಸಂವಿಧಾನ ಬೆಳವಣಿಗೆಯಲ್ಲಿ 1861ರ ಕಾಯ್ದಿ ಏಕೆ ಮಹತ್ವವನ್ನು ಪಡೆದಿದೆ?
ಉ. ಕಾರ್ಯಕಾರಿ ಸಮಿತಿಯಲ್ಲಿ ಭಾರತೀಯರನ್ನು ನಾಮಕರಣ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಯಿತು.

17. ಆಡಳಿತ ಇಲಾಖೆಯಲ್ಲಿ ವಿಷಯಗಳನ್ನು ಕೇಂದ್ರ ಪಟ್ಟಿ ಮತ್ತು ರಾಜ್ಯ ಪಟ್ಟಿ ಎಂದು ವಿಂಗಡಿಸಿದ ಶಾಸನ ಯಾವುದು?
ಉ. 1919ರ ಭಾರತ ಸರ್ಕಾರ ಶಾಸನ (ಮಾಂಟೆಗ್ಯೂ–ಚೆಮ್ಸ ಫರ್ಡಸುಧಾರಣೆ)

18. ಪ್ರೈವಿ ಕೌನ್ಸಿಲ್‌ನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟ ಶಾಸನ ಯಾವುದು?
ಉ. 1784ರ ಪಿಟ್ಸ್ ಇಂಡಿಯಾ ಶಾಸನ

19. ಸ್ವತಂತ್ರ ಭಾರತ ಸಂವಿಧಾನಿಕ ರಚನೆಯಲ್ಲಿ ಒಂದು ಪ್ರಮುಖ ದಾಖಲೆ ಎನಿಸಿದ ಶಾಸನ ಯಾವುದು?
ಉ. 1935ರ ಭಾರತ ಸರ್ಕಾರ ಕಾಯ್ದೆ

20. ಭಾರತಕ್ಕೆ ಹೈ ಕಮೀಷನರ್‌ನನ್ನು ನೇಮಕ ಮಾಡಲು ನೆರವಾದ ಶಾಸನ ಯಾವುದು?
ಉ. 1919ರ ಭಾರತ ಸರ್ಕಾರದ ಶಾಸನ (ಮಾಂಟೆಗ್ಯೂ–ಚಮ್ಸೆಫರ್ಡ ಸುಧಾರಣೆ)

## ಅಧ್ಯಾಯ–5 ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

21. ಸತಿ ಸಹಗಮನ ಪದ್ಧತಿಯ ನಿಷೇದ ಕಾಯ್ದೆಯನ್ನು ಜಾರಿಗೆ ತಂದವರು ಯಾರು?
ಉ. ಲಾರ್ಡ್ ವಿಲಿಯಂ ಬೆಂಟಿಂಕ್

22. ಥಿಯೊಸಾಫಿಕಲ್ ಸೊಸೈಟಿಯ ಮೂಲ ಸ್ಥಾಪಕರು ಯಾರು?
ಉ. * ಮೇಡಂ ಬ್ಲಾವಟಸ್ಕಿ * ಕರ್ನ್‌ಲ್ ಎಚ್.ಎಸ್. ಅಲ್ಕಾಟ್

23. ತಿಲಕರು ಆರಂಭಿಸಿದ ಪತ್ರಿಕೆಗಳಾವುವು?
ಉ. ಮರಾಠ ಮತ್ತು ಕೇಸರಿ

24. ವೇದಗಳಿಗೆ 'ಹಿಂತಿರುಗಿ' ಎಂದು ಕರೆಕೊಟ್ಟವರು ಯಾರು?
ಉ. ದಯಾನಂದ ಸರಸ್ವತಿ

25. ಆತ್ಮರಾಂ ಪಾಂಡುರಂಗರವರು ಆರಂಭಿಸಿದ ಶಿಕ್ಷಣ ಸಂಸ್ಥೆ ಯಾವುದು?
ಉ. 'ಡೆಕ್ಕನ್ ಶಿಕ್ಷಣ ಸಂಸ್ಥೆ'

26. 'ಆಲಿಘರ್ ಚಳುವಳಿ'ಯ ನಾಯಕತ್ವವನ್ನು ವಹಿಸಿದವರು ಯಾರು?
ಉ. 'ಸರ್‌ಸೈಯದ್ ಅಹಮದ್‌ಖಾನ್'

27. ರಾಜರಾಮ್ ಮೋಹನ್‌ರಾಯ್‌ರವರು ಬಂಗಾಳಿ ಭಾಷೆಯಲ್ಲಿ ಆರಂಬಿಸಿದ ಪತ್ರಿಕೆ ಯಾವುದು?
ಉ. ಸಂವಾದಿ ಕೌಮದಿ

28. ದಯಾನಂದ ಸರಸ್ವತಿಯವರ ಕೃತಿಯನ್ನು ಹೆಸರಿಸಿ.
ಉ. ಸತ್ಯಾರ್ಥ ಪ್ರಕಾಶ

29. ಭಾರತದಲ್ಲಿ ಥಿಯಾಸಾಫಿಕಲ್ ಸೊಸೈಟಿಯ ಕಾರ್ಯ ಚಟುವಟಿಕೆಯನ್ನು ಆರಂಬಿಸಿದವರು ಯಾರು?
ಉ. ಅನಿಬೆಸೆಂಟ್

30. 'ಆರ್ಯ ಸಮಾಜದ'ದ ಪ್ರಮುಖ ಚಟುವಟಿಕೆ ಯಾವುದು?
ಉ. ಶುದ್ಧಿಚಳುವಳಿ

31. 'ಆಂಗ್ಲೋ ಒರಿಯಂಟಲ್' ಕಾಲೇಜ್ ಯಾವ ಹೆಸರಿನಿಂದ ಪ್ರಖ್ಯಾತವಾಯಿತು?
ಉ. ಆಲಿಘರ್ ಮುಸ್ಲಿಂ ವಿಶ್ವವಿಧ್ಯಾನಿಲಯ

32. ಜ್ಯೋತಿಭಾಪುಲೆಯವರು ಶೋಷಣೆ ಬಗ್ಗೆ ರಚಿಸಿದ ಪುಸ್ತಕ ಯಾವುದು?
ಉ. ಗುಲಾಮಗಿರಿ.

## ಅಧ್ಯಾಯ-6 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

33. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ಇಂಗ್ಲೀಷ್ ಇತಿಹಾಸಕಾರರು ಏನೆಂದು ಕರೆದರು?
ಉ. ಸಿಪಾಯಿದಂಗೆ

34. 1857ರ ದಂಗೆಯನ್ನು ಭಾರತೀಯರು ಏನೆಂದು ಕರೆದರು?

ಉ. ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

35. ಭಾರತದಲ್ಲಿ ಅಧಿಕಾರ ವಿಸ್ತರಣಾ ಉದ್ದೇಶದಿಂದ ಬ್ರಿಟಿಷರಿಗೆ ಜಾರಿಗೆ ತಂದ ನೀತಿಗಳಾವುವು?

ಉ. * ಸಹಾಯಕ ಸೈನ್ಯ ಪದ್ಧತಿ * ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

36. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ವೆಂಬ ನೀತಿಯನ್ನು ಜಾರಿಗೆ ತಂದವರು?

ಉ. ಲಾರ್ಡ್ ಡಾಲ್ ಹೌಸಿ

37. ಬ್ರಿಟನ್ ರಾಣಿಯು ಯಾವ ವರ್ಷದಲ್ಲಿ ಘೋಷಣೆ ಹೊರಡಿಸಿದಳು?

ಉ. 1858ರಲ್ಲಿ

## ಅಧ್ಯಾಯ–7 ಭಾರತದಲ್ಲಿ ಬ್ರಿಟೀಷ್ ಆಡಳಿತದ ಪರಿಣಾಮಗಳು

38. ಕನ್ನಡ ಮೊದಲ ವರ್ತಮಾನ ಪತ್ರಿಕೆ ಯಾವುದು?

ಉ. ಮಂಗಳೂರು ಸಮಾಚಾರ

39. ಕನ್ನಡದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಪತ್ರಿಕೆಯನ್ನು ಪ್ರಾರಂಭಿಸಿದವರು ಯಾರು?

ಉ. ಮೋಗ್ಲಿಂಗ್ ಮಿಷನರಿ

40. ಚಾರ್ಲ್ಸ್‌ವುಡ್ ಆಯೋಗವು ನೀಡಿದ ಸಲಹೆ ಏನು?

ಉ. ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಿ, ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡುವುದು.

41. ಸರ್ಕಾರದ ಕಾರ್ಯ ವೈಖರಿಯನ್ನು ಪ್ರಶ್ನಿಸಿದ್ದರಿಂದ ಗಡಿಪಾಲಾದ ಸಂಪಾದಕರು ಯಾರು?

ಉ. ಬಕ್ಕಿಂಗ್ ಹ್ಯಾಮ್

42. ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ರಚಿಸಲು ಸಲಹೆ ನೀಡಿದವರು ಯಾರು?

ಉ. ಚಾರ್ಲ್ಸ್‌ವುಡ್

## ಅಧ್ಯಾಯ–9 ಸ್ವಾತಂತ್ರ್ಯೋತ್ತರ ಭಾರತ

43. 'ಉಕ್ಕಿನ ಮನುಷ್ಯ' ಎಂದು ಖ್ಯಾತಿ ಪಡೆದಿದ್ದವರು ಯಾರು?

ಉ. ವಲ್ಲಭಭಾಯಿ ಪಟೇಲ್

44. ಭಾರತದ ಪ್ರಥಮ ಗೃಹ ಮಂತ್ರಿ ಯಾರು?

ಉ. ವಲ್ಲಭಬಾಯಿ ಪಟೇಲ್

45. ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ ಯಾರು?

ಉ. ಮೌಂಟ್ ಬ್ಯಾಟನ್

46. ವಿಶಾಲಾಂಧ್ರ ರಚನೆಗಾಗಿ ಉಪವಾಸದಿಂದ ಅಸುನೀಗಿದವರು ಯಾರು?

ಉ. ಪೊಟ್ಟ ಶ್ರೀರಾಮುಲು

47. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಎಷ್ಟರಲ್ಲಿ ಮರುನಾಮಕರಣ ಮಾಡಲಾಯಿತು?

ಉ. 1973 ನವೆಂಬರ್ – 1

## ಅಧ್ಯಾಯ–10 : 20 ನೇ ಶತಮಾನದ ರಾಜಕೀಯ ಆಯಾಮಗಳು

47. 'ಕದನ ಬಾಂದವ್ಯತ್ರಯ' ಮೈತ್ರಿ ಕೂಟ ರಚಿಸಿಕೊಂಡ ದೇಶಗಳು ಯಾವುವು?

ಉ. ಬ್ರಿಟನ್, ಫ್ರಾನ್ಸ್, ರಷ್ಯಾ

48. ಕದನ ಸೌಹಾರ್ದತ್ರಯ ಮೈತ್ರಿ ಕೂಟ ರಚಿಸಿಕೊಂಡ ದೇಶಗಳು ಯಾವುದು?

ಉ. ಜರ್ಮನಿ, ಆಸ್ಟ್ರೀಯಾ, ಹಂಗೇರಿ ಮತ್ತು ಇಟಲಿ

49. ಮೊದಲನೇ ಮಹಾಯುದ್ಧಕ್ಕೆ ತತಕ್ಷಣದ ಕಾರಣ ಯಾವುದು?

ಉ. ಜುಲೈ 28, 1914 ರಂದು ಆಸ್ಟ್ರೀಯಾದ ರಾಜಕುಮಾರ 'ಆರ್ಕ್‌ಡ್ಯೂಕ್ ಫರ್ಡಿನೆಂಡನ ಹತ್ಯೆ

50. ರಷ್ಯಾದ ಕ್ರಾಂತಿ ಎಷ್ಟರಲ್ಲಿ ನಡೆಯಿತು?

ಉ. ಕ್ರಿ.ಶ. 1917

51. ಜಗತ್ತಿನ ಮೊದಲಗಗನ ಯಾತ್ರಿ ಯಾರು?

ಉ. ರಷ್ಯಾದ ಯೂರಿಗಗಾರಿನ್

52. 19ನೇ ಶತಮಾನದಲ್ಲಿ ರಷ್ಯಾವನ್ನು ಯಾವ ವಂಶದ ದೊರೆಗಳು ಆಳಿತಿದ್ದರು?

ಉ. ಝಾರ್ ವಂಶದ ದೊರೆಗಳು

53. ಹಿಟ್ಲರ್ ಧರಿಸಿದ ಬಿರುದು ಯಾವುದು?

ಉ. ಫ್ಯೂರರ್

54. ಹಿಟ್ಲರ್ ಸ್ಥಾಪಿಸಿದ ಪಕ್ಷ ಯಾವುದು?

ಉ. 'ನಾಜಿ ಪಕ್ಷ'

55. ಹಿಟ್ಲರ್ ಸ್ಥಾಪಿಸಿದ ಪಕ್ಷ ಯಾವುದು?

ಉ. ಬೂದು ಅಂಗಿ ದಳ

56. ಮುಸೋಲಿನ ಸ್ಥಾಪಿಸಿದ ಪಕ್ಷ ಯಾವುದು?

ಉ. ರಾಷ್ಟ್ರೀಯ ಪ್ಯಾಸಿಸ್ಟ್ ಪಕ್ಷ

57. ಎರಡನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?

ಉ. 1939 ಸೆಪ್ಟೆಂಬರ್ – 1 ರಂದು ಜರ್ಮನಿ ಪೋಲೆಂಡ್ ಮೇಲೆ ದಾಳಿ ಮಾಡಿದ್ದು

58. ಚೀನಾದಲ್ಲಿ ದೀರ್ಘ ಪಯಣ ಯಾರ ನೇತೃತ್ವದಲ್ಲಿ ನಡೆಯಿತು?

ಉ. ಮಾವೋತ್ಸೆ ತುಂಗ್

59. ಅಮೇರಿಕಾ ಎರಡನೇ ಮಹಾ ಯುದ್ಧ ಪ್ರವೇಶಿಸಲು ಕಾರಣವೇನು?

ಉ. 1941ರಲ್ಲಿ ಜಪಾನ್ ಅಮೇರಿಕಾ ನೌಕಾ & ವಾಯುನೆಲೆ ಪರ್ಲ್‌ಹಾರ್ಬರ್ ಮೇಲೆ ದಾಳಿ ಮಾಡಿದ್ದು.

60. ಶೀತಲ ಸಮರ ಎಂದರೇನು?

ಉ. ಅಮೇರಿಕಾ ಮತ್ತು ರಷ್ಯಾ ಬಣಗಳ ನಡುವಿನ ಅಘೋಷಿತ ಸಮರ.

61. ಹೊಲೊಕಾಸ್ಟ್ ಎಂದರೇನು?

ಉ. ಹಿಟ್ಲರನು ನಡೆಸಿದ ಸಾಮೂಹಿಕ ಕಗ್ಗೊಲೆಗಳನ್ನು

## ಅಧ್ಯಾಯ–1 ಭಾರತದ ಸಮಸ್ಯೆಗಳು ಹಾಗು ಅವುಗಳ ಪರಿಹಾರೋಪಾಯಗಳು

61. ಕೋಮುವಾದ ಎಂದರೇನು?
ಉ. ಅನ್ಯಧರ್ಮದ ಬಗ್ಗೆ ಸ್ವೈರಣಾ ಮನೋಭಾವನೆ ಇಲ್ಲದಿರುವುದೇ ಕೋಮುವಾದ.

62. ಪ್ರಾದೇಶಿಕವಾದ ಎಂದರೇನು?
ಉ. ತಾನು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿ ಕೊಂಡಿರುವುದನ್ನು

63. ಭ್ರಷ್ಟಾಚಾರ ಎಂದರೇನು?
ಉ. ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವಿಕೆ ಎಂದರ್ಥ.

64. ಕರ್ನಾಟಕ ಸರ್ಕಾರ ಭ್ರಷ್ಟಾಚಾರ ನಿರ್ಮೂಲನೆಗೆ ಸ್ಥಾಪಿಸಿದ ಸಂಸ್ಥೆ ಯಾವುದು?
ಉ. ಲೋಕಾಯುಕ್ತ ಸಂಸ್ಥೆ.

65. ಬಡತನ ಎಂದರೇನು?
ಉ. ಜನರು ಸರಿಯಾದ ಆಹಾರ ಬಟ್ಟೆ ವಸತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದದೆ ಪಡುವ ಕಷ್ಟವನ್ನು ಬಡತನ ಎನ್ನುತ್ತಾರೆ.

66. ಕಳ್ಳ ಸಾಗಾಣೆ ಎಂದರೇನು?
ಉ. ಯಾವುದೇ ಆಮದು ಸುಂಕವನ್ನು ಸರ್ಕಾರಕ್ಕೆ ನೀಡದೆ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಳ್ಳ ಸಾಗಾಣೆ ಎನ್ನುತ್ತಾರೆ.

## ಅಧ್ಯಾಯ–2 ಭಾರತದ ವಿದೇಶಾಂಗ ನೀತಿ

67. ಭಾರತ ವಿದೇಶಾಂಗ ನೀತಿಯನ್ನು ರೂಪಿಸಿದವರು ಯಾರು?
ಉ. ಜವಾಹರಲಾಲ್ ನೆಹರೂ

68. ಆಫ್ರಿಕಾ ಗಾಂಧಿ ಎಂದು ಪ್ರಸಿದ್ಧರಾದವರು ಯಾರು?
ಉ. ನೆಲ್ಸನ್ ಮಂಡೇಲ

69. ನಿಶ್ಶಸ್ತ್ರೀಕರಣ ಎಂದರೇನು?
ಉ. ಕೆಲವು ನಿರ್ಧಿಷ್ಟ ಬಗೆಯ ಅಥವಾ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತ ಹಂತವಾಗಿ ಇಲ್ಲವಾಗಿಸುವುದೇ.

## ಅಧ್ಯಾಯ-3 ಅನ್ಯರಾಷ್ಟ್ರಗಳೊಂದಿಗೆ ಭಾರತ ಸಂಬಂಧ

70. ಶ್ರೀಲಂಕಾದ ಜಾಪ್ನ ಭಾಗದಲ್ಲಿ ತಮಿಳು ಪ್ರತೇಕತವಾದಿ ಸಂಘಟನೆ ಯಾವುದು?
ಉ. ಎಲ್.ಟಿ.ಟಿ.ಇ.

71. ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳನ್ನು ತಿಳಿಸಿ.
ಉ. ಭಾರತ ಮತ್ತು ಪಾಕಿಸ್ತಾನ

72. ಕಾರ್ಗಿಲ್ ಯುದ್ಧ ನಡೆದ ವರ್ಷ ಯಾವುದು?
ಉ. 1999ರಲ್ಲಿ

## ಅಧ್ಯಾಯ-4 ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

73. ವಿಶ್ವ ಸಂಸ್ಥೆಯು ಮಾನವ ಹಕ್ಕುಗಳ ಘೋಷಣೆ ಮಾಡಿದ ವರ್ಷ ಯಾವುದು?
ಉ. 1948-ಡಿಸೆಂಬರ್-10

74. ಆಫ್ರಿಕಾದಲ್ಲಿ ವರ್ಣಭೇದನೀತಿಯ ವಿರುದ್ಧ ಹೋರಾಟ ನಡೆಸಿದವರು ಯಾರು?
ಉ. ನೆಲ್ಸನ್ ಮಂಡೇಲ

75. ಭಯೋತ್ಪಾದಕತೆ ಎಂದರೇನು?
ಉ. ಭೀತಿವಾದ ಅಥವಾ ಉಗ್ರಗಾಮಿತ್ವವನ್ನು ಭಯೋತ್ಪಾದಕತೆ ಎನ್ನುತ್ತಾರೆ.

76. ವರ್ಣಭೇದ ನೀತಿ ಎಂದರೇನು?
ಉ. ವರ್ಣದ ಆಧಾರದ ಮೇಲೆ ಅನುಸರಿಸುವ ತಾರತಮ್ಯ ನೀತಿಯೇ ವರ್ಣಭೇದನೀತಿ.

## ಅಧ್ಯಾಯ-5 ಜಾಗತಿಕ ಸಂಸ್ಥೆಗಳು

77. ಅಂತರ ರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಛೇರಿ ಎಲ್ಲಿದೆ?
ಉ. ನೆದರ್ ಲ್ಯಾಂಡಿನ ಹೇಗ್‌ನಲ್ಲಿದೆ.

78. ವಿಶ್ವಸಂಸ್ಥೆಯ 'ಸಚಿವ ಸಂಪುಟ' ಎಂದು ಕರೆಯಲ್ಪಡುವ ಸಂಸ್ಥೆ ಯಾವುದು?
ಉ. ಭದ್ರತಾ ಸಮಿತಿ

79. ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ಸಾಧನೆ ಏನು?
ಉ. ಸಿಡುಬು ರೋಗ ನಿವಾರಣೆ.

80. ದ್ವಿತೀಯ ಮಹಾಯದ್ಧ ಬಳಿಕ ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಸ್ಥಾಪನೆಯಾದ ಸಂಸ್ಥೆ ಯಾವುದು?
ಉ. ಯುನಿಸೆಫ್ (UNICEF).

# ದಾರಿದೀಪ ಪಾಸಿಂಗ್–ಪ್ಯಾಕೇಜ್
# ಸಮಾಜಶಾಸ್ತ್ರ

## ಅಧ್ಯಾಯ–1
## ಸಾಮಾಜಿಕ ಸ್ತರವಿನ್ಯಾಸ

1. 'ಅಸ್ಪೃಶ್ಯತೆಯನ್ನು ಸಮಾಜಕ್ಕೆ ಹತ್ತಿದ ಕಳಂಕ' ಎಂದು ಹೇಳಿದವರು ಯಾರು?

ಉ. ಮಹಾತ್ಮ ಗಾಂಧೀಜಿ.

2. 'ಮಾನವಕುಲಂ ತಾನೊಂದೆ ವಲಂ' ಎಂದು ಹೇಳಿದವರು ಯಾರು?

ಉ. ಆದಿಕವಿ ಪಂಪ.

3. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

ಉ. ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ ಮತ್ತು ಬುದ್ಧಿಶಕ್ತಿಗಳ ಆಧಾರದ ಮೇಲೆ ವರ್ಗೀಕರಿಸುವುದು.

4. ಪೂರ್ವಗ್ರಹ ಎಂದರೇನು?

ಉ. ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆ.

5. ಸಾಮಾಜಿಕ ಸ್ತರ ವಿನ್ಯಾಸದ ಉದಯಕ್ಕೆ ಪ್ರಮುಖ ಕಾರಣವೇನು?

ಉ. ಸಮಾಜದಲ್ಲಿ ಕಂಡುಬಂದ ವ್ಯತ್ಯಾಸಗಳು ಮತ್ತು ತಾರತಮ್ಯಗಳು.

## ಅಧ್ಯಾಯ–2 ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

6. ಶ್ರಮ ವಿಭಜನೆ ಎಂದರೇನು?

ಉ. ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು ವಿಶೇಷ ಪರಿಣಿತಿ, ಕೌಶಲ, ಲಿಂಗಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದು.

7. ನಿರುದ್ಯೋಗ ಎಂದರೇನು?

ಉ. ದುಡಿಯುವ ವಯಸ್ಸು, ಸಾಮರ್ಥ್ಯ ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ದೊರೆಯದಿರುವ ಪರಿಸ್ಥಿತಿ.

8. ದುಡಿಮೆ ಎಂದರೇನು?

ಉ. ವ್ಯಕ್ತಿಯ ಪರಿಶ್ರಮದಿಂದ ಆರ್ಥಿಕ ಅಥವಾ ವಸ್ತುರೂಪದ ಪ್ರತಿಫಲವು ದೊರೆಯುವುದನ್ನು ದುಡಿಮೆ ಎನ್ನುವರು.

## ಅಧ್ಯಾಯ–3 ಸಾಮೂಜಿಕ ವರ್ತನೆ ಮತ್ತು ಪ್ರತಿಭಟನೆಗಳು

9. ಸಾಮೂಹಿಕ ವರ್ತನೆ ಎಂದರೇನು?
ಉ. ಸಮೂಹದಲ್ಲಿ ಇರುವಾಗ ಮಾಡುವ ವ್ಯಕ್ತಿಯ ವರ್ತನೆಯನ್ನು ಸಾಮೂಹಿಕ ವರ್ತನೆ ಎಂದು ಕರೆಯುತ್ತೇವೆ.

10. ಚಿಪ್ಕೋ ಚಳುವಳಿ ಸಂಘಟಿಸಿದ ಇಬ್ಬರು ನಾಯಕರನ್ನು ಹೆಸರಿಸಿ.
ಉ. ಸುಂದರಲಾಲ್ ಬಹುಗುಣ ಮತ್ತು ಚಂಡೀಪ್ರಸಾದ ಭಟ್ಟರು.

11. ಮೌನಕಣಿವೆ ಆಂದೋಲನ ಯಾವ ರಾಜ್ಯದಲ್ಲಿ ನಡೆಯಿತು?
ಉ. ಕೇರಳ.

## ಅಧ್ಯಾಯ–4 ಸಾಮಾಜಿಕ ಸಮಸ್ಯೆಗಳು

12. ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿಯನ್ನು ಘೋಷಿಸಿದ ವರ್ಷ ಯಾವುದು?
ಉ. 1987

13. ಕೇಂದ್ರ ಸರ್ಕಾರವು ವರದಕ್ಷಿಣೆ ನಿಷೇಧ ಶಾಸನವನ್ನು ಜಾರಿಗೊಳಿಸಿದ ವರ್ಷ ಯಾವುದು?
ಉ. 1961

14. ಬಾಲಕಾರ್ಮಿಕ ನಿಷೇಧ ಶಾಸನ ಜಾರಿಗೆ ಬಂದ ವರ್ಷ ಯಾವುದು?
ಉ. 1986.

15. ಹೆಣ್ಣುಭ್ರೂಣಹತ್ಯೆ ಎಂದರೇನು?
ಉ. ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು ಅದು ತಂದೆ ತಾಯಂದಿರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದು.

# ದಾರಿದೀಪ ಪಾಸಿಂಗ್–ಪ್ಯಾಕೇಜ್

# ಭೂಗೋಳ ಶಾಸ್ತ್ರ

## ಅಧ್ಯಾಯ–1 ಭಾರತ ನಮ್ಮ ಮಾತೃಭೂಮಿ

**I**. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಭಾರತವು ಯಾವ ಗೋಳಾರ್ಧದಲ್ಲಿದೆ?
ಉ. ಉತ್ತರಾರ್ಧಗೋಳ.

2. ಭಾರತವು ಯಾವ ಅಕ್ಷಾಂಶದಿಂದ ಯಾವ ಅಕ್ಷಾಂಶದವರೆಗೆ ಹಬ್ಬಿದೆ?
ಉ. $8^0 4^1$ ಉತ್ತರ ಅಕ್ಷಾಂಶದಿಂದ $37^0 6^1$ ಉತ್ತರ ಅಕ್ಷಾಂಶದವರೆಗೆ.

3. ಭಾರತವು ಯಾವ ರೇಖಾಂಶದಿಂದ ಯಾವ ರೇಖಾಂಶದವರೆಗೆ ಹಬ್ಬಿದೆ?
ಉ. $68^0 7^1$ ಪೂರ್ವ ರೇಖಾಂಶದಿಂದ $97^0 25^1$ ಪೂರ್ವರೇಖಾಂಶದವರೆಗೆ.

## ಅಧ್ಯಾಯ–2 ಭಾರತದ ಪ್ರಾಕೃತಿಕ ಲಕ್ಷಣಗಳು

4. ಹಿಮಾಚಲದಲ್ಲಿರುವ ಯಾವುದಾದರೂ ಎರಡು ಕಣಿವೆಗಳನ್ನು ಹೆಸರಿಸಿ.
ಉ. ಕಂಗ್ರಾ, ಕುಲು.

5. ಹಿಮಾಲಯದ ಪಾರಬೆಟ್ಟಗಳೆಂದು ಯಾವ ಶ್ರೇಣಿ ಕರೆಯಲ್ಪಡುತ್ತದೆ?
ಉ. ಶಿವಾಲಿಕ್.

6. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹೇಗೆ ರಚನೆಯಾಗಿವೆ?
ಉ. ಜ್ವಾಲಾಮುಖಿ ಶಿಲೆಗಳಿಂದ.

7. ಡೂನ್‌ಗಳೆಂದರೇನು?
ಉ. ಹಿಮಾಲಯದ ಶಿವಾಲಿಕ್ ಶ್ರೇಣಿಯಲ್ಲಿರುವ ಸಮತಟ್ಟಾದ ಕಿರಿದಾದ ಮೈದಾನ.

## ಅಧ್ಯಾಯ–3 ಭಾರತದ ಮಾನ್ಸೂನ್ ವಾಯುಗುಣದ ಋತು ಮಾನಗಳು ಮತ್ತು ಲಕ್ಷಣಗಳು

8. ಬೇಸಿಗೆಯಲ್ಲಿ ಬೀಳುವ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ ಏನೆಂದು ಕರೆಯುತ್ತಾರೆ?
ಉ. ಕಾಲಾಬೈಸಾರೆ.

9. ಬೇಸಿಗೆಯಲ್ಲಿ ಬೀಳುವ ಮಳೆಯನ್ನು ದಕ್ಷಿಣ ಭಾರತದಲ್ಲಿ ಏನೆಂದು ಕರೆಯುತ್ತಾರೆ?
ಉ. ಮಾವಿನ ಹೂಯ್ಲು ಹಾಗೂ ಕಾಫಿ ತುಂತುರು.

10. ಭಾರತದಲ್ಲಿ ಅತೀ ಕಡಿಮೆ ಮಳೆ ಬೀಳುವ ಪ್ರದೇಶ ಯಾವುದು?
ಉ. ರೂಯ್ಲಿ.

11. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗುವ ಪ್ರದೇಶ ಯಾವುದು?

ಉ. ಗಂಗಾನಗರ.

## ಅಧ್ಯಾಯ–4 ಭಾರತದ ಮಣ್ಣುಗಳು

12. ಕಪ್ಪು, ಮಣ್ಣು ಯಾವ ಬೆಳೆಗೆ ಹೆಚ್ಚು ಸೂಕ್ತವಾಗಿದೆ?

ಉ. ಹತ್ತಿ.

13. ಮೆಕ್ಕಲು ಮಣ್ಣು ಎಂದರೇನು?

ಉ. ನದಿಗಳು ಪರ್ವತ ಮತ್ತು ಬೆಟ್ಟ ಪ್ರದೇಶಗಳಿಂದ ಹರಿಯುವಾಗ ಹೊತ್ತುತಂದು ಸಂಚಯಿಸಿರುವ ಫಲವತ್ತಾದ ಮಣ್ಣು.

14. ಕಪ್ಪು ಮಣ್ಣು ಹೇಗೆ ಉಂಟಾಗುತ್ತದೆ?

ಉ. ಅಗ್ನಿಶಿಲೆಗಳ ಶಿಥಿಲೀಕರಣದಿಂದ.

15. ಮಣ್ಣಿನ ಸವೆತ (ಭೂಸವೆತ) ಎಂದರೇನು?

ಉ. ಭೂ ಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಮಣ್ಣುವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆ.

16. ಮಣ್ಣಿನ ಸಂರಕ್ಷಣೆ ಎಂದರೇನು?

ಉ. ಮಣ್ಣಿನ ಸವೆತವನ್ನು ತಡೆಗಟ್ಟುವುದು ಮತ್ತು ಅದರ ಫಲವತ್ತತೆಯನ್ನು ಕಾಪಾಡುವುದು.

## ಅಧ್ಯಾಯ–5 ಭಾರತದ ಅರಣ್ಯಗಳು

17. ಸ್ವಾಭಾವಿಕ ಸಸ್ಯವರ್ಗ ಎಂದರೇನು?

ಉ. ಒಂದು ಪ್ರದೇಶದಲ್ಲಿ ಪ್ರಕೃತಿದತ್ತವಾಗಿ ಬೆಳೆದಿರುವ ಎಲ್ಲಾ ಬಗೆಯ ಸಸ್ಯಸಮೂಹವನ್ನು ಸ್ವಾಭಾವಿಕ ಸಸ್ಯವರ್ಗ ಎನ್ನುವರು.

18. ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು?

ಉ. ಉತ್ತರಾಂಚಲ ರಾಜ್ಯದ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ.

19. ವನ್ಯ ಜೀವಿಧಾಮಗಳನ್ನು ನಿರ್ಮಿಸಿದ ಉದ್ದೇಶವೇನು?

ಉ. ವಿವಿಧ ಪ್ರಾಣಿಗಳನ್ನು ಅವುಗಳ ಮೂಲ ಸ್ಥಳದಲ್ಲಿಯೇ ಸಂರಕ್ಷಿಸಲು.

## ಅಧ್ಯಾಯ – 6 ಜಲಸಂಪನ್ಮೂಲಗಳು

20. ನೀರಾವರಿ ಎಂದರೇನು?

ಉ. ವ್ಯವಸಾಯದ ಭೂಮಿಗೆ ಕೃತಕವಾಗಿ ಕಾಲುವೆ, ಬಾವಿ ಹಾಗೂ ಕೆರೆಗಳಿಂದ ನೀರು ಸರಬರಾಜು ಮಾಡುವುದು.

21. ನೀರಾವರಿಯ ವಿಧಗಳಾವುವು?

ಉ. * ಬಾವಿ ನೀರಾವರಿ, * ಕೆರೆ ನೀರಾವರಿ, * ಕಾಲುವೆ ನೀರಾವರಿ.

22. ಬಾವಿ ನೀರಾವರಿಯ ಎರೆಡು ವಿಧಗಳಾವುವು?

ಉ. * ತೆರೆದ ಬಾವಿ ನೀರಾವರಿ, * ಕೊಳವೆ ಬಾವಿ ನೀರಾವರಿ.

23. ಕಾಲುವೆ ನೀರಾವರಿಯ ಎರಡು ಪ್ರಕಾರಗಳಾವುವು?

ಉ. * ಪ್ರವಾಹ ಕಾಲುವೆ, * ಸರ್ವಕಾಲಿಕ ಕಾಲುವೆ.

24. ಸ್ವತಂತ್ರ್ಯ ಭಾರತದ ಮೊದಲ ವಿವಿಧೋದ್ದೇಶ ನದಿ ಕಣಿವೆ ಯೋಜನೆ ಯಾವುದು?

ಉ. ದಾಮೋದರ ನದಿ ಕಣಿವೆ ಯೋಜನೆ.

25. ರಾಷ್ಟ್ರೀಯ ವಿದ್ಯುತ್ ಜಾಲವನ್ನು ಏಕೆ ನಿರ್ಮಿಸಲಾಯಿತು?

ಉ. ಹೆಚ್ಚುವರಿ ವಿದ್ಯುತ್ತನ್ನು ಕೊರತೆ ಇರುವ ಪ್ರದೇಶಗಳಿಗೆ ಸಾಗಿಸಲು ಹಾಗೂ ವಿದ್ಯುತ್ತನ್ನು ಸಮರ್ಪಕವಾಗಿ ಪ್ರಸರಣ ಮಾಡಲು.

26. ಮಳೆ ಕೊಯ್ಲು ಅಥವಾ ಮಳೆ ನೀರಿನ ಸಂಗ್ರಹದ ಎರೆಡು ವಿಧಗಳಾವುವು?

ಉ. * ಮಳೆ ಬಿದ್ಧ ಸ್ಥಳದಲ್ಲಿಯೇ ನೀರನನು ಸಂಗ್ರಹಿಸುವುದು
* ಮಳೆ ಬಿದ್ಧ ನಂತರ ಹರಿಯುವ ನೀರನ್ನು ಸಂಗ್ರಹಿಸುವುದು.

## ಅಧ್ಯಾಯ–7 ಭಾರತದ ಭೂಬಳಕೆ ಹಾಗೂ ವ್ಯವಸಾಯ

27. ವ್ಯವಸಾಯದ ಅರ್ಥವನ್ನು ತಿಳಿಸಿರಿ?

ಉ. ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗ ಪಡೆಯುವುದು.

28. ಜೀವನಾಧಾರ ಬೇಸಾಯ ಎಂದರೇನು?

ಉ. ರೈತರು ತಮ್ಮ ಜೀವನಕ್ಕೆ ಅವಶ್ಯವಿರುವಷ್ಟು ಮಾತ್ರ ಬೆಳೆಗಳನ್ನು ಬೆಳೆಯುವುದು.

29. ಸಾಂಧ್ರ ಬೇಸಾಯ ಎಂದರೇನು?

ಉ. ಒಂದು ವರ್ಷದಲ್ಲಿ ಒಂದೇ ಜಮೀನಿನಲ್ಲಿ 2–3 ಬೆಳೆಗಳನ್ನು ಬೆಳೆಯುವುದು.

30. ಮಿಶ್ರಬೇಸಾಯ ಎಂದರೇನು?

ಉ. ಕೃಷಿ ಭೂಮಿಯಲ್ಲಿ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಪಶುಸಂಗೋಪನೆ, ಜೇನು, ಸಾಕಾಣಿಕೆ, ರೇಷ್ಮೆ ಕೃಷಿ ಇತ್ಯಾದಿಗಳನ್ನು ಕೈಗೊಳ್ಳುವುದು.

## ಅಧ್ಯಾಯ–8 ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

31. ಕಚ್ಚಾ ತೈಲ ಎಂದರೇನು?

ಉ. ಭೂಮಿಂದ ಹೊರತೆಗೆದ ಹಲವಾರು ಬಗೆಯ ಮಿಶ್ರಣಗಳಿಂದ ಕೂಡಿರುವ ಪೆಟ್ರೋಲಿಯಂ ವಸ್ತುವನ್ನು ಕಚ್ಚಾತೈಲ ಎನ್ನುತ್ತಾರೆ.

32. ಭಾರತದಲ್ಲಿ ಪೆಟ್ರೋಲಿಯಂನ್ನು ಮೊದಲು ಯಾವ ಸ್ಥಳದಲ್ಲಿ ಪತ್ತೆ ಮಾಡಲಾಯಿತು?

ಉ. ಅಸ್ಸಾಂನ ದಿಗ್ಬಾಯ್.

33. ಗ್ಲೋಬಲ್ ವಾರ್ಮಿಂಗ್ ಎಂದರೇನು?

ಉ. ಹಸಿರು ಮನೆ ಅನಿಲಗಳ ಕಾರಣದಿಂದ ವಾಯುಮಂಡಲದ ಉಷ್ಣತೆ ಹೆಚ್ಚಾಗುತ್ತಿರುವುದುನ್ನು ಗ್ಲೋಬಲ್ ವಾರ್ಮಿಂಗ್ ಎನ್ನುತ್ತಾರೆ.

34. ಕಲ್ಲಿದ್ದಲನ್ನು 'ಕಪ್ಪುಬಂಗಾರ' ಎಂದು ಕರೆಯುವರು ಏಕೆ?

ಉ. ಇದು ಬಹುಪಯೋಗಿ ಖನಿಜ.

## ಅಧ್ಯಾಯ–9 ಭಾರತದ ಸಾರಿಗೆ

35. ಸಾರಿಗೆ ವ್ಯವಸ್ಥೆ ಎಂದರೇನು?

ಉ. ವಸ್ತುಗಳು, ಸೇವೆಗಳು ಹಾಗೂ ಮಾಹಿತಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದು.

36. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ–ನಿರ್ವಹಣೆಗಾಗಿ ಭಾರತ ಸರ್ಕಾರ ಸ್ಥಾಪಿಸಿರುವ ಸಂಸ್ಥೆ ಯಾವುದು?

ಉ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ.

37. ಭಾರತದ ಅತಿ ಉದ್ದವಾದ ರಾಷ್ಟ್ರೀಯ ಹೆದ್ದಾರಿ ಯಾವುದು?

ಉ. ವಾರಣಾಸಿ, ಕನ್ಯಾಕುಮಾರಿಗಳನ್ನು ಸಂಪರ್ಕಿಸುವ 7ನೇ ರಾಷ್ಟ್ರೀಯ ಹೆದ್ದಾರಿ.

38. ಸುವರ್ಣ ಚತುಷ್ಕೋನ ರಾಷ್ಟ್ರೀಯ ಹೆದ್ದಾರಿ ಎಂದರೇನು?

ಉ. ದೇಶವನ್ನು ಉತ್ತರ ಹಾಗೂ ದಕ್ಷಿಣ ಮತ್ತು ಪೂರ್ವ ಹಾಗೂ ಪಶ್ಚಿಮವಾಗಿ ಸಂಪರ್ಕಿಸುವ ಚತುಷ್ಪಥ ಅಥವಾ ಷಡ್ಪಥ ರಸ್ತೆಗಳು.

## ಅಧ್ಯಾಯ– 10 ಭಾರತದ ಪ್ರಮುಖ ಕೈಗಾರಿಕೆಗಳು

39. ಭಾರತದ ಮ್ಯಾಂಚೆಸ್ಟರ್ ಎಂದು ಯಾವ ಸ್ಥಳವನ್ನು ಕರೆಯುವರು?

ಉ. ಮುಂಬೈ.

40. ಭಾರತದಲ್ಲಿ ಸ್ಥಾಪನೆಯಾದ ಮೊದಲ ಕಾಗದ ಕೈಗಾರಿಕೆ ಯಾವುದು?

ಉ. ಪಶ್ಚಿಮ ಬಂಗಾಳದ ಸೇರಾಂಪುರ.

41. ಭಾರತದಲ್ಲಿ ಪ್ರಥಮ ಉಕ್ಕಿನ ಕೈಗಾರಿಕೆ ಎಲ್ಲಿ ಸ್ಥಾಪನೆಯಾಯಿತು?
ಉ. ಪಶ್ಚಿಮ ಬಂಗಾಳದ 'ಕುಲ್ಟಿ'.
42. "ದ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್" ಎಲ್ಲಿ ಸ್ಥಾಪನೆಯಾಯಿತು?
ಉ. ಕರ್ನಾಟಕದ ಭದ್ರಾವತಿ.
43. ಯಾವ ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎನ್ನುವರು?
ಉ. ಕಬ್ಬಿಣ ಮತ್ತು ಉಕ್ಕು.
44. ಬೆಂಗಳೂರನ್ನು "ಸಿಲಿಕಾನ್ ಸಿಟಿ" ಎನ್ನುವರು ಏಕೆ?
ಉ. ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿರುವುದರಿಂದ.
45. ಕಬ್ಬಿಣೇತರ ಲೋಹಗಳಲ್ಲಿ ಮುಖ್ಯ ಲೋಹ ಯಾವುದು?
ಉ. ಅಲ್ಯುಮಿನಿಯಂ.
46. ಭಾರತದಲ್ಲಿ ಸ್ಥಾಪಿತವಾದ ಮೊದಲ ಜವಳಿ ಕೈಗಾರಿಕೆ ಎಲ್ಲಿದೆ?
ಉ. ಮುಂಬೈ ಮತ್ತು ಬರೂಚ್.
47. ಮುಂಬೈಯನ್ನು ಭಾರತದ ಮ್ಯಾಂಚೆಸ್ಟರ್ ಎನ್ನಲು ಕಾರಣವೇನು?
ಉ. ಅತಿ ಹೆಚ್ಚು ಹತ್ತಿ ಗಿರಣಿಗಳು ಸ್ಥಾಪಿತವಾಗಿರುವುದರಿಂದ.
48. ನ್ಯೂಸ್ ಪ್ರಿಂಟ್ ಕಾಗದವನ್ನು ಭಾರತ ಯಾವ ರಾಷ್ಟ್ರಗಳಿಂದ ಆಮದು ಮಾಡಿ ಕೊಳ್ಳುತ್ತದೆ?
ಉ. ನಾರ್ವೆ, ಸ್ವೀಡನ್, ಕೆನಡಾ, ಯು.ಎಸ್.ಎ.
49. ಭಾರತದಲ್ಲಿ ಪ್ರಥಮ ಉಕ್ಕಿನ ಕೈಗಾರಿಕೆ ಯಾವಾಗ ಸ್ಥಾಪನೆಯಾಯಿತು?
ಉ. ಕ್ರಿ.ಶ. 1870.
50. ಭಾರತದ 'ಕಾಸ್ಮೋಪಾಲಿಟನ್ ಸಿಟಿ' ಯಾವುದು?
ಉ. ಮುಂಬೈ.
51. ಭಾರತದ ಮೊದಲ ಕಾಗದ ಕೈಗಾರಿಕೆ ಎಲ್ಲಿ ಸ್ಥಾಪಿತವಾಗಿದೆ?
ಉ. ಕೊಲ್ಕತ್ತಾ ಬಳಿಯ 'ಬಾಲ್ಟಿ'.
52. ಮಾಹಿತಿ ತಂತ್ರಜ್ಞಾನದ ಮತ್ತೊಂದು ಹೆಸರು ಯಾವುದು?
ಉ. ಜ್ಞಾನಾಧಾರಿತ ಕೈಗಾರಿಕೆ.

## ಅಧ್ಯಾಯ – 11 ಸಂಪರ್ಕ

53. ಸಮೂಹ ಮಾಧ್ಯಮ ಎಂದರೇನು?
ಉ. ವಿವಿಧ ಪ್ರದೇಶಗಳ ಜನರೊಂದಿಗೆ ಸುಲಭವಾಗಿ ಸಂಪರ್ಕ ಸಾಧಿಸಬಹುದಾದ ಮಾಧ್ಯಮ.
54. ಭೌಗೋಳಿಕ ಮಾಹಿತಿ ವ್ಯವಸ್ಥೆ ಯಾವಾಗ ಆರಂಭವಾಯಿತು?
ಉ. ಕ್ರಿ.ಶ. 1960
55. ದೂರ ಸಂವೇದಿ ಎಂದರೇನು?
ಉ. ವಸ್ತುಗಳನ್ನು ಸ್ಪರ್ಶಿಸದೆ ಅವುಗಳ ಮಾಹಿತಿಯನ್ನು ಸಂಗ್ರಹಿಸುವುದು.

56. ಜಿ.ಪಿ.ಎಸ್. (ಭೌಗೋಳಿಕ ಮಾಹಿತಿ ವ್ಯವಸ್ಥೆ)ನ ಮೂಲ ಉದ್ದೇಶವೇನು?

ಉ. ಭೂಮೇಲ್ಮೈನ ವೈವಿಧ್ಯಮಯ ಅಂಕಿ ಅಂಶಗಳನ್ನು ಸಂಸ್ಕರಿಸುವುದು ಮತ್ತು ವಿಶ್ಲೇಷಿಸುವುದು.

57. ನೈಸಗಿಕ ವಿನಾಶಕಾಂಶಗಳೆಂದರೇನು?

ಉ. ಪ್ರಾಕೃತಿಕವಾಗಿ ಸಂಭವಿಸುವ ಮಾನವರ ಪ್ರಾಣಿ, ಆಸ್ತಿ ಹಾಗೂ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ಘಟನೆಗಳು.

58. ನದಿ ಪ್ರವಾಹ ಎಂದರೇನು?

ಉ. ನದಿಗಳ ನೀರಿನ ಪ್ರಮಾಣ ಅವುಗಳ ಸಾಮರ್ಥ್ಯಕ್ಕಿಂತ ಹೆಚ್ಚಾಗಿ ಇಕ್ಕೆಲಗಳಲ್ಲಿ ಹರಿಯುವುದು.

59. ಭೂಕುಸಿತ ಎಂದರೇನು?

ಉ. ಪರ್ವತ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಭೂರಾಶಿ ಕೆಳಕ್ಕೆ ಜಾರುವುದು.

60. ಕಡಲ ಕೊರೆತ ಎಂದರೇನು?

ಉ. ಸಮುದ್ರಗಳ ಅಲೆಗಳ ಹೊಡೆತದಿಂದ ತೀರ ಪ್ರದೇಶದಲ್ಲಾಗುವ ಭೂಸವೆತ.

61. ಭೂಕಂಪ ಎಂದರೇನು?

ಉ. ಭೂಮಿಯ ಆಂತರಿಕ ಶಕ್ತಿಯಿಂದ ಭೂಮಿಯ ಮೇಲ್ಪದರ ಕಂಪಿಸುವುದು.

62. ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದರಿಂದ ಯಾವ ನೈಸರ್ಗಿಕ ವಿಕೋಪವನ್ನು ತಡೆಗಟ್ಟಬಹುದು?

ಉ. ಕಡಲಕೊರೆತ.

## ಅಧ್ಯಾಯ – 13 ಭಾರತದ ಜನಸಂಖ್ಯೆ

63. ಜನಗಣತಿ ಎಂದರೇನು?

ಉ. ಜನರಿಗೆ ಸಂಬಂಧಿಸಿದ ಸಂಖ್ಯೆ ಹಾಗೂ ಇನ್ನಿತರ ವಿಷಯಗಳ ವಿಶ್ಲೇಷಣೆ.

64. ಜನಸಾಂದ್ರತೆ ಎಂದರೇನು?

ಉ. ಒಂದು ಚದರ ಕಿಲೋ ಮೀಟರ್ ಪ್ರದೇಶದಲ್ಲಿ ವಾಸಿಸುವ ಸರಾಸರಿ ಜನಸಂಖ್ಯೆ.

## ಅಧ್ಯಾಯ–1 ಅಭಿವೃದ್ಧಿ

1. ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ ಇರುವ ಮಾನದಂಡ ಯಾವುದು?

ಉ. ಮಾನವ ಅಭಿವೃದ್ಧಿ ಸೂಚಿ.

2. ರಾಷ್ಟ್ರೀಯ ಆದಾಯವನ್ನು ಅರ್ಥೈಸಿರಿ.

ಉ. ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು–ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯ.

3. 'HDI' ಯನ್ನು ವಿಸ್ತರಿಸಿ.

ಉ. Human Development Indicators (ಮಾನವ ಅಭಿವೃದ್ಧಿ ಸೂಚಿ).

## ಅಧ್ಯಾಯ –2 ಅರ್ಥವ್ಯವಸ್ಥೆ ಮತ್ತು ಸರ್ಕಾರ

4. ಹಸಿರು ಕ್ರಾಂತಿ ಎಂದರೇನು?

ಉ. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿ.

5. ಸುಗ್ಗಿ ಪೂರ್ವ ತಂತ್ರಜ್ಞಾನ ಎಂದರೇನು?

ಉ. ಕೃಷಿ ಉತ್ಪಾದನೆಯಲ್ಲಿ ಬಳಸಲಾದ ಸುಧಾರಿತ ತಂತ್ರಜ್ಞಾನ.

6. ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು?

ಉ. ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಬಳಕೆಗೆ ತರಲಾದ ಸುಧಾರಿತ ತಂತ್ರಜ್ಞಾನ.

7. ಭಾರತ ಸರ್ಕಾರವು ರೈತರಿಗೆ ಸಾವಯವ ಕೃಷಿ ವಿಧಾನವನ್ನು ಪ್ರೋತ್ಸಾಹಿಸುತ್ತಿದೆ. ಏಕೆ?

ಉ. ಪರಿಸರ ಸ್ನೇಹಿ ಹಾಗೂ ಸುಸ್ಥಿರ ಕೃಷಿಗಾಗಿ.

8. ಎರಡನೇ ಹಸಿರು ಕ್ರಾಂತಿ (ಸದಾ ಹಸಿರು ಕ್ರಾಂತಿ) ಎಂದರೇನು?

ಉ. ಕೃಷಿಯಲ್ಲಿ ಪರಿಸರ ಸ್ನೇಹಿ ತಂತ್ರಗಳ ಮೂಲಕ ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸುವುದು.

9. ಉದಾರೀಕರಣ ಎಂದರೇನು?

ಉ. ಸರ್ಕಾರವು ಜನರ ಆರ್ಥಿಕ ಚಟುವಟಿಕೆಗಳ ಮೇಲಿನ ಅನಗತ್ಯ ನಿಯಂತ್ರಣ ಮತ್ತು ನಿರ್ಬಂಧಗಳನ್ನು ಸಡಿಲಗೊಳಿಸಿ, ಮುಕ್ತ ಅರ್ಥವ್ಯವಸ್ಥೆಗೆ ಅವಕಾಶ ಮಾಡಿಕೊಡುವುದು.

10. ಭಾರತದಲ್ಲಿ ಆರ್ಥಿಕ ಯೋಜನೆಗಳ ಮೂಲ ಉದ್ದೇಶವೇನು?

ಉ. ಬಡತನ ನಿರ್ಮೂಲನೆ ಹಾಗು ಜನರ ಜೀವನಮಟ್ಟವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.

## ಅಧ್ಯಾಯ – 3 ಗ್ರಾಮೀಣಾಭಿವೃದ್ಧಿ

11. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.

ಉ. ಇಂದಿರಾ ಆವಾಸ ಯೋಜನೆ, ಆಶ್ರಯಯೋಜನೆ.

12. ಮಹಿಳಾ ಸ್ವಸಹಾಯ ಸಂಘ (ಸ್ತ್ರೀ ಶಕ್ತಿ ಸಂಘ) ಅಸ್ತಿತ್ವಕ್ಕೆ ಬಂದಿರುವುದರ ಉದ್ದೇಶವೇನು?

ಉ. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವುದು.

## ಅಧ್ಯಾಯ–4 ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

13. ಸಾರ್ವಜನಿಕ ಹಣಕಾಸು ಎಂದರೇನು?

ಉ. ಸರ್ಕಾರದ ಆದಾಯ, ವೆಚ್ಚ ಹಾಗೂ ಸಾಲಗಳ ನಿರ್ವಹಣೆಯನ್ನು ಕುರಿತ ಅಧ್ಯಯನ.

14. ಪ್ರತ್ಯೇಕ್ಷ ತೆರಿಗೆ ಎಂದರೇನು?

ಉ. ಸರ್ಕಾರ ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವುದು.

15. ಪರೋಕ್ಷ ತೆರಿಗೆ ಎಂದರೇನು?

ಉ. ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸುವುದು.

16. ಯೋಜನಾ ವೆಚ್ಚದ ಅರ್ಥ ತಿಳಿಸಿ.

ಉ. ಸರ್ಕಾರದ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳು, ರಾಷ್ಟ್ರ ನಿರ್ಮಾಣ ಕಾರ್ಯಗಳು ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಮಾಡುವ ವೆಚ್ಚ.

17. ಆಯ–ವ್ಯಯ (ಮುಂಗಡ ಪತ್ರ) ದ ಅರ್ಥ ತಿಳಿಸಿ.

ಉ. ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ.

18. ಕೊರತೆಯ ಹಣಕಾಸು ಎಂದರೇನು?

ಉ. ಸರ್ಕಾರವು ತನ್ನ ಆದಾಯಕ್ಕಿಂತಲೂ ವೆಚ್ಚವನ್ನು ಹೆಚ್ಚು ಮಾಡುವುದು.

## ದಾರಿದೀಪ ಪಾಸಿಂಗ್–ಪ್ಯಾಕೇಜ್

# ವ್ಯವಹಾರ ಅಧ್ಯಯನ

## ಅಧ್ಯಾಯ–1 ಬ್ಯಾಂಕು ವ್ಯವಹಾರಗಳು

1. ಬ್ಯಾಂಕ್ ಎಂಬ ಪದ ಯಾವ ಇಟಾಲಿಯನ್ ಮೂಲ ಪದದಿಂದ ಬಂದಿದೆ?

ಉ. ಬ್ಯಾಂಕೋ.

2. ಚಾಲ್ತಿ ಖಾತೆಯನ್ನು ಸಾಮಾನ್ಯವಾಗಿ ಯಾರು ತೆರೆಯುತ್ತಾರೆ ?

ಉ. ಸಾಮಾನ್ಯವಾಗಿ ಹೆಚ್ಚು ಬ್ಯಾಂಕ್ ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ.

## ಅಧ್ಯಾಯ–2 ವಿಮೆ

3. ವಿಮೆ ಎಂದರೇನು?

ಉ. ಒಂದು ನಿರ್ದಿಷ್ಟ ಹಣ ಮೌಲ್ಯದ ಕಂತನ್ನು ಪಾವತಿಸಿ ಒಬ್ಬ ಮನುಷ್ಯನು ತನಗಾಗಲಿ ಅಥವಾ ತನ್ನ ವಸ್ತುಗಳಿಗಾಗಲಿ ಆಗ ಬಹುದಾದ ಅಪಾಯಗಳಿಂದ ಅಥವಾ ಹಾನಿಗಳಿಂದ ರಕ್ಷಿಸಿಕೊಳ್ಳಲು ಒಂದು ಸಂಸ್ಥೆಯೊಂದಿಗೆ ಮಾಡಿಕೊಳ್ಳುವ ಒಪ್ಪಂದವಾಗಿದೆ.

4. ವಿಮಾಪಾಲಿಸಿ ಎಂದರೇನು?

ಉ. ವಿಮಾಕರ್ತ ಮತ್ತು ವಿಮಾದಾರನ ನಡುವೆ ಏರ್ಪಡುವ ಒಂದು ಬರವಣಿಗೆ ಮೂಲಕದ ಕರಾರು ಪತ್ರ.

## ಅಧ್ಯಾಯ–3 ಉದ್ಯಮಗಾರಿಕೆ

5. ಉದ್ಯಮಗಾರಿಕೆ ಎಂದರೇನು?

ಉ. ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳೇ ಉದ್ಯಮಗಾರಿಕೆ.

6. ಜಿಲ್ಲಾ ಕೈಗಾರಿಕೆ ಕೇಂದ್ರಗಳನ್ನು ಸ್ಥಾಪಿಸಿದ ಉದ್ದೇಶವೇನು?

ಉ. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ, ಸಮಗ್ರತೆ ಕಾಪಾಡುವುದು.

7. ಸಾಫ್ಟ್‌ವೇರ್ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದಲ್ಲೇ ಅತ್ಯಂತ ದೊಡ್ಡ ಸಂಸ್ಥೆ ಯಾವುದು?

ಉ. ಇನ್‌ಫೋಸಿಸ್.

## ದಾರಿದೀಪ ಪಾಸಿಂಗ್–ಪ್ಯಾಕೇಜ್
## ಇತಿಹಾಸ

## ಅಧ್ಯಾಯ–1 ಭಾರತಕ್ಕೆ ಯುರೋಪಿಯನ್ನರ ಆಗಮನ

### I. ಈ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ದ್ವಿ–ಸರ್ಕಾರ ಪದ್ಧತಿಯನ್ನು ವಿವರಿಸಿ.

ಉ. * ಇಂಗ್ಲೀಷರು ದಿವಾನಿ ಹಕ್ಕಿನಿಂದಾಗಿ ಭೂಕಂದಾಯವನ್ನು ವಸೂಲಿ ಮಾಡುವುದು.

* ನವಾಬನು ಆಡಳಿತ, ನ್ಯಾಯ ಪ್ರತಿಪಾದನೆ ಮುಂತಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುವುದು.

2. ಭಾರತಕ್ಕೆ ಪರ್ಯಾಯ ವ್ಯಾಪಾರ ಮಾರ್ಗ ಕಂಡು ಹಿಡಿಯಲು ಪ್ರೇರಣೆಯಾದ ಅಂಶಗಳಾವುವು?

ಉ. * ಹೊಸ ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣ, ಭೂಪಟಗಳ ಅನ್ವೇಷಣೆ.

* ಪೂರ್ವ ದೇಶಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು.

* ಧರ್ಮ ಪ್ರಚಾರಕ್ಕಾಗಿ ಉತ್ಸುಕರಾಗಿದ್ದ ಮಿಷನರಿಗಳು.

3. ಪ್ಲಾಸಿಕದನದ ಫಲಿತಾಂಶಗಳೇನು?

ಉ. * ಮೀರ್ ಜಾಫರ್ ಬಂಗಾಳದ ನವಾಬನಾದನು.

* ಇದಕ್ಕೆ ಪ್ರತಿಯಾಗಿ ಬ್ರಿಟಿಷರಿಗೆ ಮೀರ್‌ಜಾಫರ್ 24 ಪರಗಣ ಮೇಲಿನ ಜಮೀನ್ದಾರಿ ಹಕ್ಕನ್ನು ನೀಡಿದನು.

* ಬಂಗಾಳ ಪ್ರಾಂತ್ಯದ ಮೇಲೆ ಬ್ರಿಟಿಷರು ಹಿಡಿತ ಸಾಧಿಸಿದರು.

4. ಬಕ್ಸಾರ್ ಕದನದ ಪರಿಣಾಮಗಳೇನು?

ಉ. * ಬಿಹಾರ, ಒರಿಸ್ಸಾ, ಬಂಗಾಳ ಪ್ರಾಂತ್ಯಗಳು ಬ್ರಿಟಿಷರ ವಶವಾದವು.

* ಮೊಘಲ್ ಚಕ್ರವರ್ತಿ ಷಾ ಆಲಂ ದಿವಾನಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು.

* ಬಂಗಾಳದಲ್ಲಿ ರಾಬರ್ಟ್ ಕ್ಲೈವ್ ದ್ವಿಸರ್ಕಾರ ಜಾರಿಗೆ ತಂದರು.

5. ಮೂರನೆ ಕರ್ನಾಟಿಕ್ ಯುದ್ಧದ ಪರಿಣಾಮಗಳೇನು?

ಉ. * ಫ್ರೆಂಚರು ಬಹುತೇಕವಾಗಿ ತಮ್ಮ ಎಲ್ಲ ಅಧಿಕಾರವನ್ನು ಕಳೆದುಕೊಂಡರು.

* ಒಪ್ಪಂದದ ಪರಿಣಾಮವಾಗಿ ಫ್ರೆಂಚರಿಗೆ ಬ್ರಿಟಷರು ತಮ್ಮೆಲ್ಲ ಬಳುವಳಿಗಳನ್ನು ಹಿಂತಿರುಗಿಸಿದರು.

* ಫ್ರೆಂಚರು ಕೋಟೆಗಳನ್ನು ಕಟ್ಟಿ ರಕ್ಷಿಸುವಂತಿರಲಿಲ್ಲ.

* ಫ್ರೆಂಚರ ಕೋಟೆಗಳು ಕೇವಲ ವ್ಯಾಪಾರಿ ಕೇಂದ್ರಗಳಾಗಿ ಕಾರ್ಯ ನಿರ್ವಹಿಸಬೇಕಿತ್ತು.

## ಅಧ್ಯಾಯ–2 ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

6. 'ಶ್ರೀರಂಗಪಟ್ಟಣ ಒಪ್ಪಂದ' ದ ಷರತ್ತುಗಳೇನು?

ಉ. * ಟಿಪ್ಪು ತನ್ನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ನೀಡಬೇಕು.

* ಯುದ್ಧ ಪರಿಹಾರ ಧನವಾಗಿ 330 ಲಕ್ಷ ರೂಪಾಯಿಗಳನ್ನು ನೀಡಬೇಕು.

* ಪರಿಹಾರ ಧನ ನೀಡುವವರೆಗೂ (ತನ್ನ) ಟಿಪ್ಪು ಇಬ್ಬರು ಮಕ್ಕಳನ್ನು ಒತ್ತೆಯಾಳುಗಳಾಗಿ ಬ್ರಿಟಿಷರಿಗೆ ಒಪ್ಪಿಸಬೇಕು.

7. ನಾಲ್ಕನೆ ಆಂಗ್ಲೋ–ಮೈಸೂರು ಯುದ್ಧದ ಪರಿಣಾಮಗಳೇನು?

ಉ. * ಮೈಸೂರು ರಾಜ್ಯದ ಪ್ರದೇಶವನ್ನು ಬ್ರಿಟಿಷರು ಮತ್ತು ನಿಜಾಮನು ಹಂಚಿಕೊಂಡರು.

* ಹಳೇ ಮೈಸೂರು ಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಲಾಯಿತು.

* ಕೊಡಗಿನ ಅನೇಕ ಪ್ರದೇಶಗಳನ್ನು ಕೊಡಗಿನ ರಾಜನಿಗೆ ನೀಡಲಾಯಿತು.

8. ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು. ವಿಮರ್ಶಿಸಿರಿ.

ಉ. * ಇಂಗ್ಲೀಷರು ಪ್ರಬಲರಾಗಿದ್ದರು.

* ಟಿಪ್ಪುವಿಗೆ ಯಾವ ದೇಶೀಯ ಸಂಸ್ಥಾನಗಳ ನೆರವು ದೊರಕಲಿಲ್ಲ.

* ಎರಡು ವರ್ಷಗಳ ದೀರ್ಘಕಾಲ ಹೋರಾಟದಿಂದ ಟಿಪ್ಪು ಬಳಲಿದ್ದನು.

* 3ನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ತೀವ್ರವಾಗಿ ಸೋಲನ್ನು ಅನುಭವಿಸಿದ್ದನು.

9. ಕೊಡಗಿನ ದಂಗೆಯಲ್ಲಿ ಗುಡ್ಡೇಮನೆ ಅಪ್ಪಯ್ಯಗೌಡರ ಪಾತ್ರವನ್ನು ವಿವರಿಸಿ.

ಉ. * ಕೊಡಗಿನ ಒಳಗೆ ಅಪ್ಪಯ್ಯಗೌಡರು ಹೋರಾಟದ ನೇತೃತ್ವ ವಹಿಸಿಕೊಂಡರು.

* ಬ್ರಿಟಿಷರು ದಿವಾನರ ಮೂಲಕ ಹೋರಾಟವನ್ನು ಹತ್ತಿಕ್ಕಿದರು.

* ಮದ್ರಾಸಿನಿಂದ ಬಂದ ಸೈನ್ಯ ಮಂಗಳೂರಿನಿಂದ ಹೋರಾಟಗಾರರನ್ನು ಹಿಮ್ಮೆಟ್ಟಿಸಿತು.

* ಹೋರಾಟಗಾರರನ್ನು ಗಡೀಪಾರು ಮಾಡಲಾಯಿತು ಹಾಗೂ ಕೆಲವರನ್ನು ನೇಣುಗಂಭಕ್ಕೆ ಹಾಕಲಾಯಿತು.

10. ಸಹಾಯಕ ಸೈನ್ಯ ಪದ್ಧತಿಯನ್ನು ಅರ್ಥೈಸಿರಿ.

ಉ. * ಒಪ್ಪಂದಕ್ಕೆ ಒಳಪಟ್ಟವರು ಇಂಗ್ಲೀಷ್ ಸೈನ್ಯದ ತುಕಡಿಯನ್ನು ಇಟ್ಟುಕೊಂಡು ನಿರ್ವಹಿಸುವುದು.

* ಒಪ್ಪಂದಕ್ಕೆ ಒಳಪಟ್ಟ ರಾಜ್ಯದಲ್ಲಿ ಬ್ರಿಟಿಷ್ ರೆಸಿಡೆಂಟಿನ ನೇಮಕದ ಮೂಲಕ ಆಂತರಿಕ ವ್ಯವಹಾರದಲ್ಲಿ ಬ್ರಿಟಿಷರ ಹಸ್ತಕ್ಷೇಪ.

## ಅಧ್ಯಾಯ–5 ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

11. ಭಾರತದ ಇತಿಹಾಸದಲ್ಲಿ 19ನೆಯ ಶತಮಾನವನ್ನು 'ಭಾರತೀಯನವೋದಯ' ಕಾಲವೆಂದು ಕರೆಯಲು ಕಾರಣವೇನು?

ಉ. * ಪಾಶ್ಚಿಮಾತ್ಯ ನಾಗರಿಕತೆಯ ಸಂಪರ್ಕ

* ವೈಚಾರಿಕ ಮನೋಭಾವನೆಯ ಬೆಳವಣಿಗೆ

* ಮೂಢನಂಬಿಕೆಯನ್ನು ಪ್ರಶ್ನಿಸುವ ಮನೋಭಾವನೆ

* ಇಂಗ್ಲೀಷ್ ವಿದ್ಯಾಭ್ಯಾಸದ ಸೌಲಭ್ಯದೊರೆಯುವಿಕೆ.
* ದ್ವಂದ್ವತೆ, ವಿರೋಧಾಭಾಸ ಹಾಗೂ ಸ್ವಹಿತಾಶಕ್ತಿಗಳ ಅರಿವು.

12. ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು ಹೇಗೆ? ಸಮರ್ಥಿಸಿರಿ.

ಉ. * ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.
* ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಿದರು.
* ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೋಗ ಸಾಧನೆಗಳಲ್ಲದೆ ಸಮಾಜಸೇವೆ ಮುಖ್ಯವೆಂದರು.
* ರಾಮಕೃಷ್ಣ ಮಿಷನ್ ಮೂಲಕ ಶಿಕ್ಷಣ ಮತ್ತು ಸಮಾಜಸೇವೆಯನ್ನು ಮಾಡುತ್ತಾ ಭಾರತೀಯ ಸಂಸ್ಕೃತಿ ಬೆಳವಣಿಗೆ ಮಾಡಿದರು.
* 1893 ರಲ್ಲಿ ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ, ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದರು.

13. ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿಗಳ ಪ್ರಮುಖ ಉದ್ದೇಶಗಳಾವುವು?

ಉ. * ವಿಗ್ರಹಾರಾಧನೆ, ಜಾತಿಪದ್ಧತಿಯನ್ನು ಖಂಡಿಸುವುದು
* ಹಿಂದೂ–ಮುಸ್ಲಿಂ ಏಕತೆಯನ್ನು ಪ್ರತಿಪಾದಿಸುವುದು
* ಆಧುನಿಕ ಶಿಕ್ಷಣಕ್ಕೆ ಆದ್ಯತೆಯನ್ನು ನೀಡುವುದು
* ಸಾಮಾಜಿ ಅಸಮಾನತೆಯನ್ನು ಹೋಗಲಾಡಿಸುವುದು.

14. ಸಾಮಾಜಿಕ–ಧಾರ್ಮಿಕ ಸುಧಾರಣೆಯಲ್ಲಿ ಎಂ.ಜಿ.ರಾನಡೆಯವರ ಪಾತ್ರವೇನು?

ಉ. * ಪ್ರಾರ್ಥನಾ ಸಮಾಜವನ್ನು ಜನಪ್ರಿಯಗೊಳಿಸಿದರು.
* ಸಮಾಜವನ್ನು ಸುಧಾರಿಸಿದ ಹೊರತು ರಾಜಕೀಯ, ಆರ್ಥಿಕ ಪ್ರಗತಿ ಅಸಾಧ್ಯವೆಂದರು.
* ಹಿಂದೂ–ಮುಸ್ಲಿಂ ಏಕತೆಯ ಪ್ರತಿಪಾದಕರಾಗಿದ್ದರು
* ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದರು.
* ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರೌಢಶಾಲೆಯನ್ನು ತೆರೆದರು.

15. ರಾಮ್ ಮೋಹನ್ ರಾಯ್‌ರವರನ್ನು 'ಭಾರತೀಯ ನವೋದಯ ಜನಕ' ಎಂದು ಕರೆಯಲು ಕಾರಣವೇನು?

ಉ. * ಆಧುನಿಕ ವಿಜ್ಞಾನ ಮತ್ತು ಇಂಗ್ಲೀಷ್ ಶಿಕ್ಷಣ ಭಾರತದ ನವೀಕರಣಕ್ಕೆ ಅವಶ್ಯಕವೆಂದು ಪ್ರತಿಪಧಿಸಿದರು.
* ಸ್ತ್ರೀ ಶೋಷಣೆ, ಬಾಲ್ಯವಿವಾಹ ಮತ್ತು ಸತಿಪದ್ಧತಿಯನ್ನು ವಿರೋಧಿಸಿದರು.
* ಸತಿ ಸಹಗಮನ ನಿಷೇಧ ಕಾಯ್ದೆಯನ್ನು ಬೆಂಬಲಿಸಿದರು.
* ಯಜ್ಞ–ಯಾಗಾದಿಗಳನ್ನು ಖಂಡಿಸಿ, ಪುರೋಹಿತ ಶಾಹಿಯನ್ನು ವಿರೋಧಿಸಿದರು.
* ಪ್ರತಿಕೋದ್ಯಮದ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಿದರು.
* ಮೂರ್ತಿಪೂಜೆಯನ್ನು ಪ್ರಶ್ನಿಸಿದ ಅವರು ಉಪನಿಷತ್ತುಗಳ ನಿಜವಾದ ಅರ್ಥವನ್ನು ಕಂಡುಕೊಂಡುರು.

16. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯಲ್ಲಿ ದಯಾನಂದ ಸರಸ್ವತಿಯವರ ಪಾತ್ರವೇನು?

ಉ. * 'ವೇದಗಳಿಗೆ ಹಿಂತಿರುಗಿ' ಎಂಬ ಕರೆಯ ಮೂಲಕ 'ಶುದ್ಧೀಕರಣ ಚಳುವಳಿ'ಯನ್ನು ಆರಂಭಿಸಿದರು.

* ಜಾತಿ ಪದ್ಧತಿ, ವಿಗ್ರಹಾರಾಧನೆಯನ್ನು ಖಂಡಿಸಿದರು.
* ಅರ್ಥಹೀನ ಪದ್ಧತಿಗಳನ್ನು ಮತ್ತು ಪುರೋಹಿತಶಾಹಿಯನ್ನು ತಿರಸ್ಕರಿಸಿದರು.
* ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು.
* ಜನರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದರು.
* ಶಾಲಾ ಕಾಲೇಜುಗಳನ್ನು ಅನೇಕ ಕಡೆ ಸ್ಥಾಪಿಸಿದರು.
* ಸ್ವಾಭಿಮಾನ ಮತ್ತು ಸ್ವಾವಲಂಬನೆಗೆ ಕರೆ ನೀಡಿದರು.

## ಅಧ್ಯಾಯ-6 ಭಾರತದ ಪ್ರಥಮ ಸ್ವಾತಂತ್ಯ ಸಂಗ್ರಾಮ

17. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣವೇನು?

ಉ. * ಬ್ರಿಟಿಷರು ಸೈನಿಕರಿಗೆ ನವೀನ 'ರಾಯಲ್ ಎನ್ ಫೀಲ್ಡ್' ಬಂದೂಕುಗಳನ್ನು ವಿತರಿಸಿದ್ದರು.

* ಬಂದೂಕುಗಳಿಗೆ ಹಸು ಮತ್ತು ಹಂದಿಯ ಕೊಬ್ಬು ಸವರಿದ್ದಾರೆಂಬ ವದಂತಿ ಹಬ್ಬಿತ್ತು.
* ಹಿಂದೂಗಳಿಗೆ ಹಸು ಪವಿತ್ರವಾದರೆ, ಮುಸಲ್ಮಾನರಿಗೆ ಹಂದಿ ನಿಷಿದ್ಧವಾಗಿತ್ತು.
* ಬಂದೂಕುಗಳನ್ನು ಬಳಸಲು ಬ್ರಿಟಿಷರು ಆದೇಶಿಸಿದಾಗ, ಅದನ್ನು ಹಲ್ಲಿನಿಂದ ಕಚ್ಚಿ ತೆಗೆಯಲು ನಿರಾಕರಿಸಿದ ಸೈನಿಕರ ದಂಗೆ ಎದ್ದರು.

18. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳೇನು?

ಉ. * ಬ್ರಿಟಿಷರು ಜಾರಿಗೆ ತಂದ 'ದತ್ತು ಅಸ್ತಿತ್ವ ಕಳೆದು ಕೊಂಡವುದಾಗಿ ದೇಶೀ ಸಂಸ್ಥಾನಗಳು ತಮ್ಮ ಅಸ್ತಿತ್ವ ಕಳೆದು ಕೊಂಡವು.

* ಸತಾರ, ಝಾನ್ಸಿ, ಜೈಪುರ, ಉದರಪುರ ಬ್ರಿಟಿಷರ ವಶವಾದವು.
* ತಂಜಾವೂರು ಮತ್ತು ಕರ್ನಾಟಕ ನವಾಬರ ರಾಜ ಪದವಿಯನ್ನು ರದ್ದು ಪಡಿಸಲಾಯಿತು.
* ಮೊಘಲ್ ಮತ್ತು ಔದ್ ನವಾಬರ ಪದಚ್ಯುತಿಯಿಂದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

19. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣವೇನು?

ಉ. * ಬ್ರಿಟನ್‌ನ ಕೈಗಾರಿಗಾ ಕ್ರಾಂತಿಯಿಂದಾಗಿ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.

* ಕಾರ್ಮಿಕರು ನಿರುದ್ಯೋಗಿಗಳಾದರು.
* ಇಂಗ್ಲೆಂಡಿನಲ್ಲಿ ಭಾರತೀಯ ಸರಕುಗಳಿಗೆ ದುಬಾರಿ ಸುಂಕ ಹೇರಿದ ಕಾರಣ ವ್ಯಾಪಾರಿಗಳು ತೊಂದರೆ ಗೀಡಾದರು.
* ಜಮೀನ್ದಾರಿ ಪದ್ಧತಿಗಳಿಂದಾಗಿ ರೈರು ಶೋಷಣೆಗೊಳಗಾದರು.
* ಇನಾಂ ಭೂಮಿಯನ್ನು ಇನಾಂ ಆಯೋಗ ವಾಪಾಸ್ಸು ಪಡೆದ ಕಾರಣ ತಾಲ್ಲೂಕುದಾರರು ಸಂಕಷ್ಟಕ್ಕೀಡಾದರು.

20. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆಡಳಿತಾತ್ಮಕ ಕಾರಣಗಳೇನು?

ಉ. * ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಬ್ರಿಟಿಷರು ಜಾರಿಗೆ ತಂದರು.
* ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು.
* ಆಂಗ್ಲ ಭಾಷೆ ನ್ಯಾಯಾಲಯ ಭಾಷೆಯಾದ ಕಾರಣ ಭಾರತೀಯರು ತೊಂದರೆಗೊಳಗಾದರು.
* ಇಂಗ್ಲೀಷ್ ನ್ಯಾಯಾಧೀಶರು ಬ್ರಿಟಿಷರ ಪರವಾಗಿಯೇ ನ್ಯಾಯ ನೀಡುತ್ತಿದ್ದರು.
* ಹೊಸ ಕಾನೂನಿನ ಆಶಯ ಭಾರತೀಯರಿಗೆ ಅರಿವಾಗಲಿಲ್ಲ.

21. 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯಿಂದಾದ ಪರಿಣಾಮಗಳೇನು?

ಉ. * ಹಲವು ದೇಶೀಯ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು.
* ಸತಾರ, ಝಾನ್ಸಿ, ಜೈಪುರ ಹಾಗೂ ಉದಯಪುರ ಬ್ರಿಟಿಷರ ವಶವಾದವು.
* ಝಾನ್ಸಿ ರಾಣಿ ಲಕ್ಷ್ಮೀಬಾಯಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದಳು.
* 1857ರ ಪ್ರಥಮ ಸ್ವಾತಂತ್ರ್ಯ ಹೋರಾಟಕ್ಕೆ ನಾಂದಿಯಾಯಿತು.

20. 1858ರ ಬ್ರಿಟನ್‌ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

ಉ. * ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸುವುದು.
* ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
* ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು.
* ಕಾನೂನಿನ ಮುಂದೆ ಎಲ್ಲರಿಗೂ ಸಮಾನ ಸ್ಥಾನಮಾನ ಕಲ್ಪಿಸುವುದು.
* ಧಾರ್ಮಿಕ ಸಹಿಷ್ಣುತೆಯೊಂದಿಗೆ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.

## ಅಧ್ಯಾಯ-7 ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು

23. ಕೈಗಾರಿಕಾ ಕ್ರಾಂತಿಯಿಂದ ಭಾರತದ ಮೇಲಾದ ಪರಿಣಾಮಗಳೇನು?

ಉ. * ಉತ್ಪಾದನಾ ಕೇಂದ್ರವಾಗಿದ್ದ ಭಾರತ ಕೇವಲ ಕಚ್ಚಾ ವಸ್ತುಗಳನ್ನು ರಫ್ತು ಮಾಡುವ ಸ್ಥಿತಿ ತಲುಪಿತು.
* ಬ್ರಿಟಿಷರು ಸಿದ್ಧ ವಸ್ತುಗಳನ್ನು ಭಾರತಕ್ಕೆ ತಂದು ಕಡಿಮೆ ಬೆಲೆಗೆ ಮಾರಲು ಪ್ರಾರಂಭಿಸಿದರು.
* ಇಂಗ್ಲೆಂಡಿನ ಸರಕುಗಳೊಂದಿಗೆ ಭಾರತದ ಸರಕುಗಳು ಸ್ಪರ್ಧಿಸಲಾರದೆ ಸೋತವು.
* ಕೈಗಾರಿಕೆಗಳು ತೀವ್ರ ನಷ್ಟ ಅನುಭವಿಸಿ, ಕಾರ್ಮಿಕರು ನಿರುದ್ಯೋಗಿಗಳಾದರು.

24. ಬ್ರಿಟೀಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡು ಸುಧಾರಣೆಗಳಾವುವು?

ಉ. * ವಿಲಿಯಂ ಬೆಂಟಿಂಕ್ ಮೆಕಾಲೆ ವರದಿಯಂತೆ ಇಂಗ್ಲೀಷ್ ಶಿಕ್ಷಣಕ್ಕೆ ಬುನಾದಿ ಹಾಕಿದನು.
* ಈಸ್ಟ್ ಇಂಡಿಯಾ ಕಂಪನಿಯು ಬಂಗಾಳದ ಹಿಂದೂ ಕಾಲೇಜಿನಲ್ಲಿ ಪಾಶ್ಚಿಮಾತ್ಯ ಸಾಹಿತ್ಯ, ಮಾನವಶಾಸ್ತ್ರ ಮತ್ತು ವಿಜ್ಞಾನವನ್ನು ಬೋಧಿಸಲು ಪ್ರಾರಂಭಿಸಿತು.
* ಕಲ್ಕತ್ತಾ, ಮದ್ರಾಸ್ ಮತ್ತು ಮುಂಬೈಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದರು.
* ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಿದರು.
* ರೂರ್ಕಿಯಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲಾಯಿತು.

* ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಲಾಯಿತು.

25. ರೈತವಾರಿ ಪದ್ಧತಿಯು ಮಹಲ್ವಾರಿ ಪದ್ಧತಿಗಿಂತ ಹೇಗೆ ಭಿನ್ನವಾಗಿದೆ?

ಉ. * ಮಹಲ್ವಾರಿ ಪದ್ಧತಿಯಲ್ಲಿ ಕಂದಾಯ ವಸೂಲಿಯನ್ನು ಮಹಲ್ದಾರರು ನಿರ್ವಹಿಸುತ್ತಿದ್ದರು.

* ಮಹಲ್ವಾರರು ನಿಗದಿತ ಕಂದಾಯವನ್ನು ಭೂ ಅಳತೆಯ ಆಧಾರದ ಮೇಲೆ ರೈತರಿಂದ ವಸೂಲಿ ಮಾಡಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದರು.

* ರೈತವಾರಿ ಪದ್ಧತಿಯಲ್ಲಿ ಭೂ ಒಡೆತನದ ಹಕ್ಕನ್ನು ರೈತರು ಪಡೆದುಕಂದಾಯವನ್ನು ಭೂ ಅಳತೆಯ ಆಧಾರದ ಮೇಲೆ ಪಾವತಿ ಮಾಡುತ್ತಿದ್ದರು.

* ರೈತವಾರಿ ಪದ್ಧತಿಯಲ್ಲಿ ಮಧ್ಯವರ್ತಿಗಳಿಗೆ ಅವಕಾಶವಿರಲಿಲ್ಲ.

26. ಜಮೀನ್ದಾರಿ ಪದ್ಧತಿಯ ಲಕ್ಷಣಗಳಾವುವು?

ಉ. * ಜಮೀನ್ದಾರರು ಉಳುವ ರೈತನಿಂದ ನಿಗದಿತ ಕಂದಾಯ ವಸೂಲಿ ಮಾಡಿ ಕಟ್ಟಬೇಕಿತ್ತು.

* ಈ ಪದ್ಧತಿಯಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಆದಾಯವು ದೊರಕಿತು.

* ಜಮೀನ್ದಾರರು ಕಂದಾಯವನ್ನು ಬೆಳೆಯ ಆಧಾರದ ಬದಲು ಜಮೀನಿನ ಪ್ರಮಾಣದಲ್ಲಿ ಕಂದಾಯ ದರವನ್ನು ನಿಗದಿಪಡಿಸಿ, ಹೆಚ್ಚಿನ ಕಂದಾಯ ವಸೂಲಿ ಮಾಡಿದರು.

* ಈ ಪದ್ಧತಿಯಲ್ಲಿ ರೈತರು ಶೋಷಣೆಗೆ ಒಳಗಾದರು.

## ಅಧ್ಯಾಯ-9 ಸ್ವಾತಂತ್ರ್ಯೋತ್ತರ ಭಾರತ

27. ಜುನಾಗಡ ಸಂಸ್ಥಾನವು ಭಾರತದಲ್ಲಿ ಹೇಗೆ ವಿಲೀನವಾಯಿತು?

ಉ. * ಜುನಾಗಡ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಛಿಸಿದನು.

* ಜುನಾಗಡ ಪ್ರಜೆಗಳು ನವಾಬನ ವಿರುದ್ಧ ದಂಗೆ ಎದ್ದರು.

* ನವಾಬನು ಪಾಕಿಸ್ತಾನಕ್ಕೆ ಪಲಾಯನ ಮಾಡಿದನು.

* ಜನರ ಆಶಯದಂತೆ 1949ಯಲ್ಲಿ ಜುನಾಗಡ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

28. ಹೈದರಾಬಾದ್ ಸಂಸ್ಥಾನವು ಭಾರತದೊಂದಿಗೆ ಹೇಗೆ ವಿಲೀನವಾಯಿತು?

ಉ. * ಹೈದರಾಬಾದಿನ ನಿಜಾಮನು ಸ್ವತಂತ್ರನಾಗಿರಲು ಇಚ್ಛಿಸಿ, ಭಾರತದೊಂದಿಗೆ ಸೇರಲು ನಿರಾಕರಿಸಿದನು.

* ಈ ಸಂದರ್ಭದಲ್ಲಿ ರೈತರು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ದಂಗೆ ಎದ್ದರು.

* ನಿಜಾಮನ ಪಡೆಯಾದ ರಜಾಕರ ವಿರುದ್ಧ ಜನರ ಪ್ರತಿರೋಧವಿತ್ತು.

* ಭಾರತದ ಸೈನ್ಯವು ನಿಜಾಮನನ್ನು ಸೋಲಿಸಿ 1948ರಲ್ಲಿ ಹೈದರಾಬಾದನ್ನು ಭಾರತದಲ್ಲಿ ವಿಲೀನಗೊಳಿಸಲಾಯಿತು.

29. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?

ಉ. * ಗೋವಾ ಭಾರತಕ್ಕೆ ಸೇರಬೇಕೆಂದು ನಿರಂತರ ಚಳುವಳಿ ನಡೆಯಿತು.

* ಪೋರ್ಚುಗೀಸರು ಹೆಚ್ಚಿನ ಸೈನ್ಯ ತರಿಸಿಕೊಂಡು ಚಳುವಳಿಯನ್ನು ದಮನ ಮಾಡಲು ಪ್ರಯತ್ನಿಸಿತು.

* 1955ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಬಂದು ವಿಮೋಚನಾ ಹೋರಾಟ ಮಾಡಿದರು.

* 1961ರಲ್ಲಿ ಭಾರತದ ಸೈನ್ಯ ಮಧ್ಯ ಪ್ರವೇಶಿಸಿ ಗೋವಾವನ್ನು ಪೋರ್ಚುಗೀಸರಿಂದ ಮುಕ್ತಗೊಳಿಸಿತು.

30. ಸರ್ದಾರ್ ಪಟೇಲರನ್ನು 'ಭಾರತದ ಉಕ್ಕಿನ ಮನುಷ್ಯ' ಎಂದು ಕರೆಯಲು ಕಾರಣವೇನು?

ಉ. * ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಭಾರತದ ಒಕ್ಕೂಟಕ್ಕೆ ಅನೇಕ ದೇಶೀಯ ಸಂಸ್ಥಾನಗಳು ವಿಲೀನಕರಣಗೊಂಡವು.

*

*

*

## ಅಧ್ಯಾಯ-10 20ನೇ ಶತಮಾನದ ರಾಜಕೀಯ ಆಯಾಮಗಳು

31. ಹಿಟ್ಲರನ ನಾಜೀವಾದದ ಸಾರಾಂಶವೇನು?

ಉ. * ಆರ್ಯ ಜರ್ಮನ್ ಜನಾಂಗ ಜಗತ್ತಿನಲ್ಲಿ ಶ್ರೇಷ್ಠರು.

* ಆರ್ಯರು ಮಾತ್ರ ಜಗತ್ತನ್ನು ಆಳಲು ಯೋಗ್ಯರು.

* ಉಳಿದ ಜನಾಂಗಗಳು ಆಳಿಸಿಕೊಳ್ಳಲು ಮಾತ್ರ ಯೋಗ್ಯರು.

* ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೂ ಯಹೂದಿಗಳು, ಕಮ್ಯುನಿಷ್ಟರು, ಕ್ಯಾಥೋಲಿಕರು, ಸೋಷಿಯಲಿಸ್ಟರೇ ಕಾರಣ.

32. ಫ್ಯಾಸಿಸ್ಟ್ ವಾದದ ಲಕ್ಷಣಗಳನ್ನು ತಿಳಿಸಿ?

ಉ. * ಉಗ್ರ ರಾಷ್ಟ್ರೀಯವಾದ.

* ಪರಕೀಯ ಶಕ್ತಿಗಳ ನಾಶ.

* ಹಿಂಸೆಯ ವೈಭವೀಕರಣ.

* ಜನಾಂಗೀಯ ಶ್ರೇಷ್ಠತೆ.

* ಸಾಮ್ರಾಜ್ಯವಾದದ ವಿಸ್ತರಣೆ.

* ನರಮೇಧಗಳಿಗೆ ಬೆಂಬಲ

33. ಎರಡನೆ ಮಹಾಯುದ್ಧದ ಪರಿಣಾಮಗಳಾವುವು?

ಉ. * ಅತಿ ಹೆಚ್ಚು ಸಾವು-ನೋವು.

* ವಿಶ್ವ ಸಂಸ್ಥೆಯ ರಚನೆ.

* ಏಷ್ಯಾ ಮತ್ತು ಆಫ್ರಿಕಾ ವಸಾಹತುಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು.

* ಯುರೋಪಿಯನ್ ರಾಷ್ಟ್ರಗಳು ತಮ್ಮ ವಸಾಹತುಗಳನ್ನು ಕಳೆದುಕೊಂಡವು.

35. ರಷ್ಯಾದ ಅಭಿವೃದ್ಧಿಗೆ ಜೋಸೆಫ್ ಸ್ಟಾಲಿನ್‌ರ ಕೊಡುಗೆಗಳೇನು?

ಉ. * ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದನು.

* ರಷ್ಯಾದ ಅಭಿವೃದ್ಧಿ ಪಥವನ್ನು ಬದಲಾಯಿಸಿದನು.
* ಬಾಹ್ಯಾಕಾಶ ವಿಜ್ಞಾನ ಅಭಿವೃದ್ಧಿಯಾಯಿತು.
* ವಿಶ್ವದ ಮೊದಲ ಮಾನವ ಸಹಿತ ಉಪಗ್ರಹವನ್ನು ಉಡಾಯಿಸಲಾಯಿತು.

# ದಾರಿದೀಪ ಪಾಸಿಂಗ್–ಪ್ಯಾಕೇಜ್

# ರಾಜ್ಯಶಾಸ್ತ್ರ

## ಅಧ್ಯಾಯ–1 ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

### I. ಈ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಕೋಮುವಾದ ದೇಶದ ಏಕತೆಗೆ ಮಾರಕವಾಗಿದೆ ಹೇಗೆ?

ಉ. * ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣ ಮೂಡಿಸುತ್ತದೆ.

* ಕೋಮುವಾದವು ಗುಂಪುಗಾರಿಕೆ ಮತ್ತು ರಾಜಕೀಯ ಪೈಪೋಟಿ ಉಂಟುಮಾಡುತ್ತದೆ.
* ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ಭಂಗ ಪಡಿಸುತ್ತದೆ.
* ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ.
* ವ್ಯಕ್ತಿಗಳ ಜೀವನ ಮತ್ತು ಸೊತ್ತುಗಳ ನಾಶವಾಗುತ್ತದೆ.

2. ಅನಕ್ಷರತೆಯನ್ನು ನಿವಾರಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಉ. * 2001ರಲ್ಲಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಗೆ ತಂದಿದೆ.

* 1988ರಲ್ಲಿ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಸ್ಥಾಪಿಸಿದೆ..
* 'ಸಾಕ್ಷರ ಭಾರತ' ಕಾರ್ಯಕ್ರಮ ಜಾರಿಗೆ ತಂದಿದೆ.
* 21ನೇ ವಿಧಿಯನ್ವಯ ಶಿಕ್ಷಣ ಹಕ್ಕನ್ನು ಮೂಲಭೂತ ಹಕ್ಕಾನ್ನಾಗಿಸಿದೆ.
* 2009ರಲ್ಲಿ ಶಿಕ್ಷಣದ ಹಕ್ಕು ಕಾಯ್ದೆಯನ್ನು ಜಾರಿಗೆ ತಂದಿದೆ.

3. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಉ. * ಮಹಿಳೆಯರ ಸಬಲೀಕರಣಕ್ಕೆ ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇಧ, ವರದಕ್ಷಿಣೆ ನಿಷೇಧ ಜಾರಿಗೆ ತರಲಾಗಿದೆ.

* ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ 'ಸ್ತ್ರೀ ಶಕ್ತಿ' ಕಾರ್ಯಕ್ರಮ ಜಾರಿಗೆ ತಂದಿದೆ.
* ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲಾಗಿದೆ.
* ತಂದೆಯ ಆಸ್ತಿಯಲ್ಲಿ ಭಾಗ ಪಡೆಯುವಂತಾಗಿದೆ.

4. ಕಳ್ಳ ಸಾಗಾಣೆಯನ್ನು ನಿಯಂತ್ರಿಸುವ ಕ್ರಮಗಳಾವುವು?

ಉ. * ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವಿಕೆ.

* ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ.
* ಒಳ್ಳೆಯ ಆಮದು–ರಫ್ತು ಧೋರಣೆ ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಚರಣೆ.

5. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಳ್ಳುವ ಕ್ರಮಗಳಾವುವು?

ಉ. * ಉತ್ತಮ ಆರ್ಥಿಕ ಸುಧಾರಣೆಗಳು * ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ.

* ಒಳ್ಳೆಯ ತೆರಿಗೆ ವಿಧಾನ * ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ.

6. ಜನಸಂಖ್ಯಾ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳಾವುವು?

ಉ. * ನಿರುದ್ಯೋಗ * ಅನಕ್ಷರತೆ * ಆರೋಗ್ಯ ಸಮಸ್ಯೆ

* ಬಡತನ * ವಸತಿಸಮಸ್ಯೆ * ಕಡಿಮೆ ತಲಾದಯ

* ನೀರಿನ ಸಮಸ್ಯೆ * ರಾಜಕೀಯ ಕ್ಷೋಭೆ

7. ಲಾಭಕೋರತನವನ್ನು ನಿಯಂತ್ರಿಸುವ ವಿಧಾನಗಳನ್ನು ತಿಳಿಸಿ.

ಉ. * ಕಟ್ಟು ನಿಟ್ಟಾದ ಸರ್ಕಾರಿ ನಿಯಂತ್ರಣ * ಬೆಲೆ ಸೂಚ್ಯಂಕಗಳ ಪರಿಶೀಲಿಸಿ

* ಸಹಕಾರಿ ಮಾರುಕಟ್ಟೆಗಳ ವಿಸ್ತರಣೆ * ಸರಿಯಾದ ತೆರಿಗೆ ಧೋರಣೆ.

8. ಬಡತನ ನಿವಾರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತಂದ ಯೋಜನೆಗಳಾವುವು?

ಉ. * ಬಡಕುಟುಂಬಗಳಿಗೆ ಬಿ.ಪಿ.ಎಲ್ ಕಾರ್ಡ್ ವಿತರಣೆ, ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ.

* ಜವಹರ ರೋಜ್‌ಗಾರ್ ಯೋಜನೆ. * ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ.

## ಅಧ್ಯಾಯ – 4 ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

9. 2ನೇ ಮಹಾಯುದ್ಧದ ನಂತರ ಎದುರಾದ ಜಾಗತಿಕ ಸಮಸ್ಯೆಗಳಾವುವು?

ಉ. * ಮಾನವ ಹಕ್ಕುಗಳ ನಿರಾಕರಣೆ * ಶಸ್ತ್ರಾಸ್ತ್ರಗಳ ಪೈಪೋಟಿ, ಆರ್ಥಿಕ ಅಸಮಾನತೆ

* ವರ್ಣ ಬೇಧನೀತಿ * ಭಯೋತ್ಪಾದಕತೆ.

10. "ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ವಿನಾಶಕ್ಕೆ ನಾಂದಿ ಈ ಹೇಳಿಕೆಯನ್ನು ಸಮರ್ಥಿಸಿರಿ.

ಉ. * ಅಣ್ವಸ್ತ್ರಗಳು ಮತ್ತು ಬಾಂಬ್‌ಗಳ ತಯಾರಿಕೆಯಿಂದ ನಿಶ್ಯಸ್ತ್ರೀಕರಣ ಅಸಾಧ್ಯವಾಗಿದೆ.

* ವಿಶ್ವದಾದ್ಯಂತ ಭಯ ಅಸ್ಥಿರತೆ ಉಂಟಾಗಿದೆ.

* ಮನುಕುಲದ ನಾಶವಾಗುವ ಭೀತಿ ಇದೆ.

* ಯಾವುದೇ ಸಂದರ್ಭದಲ್ಲಾದರು ಯುದ್ಧ ಸಂಭವಿಸಬಹುದು.

11. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು?

ಉ. * ಸ್ವಾತಂತ್ರ್ಯ ಪಡೆದರೂ ಆರ್ಥಿಕವಾಗಿ, ಸಮಾಜಿಕವಾಗಿ ಹಿಂದುಳಿದಿದೆ.

* ಔದ್ಯೋಗಿಕವಾಗಿ, ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಹಿಂದೆ ಇದೆ.

* ಶಿಕ್ಷಣ, ಕೃಷಿ, ಆರೋಗ್ಯ ಕ್ಷೇತ್ರಗಳು ಪ್ರಗತಿಯಾಗಿಲ್ಲ.

* ರಾಷ್ಟ್ರೀಯ ಮತ್ತು ತಲಾ ಆದಾಯ ಕೆಳಮಟ್ಟದಲ್ಲಿದೆ.

12. ಭಯೋತ್ಪಾದನೆಯು ಒಂದು ಸಮಾಜಘಾತಕ ಚಟುವಟಿಕೆಯಾಗಿದೆ ಹೇಗೆ?

ಉ. * ಸಾರ್ವಜನಿಕವಾಗಿ ವ್ಯಕ್ತಿಗಳ ಆಸ್ತಿಪಾಸ್ತಿಗಳ ಹಾನಿ ಉಂಟುಮಾಡುತ್ತದೆ.

* ನಿರ್ದಿಷ್ಟ ಭಾಷಾವಾರು, ಧಾರ್ಮಿಕ ಜನಾಂಗದ ಮೇಲೆ ನೋವು ಉಂಟು ಮಾಡುತ್ತದೆ.

* ರಸ್ತೆ, ರೈಲು ಸಾರಿಗೆ ವಿಮಾನ ನಿಲ್ದಾಣಗಳು ನಾಶವಾಗುತ್ತದೆ.

* ಆತ್ಮಾಹುತಿದಾಳಿ, ವಿಮಾನ ಕಳ್ಳತನ, ಮುಗ್ಧಜನರ ಒತ್ತಾಯದಂತಹ ಕೃತ್ಯಗಳು ನಡೆಯುತ್ತವೆ.

13. ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ತಗ್ಗಿಸುವ ಪ್ರಯುಕ್ತ ಆದ ಪ್ರಮುಖ ಒಪ್ಪಂದಗಳಾವುವು?

ಉ. * 1963 ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧ ಒಪ್ಪಂದ.

* ಸಮಗ್ರ ಪರೀಕ್ಷಾ ನಿಷೇಧ ಒಪ್ಪಂದ
* ನಿರ್ಣಾಯತ್ಮಾಕ ಶಸ್ತ್ರ ನಿಯಂತ್ರಣ ಒಪ್ಪಂದ
* ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ
* ಫಲಿಕ್ ನಿಷೇಧ ಒಪ್ಪಂದ

## ಅಧ್ಯಾಯ – 5 ಜಾಗತಿಕ ಸಂಸ್ಥೆಗಳು

14. ವಿಶ್ವಸಂಸ್ಥೆಯ ಸ್ಥಾಪನೆಯ ಉದ್ದೇಶಗಳನ್ನು ತಿಳಿಸಿ.

ಉ. * ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.
* ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು.
* ಮಾನವನ ಮೂಲಭೂತ ಹಕ್ಕುಗಳನ್ನು ಉತ್ತೇಜಿಸುವುದು.
* ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಮಾನವೀಯ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು.

15. ಭದ್ರತಾ ಸಮಿತಿಯ ಕಾರ್ಯಗಳನ್ನು ವಿವರಿಸಿ.

ಉ. * ಜಾಗತಿಕ ಮಟ್ಟದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.
* ಶಾಂತಿಪಾಲನ ಪಡೆಯನ್ನು ನಿಯೋಜಿಸುವುದು.
* ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವುದು.
* ಮಹಾಕಾರ್ಯದರ್ಶಿ ಉಮೇದುದಾರಿಕೆಗೆ ಹೆಸರು ಸೂಚಿಸುವುದು.

16. ಸಾಮಾನ್ಯ ಸಭೆಯ ರಚನೆಯನ್ನು ತಿಳಿಸಿ.

ಉ. * ವಿಶ್ವ ಸಂಸ್ಥೆಯ ಎಲ್ಲಾ ಸದಸ್ಯರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡಿದೆ.
* ಪ್ರತಿರಾಷ್ಟ್ರವು 5 ಜನ ಸದಸ್ಯರನ್ನು ಕಳುಹಿಸುವುದು, ಒಬ್ಬರಿಗೆ ಮಾತ್ರ ಮತದ ಹಕ್ಕು.
* ಒಬ್ಬ ಅಧ್ಯಕ್ಷ ಮತ್ತು 17 ಜನ ಉಪಾಧ್ಯಕ್ಷರನ್ನು ಹೊಂದಿರುತ್ತದೆ.
* 7 ಸ್ಥಾಯಿ ಸಮಿತಿಗಳನ್ನು ಹೊಂದಿದೆ.

17. ಸಾಮಾನ್ಯ ಸಭೆಯ ಕಾರ್ಯಗಳನ್ನು ತಿಳಿಸಿ.

ಉ. * ವಾರ್ಷಿಕ ಆಯ–ವ್ಯಯ ಪಟ್ಟಿಗೆ ಒಪ್ಪಿಗೆ ಪಡೆಯುವುದು.
* ವಿಷಯಗಳ ಚರ್ಚೆಗೆ ಅಧಿವೇಶನ ಕರೆಯುವುದು.
* ಜಾಗತಿಕ ಪ್ರಮುಖ ವಿದ್ಯಮಾನಗಳ ಚರ್ಚೆಯಲ್ಲಿ ಪ್ರಮುಖಪಾತ್ರ ವಹಿಸುವುದು.

18. ಕಾಮನ್‌ವೆಲ್ತ್ ರಾಷ್ಟ್ರಗಳ ಸಂಘದ ಉದ್ದೇಶಗಳೇನು?

ಉ. * ಪ್ರಜಾಪ್ರಭುತ್ವ ಎತ್ತಿ ಹಿಡಿಯುವುದು. * ಬಡತನ ನಿರ್ಮೂಲನೆ.
* ಸ್ವಾತಂತ್ರ್ಯ ಸಂರಕ್ಷಣೆ * ವಿಶ್ವ ಶಾಂತಿ ನೆಲೆಗೊಳಿಸುವಿಕೆ.
* ಕ್ರೀಡೆ, ವಿಜ್ಞಾನ ಹಾಗೂ ಕಲೆಯ ಬೆಳವಣಿಗೆ.

19. ವಿಶ್ವ ಸಂಸ್ಥೆಯ ಸಾಧನೆಗಳನ್ನು ತಿಳಿಸಿ.

ಉ. 1) ಶಾಂತಿ ಸ್ಥಾಪನಾಕಾರ್ಯಗಳು : * ಸೂಯೆಜ್ ಕಾಲುವೆ ಬಿಕ್ಕಟ್ಟು ನಿವಾರಣೆ, ಇರಾಕ್ ಸಂಘರ್ಷ ಅಂತ್ಯ. * ಕಾಶ್ಮೀರ ಸಮಸ್ಯೆ * ಪ್ಯಾಲೆಸ್ಟನ್ ವಿಮೋಚನೆ. ನಿಶ್ಯಸ್ತ್ರೀಕರಣ ಜಾರಿಗೆ.

2) ಆರ್ಥಿಕ ಮತ್ತು ಹಣಕಾಸಿನ ಸಾಧನೆ : * ಸುಂಕ ಮತು ವ್ಯಾಪಾರದ ಸಾಮಾನ್ಯ ಒಪ್ಪಂದ * ವಿಶ್ವ ಸಂಸ್ಥೆಯ ಪ್ರಗತಿ ಯೋಜನೆ * ವಿಶ್ವ ಬ್ಯಾಂಕ್ & ಐ.ಎಮ್.ಎಫ್ ನೊಂದಿಗೆ ಉತ್ತಮ ಸಾಧನೆ.

3) ಸಾಮಾಜಿಕ ಸಾಧನೆಗಳು : * 1948ರ ಮಾನವ ಹಕ್ಕುಗಳ ಘೋಷಣೆ * ವರ್ಣಬೇಧನೀತಿ ನಿರ್ಮೂಲನೆ * ಸಾಮಾನ್ಯ ಶಾಹಿತ್ವ ಮತ್ತು ವಸಾಹತುಶಾಹಿತ್ವ ಕೊನೆಗೊಳಿಸುವುದು.

# ದಾರಿದೀಪ ಪಾಸಿಂಗ್–ಪ್ಯಾಕೇಜ್
# ಸಮಾಜಶಾಸ್ತ್ರ

## ಅಧ್ಯಾಯ–3 ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

**I. ಈ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಜನಮಂದೆ ಎಂದರೇನು? ಉದಾಹರಣೆ ಕೊಡಿ.

ಉ. ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿ.

ಉದಾ : ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹ.

(ಸೂಚನೆ : ವಿದ್ಯಾರ್ಥಿಯು ಮೇಲ್ಕಂಡ ಪರಿಕಲ್ಪನೆಗೆ ಪೂರಕವಾದ ಯಾವುದೇ ಉದಾಹರಣೆಯನ್ನು ನೀಡಿದರೂ ಅದನ್ನು ಪರಿಗಣಿಸುವುದು.)

2. ಜನಮಂದೆಯ ಸ್ವರೂಪವನ್ನು ತಿಳಿಸಿ.

ಉ. * ತಾತ್ಕಾಲಿಕ ಸ್ವರೂಪದ ಸಮೂಹವಾಗಿರುತ್ತದೆ.

* ಜನರು ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಒಟ್ಟಾಗಿ ಸೇರಿರುತ್ತಾರೆ.
* ಸದಸ್ಯರು ಪರಸ್ಪರ ಅಭಿಪ್ರಾಯಗಳು, ಭಾವನೆಗಳು, ಕ್ರಿಯೆಗಳ ಪ್ರಭಾವಕ್ಕೆ ಒಳಗಾಗುತ್ತಾರೆ.
* ಕೆಲವೊಮ್ಮೆ ಜನಮಂದೆಯ ಮೂಲಕ ವ್ಯಕ್ತಿಯ ಅಂತರಾಳದ ಭಾವನೆಗಳು ಸ್ಫೋಟಗೊಳ್ಳುತ್ತವೆ.

3. ಸಮೂಹ ವರ್ತನೆಯ ಮಾದರಿಗಳು ಯಾವುವು?

ಉ. * ಜನಮಂದೆ

* ದೊಂಬಿ
* ಸಾರ್ವಜನಿಕ ಅಭಿಪ್ರಾಯ
* ಕ್ರಾಂತಿ ಹಾಗು ಸಾಮಾಜಿಕ ಆಂದೋಲನ.

4. ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಸಮೂಹಗಳ ಪಾತ್ರವನ್ನು ತಿಳಿಸಿ.

ಉ. * ಸ್ತ್ರೀಯರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಗೊಳಿಸುತ್ತದೆ.

* ಚಿಕ್ಕ ಮಟ್ಟದ ಆರ್ಥಿಕ ಮೂಲಗಳನ್ನು ದೊಡ್ಡ ಮಟ್ಟದಲ್ಲಿ ಒದಗಿಸುತ್ತವೆ.
* ಶಿಕ್ಷಣ ಜಾಗೃತಿಯೊಂದಿಗೆ ಸ್ವಾವಲಂಭಿ ಜೀವನ ನಡೆಸಲು ಸಹಕಾರಿ.
* ಸ್ತ್ರೀಯರ ಪಾಲಿನ ಹಕ್ಕುಗಳನ್ನು ಪಡೆಯಲು ಸಹಾಯಕ.

5. ಕೈಗಾ ಅಣುಸ್ಥಾವರವನ್ನು ಪರಿಸರವಾದಿಗಳು ವಿರೋಧಿಸಲು ಕಾರಣವೇನು?

ಉ. * ಅರಣ್ಯ ನಾಶ.

* ಅಣುವಿಕಿರಣದಿಂದ ಪರಿಸರಮಾಲಿನ್ಯ.
* ಜೀವ ಪರಿಸರದ ಮೇಲೆ ಹಾನಿಹಾರಕ ಪರಿಣಾಮಗಳು.

## ಅಧ್ಯಾಯ-4 ಸಾಮಾಜಿಕ ಸಮಸ್ಯೆಗಳು

6. ಬಾಲಕಾರ್ಮಿಕರ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಸಾಂವಿಧಾನಿಕ ಪರಿಹಾರಕ್ರಮಗಳನ್ನು ತಿಳಿಸಿ.

ಉ. * 1986 ರಲ್ಲಿ ಬಾಲಕಾರ್ಮಿಕ ನಿಷೇಧ ಕಾಯ್ದೆಯ ಜಾರಿ.
* 1987ರಲ್ಲಿ ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿ.
* ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಬಾಲಮಂದಿರಗಳ ಸ್ಥಾಪನೆ.
* ಕೂಲಿಯಿಂದ ಶಾಲೆಗೆ ಕಾರ್ಯಕ್ರಮ
* 2006 ರ ಬಾಲಶ್ರಮ ನಿರ್ಮೂಲನ ಮತ್ತು ಪುನರ್ ವಸತೀಕರಣಕಾಯಿದೆ.
* 2009ರ ಶಿಕ್ಷಣಹಕ್ಕು ಕಾಯಿದೆ.
( ಮೇಲಿನ ಯಾವುದಾದರೂ ನಾಲ್ಕು ಅಂಶಗಳು)

7. ಬಾಲಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು?

ಉ. * ಅನಾರೋಗ್ಯ
* ಪೌಷ್ಟಿಕ ಆಹಾರದ ಕೊರತೆ
* ವೈದ್ಯಕೀಯ ಸೌಲಭ್ಯಗಳ ಕೊರತೆ
* ಒತ್ತಾಯದ ದುಡಿತ
* ಆರ್ಥಿಕ ಮತ್ತು ಸಾಮಾಜಿಕ ಶೋಷಣೆ

8. ಹೆಣ್ಣು ಭ್ರೂಣ ಹತ್ಯೆಯಂತಹ ಅಮಾನವೀಯ ಸಮಸ್ಯೆಯ ಹಲವು ದುಷ್ಪರಿಣಾಮಗಳನ್ನು ಉಂಟು ಮಾಡುತ್ತವೆ ಹೇಗೆ?

ಉ. * ಸ್ತ್ರೀ ಪುರುಷರ ಲಿಂಗಾನುಪಾತದಲ್ಲಿ ಏರುಪೇರು.
* ಲಿಂಗತಾರತಮ್ಯತೆಯ ಹೆಚ್ಚಳ
* ಹೆಣ್ಣಿನ ಅಪಮೌಲ್ಯೀಕರಣ

9. "ವರದಕ್ಷಿಣೆ ಸಮಸ್ಯೆಯ ಸಮಾಜದಲ್ಲಿ ಹಲವು ಕೆಟ್ಟ ಪರಿಣಾಮಗಳನ್ನು ಉಂಟುಮಾಡುತ್ತದೆ" ಈ ಹೇಳಿಕೆಯನ್ನು ಸಮರ್ಥಿಸಿ.

ಉ. * ಸ್ತ್ರೀಯರ ಸ್ವಾಭಿಮಾನ ಮತ್ತು ಗೌರವ ಕುಗ್ಗುತ್ತದೆ.
* ಸ್ತ್ರೀಪುರುಷರ ನಡುವೆ ಒಡಕು ಮೂಡುತ್ತದೆ.
* ಅನೈತಿಕತೆ ಮತ್ತು ಕ್ರೌರ್ಯದ ಹೆಚ್ಚಳ
* ಕೌಟುಂಬಿಕ ಸಂಬಂಧಗಳು ಹಾಳಾಗುವಿಕೆ
* ಹೆಣ್ಣು ಭ್ರೂಣ ಹತ್ಯೆ ಮತ್ತು ಶಿಶುಹತ್ಯೆಗಳ ಹೆಚ್ಚಳ
* ವಿವಾಹ ವಿಚ್ಛೇದನಗಳ ಹೆಚ್ಚಳ
( ಮೇಲಿನ ಯಾವುದಾದರೂ 4 ಅಂಶಗಳು)

## ಅಧ್ಯಾಯ–2 ಭಾರತದ ಪ್ರಾಕೃತಿಕ ಲಕ್ಷ್ಮಣಗಳು

### I. ಈ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಭಾರತದ ಜನಜೀವನದ ಮೇಲೆ ಹಿಮಾಲಯ ಪರ್ವತದ ಪ್ರಭಾವವೇನು?

ಉ. * ನೈಸರ್ಗಿಕ ರಕ್ಷಣಾಗೋಡೆ.
* ಏಶಿಯಾದಿಂದ ಬೀಸಿಬರುವ ಶೀತಗಾಳಿನ ತಡೆ
* ನದಿಗಳ ಉಗಮಸ್ಥಾನ
* ಜಲವಿದ್ಯುತ್ ಉತ್ಪಾದನೆ
* ವಿಶಾಲ, ಫಲವತ್ತಾದ ಮೈದಾನಗಳ ನಿರ್ಮಾಣ.
* ವೈವಿಧ್ಯಮಯ ಸಸ್ಯ, ಪ್ರಾಣಿ ಹಾಗೂ ಪಕ್ಷಿಗಳಿಗೆ ಆಶ್ರಯ
* ಖನಿಜ ಸಂಪನ್ಮೂಲ

2. ಭಾರತದ ಪರ್ಯಾಯ ಪ್ರಸ್ಥಭೂಮಿಯ ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.

ಉ. * ಅಪಾರವಾದ ಖನಿಜಸಂಪನ್ಮೂಲ ಲಭ್ಯತೆ.
* ಜಲಪಾತಗಳಿಂದ ಕೂಡಿದ್ದು, ಜಲವಿದ್ಯುತ್ ಶಕ್ತಿ ಉತ್ಪಾದನೆಗೆ ಅವಕಾಶ.

3. ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳಿಗಿಂತ ಹೇಗೆ ಭಿನ್ನವಾಗಿವೆ?

ಉ. ಪಶ್ಚಿಮಘಟ್ಟಗಳು – * ಎತ್ತರವಾಗಿವೆ * ನಿರಂತರವಾಗಿವೆ * ದಖ್ಖನ್ ಪ್ರಸ್ಥಭೂಮಿಯ ಪಶ್ಚಿಮದಲ್ಲಿದೆ.

ಪೂರ್ವ ಘಟ್ಟಗಳು – * ಹೆಚ್ಚು ಎತ್ತರವಾಗಿಲ್ಲ * ನಿರಂತರವಾಗಿಲ್ಲ * ನದಿಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ.

4. ಪಶ್ಚಿಮ ಕರಾವಳಿ ಮತ್ತು ಪೂರ್ವಕರಾವಳಿ ಪರಸ್ಪರ ಹೇಗೆ ಭಿನ್ನವಾಗಿವೆ?

ಉ. ಪಶ್ಚಿಮ ಕರಾವಳಿ – * ಅರಬ್ಬೀಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಹರಡಿದೆ.
* ಗುಜರಾತ್‌ನ ಕಛ್ ನಿಂದ ಕನ್ಯಾಕುಮಾರಿವರೆಗೆ
* ಮಲಬಾರ್, ಕೊಂಕಣ, ಗುಜರಾತ್ ಕರಾವಳಿ ಎಂದು ವಿಂಗಡಣೆ.

ಪೂರ್ವ ಕರಾವಳಿ – * ಪೂರ್ವಘಟ್ಟ ಮತ್ತು ಬಂಗಾಳ ಕೊಲ್ಲಿಗಳು ಮಧ್ಯ ಹರಡಿದೆ.
* ಗಂಗಾಮುಖಜ ಭೂಮಿಯಿಂದ ಕನ್ಯಾಕುಮಾರಿವರೆಗೆ.
* ಉತ್ಕಲ ಮತ್ತು ಕೋರಮಂಡಲ ಕರಾವಳಿಎಂದು ವಿಂಗಡನೆ.

5. ಭಾರತದ ನಾಲ್ಕು ಪ್ರಧಾನ ಭೂಸ್ವರೂಪಗಳನ್ನು ಹೆಸರಿಸಿರಿ.

ಉ. * ಉತ್ತರದ ಪರ್ವತಗಳು * ಉತ್ತರದ ಮಹಾಮೈದಾನ

* ಪರ್ಯಾಯ ಪ್ರಸ್ಥ ಭೂಮಿ * ಕರಾವಳಿ ಮೈದಾನಗಳು

6. ಉತ್ತರದ ಮಹಾಮೈದಾನವನ್ನು 'ಸಂಚಯದ ಮೈದಾನ' ಎನ್ನಲು ಕಾರಣವೇನು?

ಉ. * ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿದೆ.

* ಇದು ನದಿಗಳು ಹೊತ್ತುತಂದು ಸಂಚಯಿಸಿದ ಮಣ್ಣಿನಿಂದ ರಚನೆಯಾಗಿದೆ.

* ಸಂಪೂರ್ಣ ಸಮತಟ್ಟಾಗಿದೆ.

7. ಶಿವಾಲಿಕ್ ಶ್ರೇಣಿಯಲ್ಲಿರುವ ಯಾವುದಾದರೂ ನಾಲ್ಕು ಡೂನ್‌ಗಳನ್ನು ಹೆಸರಿಸಿರಿ.

ಉ. * ಡೆಹರಾಡೂನ್ * ಕೋಟಾ * ಪಾಟ್ಲಿ ಚೌಕಾಂಬಾ.

* ಉದಾಂಪೂರ್ * ಕೊಟ್ಲಾ

8. ಮಧ್ಯ ಹಿಮಾಲಯದಲ್ಲಿರುವ ಯಾವುದಾದರೂ ನಾಲ್ಕು ಗಿರಿಧಾಮಗಳನ್ನು ಹೆಸರಿಸಿ.

ಉ. * ಶಿಮ್ಲಾ * ಮಸ್ಸೂರಿ * ನೈನಿತಾಲ್ * ರಾಣಿ ಖೇತ್ * ಚಕ್ರಾತ * ಡಾರ್ಜಿಲಿಂಗ್

9. ಕಣಿವೆ ಮಾರ್ಗಗಳ ಪ್ರಾಮುಖ್ಯತೆಯನ್ನು ತಿಳಿಸಿರಿ.

ಉ. * ಉತ್ತಮ ಸಂಚಾರಿ ಸೌಲಭ್ಯಗಳನ್ನು ಒದಗಿಸಿದೆ.

* ಪ್ರವಾಸಿಗರಿಗೆ ಆಕರ್ಷಣೀಯ ಕೇಂದ್ರಗಳಾಗಿವೆ.

## ಅಧ್ಯಾಯ–3 ಭಾರತದ ಮಾನ್ಸೂನ್ ವಾಯುಗುಣದ ಋತುಮಾನಗಳು ಮತ್ತು ಲಕ್ಷಣಗಳು

10. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಾವುವು?

ಉ. * ಅಕ್ಷಾಂಶ * ಸಮುದ್ರ ಮಟ್ಟದಿಂದ ಇರುವ ಎತ್ತರ.

* ಸಾಗರಗಳಿಂದ ಇರುವದೂರ * ಮಾರುತಗಳ ದಿಕ್ಕು

* ಪರ್ವತ ಸರಣಿಗಳು ಹಬ್ಬಿರುವ ರೀತಿ * ಸಾಗರ ಪ್ರವಾಹಗಳು

11. ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣಗದ ನಾಲ್ಕು ಋತುಮಾನಗಳನ್ನು ಹೆಸರಿಸಿರಿ?

ಉ. * ಬೇಸಿಗೆ ಕಾಲ – ಮಾರ್ಚ್‌ನಿಂದ ಮೇ ವರೆಗೆ

* ನೈರುತ್ಯ ಮಾನ್ಸೂನ್ ಮಾರುತಗಳ ಕಾಲ ಅಥವಾ ಮುಂಗಾರು ಮಳೆಗಾಲ – ಜೂನ್‌ನಿಂದ ಸೆಪ್ಟೆಂಬರ್ ವರೆಗೆ.

* ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು ಮಳೆಗಾಲ – ಅಕ್ಟೋಬರ್‌ನಿಂದ ನವ್ಹೆಂಬರ್.

* ಚಳಿಗಾಲ=ಡಿಸೆಂಬರ್–ಫೆಬ್ರವರಿವರೆಗೆ

12. ಭಾರತದ ವ್ಯವಸಾಯವು ಮಾನ್ಸೂನ್ ಮಳೆಯೊಡನೆ ಆಡುವ ಜುಜಾಟವಾಗಿದೆ ಹೇಗೆ?

ಉ. * ಭಾರತ ವ್ಯವಸಾಯ ಪ್ರಧಾನರಾಷ್ಟ್ರ.

* ನೈರುತ್ಯ ಮಾನ್ಸೂನ್ ಮಳೆ ಸರಿಯಾದ ಸಮಯಕ್ಕೆ ಬಂದರೆ ಉತ್ತಮ ಫಸಲು.

* ಮಳೆ ವಿಫಲವಾದರೆ ಬರಗಾಲ.

* ಅತಿ ಹೆಚ್ಚಾದ ಮಳೆ ಬಂದರೆ ಪ್ರವಾಹ ಉಂಟಾಗಿ ಬೆಳೆಹಾನಿ ಮತ್ತು ಆಸ್ತಿ, ಪಾಸ್ತಿ, ಪ್ರಾಣಹಾನಿ.

13. ಭಾರತದಲ್ಲಿ ಕಂಡು ಬರುವ ಮಣ್ಣಿನ ಪ್ರಮುಖ ವಿಧಗಳನ್ನು ಹೆಸರಿಸಿರಿ.

ಉ. * ಮೆಕ್ಕಲು ಮಣ್ಣು * ಕಪ್ಪು ಮಣ್ಣು * ಕೆಂಪು ಮಣ್ಣು

* ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು * ಪರ್ವತ ಮಣ್ಣು

* ಮರುಭೂಮಿ ಮಣ್ಣು.

14. ಮಣ್ಣನ್ನು ಸಂರಕ್ಷಿಸುವ ವಿಧಾನಗಳಾವುವು?

ಉ. * ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.

* ಅಡ್ಡಬದುಗಳನ್ನು ನಿರ್ಮಿಸುವುದು.

* ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.

* ಅರಣ್ಯ ನಾಶ ತಡೆಗಟ್ಟುವುದು.

* ಹೆಚ್ಚು ಅರಣ್ಯ ಬೆಳೆಸಲು ಪ್ರೋತ್ಸಾಹಿಸುವುದು.

* ಪ್ರಾಣಿಗಳ ಮೇಯಿಸುವಿಕೆಯನ್ನು ತಡೆಗಟ್ಟುವುದು.

* ನೀರಿನ ಸಮರ್ಪಕ ಬಳಕೆ

* ಚೆಕ್ ಡ್ಯಾಂಗಳ ನಿರ್ಮಾಣ

15. ಮಣ್ಣಿನ ಸವೆತಕ್ಕೆ ಕಾರಣಗಳೇನು?

ಉ. * ಅರಣ್ಯನಾಶ * ಪ್ರಾಣಿಗಳ ಅತಿಯಾದ ಮೇಯಿಸುವಿಕೆ.

* ಅವೈಜ್ಞಾನಿಕ ಬೇಸಾಯ * ಅಧಿಕನೀರಿನ ಬಳಕೆ

* ಇಟ್ಟಿಗೆ ಹೆಂಚು ಮತ್ತು ಮಡಿಕೆ ಇತ್ಯಾದಿಗಳ ತಯಾರಿಕೆಯಿಂದ ಮೇಲ್ಪದರದ ಮಣ್ಣಿನ ನಾಶ.

## ಅಧ್ಯಾಯ–5 ಭಾರತದ ಅರಣ್ಯಗಳು

16. ಅರಣ್ಯ ಸಂರಕ್ಷಣೆಯ ಕ್ರಮಗಳನ್ನು ಬರೆಯಿರಿ.

ಉ. * ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.

* ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.

* ಸಸಿಗಳನ್ನು ನೆಡುವುದು.

* ಕಾನೂನು ಬಾಹಿರವಾಗಿ ಮರಕಡಿಯುವುದನ್ನು ನಿಯಂತ್ರಿಸುವುದು.

* ಪ್ರಾಣಿಗಳ ಮೇಯುವಿಕೆ ನಿಯಂತ್ರಿಸುವುದು.

* ಸಾಮಾಜಿಕ ಅರಣ್ಯ ಯೋಜನೆ ಜಾರಿ (ಯಾವುದಾದರೂ 4 ಅಂಶಗಳು).

* ಅರಣ್ಯಗಳ ಪ್ರಾಮುಖ್ಯತೆ ಬಗ್ಗೆ ತಿಳುವಳಿಕೆ ಮೂಡಿಸುವುದು.

17. ಭಾರತದ ಯಾವುದಾದರೂ ನಾಲ್ಕು ಜೈವಿಕವಲಯಗಳನ್ನು ಹೆಸರಿಸಿ.

ಉ. * ನೀಲಗಿರಿ * ನಂದಾದೇವಿ * ನೋಕ್ರೇಕ್ * ಗ್ರೇಟ್ ನಿಕೋಬಾರ್

* ಸಿಮಿಲಿಫಾಲ್ * ಪನ್ನಾ * ಶೇಷಾಚಲಂ

18. ಸ್ವಾಭಾವಿಕ ಸಸ್ಯವರ್ಗದ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು?

ಉ. * ಉಷ್ಣಾಂಶ * ಮಳೆ * ಭೂಸ್ವರೂಪ * ಮಣ್ಣು

## ಅಧ್ಯಾಯ –6 ಜಲಸಂಪನ್ಮೂಲಗಳು

19. ಕರ್ನಾಟಕದ ಜಲವಿದ್ಯುತ್ ಯೋಜನೆಗಳನ್ನು ಹೆಸರಿಸಿ.

ಉ. ಶಿವನಸಮುದ್ರ ತುಂಗಭದ್ರಾ, ಜೋಗ, ಕಾಳಿ, ಭದ್ರಾ, ಕೃಷ್ಣಾ ಮೇಲ್ದಂಡೆ ಯೋಜನೆ ಮುಂತಾದವು.

20. ವಿವಿದೋದ್ದೇಶ ನದಿಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳೇನು?

ಉ. * ನೀರಾವರಿ ಸೌಲಭ್ಯ * ಜಲವಿದ್ಯುತ್

* ಪ್ರವಾಹ ನಿಯಂತ್ರಣ * ನೌಕಾಯಾನದ ಸೌಲಭ್ಯ* ಗೃಹ ಬಳಕೆ

* ಕೈಗಾರಿಕೆಗಳಿಗೆ ನೀರು ಪೂರೈಕೆ * ಮಣ್ಣಿನ ಸವಕಳಿ ನಿಯಂತ್ರಣ

* ಮೀನುಗಾರಿಕೆ * ಅರಣ್ಯ ಸಂಪತ್ತಿನ ಅಭಿವೃದ್ಧಿ.

21. ಭಾರತದಲ್ಲಿ ಬಾವಿ ನೀರಾವರಿಯ ಪ್ರಾಮುಖ್ಯತೆಯನ್ನು ತಿಳಿಸಿ.

ಉ. * ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಹೆಚ್ಚು ಉಪಯುಕ್ತ.

* ಬಾವಿಯ ನಿರ್ಮಾಣ ಮತ್ತು ನಿರ್ವಹಣೆ ಸುಲಭ.

* ಕೆರೆ, ಕಾಲುವೆ, ನೀರಾವರಿಗಳಿಲ್ಲದ ಕಡೆಯಲ್ಲಿ ಬಾವಿ ನೀರಾವರಿ ಅವಶ್ಯಕ.

20. ಪ್ರವಾಹಕಾಲುವೆ ಮತ್ತು ಸಾರ್ವಕಾಲಿಕ ಕಾಲುವೆಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

**ಉ.**

| ಪ್ರವಾಹ ಕಾಲುವೆ | ಸಾರ್ವಕಾಲಿಕ ಕಾಲುವೆ |
| --- | --- |
| * ಅಣೆಕಟ್ಟುಗಳನ್ನು ಕಟ್ಟಲಾಗುವುದಿಲ್ಲ.<br>* ನದಿಗಳಿಂದ ನೇರವಾಗಿ ಕಾಲುವೆಗಳನ್ನು ತೋಡಲಾಗುವುದು.<br>* ನದಿಗಳು ತುಂಬಿ ಹರಿಯುವಾಗ ಕಾಲುವೆಗಳ ಮೂಲಕ ನೀರು ಹರಿಯುವುದು. | * ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಲಾಗುತ್ತದೆ.<br>* ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಲಾಗುವುದು.<br>* ಜಲಾಶಯದಲ್ಲಿ ನೀರನ್ನು ಸಂಗ್ರಹಿಸಿ ಕಾಲುವೆಗಳ ಮೂಲಕ ಕೃಷಿ ಭೂಮಿಗೆ ನೀರು ಪೂರೈಕೆ. |

## ಅಧ್ಯಾಯ–7 ಭಾರತದ ಭೂಬಳಕೆ ಮತ್ತು ವ್ಯವಸಾಯ

23. ವ್ಯವಸಾಯದ ವಿಧಗಳು ಯಾವುವು?

ಉ. * ಸಾಂದ್ರ ಬೇಸಾಯ.
* ಜೀವನಾಧಾರ ಬೇಸಾಯ.
* ವಾಣಿಜ್ಯ ಬೇಸಾಯ.
* ಮಿಶ್ರ ಬೇಸಾಯ
* ತೋಟಗಾರಿಕೆ ಬೇಸಾಯ.

24. ರಬಿ ಮತ್ತು ಖಾರೀಫ್ ಬೇಸಾಯಗಳನ್ನು ವ್ಯತ್ಯಾಸಿಸಿ.

ಉ.

| ರಬಿ | ಖಾರೀಫ್ |
|---|---|
| * ಚಳಿಗಾಲದ ಬೇಸಾಯ.<br>* ಗೋಧಿ ಬೆಳೆಗೆ ಹೆಚ್ಚು ಸೂಕ್ತ<br>* ಅಕ್ಟೋಬರ್ ನವೆಂಬರ್‌ನಲ್ಲಿ ಬಿತ್ತನೆ | * ನೈರುತ್ಯ ಮಾನ್ಸೂನ್ ಮಾರುತಗಳ ಅವಧಿಯ ಬೇಸಾಯ.<br>* ಭತ್ತ, ರಾಗಿ, ಜೋಳ ಎಣ್ಣೆಕಾಳು ಬೆಳೆಗಳಿಗೆ ಸೂಕ್ತ.<br>* ಜೂನ್, ಜುಲೈನಲ್ಲಿ ಬಿತ್ತನೆ. |

25. ಭತ್ತದ ಬೆಳೆಗೆ ಅವಶ್ಯಕವಾದ ಭೌಗೋಳಿಕ ಅಂಶಗಳು ಯಾವುವು?

ಉ. * $25C^0$ ಉಷ್ಣತೆ
* 100 ರಿಂದ 200cm ಮಳೆ.
* ಫಲವತ್ತಾದ ಮೆಕ್ಕಲು ಮಣ್ಣು ಮತ್ತು ಜೇಡಿಮಣ್ಣು.
* ಸಮತಟ್ಟಾದ ಭೂಮಿ
* ಪೈರಿನ ಕೆಳಗೆ ನೀರು ನಿಂತಿರಬೇಕು.
* ಕೆಲವು ಕಡೆ ನೀರಾವರಿ ಅವಶ್ಯಕ.

26. ಸ್ಥಿರ ಬೇಸಾಯ ಮತ್ತು ಸ್ಥಳಾಂತರ ಬೇಸಾಯಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.

ಉ.

| ಸ್ಥಿರ ಬೇಸಾಯ | ಸ್ಥಳಾಂತರ ಬೇಸಾಯ |
|---|---|
| * ಒಂದೇ ಸ್ಥಳದಲ್ಲಿ ನೆಲೆಸಿ ಬೇಸಾಯ ಮಾಡುತ್ತಾರೆ.<br>* ಈ ಬೇಸಾಯ ಸಾಂಪ್ರಾದಾಯಿಕವಾಗಿದೆ. | * ಒಂದೇ ಸ್ಥಳದಲ್ಲಿ ಸ್ಥಿರವಾಗಿ ನೆಲೆಸುವುದಿಲ್ಲ ಮಣ್ಣಿನ ಫಲವತ್ತತೆ ಕಡಿಮೆಯಾದಾಗ ಬೇರೆ ಕಡೆಗೆ ವಲಸೆ ಹೋಗುತ್ತಾರೆ.<br>* ಅರಣ್ಯ ಪ್ರದೇಶಗಳಲ್ಲಿ ರೂಢಿಯಲ್ಲಿತ್ತು. |

27. ಗೋಧಿ ಬೆಳೆಗೆ ಬೇಕಾದ ಭೌಗೋಳಿಕ ಅಂಶಗಳು ಯಾವುವು?

ಉ. * $10^0$ ರಿಂದ $15^0$ C ಉಷ್ಣತೆ.
* 50 ರಿಂದ 70 ಸೆ.ಮಿ ಮಳೆ.
* ಮರಳು ಮಿಶ್ರಿತ ಜೇಡಿ ಮಣ್ಣು ಮತ್ತು ಕಪ್ಪು ಮಣ್ಣು.

28. ಹತ್ತಿ ಬೆಳೆಗೆ ಬೇಕಾದ ಭೌಗೋಳಿಕ ಅಂಶಗಳು ಯಾವುವು?

ಉ. * $20^0$ ರಿಂದ $25^0C$ ಉಷ್ಣತೆ

* 75 ರಿಂದ 150cm ಮಳೆ.
* ಕಪ್ಪು ಮಣ್ಣು ಮತ್ತು ಮೆಕ್ಕಲು ಮಣ್ಣು.
* ತೇವಾಂಶವನ್ನು ಹಿಡಿದಿಟ್ಟು ಕೊಳ್ಳುವ ಮಣ್ಣು.

29. ಕಬ್ಬು ಬೆಳೆಗೆ ಬೇಕಾದ ಭೌಗೋಳಿಕ ಅಂಶಗಳು ಯಾವುವು?

ಉ. * $21^0$ ರಿಂದ $26^0$ C ಉಷ್ಣಾಂಶ.

* 100 ರಿಂದ 150 ಸೆ.ಮಿ ವಾರ್ಷಿಕ ಮಳೆ.
* ಮೆಕ್ಕಲು ಮಣ್ಣು ಮತ್ತು ಕಪ್ಪು ಮಣ್ಣು.
* ಉಷ್ಣಾಂಶ ಮತ್ತು ತೇವಾಂಶ ಹೊಂದಿರುವ ವಾಯುಗುಣ.

30. ಚಹಾ ಬೆಳೆಗೆ ಅವಶ್ಯವಿರುವ ಭೌಗೋಳಿಕ ಅಂಶಗಳು ಯಾವುವು?

ಉ. * $21^0C$ ಉಷ್ಣಾಂಶ.

* 150 ರಿಂದ 200cm ವಾರ್ಷಿಕ ಮಳೆ.
* ಜೈವಿಕಾಂಶ ಉಷ್ಣ ನೀರು ಸುಲಭವಾಗಿ ಬಸಿದು ಹೋಗುವಂತಹ ಮರಳು ಮಿಶ್ರಿತ ಜೇಡಿಮಣ್ಣು.

31. ವ್ಯವಸಾಯದ ಪ್ರಾಮುಖ್ಯತೆಯನ್ನು ತಿಳಿಸಿ.

ಉ. * ಜನರಿಗೆ ಆಹಾರ ಧಾನ್ಯಗಳ ಪೂರೈಕೆ.

* ಉದ್ಯೋಗವಕಾಶಗಳ ನೀಡಿಕೆ.
* ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳ ಪೂರೈಕೆ.
* ಸಾರಿಗೆ ವ್ಯಾಪಾರದಂತಹ ತೃತೀಯ ಉದ್ಯೋಗಗಳ ಪೋಷಣೆ.

## ಅಧ್ಯಾಯ – 8 ಖನಿಜ ಮತ್ತು ಶಕ್ತಿ ಸಂಪನ್ಮೂಲ

32. ಭಾರತದಲ್ಲಿ ದೊರೆಯುವ ಪ್ರಮುಖ ಖನಿಜಗಳಾವುವು?

ಉ. ಕಬ್ಬಿಣ, ಮ್ಯಾಂಗನೀಸ್, ಬಾಕ್ಸೈಟ್, ಅಭ್ರಕ, ಚಿನ್ನ, ಕಲ್ಲಿದ್ದಲು, ಪೆಟ್ರೋಲಿಯಂ, ಅಣುಖನಿಜಗಳು ಇತ್ಯಾದಿ.

33. ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ.

ಉ. ಸೌರಶಕ್ತಿ, ಗಾಳಿಶಕ್ತಿ, ಭೂಅಂತರಾಳದ ಶಕ್ತಿ, ಜೈವಿಕ ಅನಿಲಶಕ್ತಿ, ಉಬ್ಬರವಿಳಿತ ಶಕ್ತಿ, ಇತ್ಯಾದಿ.

34. ಕಬ್ಬಿಣದ ಅದಿರಿನ ನಿಕ್ಷೇಪ ಹೊಂದಿರು ಕರ್ನಾಟಕದ ಸ್ಥಳಗಳಾವುವು?

ಉ. * ಕೆಮ್ಮಣ್ಣುಗುಂಡಿ, * ಹೊಸಪೇಟೆ * ಸೊಂಡೂರು * ಕುದುರೆಮುಖ

35. ಮ್ಯಾಂಗನೀಸ್‌ನ ಮುಖ್ಯ ಅದಿರುಗಳನ್ನು ಹೆಸರಿಸಿ.

ಉ. * ಪೈರೋಲೋಸೈಟ್ * ಸೈಲೋ ಮೆಲೆನ್ * ಬ್ರಾನೈಟ್ * ಹೋಲ್ಯಾಂಡೈಟ್ * ಮ್ಯಾಗ್ನಟೈಟ್.

36. ಅಭ್ರಕದ ವಿಧಗಳಾವುವು?

ಉ. * ಮಸ್ಕೊವೈಟ್ (ಶ್ವೇತ ಅಭ್ರಕ) * ಬಯೋಟೈಟ್ (ಕಪ್ಪು ಅಭ್ರಕ)

* ಫ್ಲುಗೋವೈಟ್ (ಕಂದು ಅಭ್ರಕ)

37. ಭಾರತದಲ್ಲಿ ಕಂಡ ಬರುವ ಅಣು ಖನಿಜಗಳಾವುವು?

ಉ. * ಯುರೇನಿಯಂ * ಥೋರಿಯಂ * ಬೆರಿಲಿಯಂ * ಲಿಥಿಯಂ.

38. ಅಭ್ರಕದ ಪ್ರಾಮುಖ್ಯತೆಯನ್ನು ತಿಳಿಸಿ.

ಉ. * ಟೆಲಿಫೋನ್ ಮತ್ತು ಟೆಲಿಗ್ರಾಫ್ ಉಪಕರಣಗಳ ತಯಾರಿಕೆ.

* ಗಾಜು ತಯಾರಿಕೆ.

* ಬಣ್ಣ ವಾರ್ನಿಷ್ ತಯಾರಿಕೆ

* ರಾಸಾಯನಿಕ ಕೈಗಾರಿಕೆ.

39. ಜಿ.ಪಿ.ಎಸ್ ವ್ಯವಸ್ಥೆಯ ಉಪಯೋಗಗಳಾವುವು?

ಉ. * ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕಂಡು ಕೊಳ್ಳಲು ಸಹಾಯಕ.

* ಅರಣ್ಯ ಹಾಗೂ ಪರ್ವತಚಾರಣ ಮಾಡುವವರಿಗೆ ಸಹಾಯಕ.

* ಸೈನಿಕರು, ವೈಮಾನಿಕರು, ಮೀನುಗಾರರು, ನಾವಿಕರಿಗೆ ಸಹಾಯಕ.

* ಸಾರಿಗೆ ಸಿಬ್ಬಂದಿ ನಿರ್ವಹಣೆಗೆ ಸಹಾಯಕ.

40. ದೂರ ಸಂವೇದಿ ತಂತ್ರಜ್ಞಾನದ ನಾಲ್ಕು ಉಪಯೋಗ ತಿಳಿಸಿ.

ಉ. * ನಿರ್ದಿಷ್ಟ ಅವಧಿಯ ನೈಜ ಹಾಗು ಸ್ಪಷ್ಟ ಮಾಹಿತಿಲಭ್ಯ.

* ಶೀಘ್ರ ಹಾಗು ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣಾ ವಿಧಾನ.

* ಕಂಪ್ಯೂಟರ್‌ಗಳ ಮೂಲಕ ಮಾಹಿತಿಗಳ ಸುಲಭ ವಿಶ್ಲೇಷಣೆ.

* ಹವಾಮಾನದ ತೊಂದರೆ ಹಾಗು ಭೂಮೇಲ್ಮೈನ ಅಡಚಣೆಗಳಿದ್ದರೂ ಉಪಗ್ರಹಗಳಿಂದ ಚಿತ್ರಗಳನ್ನು ಪಡೆಯಬಹುದು.

41. ಚಂಡಮಾರುತದ ನಾಲ್ಕು ಪರಿಣಾಮಗಳನ್ನು ತಿಳಿಸಿ.

ಉ. * ಅಪಾರ ಸಾವು ನೋವು.

* ಒಳನಾಡಿನ ಜಲರಾಶಿಗಳು ಲವಣಯುಕ್ತ.

* ಬೆಳೆಗಳ ನಾಶ.

* ಜನಜೀವನದಲ್ಲಿ ಸಂಪೂರ್ಣ ಮಾರ್ಪಾಡು.

42. ಪ್ರವಾಹಗಳುಂಟಾಗಲು ಕಾರಣಗಳನ್ನು ತಿಳಿಸಿ.

ಉ. * ಅತ್ಯಧಿಕ ಮಳೆ.

* ನದಿ ಪಾತ್ರಗಳಲ್ಲಿ ಹೂಳು ತುಂಬುವುದು.

* ಸಮುದ್ರಗಳಲ್ಲಿ ಭೂಕಂಪ ಉಂಟಾಗುವುದು.

* ಅರಣ್ಯನಾಶ.

43. ಪ್ರವಾಹಗಳಿಂದಾಗುವ ಪರಿಣಾಮಗಳನ್ನು ತಿಳಿಸಿ.
ಉ. * ಜನರ ಪ್ರಾಣಿ, ಆಸ್ತಿ ಹಾಗೂ ಬೆಳೆಗಳ ಹಾನಿ.
* ಮಣ್ಣಿನ ಸವೆತ ಹಾಗೂ ಮರಗಿಡಗಳ ನಾಶ.
* ದೂರ ಸಂಪರ್ಕ, ವಿದ್ಯುತ್ ಪೂರೈಕೆ, ಸಾರಿಗೆ ಸೌಲಭ್ಯಗಳ ಅಸ್ತವ್ಯಸ್ತ.
* ಅನೇಕ ರೋಗಗಳ ಉಲ್ಬಣ.
44. ಪ್ರವಾಹ ನಿಯಂತ್ರಣ ಕ್ರಮಗಳನ್ನು ತಿಳಿಸಿ.
ಉ. * ನದಿಗಳ ಹೂಳು ತೆಗೆಯುವುದು.
* ಅಣೆಕಟ್ಟು ನಿರ್ಮಿಸುವುದು.
* ಜಲಾನಯನ ಪ್ರದೇಶಗಳಲ್ಲಿ ಅರಣ್ಯ ಅಭಿವೃದ್ಧಿ.
* ನದಿ ಇಕ್ಕೆಲಗಳಲ್ಲಿ ತಡೆಗೋಡೆ ನಿರ್ಮಾಣ.
45. ಭೂಸವೆತಕ್ಕೆ ಕಾರಣಗಳನ್ನು ತಿಳಿಸಿ.
ಉ. * ಅರಣ್ಯನಾಶ.
* ಗಣಿಗಾರಿಕೆ.
* ಪರ್ವತವಲಯಗಳಲ್ಲಿ ರಸ್ತೆ, ರೈಲು ಮಾರ್ಗಗಳ ನಿರ್ಮಾಣ.
* ಭೂ ಮೇಲ್ಮೈಯಲ್ಲಿ ಸಡಿಲವಾದ ಮಣ್ಣಿನ ಪದರವಿರುವುದು.
46. ಭೂಕಂಪದ ಪರಿಣಾಮಗಳನ್ನು ತಿಳಿಸಿ.
ಉ. * ಸಾರಿಗೆ ಸಂಚಾರಕ್ಕೆ ಅಡ್ಡಿ.
* ಜೀವಹಾನಿ ಮತ್ತು ಆಸ್ತಿ ಹಾನಿ.
* ಚಿಕ್ಕನದಿಗಳು ಹರಿಯಲು ಅಡ್ಡಿ.
* ಸಸ್ಯವರ್ಗಗಳು ಭೂಗತ.
47. ಕಡಲಕೊರೆತದ ಪರಿಣಾಮಗಳನ್ನು ತಿಳಿಸಿ.
ಉ. * ಭೂಪ್ರದೇಶ ಸಮುದ್ರದ ಪಾಲಾಗುವುದು.
* ಮನೆ, ರಸ್ತೆಗಳು ಮುಳುಗಿ ಅಪಾರ ನಷ್ಟ.
48. ಭೂಕಂಪ ಉಂಟಾಗಲು ಕಾರಣಗಳನ್ನು ತಿಳಿಸಿ.
ಉ. * ಗಣಿಗಾರಿಕೆ.
* ಅಣೆಕಟ್ಟುಗಳ ನಿರ್ಮಾಣ.
* ಅತಿಯಾದ ನಗರೀಕರಣ.
* ಅರಣ್ಯನಾಶ.
49. ಭೂಕಂಪದ ಪರಿಣಾಮಗಳನ್ನು ತಿಳಿಸಿ.
ಉ. * ಅಪಾರ ಸಾವು ನೋವು.
* ಸಾರಿಗೆ ಸಂಪರ್ಕದ ಕಡಿತ.
* ನದಿಗಳ ದಿಕ್ಕು ಬದಲಾಗುವುದು.
* ಅನೇಕ ರೋಗಗಳು ಹರಡುವುದು

50. ಭೂಕಂಪದ ವಲಯಗಳಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

ಉ. * ಬಹುಮಹಡಿ ಕಟ್ಟಡಗಳ ನಿರ್ಮಾಣ ನಿಷೇಧ.

* ಹಗುರವಸ್ತುಗಳಿಂದ ಕಟ್ಟಡ ನಿರ್ಮಾಣ.

* ಕಟ್ಟಡಗಳ ಸ್ಥಿತಿ ಸ್ಥಾಪಕತ್ವ ಗುಣ ಹೊಂದುವಂತೆ ನಿರ್ಮಿಸುವುದು.

* ಭೂಕಂಪ ಸಂಭವಿಸಿದಾಗ ವಿದ್ಯುತ್ ಕಡಿತಗೊಳಿಸುವುದು.

51. ಚಂಡಮಾರುತಗಳ ಹಾನಿ ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿ.

ಉ. * ತಗ್ಗು ಪ್ರದೇಶದ ಜನರನ್ನು ಸ್ಥಳಾಂತರಿಸುವುದು.

* ಸಮೂಹ ಮಾಧ್ಯಮಗಳು ಮೂಲಕ ಜನರಿಗೆ ಮಾಹಿತಿ ನೀಡುವುದು.

* ರೈಲು–ಬಸ್ಸು ಮಾರ್ಗಗಳನ್ನು ಚಂಡಮಾರುತವಲಯದಿಂದ ಬದಲಾಯಿಸುವುದು.

* ಅಗತ್ಯ ಔಷಧ, ನೀರು, ಉಡುಪು, ದೋಣಿ, ಹೆಲಿಕಾಪ್ಟರ್ ಸೇನೆಯನ್ನು ಸಿದ್ಧಗೊಳಿಸುವುದು.

52. ಕಡಲಕೊರೆತ ತಡೆಗಟ್ಟಲು ಪರಿಹಾರ ಕ್ರಮಗಳನ್ನು ತಿಳಿಸಿರಿ.

ಉ. * ತೀರ ಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಯಂತ್ರಿಸುವುದು.

* ತೀರ ಪ್ರದೇಶಗಳಲ್ಲಿ ಬಂಡೆಗಳ ರಾಶಿ ಹಾಕುವುದು.

* ತೀರಗಳಲ್ಲಿ ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದು.

* ಅಲೆಗಳು ಪ್ರಬಲವಾಗಿರುವಲ್ಲಿ ತಡೆಗೋಡೆ ನಿರ್ಮಿಸುವುದು.

53. ಭೂಕಂಪಗಳು ಸಂಭವಿಸಲು ಮಾನವರೂ ಕಾರಣ. ಈ ಹೇಳಿಕೆಯನ್ನು ಸಮರ್ಥಿಸಿ.

ಉ. * ಅತಿಯಾದ ನಗರೀಕರಣ.

* ಅರಣ್ಯನಾಶ.

* ಜಲಾಶಯಗಳ ನಿರ್ಮಾಣ.

* ಗಣಿಗಾರಿಕೆ

## ಅಧ್ಯಾಯ – 13 ಭಾರತದ ಜನಸಂಖ್ಯೆ

54. ಜನಸಂಖ್ಯಾ ಹೆಚ್ಚಳಕ್ಕೆ ಕಾರಣಗಳನ್ನು ತಿಳಿಸಿ.

ಉ. * ಬಡತನ * ಅನಕ್ಷರತೆ * ಮೂಢನಂಬಿಕೆ * ನಿರುದ್ಯೋಗ

55. ವಲಸೆಗೆ ಕಾರಣಗಳನ್ನು ತಿಳಿಸಿ.

ಉ. * ನೌಕರಿ ಉದ್ದೇಶ * ವ್ಯಾಪಾರದ ಉದ್ದೇಶ * ಉತ್ತಮ ಜೀವನ

* ಸಾಮಾಜಿಕ ಭದ್ರತೆ * ಉತ್ತಮ ಆರೋಗ್ಯ.

56. ಜನಸಂಖ್ಯಾ ನಿಯಂತ್ರಣವನ್ನು ಸರ್ಕಾರ ಮಾಡಲು ಕೈಗೊಂಡಿರುವ ಕ್ರಮಗಳಾವುವು?

ಉ. * ಕುಟುಂಬ ಕಲ್ಯಾಣ ಯೋಜನೆ * ಮಹಿಳಾ ಕಲ್ಯಾಣ ಯೋಜನೆ.

* ಶಿಶು ಮರಣ ತಡೆಗಟ್ಟುವುದು * ಕ್ಷೇತ್ರಯೋಜನೆ

* ಪ್ರಚಾರ ಮತ್ತು ಜಾಹೀರಾತು.

57. ವಲಸೆಯಿಂದ ಉಂಟಾಗುವ ಯಾವುದಾದರೂ ನಾಲ್ಕು ಸಮಸ್ಯೆಗಳನ್ನು ತಿಳಿಸಿ.

ಉ. * ವಸತಿ ಸಮಸ್ಯೆಯಿಂದ ಕೊಳಗೇರಿಗಳ ನಿರ್ಮಾಣ.

* ಜನಸಾಂದ್ರತೆ ಹೆಚ್ಚಳ.

* ಉದ್ಯೋಗಾವಕಾಶಗಳ ಮೇಲೆ ಪರಿಣಾಮ.

* ನೀರು, ವಿದ್ಯುತ್, ರಸ್ತೆ, ವಿದ್ಯಾಭ್ಯಾಸ, ಆಸ್ಪತ್ರೆ ಮುಂತಾದವುಗಳ ಮೇಲೆ ಒತ್ತಡ.

58. ವಲಸೆಯ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

ಉ. * ಕೈಗಾರಿಕಾವಲಯಗಳನ್ನು ನಗರಗಳ ಹೊರಗೆ ನಿರ್ಮಿಸುವುದು.

* ಗ್ರಾಮೀಣ ಕಸುಬು–ಉಪಕಸುಬುಗಳಿಗೆ ಹೆಚ್ಚಿನ ಆದ್ಯತೆ.

* ನಗರ ಮತ್ತು ಸುತ್ತಲಿನ ಗ್ರಾಮೀಣ ವಸತಿಗಳ ನಡುವೆ ಸಾರಿಗೆ ಸೌಲಭ್ಯ ವಿಸ್ತರಣೆ.

* ನಗರಗಳಿಗೆ ಸಮೀಪದಲ್ಲಿಯೇ ಹೊರವಲಯದ ಅಂಚುಗಳಲ್ಲಿ ಉಪನಗರಗಳನ್ನು

## ದಾರಿದೀಪ ಪಾಸಿಂಗ್–ಪ್ಯಾಕೇಜ್
## ಅರ್ಥಶಾಸ್ತ್ರ

### ಅಧ್ಯಾಯ–1 ಅಭಿವೃದ್ಧಿ

**I. ಈ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಜನರು ಗುಣಮಟ್ಟದ ಜೀವನ ನಡೆಸಲು ಯಾವ ಯಾವ ಸೌಲಭ್ಯಗಳು ದೊರೆಯಬೇಕಾಗಿದೆ?

ಉ. * ಪೌಷ್ಟಿಕ ಆಹಾರ, ಸಾಕಷ್ಟು ಬಟ್ಟೆ, ವಸತಿ.
* ಗುಣಾತ್ಮಕ ಶಿಕ್ಷಣ, ಆರೋಗ್ಯ.
* ಶುದ್ಧವಾದ ನೀರು, ಗಾಳಿ, ಶೌಚಾಲಯ ವ್ಯವಸ್ಥೆ, ಉತ್ತಮ ಪರಿಸರ.
* ನಿಷ್ಪಕ್ಷಪಾತ ನ್ಯಾಯಿಕ ವ್ಯವಸ್ಥೆ.

2. ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು?

ಉ. * ಉತ್ಪಾದನೆ ಮತ್ತು ಆದಾಯ ಕಡಿಮೆ.
* ಕನಿಷ್ಠ ಮೂಲಭೂತ ಅವಶ್ಯಕತೆಗಳ ಕೊರತೆ.
* ಅನಕ್ಷರತೆ ಮತ್ತು ಮೂಢನಂಬಿಕೆಗಳು.
* ಅನಾರೋಗ್ಯ ಹಾಗು ನಾಗರಿಕ ಸೌಲಭ್ಯಗಳಿರುವುದಿಲ್ಲ.

3. ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ. ಹೇಗೆ?

ಉ. * ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಜನಸಂಖ್ಯೆಯಲ್ಲಿ ಹೆಚ್ಚಳವಾದರೆ, ಆರ್ಥಿಕ ಅಭಿವೃದ್ಧಿ ಸಾಧ್ಯವಾಗುವುದಿಲ್ಲ.
* ಬೇರೆ ಬೇರೆ ಪ್ರಮಾಣದ ಜನಸಂಖ್ಯೆ ಹೊಂದಿರುವ ದೇಶಗಳ ಅಭಿವೃದ್ಧಿಯನ್ನು ರಾಷ್ಟ್ರೀಯ ಆದಾಯದಿಂದ ಅಳೆಯುವುದು ಸಮಂಜಸವಲ್ಲ.

4. ಮಾನವ ಅಭಿವೃದ್ಧಿಯ ಸೂಚಕಗಳಾವುವು?

ಉ. 1. ನಿರೀಕ್ಷಿತ ಜೀವಿತಾವಧಿ
2. ಶೈಕ್ಷಣಿಕ ಸಾಧನೆ
3. ಜೀವನ ಮಟ್ಟ

5. "ಮಹಿಳಾ ಸಬಲೀಕರಣ"ದ ಅರ್ಥ ತಿಳಿಸಿ.

ಉ. ಪುರುಷರಷ್ಟೇ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದು.

### ಅಧ್ಯಾಯ – 2 ಅರ್ಥ ವ್ಯವಸ್ಥೆ ಮತ್ತು ಸರ್ಕಾರ

6. ಆರ್ಥಿಕ ಯೋಜನೆಯ ಅರ್ಥ ತಿಳಿಸಿ.

ಉ. ಸರ್ಕಾರವು ಕೆಲವು ನಿರ್ದಿಷ್ಟ ಧ್ಯೇಯೋದ್ದೇಶಗಳೊಂದಿಗೆ ದೇಶದಲ್ಲಿರುವ ಸಂಪನ್ಮೂಲಗಳನ್ನು

ಸಮರ್ಥವಾಗಿ ಬಳಸಿಕೊಂಡು, ಜನರ ಸುಖವನ್ನು ಗರಿಷ್ಟ ಮಟ್ಟಕ್ಕೆ ಹೆಚ್ಚಿಸಲು ಪ್ರಜ್ಞಾಪೂರ್ವಕವಾಗಿ ಮತ್ತು ವಿವೇಕಯುತವಾಗಿ ಜಾರಿಗೊಳಿಸುವ ಪ್ರಕ್ರಿಯೆ.

7. ಪಂಚವಾರ್ಷಿಕ ಯೋಜನೆಯ ಉದ್ದೇಶಗಳೇನು?

ಉ. 1. ಉತ್ಪಾದನೆಯನ್ನು ಗರಿಷ್ಟ ಮಟ್ಟಕ್ಕೆ ಹೆಚ್ಚಿಸುವುದು.
2. ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
3. ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
4. ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
5. ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು.

8. ಸರ್. ಎಂ. ವಿಶ್ವೇಶ್ವರಯ್ಯನವರನ್ನು "ಭಾರತದ ಆರ್ಥಿಕ ಯೋಜನೆಯ ಪಿತಾಮಹ" ಎಂದು ಕರೆಯುತ್ತಾರೆ. ಏಕೆ?

ಉ. * ಭಾರತದಲ್ಲಿ ಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿದವರು.
* "ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ" ಎಂಬ ಪುಸ್ತಕ ಪ್ರಕಟಿಸಿ ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆ ಅಗತ್ಯವನ್ನು ಒತ್ತಿ ಹೇಳಿದ್ದರಿಂದ ಸರ್ ಎಂ. ವಿಶ್ವೇಶ್ವರಯ್ಯನವರನ್ನು "ಭಾರತದ ಆರ್ಥಿಕ ಯೋಜನೆಯ ಪಿತಾಮಹ" ಎಂದು ಕರೆಯುತ್ತಾರೆ.

9. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವುವು?

ಉ. * ಹೆಚ್ಚು ಇಳುವರಿ ಕೊಡುವ ಬೀಜಗಳು * ರಾಸಾಯನಿಕ ಗೊಬ್ಬರ.
* ಕ್ರಿಮಿನಾಶಕಗಳ ಬಳಕೆ * ನೀರಾವರಿ ಸೌಲಭ್ಯಗಳ ವಿಸ್ತರಣೆ.

10. ಉದಾರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಗಳು ಭಾರತೀಯರ ಮೇಲೆ ಬೀರಿರುವ ದುಷ್ಪರಿಣಾಮಗಳೇನು?

ಉ. * ಮಧ್ಯಮ ಮತ್ತು ಸಣ್ಣಕೈಗಾರಿಕೆಗಳು ನಶಿಸುತ್ತಿವೆ
* ನಗರ–ಗ್ರಾಮೀಣ ಮತ್ತು ಬಡವ – ಬಲ್ಲಿದರ ನಡುವಿನ ಅಂತರ ಅಗಾಧವಾಗಿ ಹೆಚ್ಚತೊಡಗಿದೆ.
* ಕೃಷಿ ಸರಕುಗಳಿಗೆ ಸರಿಯಾದ ಬೆಲೆ ಸಿಗದೆ ರೈತರ ಆತ್ಮಹತ್ಯೆಗಳು ಹೆಚ್ಚಾಗಿವೆ.
* ಕಾರ್ಮಿಕರು ಅಭದ್ರತೆ ಎದುರಿಸುವಂತಾಗಿದೆ.

11. ಸರ್ಕಾರವು ಉದಾರೀಕರಣ ಪ್ರಕ್ರಿಯೆಯ ಅಡಿಯಲ್ಲಿ ಯಾವ ಕ್ರಮಗಳನ್ನು ಕೈಗೊಂಡಿದೆ?

ಉ. * ಜನರ ಆರ್ಥಿಕ ಚಟುವಟಿಕೆಗಳಲ್ಲಿ ಸರ್ಕಾರದ ಮಧ್ಯಪ್ರವೇಶ ಆದಷ್ಟು ಕಡಿಮೆಗೊಳಿಸಿದೆ.
* ಸರಕು–ಸೇವೆಗಳ ಉತ್ಪಾದನೆ ಮತ್ತು ಮಾರಾಟದಲ್ಲಿ ಸ್ಪರ್ಧೆಗೆ ಅವಕಾಶ ಮಾಡಿಕೊಟ್ಟಿದೆ.

# ವ್ಯವಹಾರ ಅಧ್ಯಯನ

## ಅಧ್ಯಾಯ–1 ಉದ್ಯಮಗಾರಿಕೆ

**I. ಈ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ಉದ್ಯಮಗಾರಿಕೆಯ ಲಕ್ಷಣಗಳನ್ನು ತಿಳಿಸಿರಿ.

ಉ. * ಗುಂಪುಕಟ್ಟುವುದು.
* ಸಮಸ್ಯೆಯ ಪರಿಹಾರ.
* ನಾಯಕತ್ವ.
* ಗುರಿಮುಟ್ಟುವಿಕೆ.

2. ಉದ್ಯಮಿಯ ಕಾರ್ಯಗಳನ್ನು ತಿಳಿಸಿರಿ.

ಉ. * ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುತ್ತಾನೆ.
* ವ್ಯಾಪಾರ ಚಟುವಟಿಕೆಗಳನ್ನು ಯೋಜನೆಗಳ ಮೂಲಕ ಪ್ರಾರಂಭಿಸುತ್ತಾರೆ.
* ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುತ್ತಾನೆ.
* ಹಣಕಾಸಿನ ಆಯವ್ಯಯವನ್ನು ನಿಭಾಯಿಸುತ್ತಾನೆ.

3. ವರ್ಗೀಸ್ ಕುರಿಯನ್‌ರವರನ್ನು "ಬಿಳಿಕ್ರಾಂತಿಯ ಪಿತಾಮಹ" ಎನ್ನಲು ಕಾರಣವೇನು?

ಉ. * ಆನಂದ್ ಹೈನುಗಾರಿಕೆಯನ್ನು ಆರಂಭಿಸಿ ಬೃಹತ್ ಸಂಸ್ಥೆಯಾಗಿ ಬೆಳೆಸಿದರು.
* ಆಮುಲ್ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆ ಇವರದೇ ಸಾಧನೆಯಾಗಿದೆ.
* ಹಾಲಿನ ಉತ್ಪಾದನೆ ಹೆಚ್ಚಿಸುವಲ್ಲಿ ಇವರ ಪಾತ್ರ ಹಿರಿದಾದುದು.

ಆದುದರಿಂದ ಇವರನ್ನು 'ಬಿಳಿಕ್ರಾಂತಿಯ ಪಿತಾಮಹ' ಎನ್ನುತ್ತಾರೆ.

4. ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಯಾವಯಾವ ಸೇವೆಗಳನ್ನು ಪಡೆಯಬಹುದು?

ಉ. * ಯಂತ್ರಗಳು ಮತ್ತು ಸಾಧನ ಸಲಕರಣೆಗಳ ಮಾಹಿತಿ.
* ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ.
* ಕಚ್ಚಾ ಪದಾರ್ಥಗಳ ಹಂಚಿಕೆ.
* ಹಣಕಾಸಿನ ನೆರವು
* ವಸ್ತುಗಳನ್ನು ರಫ್ತು ಮಾಡಲು ಸಹಾಯ ಮಾಡುವುದು.

5. ಸ್ವಯಂ ಉದ್ಯೋಗಕ್ಕಾಗಿ ಹಣಕಾಸಿನ ನೆರವು ನೀಡುವ ಸಂಸ್ಥೆಗಳಾವುವು?

ಉ. * ಆಮದು ಮತ್ತು ರಫ್ತು ಬ್ಯಾಂಕ್.
* ಭಾರತೀಯ ಜೀವ ವಿಮಾ ನಿಗಮ.
* ರಾಜ್ಯ ಹಣಕಾಸು ನಿಗಮಗಳು.
* ವಾಣಿಜ್ಯ ಮತ್ತು ಇತರೆ ಬ್ಯಾಂಕುಗಳು.

6. ಉದ್ಯಮಿಗಳ ಪ್ರಾಮುಖ್ಯತೆಯನ್ನು ತಿಳಿಸಿ. ಅಥವಾ ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪ್ರಾಮುಖ್ಯತೆಯನ್ನು ವಿವರಿಸಿ.

ಉ. * ಜನರ ಅನುಪಯುಕ್ತ ಉಳಿತಾಯವನ್ನು ಬಂಡವಾಳವಾಗಿ ಬಳಸಿ ಉದ್ದಿಮೆ ಆರಂಭಿಸುತ್ತಾರೆ.
* ಉದ್ಯೋಗಗಳನ್ನು ಒದಗಿಸುತ್ತಾರೆ.
* ರಾಷ್ಟ್ರೀಯ ವರಮಾನ ಮತ್ತು ತಲಾವರಮಾನವನ್ನು ಹೆಚ್ಚಿಸುತ್ತಾರೆ.
* ದೇಶದ ರಫ್ತು ವ್ಯಾಪಾರವನ್ನು ಹೆಚ್ಚಿಸುತ್ತಾರೆ.

7. ಉದ್ಯಮಗಾರಿಕೆಯು ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ ಹೇಗೆ?

ಉ. * ಉದ್ಯಮದಲ್ಲಿ ಏನಾದರೊಂದನ್ನು ಸೃಜಿಸಲಾಗುತ್ತದೆ.
* ಹೊಸವಸ್ತುಗಳು ಮತ್ತು ಸೇವೆಗಳನ್ನು ಉತ್ಪಾದಿಸುತ್ತಾರೆ.
* ಹೊಸ ತಾಂತ್ರಿಕತೆಯನ್ನು ಬಳಸುತ್ತಾರೆ.
* ದೊರೆಯುವ ಎಲ್ಲಾ ಅವಕಾಶಗಳನ್ನು ಅನುಕೂಲವಾಗುವಂತೆ ಬದಲಾಯಿಸಿ ಕೊಳ್ಳುತ್ತಾರೆ.

8. ಸ್ವಂತ ಉದ್ಯೋಗ ಕೈಗೊಳ್ಳುವುದಾದರೆ ಯಾವ ಯಾವ ವ್ಯವಹಾರ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು?

ಉ. * ಜಾಹಿರಾತು ಸಂಸ್ಥೆಗಳು.
* ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಂಸ್ಥೆಗಳು.
* ಬ್ಯೂಟಿ ಪಾರ್ಲರ್‌ಗಳು
* ಛಾಯಾಪ್ರತಿ ತೆಗೆಯುವ ಕೇಂದ್ರಗಳು (ಫೋಟೊ)

## ಅಧ್ಯಾಯ – 4 (ವ್ಯವಹಾರದ ಜಾಗತೀಕರಣ)

9. ಜಾಗತೀಕರಣದ ಅನುಕೂಲತೆಗಳನ್ನು ತಿಳಿಸಿ.

ಉ. * ಜನರ ಜೀವನ ಮಟ್ಟ ಹೆಚ್ಚಿಸಲು ಸಹಾಯಕ.
* ದೇಶದ ಜನರ ವರಮಾನವನ್ನು ಹೆಚ್ಚಿಸುತ್ತದೆ.
* ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.
* ದೇಶಗಳ ನಡುವೆ ಸಾಮಾಜಿಕ ಹಾಗೂ ರಾಜಕೀಯ ಸಾಮರಸ್ಯ ಉಂಟಾಗುತ್ತದೆ.

10. ವಿಶ್ವ ವ್ಯಾಪಾರ ಸಂಘಟನೆಯ ಪ್ರಮುಖ ಉದ್ದೇಶಗಳು ಯಾವುವು?

ಉ. * ಅಂತರ ರಾಷ್ಟ್ರೀಯ ವ್ಯಾಪಾರವನ್ನು ಕಾನೂನಿನ ಚೌಕಟ್ಟಿಗೊಳಪಡಿಸುವುದು.
* ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ತೆರಿಗೆಗಳನ್ನು ಕಡಿಮೆ ಮಾಡುವುದು.
* ವ್ಯಾಪಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಬಗೆಹರಿಸುವುದು.
* ಮುಕ್ತ ಹಾಗು ಸ್ವತಂತ್ರ್ಯ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಒತ್ತು ನೀಡುವುದು.

11. ಜಾಗತೀಕರಣ ಉಂಟುಮಾಡ ಬಹುದಾದ ದುಷ್ಪರಿಣಾಮಗಳು ಯಾವುವು?

ಉ. * ಪರಿಸರದ ಅವನತಿಗೆ ಕಾರಣವಾಗುತ್ತದೆ.
* ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಾರೆ. ಬಡವರು ಶ್ರಮ ಪಡಬೇಕಾಗುತ್ತದೆ.

* ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.
* ಸಾಂಪ್ರದಾಯಿಕ ಆಹಾರ ಸೇವನೆಗಳು ಕ್ರಮೇಣ ನಿರ್ಮೂಲ ಹೊಂದುತ್ತವೆ.
* ನೀತಿ ಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತವೆ.
* ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಗುಲಾಮತನ ಮತ್ತು ಬಾಲಕಾರ್ಮಿಕ ಪದ್ಧತಿಗೆ ಕಾರಣವಾಗುತ್ತದೆ.

12. ಜಾಗತೀಕರಣದ ಮುಖ್ಯ ಲಕ್ಷಣಗಳನ್ನು ಪಟ್ಟಿ ಮಾಡಿ.

ಉ. * ಅಂತರರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುತ್ತದೆ.
* ವಿಶ್ವ ಹಣಕಾಸಿನ ನೀತಿಯನ್ನು ಅಭಿವೃದ್ಧಿ ಪಡಿಸುತ್ತದೆ.
* ಅಂತರ ರಾಷ್ಟ್ರೀಯ ವ್ಯಾಪಾರದ ಕರಾರುಗಳನ್ನು ಸೃಷ್ಟಿಸುತ್ತದೆ.
* ಬಂಡವಾಳದ ನೇರ ಹೂಡಿಕೆಯನ್ನು ಹೆಚ್ಚಿಸುತ್ತದೆ.

13. ಸಾಂಪ್ರದಾಯಿಕ ಆಹಾರ ಸೇವನೆಯ ಮೇಲೆ ಜಾಗತೀಕರಣದ ಪ್ರಭಾವವೇನು?

ಉ. * ಶೀಘ್ರ ಆಹಾರ ಸರಪಳಿ ಹರಡುತ್ತವೆ.
* ಪ್ರಯೋಜನಕಾರಿಯಲ್ಲದ ಆಹಾರಸೇವನೆ ಜಾಸ್ತಿಯಾಗುತ್ತದೆ.
* ವಿದೇಶಿ ಆಹಾರ ಸೇವನೆ ರೂಢಿಗೆ ಬರುತ್ತದೆ.
* ಜನರ ಆರೋಗ್ಯದ ಅವನತಿಗೆ ಕಾರಣವಾಗುತ್ತದೆ.

# ದಾರಿದೀಪ ಪಾಸಿಂಗ್–ಪ್ಯಾಕೇಜ್
# ಇತಿಹಾಸ

## ಅಧ್ಯಾಯ–6 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

### I. ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ:

1. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ಕಾರಣಗಳನ್ನು ತಿಳಿಸಿ.

ಉ. * ರಾಜಕೀಯ ಕಾರಣ * ಆರ್ಥಿಕ ಕಾರಣ * ಸಾಮಾಜಿಕ ಮತ್ತು ಧಾರ್ಮಿಕ ಕಾರಣ
* ಆಡಳಿತಾತ್ಮಕ ಕಾರಣ * ಸೈನಿಕಕಾರಣ * ತತಕ್ಷಣದ ಕಾರಣ

2. 1857 ದಂಗೆಯ ಪರಿಣಾಮಗಳನ್ನು ತಿಳಿಸಿ.

ಉ. * ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು.
* ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ವಹಿಸಿತು.
* 1858 ರಲ್ಲಿ ಬ್ರಿಟನ್ ರಾಣಿಯು ಘೋಷಣೆ ಹೊರಡಿಸಿದಳು.
* ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದಾಗಿ ಭರವಸೆ ಇತ್ತಳು
* ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪಮಾಡುವುದಿಲ್ಲ ಎಂದು ಭರವಸೆ ನೀಡಿದರು.
* ಕಾನೂನಿನ ಮುಂದೆ ಸಮಾನತೆ ಉಂಟಾಯಿತು.

3. 1857ರ ದಂಗೆಯ ವಿಫಲತೆ/ವೈಪಲ್ಯತೆಗೆ ಕಾರಣಗಳನ್ನು ತಿಳಿಸಿ.

ಉ. * ಇದು ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ.
* ಇದು ಯೋಜಿತ ದಂಗೆಯಾಗಿರದೆ ಅನಿರೀಕ್ಷಿತ ಕಾರಣಗಳಿಂದ ಪ್ರೇರೇಪಿತವಾಗಿತ್ತು.
* ಬ್ರಿಟಿಷ್ ಸೈನೀಕರಲ್ಲಿನ ಒಗ್ಗಟ್ಟು ಇದ್ದರೆ ಭಾರತೀಯ ಸೈನಿಕರಲ್ಲಿನ ಭಿನ್ನತೆಯು ಕಾರಣವಾಗಿತ್ತು.
* ದಂಗೆಗೆಸೂಕ್ತ ಮಾರ್ಗ ದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರೆತ.
* ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ.
* ದೇಶೀಯ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆಯಿಂದಾಗಿ ಸಿಪಾಯಿಗಳಿಗೆ ಬೆಂಬಲ ಸಿಗಲಿಲ್ಲ.
* ಲೂಟ ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದ ಜನರವಿಶ್ವಾಸ ಕಳೆದುಕೊಂಡರು.
* ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ.

## ಅಧ್ಯಾಯ – 7 ಭಾರತದಲ್ಲಿ ಬ್ರಿಟಿಷ್ ಆಡಳಿತ ಪರಿಣಾಮಗಳು

4. ಇಂಗ್ಲೀಷ್ ಶಿಕ್ಷಣ ಪದ್ಧತಿಯಿಂದ ಭಾರತದ ಮೇಲೆ ಬೀರಿದ ಪರಿಣಾಮಗಳನ್ನು ತಿಳಿಸಿರಿ.

ಉ. * ಇಂಗ್ಲೀಷ್ ಶಿಕ್ಷಣ ಬೆಳವಣಿಗೆಯು ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆಯಾಯಿತು.
* ಪಾಶ್ಚಿಮಾತ್ಯ ವಿಚಾರಧಾರೆಗಳು ರಾಷ್ಟ್ರೀಯ ಜಾಗೃತಿಗೆ ಸಹಕಾರಿಯಾದವು.
* ನಾಯಕತ್ವ ಬೆಳವಣಿಗೆಯಾಯಿತು.

* ನಾಯಕತ್ವ ಬೆಳವಣಿಗೆಯಾಯಿತು.
* ಆಂಗ್ಲಭಾಷೆ ಸಂಪರ್ಕ ಭಾಷೆಯಾಗಿ ಬೆಳೆದು ಏಕತೆಗೆ ಸಹಕಾರಿಯಾಯಿತು.
* ಸಾಹಿತ್ಯದ ಬೆಳವಣಿಗೆಯು ಅನೇಕ ಪ್ರಾಂತೀಯ ಭಾಷೆಗಳಲ್ಲಿಯು ಕಂಡಿತು.
* ಮಧ್ಯಮ ವರ್ಗದ ಶ್ರೀಸಾಮಾನ್ಯರು ಎಲ್ಲಾ ಚಟುವಟಿಕೆಗಳ ನಾಯಕತ್ವ ವಹಿಸುವಂತಾಯಿತು.

5. ಸಾರಿಗೆ ಮತ್ತು ಸಂಪರ್ಕ ಸ್ವತಂತ್ರ್ಯ ಚಳುವಳಿಯ ಮೂಲ ವಿವರಿಸಿರಿ.

ಉ. * ಬ್ರಿಟಿಷರು ಸಾರಿಗೆ ಮತ್ತು ಸಂಪರ್ಕವನ್ನು ತಮ್ಮ ಸ್ವಹಿತಾಸಕ್ತಿಯಾಗಿ ನಿರ್ಮಿಸಿಕೊಂಡರು.
* ಭಾರತದ ಮೂಲೆಮೂಲೆಗಳನ್ನು ಶೀಘ್ರವಾಗಿ ತಲುಪಲು ರಸ್ತೆ ಮತ್ತು ರೈಲು ವ್ಯವಸ್ಥೆ ಕಲ್ಪಿಸಿದರು.
* ಕಚ್ಚಾ ವಸ್ತು ಮತ್ತು ಸಿದ್ಧ ವಸ್ತುಗಳ ಸಾಗಾಣಿಕ ಮತ್ತು ಸೇನೆಯು ಸಂಚರಿಸಲು ನಿರ್ಮಿಸಲಾಯಿತು.
* ಪರೋಕ್ಷವಾಗಿ ಇದು ದೇಶಿಯರನ್ನು ಸಂಘಟಿಸಲು ಸಂಚರಿಸಲು ಸಹಾಯವಾಯಿತು.
* ಪರಸ್ಪರ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳಲು ಪ್ರಚಾರಮಾಡಲು ಸಾಧ್ಯವಾಯಿತು.
* ಇದು ದೇಶಿಯರನ್ನು ಒಂದುಗೊಡಿಸಿ ರಾಷ್ಟ್ರೀಯ ಏಕತೆ ಕಾರಣವಾಯಿತು.

# ದಾರಿ ದೀಪ– ಪಾಸಿಂಗ್ ಪ್ಯಾಕೇಜ್

## ರಾಜ್ಯಶಾಸ್ತ್ರ

## ಅಧ್ಯಾಯ–2 ಭಾರತದ ವಿದೇಶಾಂಗ ನೀತಿ

6 ಭಾರತದ ವಿದೇಶಾಂಗ ನೀತಿಯ ಉದ್ದೇಶ/ಗುರಿಗಳಾವುವು?

ಉ. * ರಾಷ್ಟ್ರ ಭದ್ರತೆ
* ರಾಷ್ಟ್ರದ ಆರ್ಥಿಕ ಸಂವರ್ಧನೆ
* ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು
* ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿಕೊಂಡು ವಿರೋಧಿ ರಾಷ್ಟ್ರಗಳನ್ನು ಹತ್ತಿಕ್ಕುವುದು.
* ವಿಶ್ವಶಾಂತಿ ಹಾಗೂ ಸಹ ಬಾಳ್ವೆಯನ್ನು ಸಾಧಿಸುವುದು.

7. ಪಂಚಶೀಲ ತತ್ವಗಳೆಂದರೇನು? ಪಂಚಶೀಲತತ್ವಗಳಾವುವು?

ಉ. ಚೀನಾ–ಭಾರತ ದೇಶಗಳು ಪರಸ್ಪರ ಅಂತರರಾಷ್ಟ್ರೀಯ ಸಂಬಂಧಗಳ ವೃದ್ಧಿಗಾಗಿ ಐದು ತತ್ವಗಳನ್ನು ಅಳವಡಿಸಿಕೊಂಡಿವೆ. ಅವುಗಳೇ ಪಂಚಶೀಲ ತತ್ವಗಳು.
* ಪರಸ್ಪರರ ಪರಮಾಧಿಕರ ಮತ್ತು ಪ್ರಾದೇಶಿಕ ಐಕ್ಯತೆಗಳನ್ನು ಗೌರವಿಸುವುದು.
* ಪರಸ್ಪರರ ಮೇಲೆ ಆಕ್ರಮಣ ಮಾಡದಿರುವುದು.
* ಶಾಂತಿಯುತ ಸಹಜೀವನ
* ದೇಶಗಳ ಒಳಾಡಿತದಲ್ಲಿ ಹಸ್ತಕ್ಷೇಪ ಮಾಡದೆ ಇರುವುದು.
* ಸಮಾನತೆ ಮತ್ತು ಪರಸ್ಪರ ಹಿತಸಾಧನೆಗೆ ಶ್ರಮಿಸುವುದು.

8. ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತೀ ಅಗತ್ಯ ಎಂದು ಭಾರತ ಪ್ರತಿಪಾದಿಸುತ್ತಿದೆ. ಎಕೆ?

ಉ. * ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆ, ಮಾರಾಟ, ಸಂಗ್ರಹಣೆಯಲ್ಲಿ ಪೈಪೋಟಿ ನಡೆದಿದೆ.
* 3ನೇ ಮಹಾಯುದ್ಧ ನಡೆಯಬಹುದೆಂಬ ಆತಂಕ ರಾಷ್ಟ್ರಗಳಲ್ಲಿ ಉಂಟಾಗಿದೆ.
* ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿ ನಿರತರಾದ ರಾಷ್ಟ್ರ ಅಣ್ವಸ್ತ್ರಗಳನ್ನು ತಯಾರಿಸಿ ಬಳಸುವ ಸಂಭವವಿದೆ.
* ಭಾರತ ಶಾಂತಿಪ್ರಿಯ ರಾಷ್ಟ್ರವಾಗಿದ್ದು ಶಾಂತಿ ಸೌಹಾರ್ದತೆಗೆ ಒತ್ತು ನೀಡಿದೆ.

9. ಅಲಿಪ್ತ ನೀತಿ ಎಂದರೇನು? ಭಾರತ ಅಲಿಪ್ತ ನೀತಿಯನ್ನು ಪ್ರತಿಪಾದಿಸುತ್ತಿದೆ.ಏಕೆ?

ಉ. * ಯಾವುದೇ ಶಕ್ತಿ ಶಾಲಿ ಬಣಗಳ ಗುಂಪಿಗೆ ಸೇರದೇ ತಟಸ್ಥ ನೀತಿಯನ್ನು ಅನುಸರಿಸುವುದೇ ಅಲಿಪ್ತ ನೀತಿ.
* 2 ನೇ ಮಹಾಯುದ್ಧದ ನಂತರ ಜಗತ್ತು ಅಮೇರಿಕಾ & ರಷ್ಯಾ ನೇತೃತ್ವದಲ್ಲಿ 2 ಬಣಗಳಾಗಿ ವಿಭಾಗವಾಗಿತ್ತು.
* ವೈರತ್ವ, ಸಂಘರ್ಷ, ಭಯ ಮುಂತಾದವುಗಳನ್ನು ನಿಯಂತ್ರಿಸಲು.

## ರಾಜ್ಯಶಾಸ್ತ್ರ : ಅಧ್ಯಾಯ–3 ಅನ್ಯರಾಷ್ಟ್ರಗಳೊಡನೆ ಭಾರತದ ಸಂಬಂಧ

10. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸಂಬಂಧ ಸೌಹಾರ್ದಯುತವಾಗಿಲ್ಲವೆಂದು ಹೇಗೆ ಹೇಳುವಿರಿ?
    * ಪಾಕಿಸ್ತಾನದ ಮಿಲಿಟರಿ ಶಾಹಿತ್ವ & ರಾಜಕೀಯ ಅಸ್ಥಿರತೆಯಿಂದಾಗಿ
    * ಕಾಶ್ಮೀರದ ಸಮಸ್ಯೆ * ಭಯೋತ್ಪಾದನೆಯ ಸಮಸ್ಯೆ * ಚೀನಾ–ಪಾಕ್ ಮೈತ್ರಿ
    * 1947–48, 1965,1999ರಲ್ಲಿ ನಡೆದ ಅನೇಕ ಯುದ್ಧಗಳಿಂದಾಗಿ.
    * ಅನೇಕ ಮಿಲಿಟರಿ ಕೂಟಗಳೊಂದಿಗೆ ಪಾಕಿಸ್ತಾನದ ಸಂಬಂಧ.

11. ಭಾರತ ಮತ್ತು ಅಮೇರಿಕಾ ದೇಶಗಳು ಪರಸ್ಪರ ಸೌಹಾರ್ದಯುತ ಸಂಬಂಧ ಹೊಂದಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.
    * ಭಾರತದ ಪಂಚವಾರ್ಷಿಕ ಯೋಜನೆಗೆ ಅಮೇರಿಕಾ ಸಹಾಯ ನೀಡಿದೆ.
    * ಭಯೋತ್ಪಾದನೆ ಹತ್ತಿಕ್ಕುವಲ್ಲಿ ಸಮಾನ ಹಿತಾಶಕ್ತಿ ಹೊಂದಿದೆ.
    * 1962ರಲ್ಲಿ ಚೀನಾ ಆಕ್ರಮಣ ಸಂದರ್ಭದಲ್ಲಿ ಸಹಾಯ ನೀಡಿದೆ.
    * ಭಾರತವು ವಿದೇಶಿ ವ್ಯಾಪಾರ ಸಂಬಂಧ ಹೊಂದಿದೆ.
    * ವಿಜ್ಞಾನ ಮತ್ತು ತಾಂತ್ರಿಕತೆ, ಬಾಹ್ಯಕಾಶ ಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಸಹಾಯ ನೀಡಿದೆ.
    * ವಿಶ್ವ ಸಂಸ್ಥೆ ಬಲ ಪಡಿಸುವಲ್ಲಿ ಮತ್ತು ಶಾಂತಿಯನ್ನು ಕಾಪಾಡುವಲ್ಲಿ ಸಮಾನತೆ ಇದೆ.

12. ಇತ್ತೀಚಿನ ದಿನಗಳಲ್ಲಿ ಚೀನಾ ದೊಂದಿಗೆ ಭಾರತದ ಭಾಂದವ್ಯ ಹದಗೆಡಲು ಕಾರಣಗಳಾವುವು?
    * ಭಾರತದ ದೋರಣೆಯ ವಿರುದ್ಧ ಚೀನಾ ಟಿಬೇಟನ್ನು ವಶಪಡಿಸಿಕೊಂಡಿದೆ.
    * 1962 ರಲ್ಲಿ ಚೀನಾ ಭಾರತದ ಮೇಲೆ ದಾಳಿ ಮಾಡಿದೆ.
    * ಚೀನಾ–ಭಾರತ ದೇಶಗಳ ಗಡಿ ಸಮಸ್ಯೆ ಇತ್ಯರ್ಥವಾಗಿಲ್ಲ
    * ಅರುಣಾಚಲ ಪ್ರದೇಶವನ್ನು ಚೀನಾ ತನ್ನದೆಂದು ವಾದಿಸುತ್ತಿದೆ.
    * ಅಣ್ವಸ್ತ್ರಗಳ ತಯಾರಿ ಮಾಡುತ್ತಿದೆ. * ಗಡಿಯಲ್ಲಿ ಚೀನಾ ಮಿಲಿಟರಿ ಪಡೆಗಳ ಅತಿಕ್ರಮಣ

13. ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ. ಹೇಗೆ? ವಿವರಿಸಿರಿ.
    * ಭಾರತ ರಷ್ಯಾ ಒಪ್ಪಂದವು ರಾಜಕೀಯ ಮತ್ತು ಆರ್ಥಿಕ, ಇತರೆ ಕ್ಷೇತ್ರಗಳಲ್ಲಿ ಪ್ರಗತಿಯಾಗಿದೆ.
    * ಕಾಶ್ಮೀರದ ಸಮಸ್ಯಗೆ ರಷ್ಯಾ ತನ್ನ ಬೆಂಬಲ ನೀಡಿದೆ.
    * 1962 ರಲ್ಲಿ ಚೀನಾ ದಾಳಿಯಲ್ಲಿ ರಷ್ಯಾ ಖಂಡಿಸಿದೆ.
    * 1971 ರಲ್ಲಿ ಭಾರತ–ರಷ್ಯಾ ನಡುವೆ ಮೈತ್ರಿ ಶಾಂತಿ ಹಾಗೂ ಸಹಕಾರಗಳ 20 ವರ್ಷಗಳ ಒಪ್ಪಂದವಾಗಿದೆ.
    * ರಷ್ಯಾ ಸಹಕಾರದಿಂದ ಬಿಲೈ–ಬೋಕಾರೋಗಳಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಲಾಗಿದೆ.
    * ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ಖಾಯಂ ಸದಸ್ಯತ್ವ ದೂರಕಬೇಕೆಂದು ಪ್ರತಿಪಾದಿಸುತ್ತಿದೆ.

# ದಾರಿ ದೀಪ- ಪಾಸಿಂಗ್ ಪ್ಯಾಕೇಜ್
# ಸಮಾಜಶಾಸ್ತ್ರ

## ಅಧ್ಯಾಯ-1 : ಸಾಮಾಜಿಕ ಸ್ತರ ವಿನ್ಯಾಸ

1. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ. (3 ಅಂಕದ ಪ್ರಶ್ನೆಗಳು)

1. ಅಸ್ಪೃಶ್ಯತೆ ನಿವಾರಣೆಗಾಗಿ ಸರ್ಕಾರವು ತೆಗೆದುಕೊಂಡಿರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ತಿಳಿಸಿ.

ಉ: * ಸಂವಿಧಾನದ 17 ನೇ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.

* 1955 ರಲ್ಲಿ ಅಸ್ಪೃಶ್ಯತಾ ಅಪರಾಧಿಗಳ ಕಾಯ್ದೆಯ ಜಾರಿ
* 1976 ರಲ್ಲಿ ಅಸ್ಪಶ್ಯತಾ ಅಪರಾಧಿಗಳ ಕಾಯಿದೆಯನ್ನು ತಿದ್ದುಪಡಿಗೊಳಿಸಿ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯಿದೆಯ ಜಾರಿ
* ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯಿದೆಯ ಜಾರಿ.
* ಸಾರ್ವತ್ರಿಕ ಮತದಾನದ ಹಕ್ಕು ಮತ್ತು ಸಮಾನತೆಯ ಹಕ್ಕನ್ನು ನೀಡಿರುವುದು.
* ಹಿಂದುಳಿದ ಜಾತಿಯ ಜನರಿಗೆ ಶೈಕ್ಷಣಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿ ನೀಡಿಕೆ.
* 1989ರ ಶಾಸನವು ಅಸ್ಪೃಶ್ಯತೆ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ.

2. ಸಾಮಾಜಿಕ ಸ್ತರ ವಿನ್ಯಾಸದ ಲಕ್ಷಣಗಳನ್ನು ತಿಳಿಸಿ

ಉ: * ಸ್ತರ ವಿನ್ಯಾಸವು ಸಮಾಜದಿಂದ ನಿರ್ಮಿಸಲ್ಪಟ್ಟಿದೆ.

* ಕಾಲದಿಂದ ಕಾಲಕ್ಕೆ ಬದಲಾಗುತ್ತದೆ.
* ದೇಶದಿಂದ ದೇಶಕ್ಕೆ ಭಿನ್ನತೆಯೊಂದಿಗೆ ಕಾಣಲ್ಪಡುತ್ತದೆ.
* ಮೇಲು ಕೀಳಿನ ವ್ಯವಸ್ಥೆಯಾಗಿದೆ.
* ಎಲ್ಲಾ ಸಮಾಜಗಳಲ್ಲಿ ಕಂಡು ಬರುತ್ತದೆ.
* ಅಸಮಾನತೆಯ ಭಿನ್ನತೆಯನ್ನು ಉಂಟುಮಾಡುತ್ತದೆ.

## ಅಧ್ಯಾಯ 02. ದುಡಿಮೆ ಮತ್ತು ಆರ್ಥಿಕ ಜೀವನ

3. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಸಿ.

* ಜನಸಂಖ್ಯಾ ನಿಯಂತ್ರಣದ ಕ್ರಮಗಳು
* ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ
* ಕೃಷಿ ಕ್ಷೇತ್ರದ ಅಭಿವೃದ್ಧಿ
* ಶೈಕ್ಷಣಿಕ ಸುಧಾರಣಾ ಯೋಜನೆಗಳು
* ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ

* ಉದ್ಯೋಗ ಖಾತರಿ ಯೋಜನೆಗಳು
* ಗ್ರಾಮೀಣಾಭಿವೃದ್ಧಿ ಯೋಜನೆಗಳು
* ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ (ಯಾವುದಾದರೂ 6 ಅಂಶಗಳು)

4. ಸಂಘಟಿತ ವಲಯದ ಕೆಲಸಗಾರರು ಅಸಂಘಟಿತ ವಲಯದ ಕೆಲಸಗಾರರಿಗಿಂತ ಹೇಗೆ ಭಿನ್ನವಾಗಿದ್ದಾರೆ?

**ಸಂಘಟಿತ ಕೆಲಸಗಾರರು**

* ಅಧಿಕಾರವಾಹಿ ಶ್ರೇಣಿ ವ್ಯವಸ್ಥೆ
* ವಿಶೇಷ ಪರಿಣತಿ ತರಬೇತಿ ಪ್ರತಿಭೆ ಅನುಭವ ಶೈಕ್ಷಣಿಕ ಅರ್ಹತೆಗಳು.
* ಕೆಲಸದ ಎಲ್ಲಾ ವ್ಯವಹಾರಗಳು ಬರಹ ರೂಪದಲ್ಲಿರುತ್ತವೆ.
* ನಿಗಧಿತ ವೇತನ ಭತ್ಯೆ, ವಿಶ್ರಾಂತಿ ವೇತನ, ನಿವೃತ್ತಿ ವೇತನ, ವೈದ್ಯಕೀಯ ಸೌಲಭ್ಯ.
* ನಿಗಧಿತ ಅವಧಿಯಲ್ಲಿ ಕಾರ್ಯನಿರ್ವಹಣೆ.

**ಅಸಂಘಟಿತ ಕೆಲಸಗಾರರು**

* ನಿರ್ಧಿಷ್ಟ ಕಾಯಿದೆ, ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡುವುದಿಲ್ಲ.
* ದುಡಿಮೆಗೆ ಕನಿಷ್ಠ ಕೂಲಿ ಪಡೆಯುವಿಕೆ
* ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ.
* ಕೆಲಸದ ಭದ್ರತೆ ಇರುವುದಿಲ್ಲ.
* ನಿಗಧಿತ ವೇತನ, ವಿಶ್ರಾಂತಿ ವೇತನ ಮತ್ತು ನಿವೃತ್ತಿವೇತನ ಸೌಲಭ್ಯಗಳಿರುವುದಿಲ್ಲ.

5. ನಿರುದ್ಯೋಗಕ್ಕೆ ಕಾರಣಗಳನ್ನು ತಿಳಿಸಿ.

* ಅತಿಯಾದ ಜನಸಂಖ್ಯೆ
* ಅತಿಯಾದ ಶ್ರಮವಿಭಜನೆ
* ಸಾಮಾಜಿಕ ಅಸಮಾನತೆ
* ಯಾಂತ್ರೀಕರಣ
* ಬಂಡವಾಳದ ಕೊರತೆ
* ಅನಕ್ಷರತೆ.

6. ನಿರುದ್ಯೋಗದ ಪರಿಣಾಮಗಳನ್ನು ತಿಳಿಸಿ.

* ಬಡತನ
* ಅನಾರೋಗ್ಯ
* ಭ್ರಷ್ಟಾಚಾರ
* ಅನಾರೋಗ್ಯ
* ಕೌಟುಂಬಿಕ ವಿಭಜನೆ
* ಮೋಸ ವಂಚನೆ
* ಕಳ್ಳತನ
* ವ್ಯಭಿಚಾರ.

## ಅಧ್ಯಾಯ–9 : ಭಾರತದ ಸಾರಿಗೆ

**ಆರು ವ್ಯಾಕಗಳಲ್ಲಿ ಉತ್ತರಿಸಿ.**

1. ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆಯೇನು?

ಉ: * ಕಚ್ಚಾವಸ್ತುಗಳನ್ನು ಕಾರ್ಖಾನೆಗೆ ಸಾಗಿಸಲು
* ಸಿದ್ಧವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು
* ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು.
* ಹಳ್ಳಿಗಳಿಗೆ ಅಗತ್ಯವಾದ ವಸ್ತುಗಳನ್ನು ಪಡೆಯಲು.
* ರಸ್ತೆ ಸಾರಿಗೆಯು ರೈಲು ಸಾರಿಗೆಗೆ ಪೂರಕ.
* ಎಲ್ಲಾ ಬಗೆಯ ಪ್ರದೇಶಗಳಿಗೂ ಸಂಪರ್ಕ ಒದಗಿಸಬಹುದು.

2. ರಸ್ತೆ ಸಾರಿಗೆಯ ತೊಡಕುಗಳೇನು?

ಉ: * ಮಳೆಗಾಲದಲ್ಲಿ ಕೆಲವು ವೇಳೆ ಅನುಪಯುಕ್ತವಾಗುತ್ತದೆ.
* ಪರಸರ ಮಾಲಿನ್ಯ ಉಂಟುಮಾಡುತ್ತದೆ.
* ವಾಹನ ದಟ್ಟಣೆ ಹಾಗು ಅಪಘಾತಗಳಿಗೂ ಕಾರಣವಾಗುತ್ತದೆ.
* ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣಿ ಅಸಮರ್ಪಕ
* ಮಳೆ, ಪ್ರವಾಹ ಮತ್ತು ಚಂಡಮಾರುತಗಳಿಂದ ಹಾಳಾಗುತ್ತಿರುತ್ತದೆ,
* ರಸ್ತೆಗಳ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆಯಿದೆ.

3. ರಾಷ್ಟ್ರದ ಅಭಿವೃದ್ದಿಯಲ್ಲಿ ಸಾರಿಗೆಯ ಪಾತ್ರವೇನು?

ಉ: * ಕೈಗಾರಿಕೆಗಳ ಅಭಿವೃದ್ದಿಗೆ ಸಹಾಯಕ
* ವ್ಯವಸಾಯದ ಅಭಿವೃದ್ದಿಗೆ ಸಹಾಯಕ
* ಗಣಿಗಾರಿಕೆಗೆ ನೆರವಾಗುತ್ತದೆ.
* ಅರಣ್ಯಗಾರಿಕೆ, ಮೀನುಗಾರಿಕೆ, ಹೈನುಗಾರಿಕೆಗಳಿಗೆ ಮಾರುಕಟ್ಟೆ ಸಂಪರ್ಕ ಒದಗಿಸುತ್ತದೆ.
* ಸೇವಾವಲಯದ ಚಲನೆಗೂ ಸಹಾಯಕ
* ಕಾರ್ಮಿಕರು ಕಾರ್ಖಾನೆ ತಲುಪಲು ಸಹಾಯಕ

4. 'ಕಾರಿಡಾರ್ ರಸ್ತೆಗಳು ದೇಶದ ಅಭಿವೃದ್ಧಿಗೆ ಪೂರಕವಾಗಿದೆ' ಈ ಹೇಳಿಕೆಯನ್ನು ಸಮರ್ಥಿಸಿ.

ಉ: * ರಾಷ್ಟ್ರವನ್ನು ಎಲ್ಲಾ ದಿಕ್ಕುಗಳಿಂದ ಸಂಪರ್ಕಿಸುತ್ತದೆ.
* ಸರಕುಗಳನ್ನು ವೇಗವಾಗಿ ಸಲುಪಿಸಬಹುದು.
* ಕಡಿಮೆ ವೆಚ್ಚದಲ್ಲಿ ಸಾಗಣಿಕೆ ಸಾಧ್ಯ

* ಕೈಗಾರಿಕೆಗಳಿಗೆ ವರದಾನವಾಗಿದೆ.
* ದೇಶದ ಮಹಾನಗರಗಳಿಗೆ ಸಂಪರ್ಕ ಒದಗಿಸುತ್ತದೆ.
* ಕೃಷಿಯ ಬೆಳವಣಿಗೆಗೆ ಸಹಾಯಕ

5. ಭಾರತದ ಪೂರ್ವ ತೀರದ ಬಂದರುಗಳನ್ನು ಹೆಸರಿಸಿ

ಉ: * ಕೊಲ್ಕತ್ತ * ಹಾಲ್ದಾಯಾ * ಪಾರಾದೀಪ್ * ವಿಶಾಖಪಟ್ಟಣ * ಚೆನ್ನೈ * ತೂತುಕುಡಿ.

6. ಭಾರತದ ಪಶ್ಚಿಮತೀರದ ಬಂದರುಗಳನ್ನು ಹೆಸರಿಸಿ.

ಉ: *ಕಾಂಡ್ಲ * ಮುಂಬೈ * ನವಶೇವಾ * ಮರ್ಮಗೋವಾ * ನವ ಮಂಗಳೂರು *ಕೊಚ್ಚಿ

## ಅಧ್ಯಾಯ: 10. ಭಾರತದ ಪ್ರಮುಖ ಕೈಗಾರಿಕೋದ್ದಿಮೆಗಳು.

7. ಭಾರತದಲ್ಲಿರುವ ಕೈಗಾರಿಕಾ ವಲಯಗಳನ್ನು ಪಟ್ಟಿಮಾಡಿ.

ಉ: * ಹೊಗ್ಲಿ ಪ್ರದೇಶ * ದಕ್ಷಿಣದ ಕೈಗಾರಿಕಾ ಪ್ರದೇಶ * ಮುಂಬೈ – ಪೂನಾ ಪ್ರದೇಶ * ನ್ಯಾಷನಲ್ ಕ್ಯಾಪಿಟಲ್ ಪ್ರದೇಶ * ಅಹಮದಾಬಾದ್– ವಡೋದರ ಪ್ರದೇಶ * ವಿಶಾಖ ಪಟ್ಟಣ ಗುಂಟೂರು ಪ್ರದೇಶ * ದಾಮೋದರ ಕಣಿವೆ ಪ್ರದೇಶ * ಕೊಲ್ಲಂ ತಿರುವನಂತ ಪುರ ಪ್ರದೇಶ.

8. ಕೈಗಾರಿಕೆಗಳ ಸ್ಥಾಪನೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

ಉ: * ಕಚ್ಚಾವಸ್ತುಗಳ ಲಭ್ಯತೆ * ಶಕ್ತಿ ಸಂಪನ್ಮೂಲಗಳ ಲಭ್ಯತೆ * ಸಂಚಾರ ಸೌಲಭ್ಯ *ಮಾರುಕಟ್ಟೆ ಸೌಲಭ್ಯ * ಕಾರ್ಮಿಕರ ಲಭ್ಯತೆ * ಬಂದರುಗಳ ಸೌಲಭ್ಯ.

9. 'ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳು ಮಹತ್ವದ ಪಾತ್ರ ವಹಿಸುತ್ತವೆ' ಸಮರ್ಥಿಸಿ

ಉ: * ಅವಶ್ಯಕ ವಸ್ತುಗಳನ್ನು ಒದಗಿಸುತ್ತದೆ * ಉದ್ಯೋಗಗಳನ್ನು ಒದಗಿಸುತ್ತದೆ. * ಪ್ರಥಮ ಮತ್ತು ತೃತೀಯ ವಲಯದ ಬೆಳವಣಿಗೆಗೆ ಸಹಾಯಕಾರಿ * ಕೃಷಿ ಬೆಳವಣಿಗೆಗೆ ಸಹಾಯಕಾರಿಯಾಗಿದೆ. * ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುತ್ತದೆ. * ರಫ್ತು ಬೆಳವಣಿಗೆ ಸಹಾಯಕವಾಗಿದೆ.

10. 'ಕಾಗದ ಕೈಗಾರಿಕೆಗೆ ಬಳಸುವ ಕಚ್ಚಾವಸ್ತುಗಳಾವುವು?

ಉ: * ಬಿದಿರು * ಮರದ ತಿರುಳು * ಸಬಾಯ್ ಹುಲ್ಲು * ಕಬ್ಬಿನ ಸಿಪ್ಪೆ
* ರದ್ದಿ ಕಾಗದ * ಚಿಂದಿ ಬಟ್ಟೆ.

11. ಜೈವಿಕ ತಂತ್ರ ಜ್ಞಾನದಿಂದ ಕೃಷಿಕ್ಷೇತ್ರದ ಮೇಲಾಗಿರುವ ಪರಿಣಾಮಗಳೇನು?

ಉ: * ಸುಧಾರಿತ ಬಿತ್ತನೆ ಬೀಜಗಳ ಸಂಶೋಧನೆ
* 'ಕಸಿ' ಮಾಡುವುದರಿಂದ ಹೊಸ ತಳಿಗಳ ಸಂಶೋಧನೆ
* ಜೈವಿಕ ಗೊಬ್ಬರಗಳ ಬಳಕೆ
* ಸಮ್ಮಿಶ್ರ ತಳಿಗಳ ಅಭಿವೃದ್ಧಿ
* ಹೆಚ್ಚು ಇಳುವರಿ
* ರೋಗ ನಿರೋಧಕ ತಳಿಗಳು

12. ಉನ್ನತ ತಂತ್ರಜ್ಞಾನದ ಉಪಯೋಗಗಳೇನು?( ಸುಧಾರಿತ ತಂತ್ರಜ್ಞಾನ)

ಉ: * ವಿದೇಶಿ ವಿನಿಮಯ ಗಳಿಕೆ * ವ್ಯವಸಾಯದಲ್ಲಿ ಕ್ರಾಂತಿ * ಅಂತರ್ಜಾಲ ಸಂಪರ್ಕ
* ರಕ್ಷಣಾ ಇಲಾಖೆಗೆ ಸಹಾಯಕ * ಬಾಹ್ಯಾಕಾಶ ಸಂಶೋಧನೆಗೆ ಸಹಾಯಕ
* ದೂರವಾಣಿ, ಇ-ಮೇಲ್, ಫ್ಯಾಕ್ಸ್‌ಗೆ ಸಹಾಯಕ.

## ಅಧ್ಯಾಯ –3 ಗ್ರಾಮೀಣಾಭಿವೃದ್ಧಿ

**ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

1. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯ್ ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.

ಉ: * ರಸ್ತೆ, ಚರಂಡಿ, ಕುಡಿಯುವ ನೀರು, ಶೌಚಾಲಯ, ಶಾಲೆ ಇತ್ಯಾದಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ. * ಶಿಕ್ಷಣ, ತರಬೇತಿ, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲದ ಅಭಿವೃದ್ಧಿ * ಕೃಷಿ, ಪಶುಪಾಲನೆ, ಕೋಳಿ ಸಾಕಣೆ, ಮೀನುಗಾರಿಕೆಗಳ ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶ. * ಕೆರೆ ಕಟ್ಟೆಗಳ ನಿರ್ಮಾಣ, ಹೂಳು ತೆಗೆಯುವುದು, ಕಿರು ನೀರಾವರಿ ಯೋಜನೆಗಳ ಮೂಲಕ ಕೃಷಿ ನೀರಾವರಿ ವಿಸ್ತರಣೆ. * ಗ್ರಾಮೀಣ ಗುಡಿ ಕೈಗಾರಿಕೆಗಳ ಅಭಿವೃದ್ಧಿ * ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ. * ಗ್ರಾಮೀಣಾಭಿವೃದ್ಧಿಗಾಗಿ ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

2. ಗ್ರಾಮೀಣಾಭಿವೃದ್ಧಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಅಡಿಯಲ್ಲಿ ಕೈಗೊಂಡಿರುವ ಯೋಜನೆಗಳನ್ನು ಪಟ್ಟಿ ಮಾಡಿರಿ.

ಉ: * ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
* ಸ್ವರ್ಣ ಜಯಂತಿ ಗ್ರಾಮ ಸ್ವ-ಉದ್ಯೋಗ ಯೋಜನೆ * ಇಂದಿರಾ ಆವಾಸ್ ಯೋಜನೆ
* ಆಶ್ರಯ ಯೋಜನೆ * ಸುವರ್ಣ ಗ್ರಾಮೋದಯ ಯೋಜನೆ * ಸಮಾಜ ಕಲ್ಯಾಣ ಸೇವೆಗಳ ಒದಗಿಸುವುದು * ಮಹಿಳಾ ಸ್ವಸಹಾಯ ಸಂಘಗಳ ಬಲವರ್ಧನೆ * ಗ್ರಾಮೀಣ ಕಲೆಗಳು ಮತ್ತು ಸಂಸ್ಕೃತಿಯ ಶ್ರೀಮಂತಗೊಳಿಸುವುದು.

3. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ

"ಭಾರತದ ಆರ್ಥಿಕಾಭಿವೃದ್ಧಿಗೆ ಗ್ರಾಮೀಣಾಭಿವೃದ್ಧಿಯೂ ಪೂರಕವಾಗಿದೆ"–ಸಮರ್ಥಿಸಿ

ಉ: * ಕೃಷಿಯನ್ನು ಒಂದು ಲಾಭದಾಯಕ ಹಾಗು ಆಕರ್ಷಕ ಉದ್ಯೋಗವನ್ನಾಗಿ ಅಭಿವೃದ್ಧಿಪಡಿಸುವುದು.
* ವಿದ್ಯುತ್ತ, ನೀರಾವರಿ, ಮಾರುಕಟ್ಟೆ ಮುಂತಾದ ಮೂಲಭೂತ ಸೌಕರ್ಯಗಳ ಒದಗಿಸುವುದು.
* ಗ್ರಾಮೀಣ ಉತ್ಪಾದಕತೆ ಹೆಚ್ಚಿಸುವುದು. * ಕೃಷಿ ಉತ್ಪನ್ನಗಳನ್ನು ಹಳ್ಳಿಗಳಲ್ಲಿಯೇ ಸಂಸ್ಕರಿಸಿ ಮಾರಾಟ * ಜನರ ಉದ್ಯೋಗಾವಕಾಶಗಳು & ಆದಾಯವನ್ನು ಹೆಚ್ಚಿಸುವುದು. * ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿ * ಹಿಂದುಳಿದ ಮತ್ತು ಬಡಜನರ ಅಭಿವೃದ್ಧಿ.

4. ಗಾಂಧೀಜಿಯವರ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ತಿಳಿಸಿ.

ಉ: * ಸ್ವಾವಲಂಬಿ, ಸ್ವಯಂಪೂರ್ಣ ಹಾಗು ಸಮೃದ್ದ ಗ್ರಾಮಗಳ ಅಭಿವೃದ್ಧಿ

* ಎಲ್ಲ ರೀತಿಯ ಶೋಷಣೆಗಳನ್ನು ತಡೆಯುವುದು * ಮಾನವನ ಸ್ವಾತಂತ್ರ್ಯ ಮತ್ತು ಘನತೆಯ ರಕ್ಷಣೆ * ಸಹಾನುಭೂತಿ ಮತ್ತು ಸಹಕಾರದಂತಹ ಮಾನವೀಯ ಮೌಲ್ಯಗಳ ವೃದ್ಧಿ. * ಪ್ರತಿ ಹಳ್ಳಿ ಜನರಿಗೆ ಅಧಿಕಾರ ವಹಿಸಿಕೊಡುವುದು.

## ಅಧ್ಯಾಯ – 4: ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

5. ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಡುವಿನ ಭಿನ್ನತೆಗಳನ್ನು ತಿಳಿಸಿ.

ಉ:

| ಸಾರ್ವಜನಿಕ ಹಣಕಾಸು | ವೈಯಕ್ತಿಕ ಹಣಕಾಸು |
|---|---|
| * ಸರ್ಕಾರದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ. | * ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ. |
| * ಸರ್ಕಾರವು ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಆದಾಯವನ್ನು ಹೊಂದಿಡುತ್ತದೆ. | * ವ್ಯಕ್ತಿಗಳು ಮೊದಲು ತಮ್ಮ ಆದಾಯವನ್ನು ಅಂದಾಜು ಮಾಡಿ, ನಂತರ ಅದಕ್ಕೆ ಅನುಗುಣವಾಗಿ ವೆಚ್ಚ ಮಾಡುತ್ತಾರೆ. |
| * ಹಣಕಾಸನ್ನು ಶಾಸನಸಭೆಗಳಲ್ಲಿ ಚರ್ಚಿಸಲಾಗುತ್ತದೆ, ಎಲ್ಲರಿಗೂ ತಿಳಿಯುವಂತೆ ಮಾಧ್ಯಮಗಳಲ್ಲಿ ಪ್ರಚಾರ ಮಾಡಲಾಗತ್ತದೆ. | * ಹಣಕಾಸಿನ ವ್ಯವಹಾರಗಳನ್ನು ಆದಷ್ಟೂ ಗೌಪ್ಯವಾಗಿಡಲಾಗುತ್ತದೆ. |
| * ಸರ್ಕಾರ ಉಳಿತಾಯ ಮಾಡಿದರೆ ದೇಶದ ಪ್ರಗತಿ ಕುಂಠಿತವಾಗುತ್ತದೆ. ಆದ್ದರಿಂದ ಅದು ಆದಾಯಕ್ಕಿಂತ ಹೆಚ್ಚಿನ ಹಣವನ್ನ ಅಭಿವೃದ್ಧಿ ಕೆಲಸಗಳಿಗಾಗಿ ವೆಚ್ಚ ಮಾಡಲು ಪ್ರಯತ್ನಿಸುತ್ತದೆ. | * ವ್ಯಕ್ತಿ ಅಥವಾ ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕವಾಗಿರುತ್ತದೆ. |

6. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

ಉ: * ದೇಶದ ನೈಸರ್ಗಿಕ ಸಂಪತ್ತು, ಶ್ರಮ ಮತ್ತು ಭೌತಿಕ ಬಂಡವಾಳವು ಉತ್ಪಾದಕರ ನಡುವೆ ಸಮರ್ಪಕ ಹಂಚಿಕೆ.

* ಆದಾಯದ ಸಮಾನ ಹಂಚಿಕೆ. * ಎಲ್ಲ ವರ್ಗದ ಜನರು ಶಾಂತಿ, ನೆಮ್ಮದಿಯಿಂದ ಬದುಕಲು ಪ್ರಯತ್ನಿಸುತ್ತದೆ. * ಕೃಷಿ, ಕೈಗಾರಿಕೆ, ಮೂಲ ಸೌಕರ್ಯ ಮೊದಲಾದ ಆದ್ಯತಾ ವಲಯಗಳಲ್ಲಿ ಬಂಡವಾಳ ಹೂಡಿಕೆ ಹೆಚ್ಚಳ. * ಬಡತನ ಮತ್ತು ನಿರುದ್ಯೋಗ ನಿವಾರಣೆ * ಆರ್ಥಿಕ ಸ್ಥಿರತೆ ಸಾಧಿಸುವುದು.

7. ಕೇಂದ್ರ ಸರ್ಕಾರದ ಯೋಜನಾ ವೆಚ್ಚಗಳನ್ನು ಪಟ್ಟಿಮಾಡಿರಿ.

ಉ: ಕೇಂದ್ರ ಯೋಜನಾ ವೆಚ್ಚದ ಅಡಿಯಲ್ಲಿ ಕೇಂದ್ರ ಸರ್ಕಾರವು ಮೂರು ರೀತಿಯ ಸೇವೆಗಳ ನಿರ್ವಹಣೆ ಹಾಗು ಅಭಿವೃದ್ಧಿಗಾಗಿ ಹಣವನ್ನು ವೆಚ್ಚ ಮಾಡುತ್ತದೆ. ಅವುಗಳೆಂದರೆ

1. ಆರ್ಥಿಕ ಸೇವೆಗಳು:– ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು, ಕೈಗಾರಿಕೆ, ಸಾರಿಗೆ, ಸಂಪರ್ಕ,ಇಂಧನ, ವಿಜ್ಞಾನ ಮತ್ತು ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ ಇತ್ಯಾದಿ.
2. ಸಾಮಾಜಿಕ ಸೇವೆಗಳು: ಶಿಕ್ಷಣ, ಆರೋಗ್ಯ,ನೈರ್ಮಲ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು, ಪೂರೈಕೆ, ಗೃಹ ನಿರ್ಮಾಣ, ಸಾಮಾಜಿಕ ಕಲ್ಯಾಣ ಇತ್ಯಾದಿ.
3. ಸಾಮಾನ್ಯ ಸೇವೆಗಳು:– ದೇಶದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡಲು ಮಾಡುವ ವೆಚ್ಚಗಳು.

8. ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ತಿಳಿಸಿ.

ಉ:
1. ಭಾರತೀಯ ರಿಸರ್ವ್‌ಬ್ಯಾಂಕು ಗಳಿಸುವ ನಿವ್ವಳ ಲಾಭ.
2. ಭಾರತೀಯ ರೈಲ್ವೆ ಗಳಿಸುವ ನಿವ್ವಳ ಲಾಭ.
3. ಅಂಚೆ ಮತ್ತು ದೂರವಾಣಿ ಸೇವೆಗಳಿಂದ ಬರುವ ಆದಾಯ.
4. ಸಾರ್ವಜನಿಕ ಉದ್ಯಮಗಳು ಗಳಿಸುವ ಆದಾಯ.
5. ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
6. ವಿವಿಧ ರೀತಿಯ ಶುಲ್ಕಗಳು, ದಂಡಗಳು ಇತ್ಯಾದಿ.

# ದಾರಿ ದೀಪ– ಪಾಸಿಂಗ್ ಪ್ಯಾಕೇಜ್
# ವ್ಯವಹಾರ ಅಧ್ಯಯನ

## ಅಧ್ಯಾಯ–1 : ಬ್ಯಾಂಕು ವ್ಯವಹಾರಗಳು

**ಆರು ವ್ಯಾಕಗಳಲ್ಲಿ ಉತ್ತರಿಸಿ.**

1. ಬ್ಯಾಂಕುಗಳ ಸೇವೆಗಳನ್ನು ಪಟ್ಟಿ ಮಾಡಿರಿ.

ಉ: * ಜಮಾ ಕಾರ್ಡು ಕೊಡುವುದು.
* ಖಾಸಗಿ ಸಾಲಗಳು
* ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.
* ವ್ಯಾಪಾರಕ್ಕೆ ಬೇಕಾದ ಸಾಲ ಕೊಡುತ್ತದೆ.
* ಭದ್ರತಾ ಕಪಾಟುಗಳನ್ನು ನೀಡುತ್ತದೆ.
* ಭರವಸೆ ಸೇವೆಗಳನ್ನು ನೀಡುತ್ತದೆ.

2. 'ಅಂಚೆ ಇಲಾಖೆಯು ಅನೇಕ ಹಣಕಾಸು ವ್ಯವಹಾರ ಕೈಗೊಂಡಿದೆ' ಈ ಹೇಳಿಕೆಯನ್ನು ಸಮರ್ಥಿಸಿ.

ಉ: * ಉಳಿತಾಯ ಖಾತೆ ತೆರೆಯಬಹುದು. * ಮಾಹೆಯಾನ ತೀರು ಠೇವಣಿ ಸೇವೆ ಒದಗಿಸುತ್ತದೆ. * ನಿವೃತ್ತಿ ವೇತನ ಪಡೆಯಬಹುದಾಗಿದೆ. * ಹಣವನ್ನು ವರ್ಗಾಯಿಸಬಹುದು. * ಅಂಚೆ ಮತ್ತು ವಿಮೆ ನೀಡುತ್ತದೆ. * ರಾಷ್ಟ್ರೀಯ ಉಳಿತಾಯ ಪತ್ರ ನೀಡುತ್ತದೆ. * ಕಿಸಾನ್ ವಿಕಾಸ ಪತ್ರ ನೀಡುತ್ತದೆ.

3. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲ ಗಳನ್ನು ಪಟ್ಟಿ ಮಾಡಿ.

ಉ: * ಹಣದ ಭದ್ರತೆ ಕಾಪಾಡುತ್ತದೆ. * ಹಣದ ಪಾವತಿಗಳನ್ನು ಮಾಡಬಹುದು.
* ಹಣವನ್ನು ವಸೂಲು ಮಾಡಲು ಸಹಾಯಕ. * ಸಾಲ ಪಡೆಯಲು ಸಹಾಯಕ.
* ವ್ಯವಹಾರಗಳನ್ನು ಸುಗಮವಾಗಿ ನಡೆಸಬಹುದು. * ಭದ್ರತಾ ಕಪಾಟುಗಳನ್ನು ಪಡೆಯಬಹುದು.

4. ಬ್ಯಾಂಕುಗಳ ಕಾರ್ಯಗಳನ್ನು ತಿಳಿಸಿ.

ಉ: * ಠೇವಣಿಗಳನ್ನು ಅಂಗೀಕರಿಸುವುದು. * ಸಾಲಗಳನ್ನು ನೀಡುವುದು. * ಹಣವನ್ನು ವರ್ಗಾಯಿಸುವುದು. * ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು. * ಬೆಲೆ ಬಾಳುವ ವಸ್ತುಗಳನ್ನು ಭದ್ರವಾಗಿ ಇಟ್ಟುಕೊಳ್ಳವುದು. * ಸರ್ಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.

5. ಬ್ಯಾಂಕ್ ನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಹಂತಗಳಾವುವು?

ಉ: * ಯಾವ ವಿಧವಾದ ಖಾತೆ ತೆರೆಯಬೇಕೆಂದು ನಿರ್ಧರಿಸಬೇಕು, * ಬ್ಯಾಂಕ್ ಅಧಿಕಾರಿಯನ್ನು ಭೇಟಿ ಮಾಡಬೇಕು, * ಪರಿಚಿತ (ಖಾತೆ ಹೊಂದಿರುವವರ) ಸಹಿ ಮಾಡಿಸಬೇಕು.
* ಅರ್ಜಿ ನಮೂನೆಯೊಂದಿಗೆ ದಾಖಲೆಗಳನ್ನು ಸೇರಿಸಿ ಅಧಿಕಾರಿಗೆ ನೀಡಬೇಕು. * ಅಧಿಕಾರಿಯ ಒಪ್ಪಿಗೆ ಪಡೆಯಬೇಕು.

## ಅಧ್ಯಾಯ : 2 ವಿಮೆ

6. 'ವಿಮೆಯ ಅತ್ಯಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ' ಈ ಹೇಳಿಕೆಯನ್ನು ಸಮರ್ಥಿಸಿ.

ಉ: * ಜೀವ ನಷ್ಟದ ನಿವಾರಣೆಗೆ ಸಹಾಯಕ. * ಸಾಮಾಜಿಕ ಒಳಿತಿಗೆ ಸಹಾಯಕವಾಗಿದೆ. * ಹಣದ ಠೇವಣಿಗಳನ್ನು ಪ್ರೋತ್ಸಾಹಿಸುತ್ತದೆ. * ಸಾಲಗಳನ್ನು ನೀಡುತ್ತದೆ. * ತೆರಿಗೆ ವಿನಾಯಿತಿಗೆ ಸಹಾಯಕವಾಗಿದೆ. * ಸಾಲಗಳನ್ನು ನೀಡುತ್ತದೆ. * ತೆರಿಗೆ ವಿನಾಯಿತಿಗೆ ಸಹಾಯ ಮಾಡುತ್ತದೆ. * ಜೀವ ಮತ್ತು ವಸ್ತು ನಷ್ಟಗಳನ್ನು ಭರಿಸುವುದರಿಂದ ವಿಮೆದಾರನು ನೆಮ್ಮದಿಯಿಂದ ಇರಬಹುದು.

7. ವಿಮಾ ಪಾಲಿಸಿ ಪಡೆಯುವುದರಿಂದ ವಿಮಾದಾರರರಿಗೆ ದೊರೆಯಬಹುದಾದ ಅನುಕೂಲಗಳೇನು?

ಉ: * ಅನಾಹುತ ಸಂಭವಿಸಿದಾಗ ಕುಟುಂಬಕ್ಕೆ ತಕ್ಷಣ ಹಣದ ಸಹಾಯ ದೊರೆಯುತ್ತದೆ.
* ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯಕವಾಗುತ್ತದೆ. * ನಿವೃತ್ತಿಯ ನಂತರದ ಆದಾಯದ ಮೂಲವಾಗುತ್ತದೆ. * ಗಂಭೀರ ಖಾಯಿಲೆಯಿಂದಾಗಿ ಆದಾಯ ಕುಂಠಿತಗೊಂಡಾಗ ಹಣದ ಭರವಸೆ ದೊರೆಯುತ್ತದೆ. * ಜೀವನ ಶೈಲಿ ಬದಲಾವಣೆಗಳಿಗೆ ಅನುಗುಣವಾಗಿ ವಿಮೆ ಬೇಕಾಗುತ್ತದೆ.

8. ವಿಮಾ ಪಾಲಿಸಿಯ ಪ್ರಕಾರಗಳಾವುವು?

ಉ: * ಕಾಲಮಿತಿ ವಿಮೆ, * ಜೀವಮಾನ ದತ್ತಿ ವಿಮಾ ಪಾಲಿಸಿ * ಹಣ ಮರುಪಾವತಿ ವಿಮೆ * ಮಕ್ಕಳ ಭವಿಷ್ಯ ವಿಮೆ * ವಾರ್ಷಿಕ ಮರುಪಾವತಿ ಪಾಲಿಸಿ * ಷೇರುಗಳ ಮೌಲ್ಯಧಾರಿತ ವಿಮಾ ಪಾಲಿಸಿ.

9. ವಿಮೆಯ ತತ್ವಗಳಾವುವು?

ಉ: * ಅತ್ಯಧಿಕ ವಿಶ್ವಸೌಹಾರ್ದತೆಯ ತತ್ವ * ವಿಮಾರ್ಹ ಹಿತಾಸಕ್ತಿ * ನಷ್ಟ ಪರಿಹಾರ ತತ್ವ * ಕೊಡುಗೆಯ ತತ್ವ * ಸಮಾನ ಅನುಭೋಗದ ತತ್ವ, * ಕನಿಷ್ಟ ನಷ್ಟ ಶಮನ ತತ್ವ.

10. ಜೀವ ವಿಮೆಯ ಸಾಮಾನ್ಯವಿಮೆಗಿಂತ ಹೇಗೆ ಭಿನ್ನವಾಗಿದೆ.

ಉ:

| ಜೀವ ವಿಮೆ | ಸಾಮಾನ್ಯ ವಿಮೆ |
| --- | --- |
| * ಮನುಷ್ಯನ ಜೀವಕ್ಕೆ (ತುಂಬಿಕೊಡುವ) ಸಂಬಂಧಿಸಿದ ವಿಮೆ | * ಜೀವವಿಲ್ಲದ ವಸ್ತಗಳ ವಿಮೆ |

* ಸಾಮಾನ್ಯವಾಗಿ ದೀರ್ಘಕಾಲ ದಿಂದ ಕೂಡಿದೆ. * ಇದು ಅಲ್ಪ ಕಾಲಿಕವಾದುದು.

* ನಷ್ಟ ಪರಿಹಾರ ತತ್ವ ಸೇರಿಸುವುದಿಲ್ಲ * ನಷ್ಟ ಪರಿಹಾರ ತತ್ವ ಸೇರಿರುತ್ತಾರೆ.

11. ವಿಮಾ ಪಾಲಿಸಿಯನ್ನು ತೆಗೆದುಕೊಳ್ಳಲು ಅನುಸರಿಸಬೇಕಾದ ವಿಧಾನಗಳನ್ನು ತಿಳಿಸಿ.

ಉ: * ವಿಮಾ ಸಂಸ್ಥೆಯನ್ನು ಗುರುತಿಸಬೇಕು. * ನಮಗಿಷ್ಟವಾದ ವಿಮೆಯ ವೆಚ್ಚ ಮತ್ತು ವಂತಿಗೆಗಳನ್ನು ತಿಳಿಯಬೇಕು. * ಅರ್ಜಿ ನಮೂನೆಯನ್ನು ಪಡೆಯಬೇಕು. * ಅರ್ಜಿ ನಮೂನೆಯನ್ನು ಭರ್ತಿ ಮಾಡಬೇಕು. * ವಿಮಾ ಕಂತಿನ ಹಣ, ಲಗತ್ತಿಸಬೇಕಾದ ದಾಖಲೆಗಳೊಂದಿಗೆ ಅರ್ಜಿ ತಲುಪಿಸಬೇಕು. * ವಿಮಾ ಬಾಂಡನು ಪಡೆದು ಸುರಕ್ಷಿತವಾಗಿಡಬೇಕು.

## ಅಧ್ಯಾಯ–8 : ಸ್ವಾತಂತ್ರ್ಯ ಹೋರಾಟ

**1. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವೇನು?**

ಉ: * ಸಂವಿಧಾನಿಕ ಚೌಕಟ್ಟಿನೊಳಗೆ ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು.
* ಜನರಿಗೆ ರಾಜಕೀಯ ಶಿಕ್ಷಣ ನೀಡಲು ಪ್ರಯತ್ನಿಸಿದರು.
* ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಬೇಡಿಕೆಯನ್ನಿಟ್ಟರು.
* ಸೈನೀಕ ವೆಚ್ಚವನ್ನು ಕಡಿಮೆ ಮಾಡುವ ಬೇಡಿಕೆಯನ್ನು ಮುಂದಿಟ್ಟರು
* ಭಾರತೀಯರಿಗೆ ಉತ್ತಮ ಶಿಕ್ಷಣ ಕೊಡುವ ಬಗ್ಗೆ ಒತ್ತಾಯಿಸಿದರು
* ಬಡತನದ ಬಗ್ಗೆ ಅಧ್ಯಯನ ನಡೆಸಿ ಸಮಸ್ಯೆ ಪರಿಹರಿಸಲು ಹೋರಾಡಿದರು.
* ಭಾರತದ ಸಂಪತ್ತು ಬ್ರಿಟನ್‌ಗೆ ಹರಿದು ಹೋಗುವ ಅದರ ಅಂತಕಕಾರಿ ಪರಿಣಾಮ ಎತ್ತಿ ಹಿಡಿದರು.
* ಮಂದಗಾಮಿಗಳ ಈ ಹೋರಾಟದ ಸ್ವರೂಪವು ಉದಾರ ರಾಷ್ಟವಾದದ ಕಾಲವೆಂದೇ ಹೆಸರಾಯಿತು.

2. ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಹೆಚ್ಚಿಸುವಲ್ಲಿ ತೀವ್ರವಾದಿಗಳ ಪಾತ್ರವೇನು?

ಉ: * ಮಂದಗಾಮಿಗಳ ಮೃದು ದೊರಣೆಯ ಬದಲಾಗಿ ತೀವ್ರಪ್ರತಿಭಟನೆಗಳನ್ನು ಹೋರಾಟದ ಮಂತ್ರವಾಗಿಸಿಕೊಂಡರು.
* ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧ ಆರಂಭಿಸಿದರು.
* ಸ್ವದೇಶಿ ಚಳುವಳಿಯನ್ನು ದೇಶದಾದ್ಯಂತ ಕೊಂಡೊಯ್ದುದರು.
* ಉತ್ತಮ ಆಳ್ವಿಕೆಯು ಎಂದೂ ಕೊಂಡ ಸ್ವಯಂ ಆಳ್ವಿಕೆಗೆ ಪರ್ಯಾಯವಾಗದೆ ಎಂದು ಪ್ರತಿಪಾದಿಸಿದರು.
* ಇದರಲ್ಲಿ ತಿಲಕರು "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು" ಅದನ್ನು ಪಡೆದೇ ತೀರುವೆ ಎಂದು ಘೋಷಿಸಿದರು.
* ಪೂರ್ಣ ಸ್ವರಾಜ್ಯವನ್ನು ಪಡೆಯುವುದು ತೀವ್ರವಾದಿಗಳ ಗುರಿಯಾಗಿತ್ತು.
* ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಷ್ ವಿರೋದಿ ಹೋರಾಟಕ್ಕೆ ಸಜ್ಜುಗೊಳಿಸಿದರು.
* ಕೇಸರಿ, ಮರಾಠದಂತಹ ಪತ್ರಿಕೆಗಳ ಮೂಲಕ ಜನರನ್ನು ಹುರಿದುಂಬಿಸಿ ಹೋರಾಟಕ್ಕೆ ಬಳಸಿಕೊಂಡರು.

3. ನೆಹರೂರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿರಿ.

* ದೇಶಿಯ ಸಂಸ್ಥಾಗಳ ವಿಲೀನಕ್ಕೆ ಶ್ರಮಿಸಿದರು.
* ಭಾಷಾವಾರು ಪ್ರಾಂತ್ಯಗಳನ್ನು ರಚಿಸಿ. ಪ್ರಜಾಭುತ್ವಕ್ಕೆ ತಳಹದಿ ಹಾಕಿದರು
* ಮಿಶ್ರ ಆರ್ಥಿಕ ನೀತಿಯ ಮೂಲಕ ಭಾರತದ ಆರ್ಥಿಕಾಭಿವೃದ್ಧಿಗೆ ಶ್ರಮಿಸಿದರು
* ಬೃಹತ್ ಕೈಗಾರಿಕೆಗಳ ಸ್ಥಾಪನೆ ಮೂಲಕ ಕೈಗಾರೀಕರಣದ ಪಿತಾಮಹ ಎನಿಸಿಕೊಂಡರು
* ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ದೇಶದ ಅಭಿವೃದ್ಧಿಗೆ ಮುನ್ನುಡಿ ಬರೆದರು
* ಅಲಿಪ್ತ ನೀತಿಯ ಮೂಲಕ ಭಾರತದ ವಿದೇಶಾಂಗ ನೀತಿಯ ಶಿಲ್ಪಿ ಎನಿಸಿಕೊಂಡರು.
* ಪಂಚಶೀಲತತ್ವಗಳ ಆಧಾರದ ಮೇಲೆ ಯುದ್ಧದಿಂದ ದೂರ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳ ಆಡಳಿತವನ್ನು ಜಾರಿಗೊಳಿಸಿದರು.
* ಸಮಾಜವಾದಿ ಹಾಗೂ ಕಮ್ಯುನಿಷ್ಟ್ ವಿಚಾರಗಳ ಬಗ್ಗೆ ಮೃದುಧೋರಣೆ ತಳೆಯುವ ಮೂಲಕ ಪೂರ್ಣ ಪ್ರಜಾಪ್ರಭುತ್ವಕ್ಕೆ ಒತ್ತು ನೀಡಿದರು.

4. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ" ಈ ಹೇಳಿಕೆಯ ಹಿನ್ನೇಲೆಯಲ್ಲಿ ಡಾ॥ ಬಿ.ಆರ್. ಅಂಬೇಡ್ಕರರ ಹೋರಾಟವನ್ನು ಪುಷ್ಠೀಕರಿಸಿ.

ಉ: * ನಮ್ಮ ದೇಶವನ್ನು ಅಳುವವರು ನಮ್ಮವರೇ ಆಗಿದ್ದರೂ ಸಹ ಅಸಮಾನತೆ ಮತ್ತು ಬಡತನ ಹಾಗೇಯೇ ಉಳಿದಿದೆ.

* ಇವರು ಜಾತಿಯ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು.
* 'ಮಹವ್ ಮತ್ತು ಕಾಲಾರಾಂ ಚಳುವಳಿಗಳನ್ನು ರೂಪಿಸಿದರು.
* 3 ದುಂಡು ಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿ ಹರಜನೋದ್ಧಾರಕ್ಕೆ ಸಲಹೆಗಳನ್ನು ನೀಡಿದರು.
* ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳ ಮೀಸಲಾತಿಗಾಗಿ ಹೋರಾಡಿದರು.
* ಬಹಿಷ್ಕೃತ ಹಿತಕಾರಣಿಸಭಾ" ಎಂಬ ಸಂಘಟನೆಯ ಜೊತೆಗೆ ಸ್ವತಂತ್ರ ಕಾರ್ಮಿಕರ ಪಕ್ಷದ ಮೂಲಕ ಅಸ್ವಶ್ಯತೆ ನಿವಾರಣೆಗೆ ಹೋರಾಡಿದರು.
* ಪ್ರಬುದ್ಧ ಭಾರತ ಮೂಕ ನಾಯಕ ಜನತಾ ಬಹಿಷ್ಕೃತ ಭಾರತ ಇತ್ಯಾದಿ ಪತ್ರಿಕೆಗಳ ಮೂಲಕ ಸಾಮಾಜಿಕ ಆರ್ಥಿಕ ಅಸಮಾನತೆ ನಿವಾರಣೆಗೆ ಹೋರಾಡಿದರು.
* ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನು ರಕ್ಷಣೆ ನೀಡಿದರು.

5. ರೈತ ಹಾಗೂ ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೇಗೆ ಪ್ರಮುಖ ಪಾತ್ರ ವಹಿಸಿದ್ದವು ಎಂಬುದನ್ನು ವಿವರಿಸಿರಿ.

ಉ: ಜಮೀನ್ದಾರರು ಮತ್ತು ಯುರೋಪಿಯನ್ನ್ ಪ್ಲಾಂಟರುಗಳ ವಿರುದ್ಧ ರೈತರು ಹಲವಾರು ಕಡೆ ದಂಗೆಗಳನ್ನು ನಡೆಸಿದ್ದರು.

* ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆ ಬೆಳೆಯುವುದನ್ನು ವಿರೋಧಿಸಿದರು.
* ಅಧಿಕ ಭೂ ಕಂದಾಯ ಹೇರಿಯ ವಿರುದ್ಧ ಹರತಾಳ ನಡೆಸಿದರು.
* ಅಸಹಕಾರ ಆಂದೋಲನ ಕರ ನಿರಾಕರಣೆ, ಸ್ವಿಟ್ ಇಂಡಿಯಾ ಚಳುವಳಿಗಳಲ್ಲಿ ರೈತರು ಸಕ್ರೀಯವಾಗಿ ಭಾಗವಹಿಸಿದ್ದರು.
* ಎಡಪಂಥೀಯ ವಿಚಾರಧಾರೆಗಳಿಂದ ರಚಿತವಾದ 'ಕಿಸಾನ್ ಸಂಘದ ಮೂಲಕ ಹೋರಾಟ ರೂಪಿಸಿದರು".
* ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಸಿದರು.
* ಕಾರ್ಮಿಕ ಸಂಘಟನೆಗಳನ್ನು ತಮ್ಮ ಹಕ್ಕಿಗಾಗಿ ಹೋರಾಡುತ್ತಾ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿದವು.
* ಸೆಣಬು ಬಟ್ಟೆ ಗಿರಣಿ ಮತ್ತು ರೈಲ್ವೆ ಕೂಲಿ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗಿ ತೊಡಗಿದರು.

6. ಸ್ವಾತಂತ್ರ್ಯ ಸಂಗ್ರಾಮದಲ್ಲಿ " ಸಂತಾಲರ ಬುಡಕಟ್ಟು ದಂಗೆಯನ್ನು" ಭಾರತದ ಆಧ್ಯ ಹೋರಾಟ ಎಂದು ಹೇಗೆ ಹೇಳುವಿರಿ.

* ಬ್ರಿಟಿಷರ ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಜನರು ನಿರ್ಗತಿಕರಾದರು.
* ಇವರ ಭೂಮಿಯ ಜಮೀನ್ದಾರರ ಕೈ ಸೇರಿತು.
* ಬಂಗಾಳಿ ಜಮೀನ್ಧಾರರು, ಲೇವಾದೇವಿಗಾರರು & ಕಂಪನಿಯ ಸರ್ಕಾರವು ಇವರ ಶೋಷಣೆಗೆ ಕಾರಣರಾದರು.
* ಬುಡಕಟ್ಟು ಜನರು ಅವರ ಶತ್ರುಗಳನ್ನು ಹತ್ಯೆ ಮಾಡಿದರು.
* ಇದರಿಂದ ಜಮೀನ್ದಾರರು, ಲೇವಾದೇವಿಗಾರರನ್ನು ಫಲಾಯನ ಮಾಡಿದರು.
* ದಂಗೆಗಳನ್ನು ಹತ್ತಿಕ್ಕಲು ಬ್ರಿಟೀಷರು ಸೈನ್ಯ ಬಳಸಿಕೊಂಡರು.
* ಸಂತಾಲಿಕ ದಂಗೆಯು ಕೊನೆಗೊಂಡರೂ ಅದರ ಸ್ಪೋರ್ತಿಯು ಮುಂದಿನ ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು.

7. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರಬೋಸರ ಪಾತ್ರವನ್ನು ವಿವರಿಸಿರಿ:

ಉ: * ಗಾಂಧೀಜಿಯವರ ಸೌಮ್ಯ ಹೋರಾಟಕ್ಕೆ ಬದಲಾಗಿ ವಿದೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಸಿ ಹೋರಾಡಲು ಪ್ರೇರೇಪಿಸಿದರು.

* ಸಮಾಜವಾದಿ, ಎಡ ಪಂಥಿಯ ವಿಚಾರದ ಹಿನ್ನೆಲೆಯಲ್ಲಿ ನೆಹರೂ& ಬೋಸರು ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪಿಸಿದರು.
* ಪ್ರಗತಿ ಪರ ಮತ್ತು ತೀವ್ರತರ ಆಶಯಗಳನ್ನು ಹೊತ್ತು ಫಾರ್ವರ್ಡ್ ಬ್ಲಾಕ್ ಎಂಬ ಪಕ್ಷ ಕಟ್ಟಿದರು.

* ಜರ್ಮನಿಯ ಹಿಟ್ಲರನ ಸಹಾಯ ಪಡೆದು ಜರ್ಮನಿಯಲ್ಲಿನ ಭಾರತೀಯ ಯುದ್ಧ ಖೈದಿಗಳನ್ನು ಸಂಘಟಿಸಿದರು.
* 'ಅಜಾದ್ ಹಿಂದ್ ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಪ್ರಸಾರ ಮಾಡಿ ಹೋರಾಟಕ್ಕೆ ಪ್ರೇರೇಪಿಸಿದರು.
* ರಾಸ್ ಬಿಹಾರಿ ಬೋಸರ ಜೊತೆ ಕೈ ಜೋಡಿಸಿ ಐ.ಎಸ್.ಎ.ಸೈನ್ಯವನ್ನು ಸ್ಥಾಪಿಸಿದರು.
* ಭಾರತೀಯ ರಾಷ್ಟ್ರೀಯ ಸೇನೆಯ ಮಹಿಳಾ ರೆಜಮೆಂಟಗೆ ಕ್ಯಾಪ್ಟನ್ ಲಕ್ಷ್ಮೀಯವರು ನೇತೃತ್ವ ವಹಿಸಿದರು.
* ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ ಎಂಬ ಘೋಷಣೆ ಮೂಲಕ ದೆಹಲಿ ಚಲೋ ಚಳುವಳಿಗೆ ಚಾಲನೆ ನೀಡಿದರು.

8. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರವನ್ನು ವಿವರಿಸಿರಿ.

ಉ: * 1920 ರಿಂದ 1947 ರ ಅವಧಿಯನ್ನು ಗಾಂಧಿ ಯುಗ ಎಂದು ಕರೆಯುತ್ತಾರೆ.
* ಗಾಂಧೀಜಿಯವರು ತಮ್ಮ ಹೋರಾಟದಲ್ಲಿ ಅಹಿಂಸೆ ಮತ್ತು ಸತ್ಯಾಗ್ರಹವನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಂಡರು.
* ಮುಸ್ಲೀಮರ ಸಹಭಾಗಿತ್ವಕ್ಕಾಗಿ ಖಿಲಾಫತ್ ಚಳುವಳಿ ಬೆಂಬಲಿಸಿದರು.
* 1920ರಲ್ಲಿ ಗಾಂಧೀಜಿಯವರು ಬ್ರಿಟೀಷರ ವಿರುದ್ಧ ಅಸಹಕಾರ ಚಳುವಳಿಗೆ ಕರೆಯಿತ್ತರು.
* ಬ್ರಿಟೀಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು.
* 1930 ರಲ್ಲಿ ಬ್ರಿಟೀಷರ ವಿರುದ್ಧ ಕಾನೂನು ಭಂಗ ಚಳುವಳಿಯನ್ನು ಆರಂಭಿಸಿದರು
* ತಮ್ಮ ಆಶ್ರಮ ಸಬರಮತಿಯಿಂದ ತೀರದ ದಂಡಿಯವರೆಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ನಡೆದು ಹಿಡಿ ಉಪ್ಪು ತಯಾರಿಸಿ ಜನರಿಗೆ ವಿತರಿಸಿದರು.
* ಬ್ರಿಟೀಷರೇ " ಭಾರತ ಬಿಟ್ಟು ತೊಲಗಿ" ಚಳುವಳಿ ಮೂಲಕ ಭಾರತೀಯರಿಗೆ " ಮಾಡು ಇಲ್ಲವೇ ಮಡಿ" ಎನ್ನುವ ಕರೆ ನೀಡಿದರು.
* 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಡುವುದರ ಮೂಲಕ 'ರಾಷ್ಟ್ರಪಿತ' ಎಂದು ಪ್ರಸಿದ್ಧರಾದರು.

9. ಅಸಹಕಾರ ಚಳುವಳಿಯನ್ನು ವಿವರಿಸಿರಿ:
* ಗಾಂಧೀಜಿಯವರು ಬ್ರಿಟೀಷರ ವಿರುದ್ಧ 1920 ರಲ್ಲಿ ಅಸಹಕಾರ ಚಳುವಳಿಗೆ ಕರೆ ನೀಡಿದರು.
* ವಿದ್ಯಾರ್ಥಿಗಳು, ವಕೀಲರು, ಗಣ್ಯರು ಚಳುವಳಿಯನ್ನು ಬೆಂಬಲಿಸಿ ಶಾಲಾ ಕಾಲೇಜುಗಳನ್ನು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು.
* ಭಾರತೀಯ ಅನೇಕ ಗಣ್ಯರು ಬ್ರಿಟೀಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು.
* ಉತ್ತರ ಪ್ರದೇಶದ ಚೌರಿಚೌರ ಎಂಬಲ್ಲಿ ಸಾವಿರಾರು ಸ್ವಾತಂತ್ರ್ಯ ಯೋದರು ಚಳುವಳಿಗೆ ದುಮುಕಿದರು.
* 1922 ರ ಶಾಂತಿಯುತವಾಗಿ ಚಳುವಳಿ ನಡೆಸುತ್ತಿದ್ದ ಚಳುವಳಿಗಾರರ ಮೇಲೆ ಪೋಲಿಸರು ಹಲ್ಲೆ ಮಾಡಿದರು.

* ಕುಪಿತರಾದ ಜನ ಪೋಲಿಸ್ ಠಾಣಿಗೆ ಬೆಂಕಿಹಚ್ಚಿದರು ಇದರಿಂದ 22 ಜನ ಪೋಲಿಸರ ಸಜೀವ ದಹನವಾಯಿತು.
* ಚಳುವಳಿಗಾರರ ಹಿಂಸಾತ್ಮಕ ವರ್ತನೆಗಾಗಿ ವಿಷಾದ ವ್ಯಕ್ತಪಡಿಸಿ, ಚಳುವಳಿ ಹಿಂತೆಗೆದು–ಕೊಂಡರು.

10. ಸವಿನಯ ಕಾನೂನುಭಂಗ ಚಳುವಳಿಯನ್ನು ವಿವರಿಸಿರಿ.

* ಕಾನೂನುಭಂಗ ಚಳುವಳಿಯ ನೇತೃತ್ವ ವಹಿಸಿಕೊಂಡ ಗಾಂಧೀಜಿಯವರು ವೈಸರಾಯ್ ಇರ್ವಿನ್ ನನ್ನ ಮುಂದೆ ಉಪ್ಪಿನ ಮೇಲೆ ತೆರಿಗೆ ಸೇರಿ 11 ಬೇಡಿಕೆಗಳನ್ನಿಟ್ಟರು.
* ಇರ್ವಿನ್ ರವರು ಈ ಬೇಡಿಕೆಗಳನ್ನು ಪರಿಗಣಿಸದೇ ತಿರಸ್ಕರಿಸಿದರು.
* 1990ರಲ್ಲಿ ಗಾಂಧೀಜಿಯವರು ಬ್ರಿಟೀಷರ ವಿರುದ್ಧ ಕಾನೂನುಭಂಗ ಚಳುವಳಿ ಆರಂಭಿಸಿದರು.
* ತಮ್ಮ ಆಶ್ರಮ ಸಬರಮತಿಯಿಂದ ಸೂರತ್ ಸಮೀಪದ ದಂಡಿಯವರೆಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ಹೊರಟರು.
* ದಂಡಿಯ ತೀರದಲ್ಲಿ ತಾವೇ ಉಪ್ಪು ತಯಾರಿಸಿ ಜನರಿಗೆ ವಿತರಿಸಿ ಕಾನೂನು ಮುರಿದರು.
* ಗಾಂಧೀಜಿಯವರನ್ನು ಅನೇಕ ರಾಷ್ಟ್ರ ನಾಯಕರನ್ನು ಬ್ರಿಟಿಷರು ಬಂಧಿಸಿದರು.
* 1931ರಲ್ಲಿ ಗಾಂಧಿ ಇರ್ವಿನ್ ನಡುವಿನ ಒಪ್ಪಂದ ಮೂಲಕ ಬಿಡುಗಡೆಯಾದರು.

11. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ಕುರಿತು ವಿವರಿಸಿರಿ.

* 1942ರಲ್ಲಿ ರಾಷ್ಟ್ರೀಯ ಕಾಂಗ್ರೇಸ್ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂಬ ಚಳುವಳಿ ಆರಂಭಿಸಿತು.
* ಗಾಂಧೀಜಿಯವರು ದೇಶಭಾಂದವರಿಗೆ "ಮಾಡು ಇಲ್ಲವೇ ಮಡಿ" ಎನ್ನುವ ಕರೆ ನೀಡಿದರು.
* ಬ್ರಿಟಿಷರು ಗಾಂಧೀಜಿ, ನೆಹರು ರಾಜೇಂದ್ರ ಪ್ರಸಾದ್ ಇತರ ನಾಯಕರನ್ನು ಬಂಧಿಸಿ ಜೈಲಿನಲ್ಲಿಟ್ಟಿತು.
* ರಾಷ್ಟ್ರೀಯ ಕಾಂಗ್ರೇಸ್ ನಾಯಕರು ಬಂಧನದಲ್ಲಿದ್ದ ಕಾರಣ ಇತರೆ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.
* ಜಯಪ್ರಕಾಶ ನಾರಾಯಣರವರು ಸಮಾಜವಾದಿ ಬಣದ ಪ್ರಮುಖ ನಾಯಕರಾಗಿ ದೇಶದ ವಿವಿದೆಡೆಯಲ್ಲಿ ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿದರು.
* ಸಮಾಜ ವಾದಿಗಳು " ಟಿ ಫ್ರೀಡಂ ಸ್ಟ್ರಗಲ್ ಪಾಂಟ್" ಎಂಬ ದಾಖಲೆ ಮೂಲಕ ಕಾರ್ಯ ತಂತ್ರ ರೂಪಿದರು.
* ಕಾರ್ಮಿಕರಿಗೆ ತರಬೇತಿ ನೀಡಿದರು & ದೇಶದ ಜನತೆಗೆ ಹೋರಾಟಕ್ಕೆ ಕರೆ ನೀಡಿದರು.
* ದಿಕ್ಕೆಟ್ಟ ಹೋರಾಟಕ್ಕೆ ದಿಕ್ಕು ಕೊಟ್ಟವರು ಇವರೇ. ಈ ಮೂಲಕ ಚಳುವಳಿಯನ್ನು ತೀವ್ರಗೊಳಿಸಲಾಯಿತು.

# ಇತಿಹಾಸ : ಅಧ್ಯಾಯ–1
# ಭಾರತಕ್ಕೆ ಯೂರೋಪಿಯನ್ನರ ಆಗಮನ

## ಕಾರ್ಡ್–1

## I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಹೊಸ ಭೂ ಪ್ರದೇಶಗಳನ್ನು ಅನ್ವೇಷಿಸಲು ನಾವಿಕರಿಗೆ ಪ್ರೋತ್ಸಾಹ ನೀಡಿದ ರಾಷ್ಟ್ರಗಳು

ಉ. ಎ) ಸ್ಪೇನ್ ಮತ್ತು ಇಟಲಿ ಬಿ) ಪೋರ್ಚುಗಲ್ ಮತ್ತು ಬ್ರಿಟನ್
ಸಿ) ಸ್ಪೇನ್ ಮತ್ತು ಪೋರ್ಚುಗಲ್ ಡಿ) ಬ್ರಿಟನ್ ಮತ್ತು ಫ್ರಾನ್ಸ್

2. ಬ್ರಿಟಿಷರಿಗೆ ಕಲ್ಕತ್ತ ಸಮೀಪದ ಕೆಲವು ಹಳ್ಳಿಗಳನ್ನು ದತ್ತಿಯಾಗಿ ನೀಡಿದ ಮೊಘಲ್ ದೊರೆ.

ಉ. ಎ) ಜಹಾಂಗೀರ್ ಬಿ) ಎರಡನೆ ಬಹದ್ದೂರ್‌ಷಾ
ಸಿ) ಬಾಬರ್ ಡಿ) ಫರೂಕ್ ಸಿಯಾರ್

3. ಸಿರಾಜುದ್ದೌಲನು ಈ ಪ್ರಾಂತ್ಯದ ನವಾಬನಾಗಿದ್ದನು

ಉ. ಎ) ಬಂಗಾಳ ಬಿ) ಮದ್ರಾಸ್ ಸಿ) ಮೈಸೂರು ಡಿ) ಕರ್ನಾಟಿಕ್

4. ಪ್ಲಾಸಿಕದನ ನಡೆದ ವರ್ಷ

ಉ. ಎ) 1857 ಬಿ) 1758 ಸಿ) 1757 ಡಿ) 1775

5. ಬಂಗಾಳ ಪ್ರಾಂತ್ಯದಲ್ಲಿ ಬ್ರಿಟಿಷರಿಗೆ ದಿವಾನಿ ಹಕ್ಕನ್ನು ನೀಡಿದವರು

ಉ. ಎ) ಷಾ ಆಲಂ ಬಿ) ಜಹಾಂಗೀರ್
ಸಿ) ಫರೂಕ್‌ಸಿಯಾರ್ ಡಿ) ಎರಡನೆ ಬಹದ್ದೂರ್ ಷಾ

6. ವಾಂಡಿವಾಷ್ ಕದನದಲ್ಲಿ ಬ್ರಿಟಿಷ್ ಸೈನ್ಯದ ನಾಯಕತ್ವವನ್ನು ವಹಿಸಿದವರು

ಉ. ಎ) ಡೂಪ್ಲೆ ಬಿ) ಸರ್‌ಐರ್‌ಕೂಟ್ ಸಿ) ರಾಬರ್ಟ್‌ಕ್ಲೈವ್ ಡಿ) ಲಾರ್ಡ್ ವೆಲ್ಲೆಸ್ಲಿ

7. ಪ್ಲಾಸಿಕದನದಲ್ಲಿ ಬ್ರಿಟಿಷ್‌ಸೈನ್ಯದ ನಾಯಕತ್ವವನ್ನು ವಹಿಸಿದವರು

ಉ. ಎ) ಸರ್‌ಐರ್‌ಕೂಟ್ ಬಿ) ರಾಬರ್ಟ್‌ಕ್ಲೈವ್ ಸಿ) ಲಾರ್ಡ್ ಡಾಲ್‌ಹೌಸಿ ಡಿ) ಲಾರ್ಡ್ ವೆಲ್ಲೆಸ್ಲಿ

8. ಬಂಗಾಳದಲ್ಲಿ ದ್ವಿಸರ್ಕಾರವನ್ನು ಜಾರಿಗೆ ತಂದವರು.

ಉ. ಎ) ಸಿರಾಜುದ್ದೌಲ ಬಿ) ಡೂಪ್ಲೆ ಸಿ) ರಾಬರ್ಟ್‌ಕ್ಲೈವ್ ಡಿ)ಮೀರ್ ಜಾಫರ್

9. ಮೀರ್‌ಜಾಫರನ ನಂತರದ ಬಂಗಾಳದ ನವಾಬ

ಉ. ಎ) ಷಾ ಆಲಂ ಬಿ) ಷೂಜ ಉದ್ದೌಲ ಸಿ) ಮೀರ್‌ಕಾಸಿಂ ಡಿ) ಸಿರಾಜುದ್ದೌಲ

## II. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡು ಹಿಡಿದವರು ಯಾರು?

ಉ. ವಾಸ್ಕೋಡಿಗಾಮ

2. ಭಾರತದ ಯಾವ ವಸ್ತುಗಳಿಗೆ ಯುರೋಪಿನ ಮಾರುಕಟ್ಟೆಯಲ್ಲಿ ಬೇಡಿಕೆ ಇತ್ತು?
ಉ. ಮೆಣಸು, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಇತ್ಯಾದಿ.

3. ಮಧ್ಯಕಾಲದಲ್ಲಿ ಯುರೋಪ್ ಮತ್ತು ಏಷ್ಯಾ ಖಂಡದ ನಡುವಿನ ವ್ಯಾಪಾರವು ಯಾವ ಪ್ರದೇಶಗಳ ಮೂಲಕ ನಡೆಯುತ್ತಿತ್ತು?
ಉ. ಪರ್ಶಿಯನ್ ಕೊಲ್ಲಿ, ಕೆಂಪುಸಮುದ್ರ ಮತ್ತು ಭಾರತದ ವಾಯುವ್ಯ ಪ್ರದೇಶ.

4. ಸಮುದ್ರಯಾನದಲ್ಲಿ ನಾವಿಕರಿಗೆ ಸಹಾಯಕವಾದ ವೈಜ್ಞಾನಿಕ ಸಲಕರಣೆಗಳಾವುವು?
ಉ. ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣ, ಭೂಪಟ

5. 17ನೇ ಶತಮಾನದವರೆಗೂ ಅರೇಬಿಯನ್ ಸಮುದ್ರದ ವ್ಯಾಪಾರಿ ಏಕಸ್ವಾಮ್ಯತೆ ಹೊಂದಿವರಾರು?
ಉ. ಪೋರ್ಚುಗೀಸರು

6. ಇಟಲಿಯಲ್ಲಿ ಸಾಂಬಾರ ಪದಾರ್ಥಗಳ ವಿತರಣೆ ಕೇಂದ್ರಗಳಾವುವು?
ಉ. ವೆನಿಸ್, ಜಿನೋವಾ, ಮಿಲಾನ್, ಫ್ಲಾರೆನ್ಸ್

7. ಫ್ರೆಂಚರು ಬ್ರಿಟಿಷರ ಯಾವ ಕೋಟೆಯನ್ನು ವಶಪಡಿಸಿ ಕೊಂಡರು?
ಉ. ಸೇಂಟ್ ಜಾರ್ಜ್ ಕೋಟೆ

8. ಮೀರ್ ಕಾಸಿಂ ಬ್ರಿಟಿಷರಿಗೆ ಬಳುವಳಿಯಾಗಿ ನೀಡಿದ ಪ್ರದೇಶಗಳಾವುದು?
ಉ. ಬರ್ದವಾನ, ಮಿಡ್ನಾಪುರ, ಚಿತ್ತಗಾಂಗ್

9. ಫ್ರೆಂಚರು ಬೆಂಬಲ ನೀಡಿದ ಕರ್ನಾಟಕ್‌ನ ನವಾಬನಾರು?
ಉ. ಚಂದಾ ಸಾಹೇಬ

**II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:**

1. ದ್ವಿ–ಸರ್ಕಾರ ಪದ್ಧತಿಯನ್ನು ವಿವರಿಸಿ.
ಉ. * ಇಂಗ್ಲೀಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡುವುದು.
* ನವಾಬನು ಆಡಳಿತ, ನ್ಯಾಯ ಪ್ರತಿಪಾದನೆ ಮುಂತಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುವುದು.

2. ಭಾರತಕ್ಕೆ ಪರ್ಯಾಯ ವ್ಯಾಪಾರ ಮಾರ್ಗ ಕಂಡುಹಿಡಿಯಲು ಪ್ರೇರಣೆಯಾದ ಅಂಶಗಳಾವುವು?
ಉ. * ಹೊಸ ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣ, ಭೂಪಟಗಳ ಅನ್ವೇಷಣೆ
* ಪೂರ್ವ ದೇಶಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು
* ಧರ್ಮಪ್ರಚಾರಕ್ಕಾಗಿ ಉತ್ಸುಕವಾಗಿದ್ದ ಮಿಷನರಿಗಳು

3. ಪ್ಲಾಸಿಕದನದ ಫಲಿತಾಂಶಗಳೇನು?
ಉ. * ಮೀರ್ ಜಾಫರ್ ಬಂಗಾಳದ ನವಾಬನಾದನು
* ಇದಕ್ಕೆ ಪ್ರತಿಯಾಗಿ ಬ್ರಿಟಿಷರಿಗೆ ಮೀರ್ ಜಾಫರ್ 24 ಪರಗಣ ಮೇಲಿನ ಜಮೀನ್ದಾರಿ ಹಕ್ಕನ್ನು ನೀಡಿದನು.

## ಅಧ್ಯಾಯ-2
# ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

## ಕಾರ್ಡ್-1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಮೊದಲ ಆಂಗ್ಲೋ-ಮೈಸೂರು ಯುದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು.

ಉ. ಎ) ಮಂಗಳೂರು ಒಪ್ಪಂದ ಬಿ) ಶ್ರೀರಂಗಪಟ್ಟಣ ಒಪ್ಪಂದ
ಸಿ) ಮೈಸೂರು ಒಪ್ಪಂದ ಡಿ) ಮದ್ರಾಸ್ ಒಪ್ಪಂದ

2. ಮೂರನೇ ಆಂಗ್ಲೋ-ಮೈಸೂರು ಯುದ್ಧ ಸಂಭವಿಸಿದ ವರ್ಷ

ಉ. ಎ) 1767 ಬಿ) 1790 ಸಿ) 1782 ಡಿ) 1799

3. ಫ್ರೆಂಚರ ವಸಾಹತು

ಉ. ಎ) ಶ್ರೀರಂಗ ಪಟ್ಟಣ ಬಿ) ಮಂಗಳೂರು ಸಿ) ಮಾಹೆ ಡಿ) ಮದ್ರಾಸ್

4. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವರು

ಉ. ಎ) ಲಾರ್ಡ್ ವೆಲ್ಲೆಸ್ಲಿ ಬಿ) ರಾಬರ್ಟ್‌ಕ್ಲೈವ್
ಸಿ) ವಾರನ್ ಹೇಸ್ಟಿಂಗ್ ಡಿ) ಲಾರ್ಡ್ ಡಾಲ್‌ಹೌಸಿ

5. ಹೈದರಾಲಿಯನ್ನು ಸೋಲಿಸಿದ ಬ್ರಿಟಿಷ್ ಸೇನಾಧಿಕಾರಿ

ಉ. ಎ) ರಾಬರ್ಟ್‌ಕ್ಲೈವ್ ಬಿ) ಸರ್ ಐರ್ ಕೂಟ್
ಸಿ) ಲಾರ್ಡ್ ವೆಲ್ಲೆಸ್ಲಿ ಡಿ) ವಾರನ್ ಹೇಸ್ಟಿಂಗ್

**II. ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಹೈದಾರಾಲಿಯ ವಿರುದ್ಧ ಬ್ರಿಟಿಷರಿಗೆ ಸಹಾಯ ಮಾಡಿದ ದೇಶೀಯರು ಯಾರು?

ಉ. ಹೈದರಾ ಬಾದಿನ ನಿಜಾಮ, ಮರಾಠರು.

2. 'ಮದ್ರಾಸ್ ಶಾಂತಿ ಒಪ್ಪಂದ' ಷರತ್ತು ಏನು?

ಉ. ಮೂರನೆ ಶಕ್ತಿಯಿಂದ ಆಕ್ರಮಣಕ್ಕೆ ಒಳಗಾದಾಗ ಬ್ರಿಟಿಷರು ಮತ್ತು ಹೈದರಾಲಿ ಪರಸ್ಪರ ಸಹಾಯ ಮಾಡುವುದು.

3. ಎರಡನೆ ಮೈಸೂರು ಯುದ್ಧವು ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?

ಉ. ಮಂಗಳೂರು ಶಾಂತಿ ಒಪ್ಪಂದ.

4. ಮೂರನೆ ಮೈಸೂರು ಯುದ್ಧದಿಂದ ನಿಜಾಮನಿಗೆ ದೊರೆತ ಪ್ರದೇಶಗಳಾವುವು?

ಉ. ಬಳ್ಳಾರಿ, ಕಡಪ, ತುಂಗಭದ್ರಾ-ದೋ-ಅಬ್ ಪ್ರದೇಶ.

5. ಹೈದರಾಬಾದ್ ಕರ್ನಾಟಕದ ಪ್ರದೇಶಗಳು ಯಾರ ಆಳ್ವಿಕೆಗೆ ಒಳಪಟ್ಟಿದ್ದವು?

ಉ. ಹೈದರಾಬಾದಿನ ನಿಜಾಮ

# ಅಧ್ಯಾಯ–3
# ಜನಪದ ಚರಿತ್ರೆ

## ಕಾರ್ಡ್–1

### I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತದ ಚರಿತ್ರೆ ಬರವಣಿಗೆಯ ಮೇಲೆ ಪ್ರಭಾವ ಬೀರಿದವರು.

ಉ. ಎ) ಪರ್ಷಿಯನ್ನರು ಬಿ) ಬ್ರಿಟಿಷರು ಸಿ) ಫ್ರೆಂಚರು ಡಿ) ಗ್ರೀಕರು

2. ಜನಸಾಮಾನ್ಯರಾದ ಇವರ ಚರಿತ್ರೆಯ ಹಿನ್ನಲೆ ಅಭ್ಯಸಿಸುವುದು ಚರಿತ್ರಾಕಾರರಿಗೆ ಸವಾಲಾಯಿತು.

ಉ. ಎ) ವ್ಯಾಪಾರಿಗಳ ಬಿ) ರಾಜರುಗಳ ಸಿ) ಪ್ರವಾಸಿಗರ ಡಿ) ರೈತಾಪಿವರ್ಗಗಳ

3. ಇತಿಹಾಸಕಾರರ ಪ್ರಕಾರ ಚರಿತ್ರೆಯ ರಚನೆಗೆ ಮುಖ್ಯವಾದದ್ದು

ಉ. ಎ) ಕಾಲ ಬಿ) ಕೃತಿ ಸಿ) ಆಕರ ಡಿ) ಕರ್ತೃ

### II. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಸ್ವಾತಂತ್ರ್ಯ ನಂತರ ಚರಿತ್ರೆ ಬರವಣಿಗೆಗೆ ನಾಂದಿಯಾದ ಅಂಶಗಳಾವುವು?

ಉ. ಭಾರತೀಯರು ರೂಪಿಸಿದ ಘಟನೆಗಳು, ವಿವರಗಳು, ಸಿದ್ಧಾಂತಗಳು

2. ಮೌಖಿಕ ಚರಿತ್ರೆಯ ಆಕರಗಳು ಯಾವುವು?

ಉ. ಐತಿಹ್ಯ, ಲಾವಣಿ, ಜನಪದಗೀತೆ, ಕಾವ್ಯ

3. 'ಯುಗ' ಈ ಪದವನ್ನು ಅರ್ಥೈಸಿ.

ಉ. ಒಂದು ಕಾಲಚಕ್ರದ ಆವರ್ತನ ಮುಗಿದ ಮೇಲೆ ಇನ್ನೊಂದು ಕಾಲಚಕ್ರ ಆವರ್ತನವಾಗುವುದನ್ನು 'ಯುಗ' ಎನ್ನುವರು.

4. ನಾಲ್ಕು ಯುಗಗಳನ್ನು ಹೆಸರಿಸಿ.

ಉ. ಕೃತ, ತ್ರೇತಾ, ದ್ವಾಪರ, ಕಲಿಯುಗ

5. ಯಾವ ಸಮುದಾಯಕ್ಕೆ ಸಿದ್ಧ ಚರಿತ್ರೆ ಇರಲಿಲ್ಲ.

ಉ. ಆಫ್ರಿಕನ್ ಸಮುದಾಯ.

6. ಭಾರತೀಯ ಪರಂಪರೆಯಲ್ಲಿ ಚರಿತ್ರೆಯ ಬರವಣಿಗೆ ನೋಟ ಯಾವುದು?

ಉ. ಚಕ್ರದೋಪಾದಿನೋಟ ಅಥವಾ ಕಾಲಚಕ್ರದ ಆವರ್ತನ

# ಅಧ್ಯಾಯ–4
# ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

## ಕಾರ್ಡ್–1

### I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

1. ಲಾರ್ಡ್ ವೆಲ್ಲೆಸ್ಲಿ ಜಾರಿಗೆ ತಂದ ಪದ್ಧತಿ

ಉ. ಎ) ಜಮೀನ್ದಾರಿ ಪದ್ಧತಿ ಬಿ) ರೈತವಾರು ಪದ್ಧತಿ
ಸಿ) ದತ್ತು ಮಕ್ಕಳಿಗೆ ಹಕ್ಕಿಲ್ಲ ಡಿ) ಸಹಾಯಕ ಸೈನ್ಯ ಪದ್ಧತಿ

2. ಮೊದಲ ಆಂಗ್ಲೋ–ಮರಾಠ ಯುದ್ಧವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು.

ಉ. ಎ) ಮಂಗಳೂರು ಒಪ್ಪಂದ ಬಿ) ಶ್ರೀರಂಗ ಪಟ್ಟಣ
ಸಿ) ಸಾಲ್ ಬಾಯಿ ಒಪ್ಪಂದ ಡಿ) ಬಸ್ಸಿನ್ ಒಪ್ಪಂದ

3. ಪೇಶ್ವೆ ಎರಡನೇ ಜಾಜಿರಾವ್‌ನು ಈ ಒಪ್ಪಂದ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.

ಉ. ಎ) ಬಸ್ಸಿನ್ ಒಪ್ಪಂದ ಬಿ) ಸಾಲ್‌ಬಾಯಿ ಒಪ್ಪಂದ
ಸಿ) ಅಹಮದಾಬಾದ ಒಪ್ಪಂದ ಡಿ) ಮಂಗಳೂರು ಒಪ್ಪಂದ

4. ಪಂಜಾಬಿನ ಸಿಂಹ ನೆಂದು ಪ್ರಸಿದ್ಧನಾಗಿದ್ದವನು

ಉ. ಎ) ಲಾಲ್ ಸಿಂಗ್ ಬಿ) ರಣಜಿತ್ ಸಿಂಗ್
ಸಿ) ದುಲೀಪ್‌ಸಿಂಗ್ ಡಿ) ಮಾನಸಿಂಗ್

5. ರಾಬರ್ಟ್‌ಕ್ಲೈವ್‌ನ 'ದ್ವಿಸರ್ಕಾರ'ವನ್ನು ರದ್ದು ಪಡಿಸಿದ ಶಾಸನ

ಉ. ಎ) ವಿಂಟೋ–ಮಾರ್ಲೆಶಾಸನ ಬಿ) ಪಿಟ್ಸ್ ಇಂಡಿಯಾಶಾಸನ
ಸಿ) ರೆಗ್ಯುಲೇಟಿಂಗ್ ಶಾಸನ ಡಿ) ಇಂಡಿಯನ್ ಕೌನ್ಸಿಲ್ ಶಾಸನ

### II. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಮೊದಲನೆಯ ಆಂಗ್ಲೋ–ಮರಾಠ ಯುದ್ಧದಿಂದ ಬ್ರಿಟಿಷರಿಗೆ ಯಾವ ಪ್ರದೇಶ ದೊರಕಿತು?

ಉ. ಅಹಮದಾ ಬಾದ್

2. ಎರಡನೇ ಆಂಗ್ಲೋ – ಮರಾಠ ಯುದ್ಧಕ್ಕೆ ಕಾರಣವಾದ ಪ್ರಮುಖ ಅಂಶ ಯಾವುದು?

ಉ. ಮರಾಠ ನಾಯಕರ ಆಂತರಿಕ ಯುದ್ಧಗಳು

3. ಎರಡನೇ ಆಂಗ್ಲೋ – ಮರಾಠ ಯುದ್ಧದಲ್ಲಿ ಬ್ರಿಟಿಷರು ಯಾರಿಗೆ ನೆರವು ನೀಡಿದರು?

ಉ. ಪೇಶ್ವೆ ಎರಡನೇ ಬಾಜಿರಾವ್

4. ರಣಜಿತ್‌ಸಿಂಗ್‌ನು ಯಾವ ಪ್ರದೇಶಗಳ ಮೇಲೆ ಹಿಡಿತವನ್ನು ಸಾಧಿಸಿದರು?
ಉ. ಅಮೃತಸರ, ಲೂಧಿಯಾನ

5. ಸಿಖ್ಖರ ಸೈನ್ಯದ ಹೆಸರೇನು?
ಉ. ಖಾಲ್ಸಾ

6. ದುಲೀಪ್ ಸಿಂಗನ ಪ್ರಧಾನಿ ಯಾರು?
ಉ. ಲಾಲ್ ಸಿಂಗ್

7. ಬ್ರಿಟಿಷ್ ವ್ಯಾಪಾರಿ ಸಂಸ್ಥೆಯ ಹೆಸರೇನು?
ಉ. ಈಸ್ಟ್ ಇಂಡಿಯಾ ಕಂಪನಿ

8. ಭಾರತದ ಮೊದಲ ಗವರ್ನರ್ ಜನರಲ್ ಯಾರು?
ಉ. ವಾರನ್ ಹೇಸ್ಟಿಂಗ್

10. ಪಿಟ್ಸ್ ಇಂಡಿಯಾ ಶಾಸನ ಜಾರಿಗೆ ಬಂದ ವರ್ಷ ಯಾವುದು?
ಉ. 1784

11. ಸರ್ವೋಚ್ಚ ನ್ಯಾಯಾಲಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ ಯಾವುದು?
ಉ. 1773ರ ರೆಗ್ಯುಲೇಟಿಂಗ್ ಆಕ್ಟ್

12. ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಮೊದಲು ಎಲ್ಲಿ ಸ್ಥಾಪಿಸಲಾಯಿತು?
ಉ. ಕಲ್ಕತ್ತಾ

13. 1935ರ ಕಾಯ್ದೆಯ ಪ್ರಮುಖ ಲಕ್ಷಣವೇನು?
ಉ. ಪ್ರಾಂತ್ಯಗಳಿಗೆ ಸ್ವಾಯತ್ತದೆ ನೀಡಿದ್ದು.

14. ಭಾರತೀಯರು ಶಾಸನೀಯ ಮತ್ತು ಆಡಳಿತ ಕಾರ್ಯದಲ್ಲಿ ಭಾಗವಹಿಸುವಂತೆ ಮಾಡಿದ ಶಾಸನ ಯಾವುದು?
ಉ. 1861ರ ಇಂಡಿಯನ್ ಕೌನ್ಸಿಲ್ ಕಾಯ್ದೆ

15. ಉತ್ತಮ ಆಡಳಿತಕ್ಕಾಗಿ 'ನಿಯಂತ್ರಣ ಮಂಡಳಿ'ಯ ನೇಮಕಕ್ಕೆ ಅವಕಾಶ ಮಾಡಿಕೊಟ್ಟ ಶಾಸನ ಯಾವುದು?
ಉ. 1784ರ ಪಿಟ್ಸ್ ಇಂಡಿಯಾ ಶಾಸನ

16. ಪ್ರಾಂತ್ಯಗಳಲ್ಲಿ ದ್ವಿ–ದಳ ಸರ್ಕಾರವನ್ನು ಜಾರಿಗೆ ತಂದ ಶಾಸನ ಯಾವುದು?
ಉ. 1919ರ ಭಾರತ ಸರ್ಕಾರ ಶಾಸನ (ಮಾಂಟೆಗ್ಯೂ–ಚೆಮ್ಸ್ ಫರ್ಡ್)

17. 1909ರ ಶಾಸನವನ್ನು ರೂಪಿಸಿದವರು ಯಾರು?
ಉ. 1909ರಲ್ಲಿ ಭಾರತದ ವೈಸರಾಯ್ ಮಿಂಟೋ ಮತ್ತು ಕಾರ್ಯದರ್ಶಿ ಮಾರ್ಲೆರವರು ರೂಪಿಸಿದ

# ಅಧ್ಯಾಯ–5
# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

## ಕಾರ್ಡ್–1

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತ ಇತಿಹಾಸದಲ್ಲಿ 'ಭಾರತೀಯ ನವೋದಯಕಾಲ'ವೆಂದು ಗುರ್ತಿಸಲ್ಪಡುವುದು.

ಉ. ಎ) 17ನೇ ಶತಮಾನ ಬಿ) 18ನೇ ಶತಮಾನ ಸಿ) 16ನೇ ಶತಮಾನ ಡಿ) 19ನೇ ಶತಮಾನ

2. 'ಭಾರತೀಯ ನವೋದಯ'ದ ಜನಕ

ಉ. ಎ) ದಯಾನಂದ ಸರಸ್ವತಿ ಬಿ) ಸ್ವಾಮಿವಿವೇಕಾನಂದ
ಸಿ) ರಾಮ ಮೋಹನ್‌ರಾಯ್ ಡಿ) ಜ್ಯೋತಿಭಾಪುಲೆ

3. ಆರ್ಯಸಮಾಜದ ಸ್ಥಾಪಕರು

ಉ. ಎ) ಆತ್ಮಾರಾಂ ಪಾಂಡುರಂಗ ಬಿ) ರಾಮಕೃಷ್ಣ ಪರಮಹಂಸ
ಸಿ) ರಾಮಮೋಹನ್ ರಾಯ್ ಡಿ) ದಯಾನಂದ ಸರಸ್ವತಿ

4. ಆತ್ಮಾರಾಂ ಪಾಂಡುರಂಗರವರು ಸ್ಥಾಪಿಸಿದ ಸಮಾಜ

ಉ. ಎ) ಬ್ರಹ್ಮಸಮಾಜ ಬಿ) ಆರ್ಯಸಮಾಜ
ಸಿ) ಪ್ರಾರ್ಥನಾ ಸಮಾಜ ಡಿ) ಸತ್ಯ ಶೋಧಕ ಸಮಾಜ

5. ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿದ ಸ್ಥಳ

ಉ. ಎ) ಮದ್ರಾಸ್ ಬಿ) ಮುಂಬೈ ಸಿ) ಬೆಂಗಳೂರು ಡಿ) ಚೆನ್ನೈ

6. ಸ್ವಾಮಿ ವಿವೇಕಾನಂದರ ಗುರು

ಉ. ಎ) ದಯಾನಂದ ಸರಸ್ವತಿ ಬಿ) ಜ್ಯೋತಿ ಭಾಪುಲೆ
ಸಿ) ರಾನಡೆ ಡಿ) ರಾಮಕೃಷ್ಣ ಪರಮಹಂಸ

7. ಆನಿಬೆಸೆಂಟ್ ಈ ದೇಶದ ಮಹಿಳೆ

ಉ. ಎ) ಐರ್ಲೆಂಡ್ ಬಿ) ಫ್ರಾನ್ಸ್ ಸಿ) ಇಂಗ್ಲೆಂಡ್ ಡಿ) ಸ್ಪೇನ್

8. ಹೋಂರೂಲ್ ಚಳುವಳಿಯನ್ನು ಪ್ರಾರಂಭಿಸಿದ ವರ್ಷ

ಉ. ಎ) 1917 ಬಿ) 1916 ಸಿ) 1920 ಡಿ) 1919

9. ಆರ್ಯಸಮಾಜವನ್ನು ದಯಾನಂದ ಸರಸ್ವತಿರವರು ಸ್ಥಾಪಿಸಿದರೆ, ಬ್ರಹ್ಮ ಸಮಾಜದ ಸ್ಥಾಪಕರು

ಉ. ಎ) ಜ್ಯೋತಿ ಭಾ ಪುಲೆ ಬಿ) ಆತ್ಮಾರಾಂಪಾಂಡುರಂಗ
ಸಿ) ಎಂ.ಜಿ.ರಾನಡೆ ಡಿ) ರಾಮ ಮೋಹನರಾಯ್

10. ಸರ್ ಸಯ್ಯದ್ ಅಹಮದ್ ಖಾನರವರು ಆರಂಭಿಸಿದ ಚಳುವಳಿ

ಉ. ಎ) ಶುದ್ಧಿ ಚಳುವಳಿ — ಬಿ) ಪುನರುಜ್ಜೀವನ ಚಳುವಳಿ

ಸಿ) ಆಲಿಘರ್ ಚಳುವಳಿ — ಡಿ) ನವೋದಯ ಚಳುವಳಿ

11. ಜ್ಯೋತಿಭಾ ಪುಲೆಯವರಿಂದ ಸ್ಥಾಪಿಸಲ್ಪಟ್ಟ ಸಮಾಜ

ಉ. ಎ) ಆರ್ಯಸಮಾಜ — ಬಿ) ಬ್ರಹ್ಮ ಸಮಾಜ

ಸಿ) ಪ್ರಾರ್ಥನಾ ಸಮಾಜ — ಡಿ) ಸತ್ಯಶೋಧಕ ಸಮಾಜ

## II. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಪಾಶ್ಚಾತ್ಯ ಪರಿಕಲ್ಪನೆಗಳು ಭಾರತೀಯರಲ್ಲಿ ಯಾವ ವಿಚಾರಗಳ ಅರಿವು ಮೂಡಿಸಿತು?

ಉ. ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯತೆಗಳ ಅರಿವು

2. ಸತಿ ಸಹಗಮನ ಪದ್ಧತಿಯ ವಿರುದ್ಧ ಕಾಯ್ದೆಯನ್ನು ಜಾರಿಗೆ ತಂದವರಾರು?

ಉ. ಲಾರ್ಡ್ ವಿಲಿಯಂ ಬೆಂಟಿಂಕ್

3. ಸಾಮಾಜಿಕ ಧಾರ್ಮಿಕ ಸುಧಾರಣೆಯಲ್ಲಿ ಮುಂಚೂಣಿಯಲ್ಲಿದ್ದ ಸಂಸ್ಥೆ ಯಾವುದು?

ಉ. ಬ್ರಹ್ಮ ಸಮಾಜ

4. ಪ್ರಾರ್ಥನಾ ಸಮಾಜವನ್ನು ಜನಪ್ರಿಯಗೊಳಿಸಿದವರು ಯಾರು?

ಉ. ಎಂ.ಜಿ.ರಾನಡೆ

5. ಸತ್ಯ ಶೋಧಕ ಸಮಾಜದಿಂದ ಪ್ರಭಾವಿತರಾದ ವ್ಯಕ್ತಿ ಯಾರು?

ಉ. ಶಾಹು ಮಹಾರಾಜರು

6. ರಾಮಕೃಷ್ಣ ಮಿಷನ್ ಸಂಸ್ಥೆಯ ಉದ್ದೇಶವೇನು?

ಉ. ಸರ್ವಧರ್ಮ ಸಮನ್ವಯ ತತ್ವ ಪ್ರಚಾರ ಮತ್ತು ಅನುಷ್ಠಾನ

7. 1893ರ ವಿಶ್ವಧರ್ಮ ಸಮ್ಮೇಳನವು ಎಲ್ಲಿ ನಡೆಯಿತು?

ಉ. ಚಿಕಾಗೋ

8. ಥಿಯಾಸಾಫಿಕಲ್ ಸೊಸೈಟಿಯ ಮೂಲಸ್ಥಾಪಕರಾರು?

ಉ. ಮ್ಯಾಟಮ್ ಬ್ಲಾವಟಿಸ್ಕಿ, ಕರ್ನಲ್ ಎಚ್.ಎಸ್.ಅಲ್ಕಾಟ್

9. ತಿಲಕರು ಆರಂಭಿಸಿದ ಪತ್ರಿಕೆಗಳಾವುವು?

ಉ. ಮರಾಠ ಮತ್ತು ಕೇಸರಿ

10. 'ವೇದಗಳಿಗೆ ಹಿಂತಿರುಗಿ' ಎಂದು ಕರೆ ಕೊಟ್ಟವರಾರು?

ಉ. ದಯಾನಂದ ಸರಸ್ವತಿ

## III. ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ.

1. ಭಾರತದ ಇತಿಹಾಸದಲ್ಲಿ 19ನೇಯ ಶತಮಾನವನ್ನು 'ಭಾರತೀಯ ನವೋದಯ' ಕಾಲವೆಂದು ಕರೆಯಲು ಕಾರಣವೇನು?

ಉ. * ಪಾಶ್ಚಿಮಾತ್ಯ ನಾಗರಿಕತೆಯ ಸಂಪರ್ಕ
* ವೈಚಾರಿಕ ಮನೋಭಾವನೆಯ ಬೆಳವಣಿಗೆ
* ಮೂಢ ನಂಬಿಕೆಯನ್ನು ಪ್ರಶ್ನಿಸುವ ಮನೋಭಾವನೆ
* ಇಂಗ್ಲೀಷ್ ವಿದ್ಯಾಭ್ಯಾಸದ ಸೌಲಭ್ಯ ದೊರೆಯುವಿಕೆ
* ದ್ವಂದ್ವತೆ, ವಿರೋಧಾಭಾಸ ಹಾಗೂ ಸ್ವಹಿತಾಸಕ್ತಿಗಳ ಅರಿವು

2. ಸತ್ಯ ಶೋಧಕ ಸಮಾಜದ ಸುಧಾರಣೆಗಳಾವುವು?

ಉ. * ಪಾನ ನಿಷೇಧಕ್ಕೆ ಒತ್ತಾಯಿಸಿತು
* ಸ್ತ್ರೀ–ಪುರುಷರ ಸಮಾನತೆಗೆ ಪ್ರೋತ್ಸಾಹ ನೀಡಿತು
* ಮಾನವ ಹಕ್ಕುಗಳನ್ನು ಪ್ರತಿಪಾದಿಸಿತು
* ಜನರ ಶೋಷಣೆ, ಅಸ್ಪೃಶ್ಯತಾ ಆಚರಣೆಗಳನ್ನು ವಿರೋಧಿಸಿತು
* ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿಯನ್ನು ನಡೆಸಿತು.
* ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ಶಾಲೆಯನ್ನು ಸ್ಥಾಪಿಸಿತು.
* ಸಮಾಜ ವ್ಯವಸ್ಥೆ ಸುಧಾರಣೆಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿತು.
* ರೈತರ ಪರವಾಗಿ ಹೋರಾಟವನ್ನು ನಡೆಸಿತು.

3. ಸಾಮಾಜಿಕ ಸುಧಾರಣೆಗಾಗಿ ಶ್ರಮಿಸಿದವರುಗಳು ಯಾರು?

ಉ. * ರಾಮ್‌ಮೋಹನರಾಯ್, ದಯಾನಂದಸರಸ್ವತಿ, ಎಂ.ಜಿ.ರಾನಡೆ, ಜ್ಯೋತಿಭಾಪುಲೆ, ಸ್ವಾಮಿ ವಿವೇಕಾನಂದ, ಆನಿಬೆಸೆಂಟ್, ಸರ್ ಸೈಯದ್ ಅಹಮದ್ ಖಾನ್.

4. ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ.

ಉ. * ಮುಸಲ್ಮಾನರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ತಾತ್ವಿಕ ವಿಚಾರಗಳನ್ನು ಬದಲಿಸಿಕೊಂಡು
* ಪೂರ್ವಪಶ್ಚಿಮ ವಿಚಾರಗಳ ಸಂಗಮಕ್ಕೆ ಬೆಂಬಲಿಸುವುದು.
* ಮುಸ್ಲಿಂ ಸಮುದಾಯಕ್ಕೆ ಆಧುನಿಕ ಶಿಕ್ಷಣ ನೀಡುವುದು
* 'ಆಂಗ್ಲೋ–ಓರಿಯಂಟಲ್' ಕಾಲೇಜಿನ ಮೂಲಕ ಪಾಶ್ಚಾತ್ಯ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣ ನೀಡುವುದು.

5. ರಾಮಕೃಷ್ಣ ಮಿಷನ್‌ನ ದೃಷ್ಟಿಕೋನವನ್ನು ವಿವರಿಸಿ.

ಉ. * ಸರ್ವಧರ್ಮ ಸಮನ್ವಯ ತತ್ವ ಪ್ರಚಾರ ಮತ್ತು ಅನುಷ್ಠಾನ

* ರಾಮಕೃಷ್ಣ ಪರಮಹಂಸರ ಧ್ಯೇಯಾದರ್ಶಗಳ ಪ್ರಚಾರ
* ಶಿಕ್ಷಣ ಮತ್ತು ಸಮಾಜ ಸೇವೆಯ ಮೂಲಕ ಭಾರತೀಯ ಸಂಸ್ಕೃತಿಯ ಬೆಳವಣಿಗೆ.

6. ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು ಹೇಗೆ? ಸಮರ್ಥಿಸಿರಿ.

ಉ. * ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.

* ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಿದರು.
* ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೋಗ ಸಾಧನೆಗಳಲ್ಲದೆ ಸಮಾಜ ಸೇವೆಯು ಮುಖ್ಯವೆಂದರು.
* ರಾಮಕೃಷ್ಣ ಮಿಷನ್ ಮೂಲಕ ಶಿಕ್ಷಣ ಮತ್ತು ಸಮಾಜ ಸೇವೆಯನ್ನು ಮಾಡುತ್ತಾ. ಭಾರತೀಯ ಸಂಸ್ಕೃತಿ ಬೆಳವಣಿಗೆ ಮಾಡಿದರು.
* 1893ರಲ್ಲಿ ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ, ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದರು.

# ಅಧ್ಯಾಯ–6
# ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

## ಕಾರ್ಡ್–1

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದ ವರ್ಷ
ಉ. ಎ) 1867 ಬಿ) 1857 ಸಿ) 1875 ಡಿ) 1785

2. ಇದು ಬ್ರಿಟಿಷರ ಪ್ರಬಲ ಸೇನಾ ನೆಲೆ
ಉ. ಎ) ಬ್ಯಾರಕ್‌ಪುರ ಬಿ) ಮೀರತ್ ಸಿ) ದೆಹಲಿ ಡಿ) ಕಾನ್ಪುರ

3. 'ಭಾರತದ ಚಕ್ರವರ್ತಿ' ಎಂದು ಘೋಷಿಸಲ್ಪಟ್ಟ ದೊರೆ
ಉ. ಎ) ಷಾ ಆಲಂ ಬಿ) ನಾನಾ ಸಾಹೇಬ
ಸಿ) ಎರಡನೇ ಬಹದ್ದೂರ್ ಷಾ ಡಿ) ತಾತ್ಯಾಟೋಪೆ

4. ಬ್ಯಾರಕ್‌ಪುರದಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಯನ್ನು ಕೊಂದ ಭಾರತೀಯ ಸೈನಿಕ
ಉ. ಎ) ನಾನಾ ಸಾಹೇಬ ಬಿ) ತಾತ್ಯಾಟೋಪೆ ಸಿ) ಮಂಗಲಪಾಂಡೆ ಡಿ) ನಾರಾಯಣರಾವ್

5. ಬ್ರಿಟಿಷರ ವಿರುದ್ಧ ದಂಗೆಯೆದ್ದ ಝಾನ್ಸಿಯ ರಾಣಿ
ಉ. ಎ) ಓಬವ್ವ ಬಿ) ಲಕ್ಷ್ಮೀಬಾಯಿ ಸಿ) ಚೆನ್ನಮ್ಮ ಡಿ) ವಲ್ಲಮ್ಮ

6. ಕೈಗಾರಿಕಾ ಕ್ರಾಂತಿಯು ಈ ದೇಶದಲ್ಲಿ ನಡೆಯಿತು
ಉ. ಎ) ಅಮೆರಿಕಾ ಬಿ) ಫ್ರಾನ್ಸ್ ಸಿ) ರಷ್ಯಾ ಡಿ) ಬ್ರಿಟನ್

7. ಬ್ರಿಟನ್ ರಾಣಿಯು ಘೋಷಣೆಯನ್ನು ಹೊರಡಿಸಿದ ವರ್ಷ
ಉ. ಎ) 1857 ಬಿ) 1858 ಸಿ) 1758 ಡಿ) 1785

**II. ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭಾರತ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ಇಂಗ್ಲೀಷ್ ಇತಿಹಾಸಕಾರರು ಏನೆಂದು ಕರೆದರು?
ಉ. ಸಿಪಾಯಿದಂಗೆ

2. ಡಾಲ್‌ಹೌಸಿ ಯಾವ ನವಾಬರ ರಾಜ ಪದವಿಯನ್ನು ರದ್ದು ಪಡೆಸಿದನು?
ಉ. ತಂಜಾವೂರು, ಕರ್ನಾಟಿಕ್

3. ಭಾರತೀಯ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಲು ಮುಖ್ಯ ಕಾರಣವೇನು?
ಉ. ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿಯ ಪರಿಣಾಮ

4. ಬ್ರಿಟಿಷರು ಭಾರತದಲ್ಲಿ ಸೈನಿಕರಿಗೆ ನೀಡಿದ ಬಂದೂಕಿನ ಹೆಸರೇನು?

ಉ. ರಾಯಲ್ ಎನ್ ಫೀಲ್ಡ್

5. 1857ರ ದಂಗೆಯನ್ನು ಭಾರತೀಯರು ಏನೆಂದು ಕರೆದರು?

ಉ. ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

## III. ನಾಲ್ಕಾರು ವಾಕ್ಯದಲ್ಲಿ ಉತ್ತರಿಸಿರಿ.

1. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣವೇನು?

ಉ. * ಬ್ರಿಟಿಷರು ಸೈನಿಕರಿಗೆ ನವೀನ 'ರಾಯಲ್ ಎನ್‌ಫೀಲ್ಡ್' ಬಂದೂಕುಗಳನ್ನು ವಿತರಿಸಿದ್ದರು.
* ಅದಕ್ಕೆ ಹಸುವಿನ ಮತ್ತು ಹಂದಿಯಕೊಬ್ಬು ಸವರಿದ್ದಾರೆಂಬವದಂತಿ ಹಬ್ಬಿತ್ತು.
* ಹಿಂದೂಗಳಿಗೆ ಹಸು ಪವಿತ್ರವಾದರೆ, ಮುಸಲ್ಮಾನರಿಗೆ ಹಂದಿ ನಿಷಿದ್ಧವಾಗಿತ್ತು.
* ಬಂದೂಕುಗಳನ್ನು ಬಳಸಲು ಬ್ರಿಟಿಷರು ತಿಳಿಸಿದಾಗ, ಅದನ್ನು ಹಲ್ಲಿನಿಂದ ಕಚ್ಚಿ ತೆಗೆಯಲು ನಿರಾಕರಿಸಿದ ಸೈನಿಕರು ದಂಗೆ ಎದ್ದರು.

2. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳೇನು?

ಉ. * ಬ್ರಿಟಿಷರು ಜಾರಿಗೆ ತಂದ 'ದತ್ತು ಮಕ್ಕಳಿಗೆ ಹಕ್ಕಿಲ್ಲ'ವೆಂಬ ನೀತಿಯಿಂದಾಗಿ ದೇಶೀ ಸಂಸ್ಥಾನಗಳು ತಮ್ಮ ಅಸ್ತಿತ್ವ ಕಳೆದು ಕೊಂಡವು
* ಸತಾರ, ಝಾನ್ಸಿ, ಜೈಪುರ, ಉದಯಪುರ ಬ್ರಿಟಿಷರ ವಶವಾದವು
* ತಂಜಾವೂರು ಮತ್ತು ಕರ್ನಾಟಿಕ್ ನವಾಬರ ರಾಜ ಪದವಿ ರದ್ದು ಪಡಿಸಲಾಯಿತು
* ಮೊಘಲ್ ಮತ್ತು ಔದ್ ನವಾಬರ ಪದಚ್ಯುತಿಯಿಂದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

3. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳೇನು?

ಉ. * ಬ್ರಿಟನ್‌ನ ಕೈಗಾರಿಕಾ ಕ್ರಾಂತಿಯಿಂದಾಗಿ ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು.
* ಕಾರ್ಮಿಕರು (ಕರಕುಶಲಗಾರರು) ನಿರುದ್ಯೋಗಿಗಳಾದರು
* ಇಂಗ್ಲೆಂಡಿನಲ್ಲಿ ಭಾರತೀಯ ಸರಕುಗಳಿಗೆ ದುಬಾರಿ ಸುಂಕ ಹೇರಿದ ಕಾರಣ, ವ್ಯಾಪಾರಿಗಳು ತೊಂದರೆಗೀಡಾದರು.
* ಜಮೀನ್ದಾರಿ ಪದ್ಧತಿಗಳಿಂದಾಗಿ ರೈತರು ಶೋಷಣೆಗೊಳಗಾದರು
* ಇನಾಂ ಭೂಮಿಯನ್ನು ಇನಾಂ ಆಯೋಗ ವಾಪಾಸ್ಸು ಪಡೆದ ಕಾರಣ ತಾಲ್ಲೂಕುದಾರರು ಸಂಕಷ್ಟಕ್ಕೀಡಾದರು.

4. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆಡಳಿತಾತ್ಮಕ ಕಾರಣಗಳೇನು?

ಉ. * ಹೊಸನಾಗರಿಕ ಮತ್ತು ಅಪರಾಧ ಕಾಯ್ದೆಗಳನ್ನು ಬ್ರಿಟಿಷರು ಜಾರಿಗೆ ತಂದರು.
* ಕಾನೂನಿನಲ್ಲಿ ಪಕ್ಷಪಾತ ಮತ್ತು ಭಾರತೀಯರಿಗೆ ಪ್ರತ್ಯೇಕ ನಿಯಮಗಳು ಅನ್ವಯವಾಗುತ್ತಿದ್ದವು.
* ಆಂಗ್ಲಭಾಷೆ ನ್ಯಾಯಾಲಯ ಭಾಷೆಯಾದ ಕಾರಣ ಭಾರತೀಯರು ತೊಂದರೆಗೊಳಗಾದರು.

* ಇಂಗ್ಲೀಷ್ ನ್ಯಾಯಾಧೀಶರು ಬ್ರಿಟಿಷರ ಪರವಾಗಿಯೇ ನ್ಯಾಯ ನೀಡುತ್ತಿದ್ದರು.
* ಹೊಸ ಕಾನೂನಿನ ಆಶಯ ಭಾರತೀಯರಿಗೆ ಅರಿವಾಗಲಿಲ್ಲ.

5. ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೈನಿಕ ಕಾರಣಗಳೇನು?

ಉ. * ಬ್ರಿಟಿಷರ ಸೈನ್ಯದಲ್ಲಿ ಭಾರತೀಯ ಸೈನಿಕರಸ್ಥಿತಿ ಶೋಚನೀಯವಾಗಿತ್ತು.
* ಆಂಗ್ಲರಿಗಿದ್ದ ಸ್ಥಾನಮಾನ ಇವರಿಗಿರಲಿಲ್ಲ
* ಬಡ್ತಿ, ವೇತನಗಳಲ್ಲಿ ಭಾರತೀಯರಿಗೆ ತಾರತಮ್ಯ ಮಾಡಲಾಗುತ್ತಿತ್ತು.
* ಸಾಗರೋತ್ತರ ಸೇವೆಗೆ ಭಾರತೀಯ ಸೈನಿಕರನ್ನು ನಿಯೋಜಿಸಲಾಗುತ್ತಿತ್ತು.

6. ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ವಿಫಲಗೊಳ್ಳಲು ಕಾರಣಗಳೇನು?

ಉ. * ಇಡೀ ದೇಶವನ್ನು ವ್ಯಾಪಿಸಲಿಲ್ಲ
* ದೇಶದ ಬಿಡುಗಡೆಗಿಂತ ವ್ಯಕ್ತಿಗಳ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗೆ ನಡೆದ ಹೋರಾಟವಾಗಿತ್ತು
* ಯೋಜಿತವಾದ ಹೋರಾಟವಾಗಿರಲಿಲ್ಲ
* ಬ್ರಿಟಿಷ್ ಸೈನಿಕರಲ್ಲಿದ್ದ ಒಗ್ಗಟ್ಟು ಭಾರತೀಯರಲ್ಲಿರಲಿಲ್ಲ.
* ಸೂಕ್ತ ನಾಯಕತ್ವ ಹಾಗೂ ಮಾರ್ಗದರ್ಶನದ ಕೊರತೆಯಿತ್ತು.
* ಯುದ್ಧ ತಂತ್ರ, ಸೈನಿಕ ಪರಿಣತಿ, ಶಿಸ್ತಿನ ಕೊರತೆಯಿತ್ತು
* ಹೋರಾಟಗಾರರಿಗೆ ನಿಶ್ಚಿತ ಗುರಿ ಇರಲಿಲ್ಲ
* ದೇಶೀಯ ರಾಜರು ಬ್ರಿಟಿಷರಿಗೆ ನಿಷ್ಠೆ ತೋರಿಸಿದರು
* ಸಿಪಾಯಿಗಳು ಲೂಟಿ, ದರೋಡೆಗಳಲ್ಲಿ ತೊಡಗಿ ಜನರ ವಿಶ್ವಾಸವನ್ನು ಕಳೆದುಕೊಂಡರು.

7. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳನ್ನು ವಿಶ್ಲೇಷಿಸಿರಿ.

ಉ. * ಈಸ್ಟ್ ಇಂಡಿಯಾ ಆಡಲಿತ ಕೊನೆಗೊಂಡಿತು.
* ಬ್ರಿಟನ್ ಸಾಮ್ರಾಜ್ಞೆಗೆ ಆಡಳಿತ ವರ್ಗಾವಣೆಯಾಯಿತು.
* ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
* ಬ್ರಿಟನ್‌ರಾಣಿ 1858ರಲ್ಲಿ ಘೋಷಣೆಯನ್ನು ಹೊರಡಿಸಿದಳು.

# ಅಧ್ಯಾಯ–7
# ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳ

## ಕಾರ್ಡ್–1

## I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

1. ಮಹಲ್ ಎಂದರೆ

ಉ. ಎ) ಜಿಲ್ಲೆ ಬಿ) ತಾಲ್ಲೂಕು ಸಿ) ಹಳ್ಳಿ ಡಿ) ಮನೆ

2. ಭಾರತದಲ್ಲಿ ಇಂಗ್ಲೀಷ್ ಶಿಕ್ಷಣವನ್ನು ಜಾರಿಗೊಳಿಸಿದವರೆಂದರೆ

ಉ. ಎ) ಲಾರ್ಡ್ ಮೆಕಾಲೆ ಬಿ) ಲಾರ್ಡ್ ಕರ್ಜನ್

ಸಿ) ಲಾರ್ಡ್ ವಿಲಿಯಂ ಬೆಂಟಿಂಕ್ ಡಿ) ಲಾರ್ಡ್ ಕಾರ್ನ್‌ವಾಲೀಸ್

3. ಭಾರತದಲ್ಲಿ ಪ್ರಥಮ ರೈಲು ಸಂಚಾರ ಈ ಎರಡು ನಗರಗಳ ನಡುವೆ ಪ್ರಾರಂಭವಾಯಿತು.

ಉ. ಎ) ಮುಂಬೈ ಮತ್ತು ಥಾಣ ಬಿ) ಕೋಲ್ಕತ್ತಾ ಮತ್ತು ರಾಣಿಗಾಜ್

ಸಿ) ಬೆಂಗಳೂರು, ಚೆನ್ನೈ ಡಿ) ಸೂರತ್–ಅಹಮದಾಬಾದ್

## II. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕನ್ನಡದ ಮೊದಲ ಪತ್ರಿಕೆ ಯಾವುದು?

ಉ. ಮಂಗಳೂರು ಸಮಾಚಾರ

2. ಕನ್ನಡದ ಮೊದಲ ಪತ್ರಿಕೆ ಮಂಗಳೂರು ಸಮಾಚಾರ ಪತ್ರಿಕೆಯನ್ನು ಪ್ರಾರಂಭಿಸಿದವರು ಯಾರು?

ಉ. ಮೋಗ್ಲಿಂಗ್ ಮಿಷನರಿ

3. ಭಾರತದ ಭಾಷಾ ಪತ್ರಿಕೆಗಳು ಪ್ರಾರಂಭವಾದ ವರ್ಷ ಯಾವುದು?

ಉ. ಕ್ರಿ.ಶ. 1818

4. ಚಾಲ್ಸ್‌ವುಡ್ ಆಯೋಗವು ನೀಡಿದ ಸಲಹೆ ಏನು?

ಉ. ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಿ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡುವುದು.

5. ಸರ್ಕಾರದ ಕಾರ್ಯವೈಖರಿಯನ್ನು ಪ್ರಶ್ನಿಸಿದ್ದರಿಂದ ಗಡಿಪಾಲಾದ ಸಂಪಾದಕ ಯಾರು?

ಉ. ಬಕ್ಕಿಂಗ್ ಹ್ಯಾಮ್

6. ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ರಚಿಸಲು ಸಲಹೆ ನೀಡಿದವನು ಯಾರು?

ಉ. ಚಾಲ್ಸ್‌ವುಡ್

# ಅಧ್ಯಾಯ–8
# ಸ್ವಾತಂತ್ರ್ಯ ಹೋರಾಟ

## ಕಾರ್ಡ್–1

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪನೆಗೊಂಡ ವರ್ಷ

ಉ. ಎ) ಕ್ರಿ.ಶ. 1884 ಬಿ) <u>ಕ್ರಿ.ಶ. 1885</u>
ಸಿ) ಕ್ರಿ.ಶ. 1886 ಡಿ) ಕ್ರಿ.ಶ. 1883

2. ಭಾರತೀಯ ರಾಷ್ಟ್ರೀಯ ಕಾಂಗ್ರೇಸ್‌ನ ಸ್ಥಾಪಕರು

ಉ. ಎ) ಜವಹರ್ ಲಾಲ್ ನೆಹರು ಬಿ) ಡಬ್ಲ್ಯೂ.ಸಿ. ಬ್ಯಾನರ್ಜಿ
ಸಿ) <u>ಎ.ಒ.ಹ್ಯೂಂ</u> ಡಿ) ಜಿನ್ನಾ

3. ಇವರು ಸಂಪತ್ತಿನ ಸೋರುವಿಕೆ ಸಿದ್ಧಾಂತದ ಪ್ರತಿಪಾದಕರು

ಉ. ಎ) ಬಾಲಗಂಗಾಧರ ತಿಲಕ್ ಬಿ) ಮಹದೇವಗೋವಿಂದ ರಾನಡೆ
ಸಿ) ಗೋಪಾಲಕೃಷ್ಣ ಗೋಖಲೆ ಡಿ) <u>ದಾದಾಬಾಯಿ ನವರೋಜಿ</u>

4. ಬಂಗಾಳದ ವಿಭಜನೆಯಾದ ವರ್ಷ

ಉ. ಎ) ಕ್ರಿ.ಶ. 1885 ಬಿ) ಕ್ರಿ.ಶ. 1901 ಸಿ) <u>ಕ್ರಿ.ಶ. 1905</u> ಡಿ) ಕ್ರಿ.ಶ. 1911

5. ಬಂಗಾಳದ ವಿಭಜನೆಯನ್ನು ಬ್ರಿಟಿಷ್ ಸರ್ಕಾರವೇ ಹಿಂಪಡೆದ ವರ್ಷ

ಉ. ಎ) ಕ್ರಿ.ಶ. 1901 ಬಿ) ಕ್ರಿ.ಶ. 1905 ಸಿ) ಕ್ರಿ.ಶ. 1906 ಡಿ) <u>ಕ್ರಿ.ಶ. 1911</u>

6. ತಿಲಕ್‌ರವರು ಮರಾಠಿ ಭಾಷೆಯಲ್ಲಿ ಹೊರತಂದ ಪತ್ರಿಕೆ

ಉ. ಎ) ಮರಾಠ ಬಿ) ಸಂವಾದ ಕೌಮುದಿ
ಸಿ) ಸತ್ಯಾರ್ಥ್ ಪ್ರಕಾರ ಡಿ) <u>ಕೇಸರಿ</u>

7. 'ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು' ಅದನ್ನು ಪಡೆದೆ ತೀರುವೆ ಎಂದು ಘೋಷಿಸಿದರು.

ಉ. ಎ) ಬಿಪಿನ್ ಚಂದ್ರಪಾಲ್ ಬಿ) <u>ಬಾಲಗಂಗಾಧರ ತಿಲಕ್</u>
ಸಿ) ಲಾಲಾ ಲಜಪತ್‌ರಾಯ್ ಡಿ) ಮೋತಿಲಾಲ್ ನೆಹರು.

8. ರೌಲತ್ ಖಾಯಿದೆಯನ್ನು ಜಾರಿಗೆ ತಂದ ಉದ್ದೇಶ

ಉ. ಎ) ತೀವ್ರಗತಿ ಆರ್ಥಿಕ ಸುಧಾರಣೆಗಾಗಿ
ಬಿ) ಕ್ರಾಂತಿಕಾರಿಕ ಚಟುವಟಿಕೆಗಳನ್ನು ಹತ್ತಿಕ್ಕಲು
ಸಿ) ಸ್ವರಾಜ್ಯ ನೀಡಲು
ಡಿ) ದೇಶ ವಿಭಜನೆಗಾಗಿ

9. ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದವರು
ಉ. ಎ) ಮೋತಿಲಾಲ್ ನೆಹರು – ಚಿತ್ತರಂಜನ್ ದಾಸ್
ಬಿ) ಮಹಮದ್ ಆಲಿಜಿನ್ನಾ – ಶೌಕತ್ ಆಲಿ
ಸಿ) ಸುರೇಂದ್ರನಾಥ ಬ್ಯಾನರ್ಜಿ – ದಾದಾಬಾಯಿನವರೋಜು
ಡಿ) ಭಗತ್‌ಸಿಂಗ್ – ಚಂದ್ರಶೇಖರ ಆಜಾದ್

10. 1929ರ ಲಾಹೋರ್ ಅಧಿವೇಶನದ ಅಧ್ಯಕ್ಷತೆ ವಹಿಸಿಕೊಂಡಿದ್ದವರು
ಉ. ಎ) ಮಹಾತ್ಮಗಾಂಧಿ ಬಿ) ಜವಹಾರ್‌ಲಾಲ್ ನೆಹರು
ಸಿ) ಸಿಂದಾರ ವಲ್ಲಭಾಯಿ ಪಟೇಲ್ ಡಿ) ಮೋತಿಲಾಲ್ ನೆಹರು

11. 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಗಾಂಧೀಜಿಯವರು ದೇಶಬಾಂದವರಿಗೆ ನೀಡಿದ ಕರೆ.
ಉ. ಎ) ಮಾಡು ಇಲ್ಲವೆ ಮಡಿ ಬಿ) ಸ್ವರಾಜ್ಯ ನನ್ನ ಆಜನ್ಮ ಸಿದ್ಧ ಹಕ್ಕು
ಸಿ) ವಿಮುಕ್ತಿ ದಿವಸ್ ಡಿ) ಮೇಲಿನ ಎಲ್ಲವೂ

12. ಸುಭಾಷ್ ಚಂದ್ರ ಬೋಸ್‌ರವರನ್ನೂ ಪ್ರೀತಿಯಿಂದ ಜನರು ಹೀಗೆ ಕರೆದರು.
ಎ) ಮಹಾತ್ಮ ಬಿ) ನೇತಾಜಿ ಸಿ) ಬಾಪೂಜಿ ಡಿ) ಚಾಚಾ

13. ಸುಭಾಷ್ ಚಂದ್ರ ಬೋಸ್‌ರವರು ಸ್ಥಾಪಿಸಿದ ಸೇನೆ
ಎ) ಭಾರತೀಯ ರಾಷ್ಟ್ರೀಯಸೇನೆ ಬಿ) ಸ್ವರಾಜ್ಯಪಕ್ಷ
ಸಿ) ರಾಷ್ಟ್ರೀಯ ಕಾಂಗ್ರೆಸ್ ಡಿ) ಸಮಾಜವಾದಿ ಪಕ್ಷ

14. 'ಸ್ವತಂತ್ರ ಕಾರ್ಮಿಕ ಪಕ್ಷ' ಎಂಬುದನ್ನು ಸ್ಥಾಪಿಸಿದವರು
ಎ) ಜವಹರ್‌ಲಾಲ್ ನೆಹರು ಬಿ) ಮಹಾತ್ಮಗಾಂಧಿ
ಸಿ) ಬಿ.ಆರ್.ಅಂಬೇಡ್ಕರ್ ಡಿ) ಸರದಾರ್ ವಲ್ಲಭಬಾಯಿಪಟೇಲ್

15. ಭಾರತದ ಉಕ್ಕಿನ ಮನುಷ್ಯನೆಂದು ಕರೆಯಲ್ಪಡುವರು.
ಎ) ಸರದಾರ್ ವಲ್ಲಭಬಾಯಿಪಟೇಲ್ ಬಿ) ಮೌಲಾನ ಅಬ್ದುಲ್ ಕಲಂ
ಸಿ) ನೆಹರು ಡಿ) ಲಾಲ್ ಬಹದ್ದೂರ್ ಶಾಸ್ತ್ರಿ

16. ಪಾಕಿಸ್ಥಾನ ರಾಷ್ಟ್ರವಾದಿ ವಿಭಜನೆಗೆ ಕಾರಣರಾದ ಮುಸ್ಲಿಂಲೀಗೆ ನಾಯಕ
ಎ) ಮೌಲನ ಅಬ್ದುಲ್ ಕಲಂ ಬಿ) ಸೌಕತ್ ಆಲಿ
ಸಿ) ಮಹಮದ್ ಆರಿಜಿನ್ನಾ ಡಿ) ಗಫರ್ ಖಾನ್

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಇಲ್ಬರ್ಟ್ ಮಸೂದೆಯನ್ನು ಜಾರಿಗೆ ತಂದವರು ಯಾರು?
ಉ. ಲಾರ್ಡ್ ರಿಪ್ಪನ್

2. ಬ್ರಿಟಿಷ್ ಸಕಾರರವು ಬಂಗಾಳದ ವಿಭಜನೆಯನ್ನು ಯಾವಾಗ ಹಿಂಪಡೆಯಿತು?
ಉ. 1911

3. ಕ್ರಾಂತಿಕಾರಿಗಳ ಮುಖ್ಯ ರಹಸ್ಯ ಸಂಘಟನೆಗಳನ್ನು ಹೆಸರಿಸಿ.
ಉ. ಅನುಶೀಲನ ಸಮಿತಿ ಮತ್ತು ಅಭಿನವ ಭಾರತ

4. ಗಾಂಧೀಜಿಯವರ ಹೋರಾಟದ ಪ್ರಮುಖ ಅಸ್ತ್ರ ಯಾವುದು?
ಉ. ಸತ್ಯಾಗ್ರಹ

5. ಜಲಿಯನ್‌ವಾಲ್‌ಬಾಗ್ ದುರಂತದ ವಿಚಾರಣೆಗಾಗಿ ಬ್ರಿಟಿಷ್ ಸರ್ಕಾರ ನೇಮಿಸಿದ ಆಯೋಗ ಯಾವುದು?
ಉ. ಹಂಟರ್ ಆಯೋಗ

6. ಜಲಿಯನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಕಾರಣನಾದ ಬ್ರಿಟಿಷ್ ಸೇನಾಧಿಕಾರಿ ಯಾರು?
ಉ. ಜನರಲ್ ಡಯರ್

7. ರೈತರು ನೀಲಿ ಬೆಳೆಯುವುದನ್ನು ಎಲ್ಲಿ ವಿರೋಧಿಸಿದರು?
ಉ. ಚಂಪಾರಣ್ಯ ಜಿಲ್ಲೆ

8. ಭಾರತೀಯ ರಾಷ್ಟ್ರೀಯ ಸೇನೆಯ (I.N.A) ಝಾನ್ಸಿ ರೆಜಿಮೆಂಟಿನ ನೇತೃತ್ವ ವಹಿಸಿದವರು ಯಾರು?
ಉ. ಕ್ಯಾಪ್ಟನ್ ಲಕ್ಷ್ಮಿ

9. ಸ್ವತಂತ್ರ್ಯ ಭಾರತದ ಮೊದಲ ಕಾನೂನು ಮಂತ್ರಿ ಯಾರು?
ಉ. ಡಾ.ಬಿ.ಆರ್. ಅಂಬೇಡ್ಕರ್

10. ಸ್ವತಂತ್ರ್ಯ ಭಾರತದ ಮೊದಲ ಗೃಹಮಂತ್ರಿ ಯಾರು?
ಉ. ಸರ್ದಾರ್ ವಲ್ಲಭಾಯಿ ಪಟೇಲ್

**III. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯದಲ್ಲಿ ಉತ್ತರಿಸಿರಿ.**

1. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವೇನು?
ಉ. * ಸಂವಿಧಾನಿಕ ಚೌಕಟ್ಟಿನೊಳಗೆ ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು.
* ಜನರಿಗೆ ರಾಜಕೀಯ ಶಿಕ್ಷಣ ನೀಡಲು ಪ್ರಯತ್ನಿಸಿದರು.
* ದೇಶದ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಬೇಡಿಕೆಯನ್ನಿಟ್ಟರು.
* ಸೈನಿಕ ವೆಚ್ಚ ಕಡಿಮೆ ಮಾಡುವ ಬೇಡಿಕೆಯನ್ನು ಮುಂದಿಟ್ಟರು.
* ಭಾರತೀಯರಿಗೆ ಉತ್ತಮ ಶಿಕ್ಷಣ ಕೊಡುವ ಬಗ್ಗೆ ಒತ್ತಾಯಿಸಿದರು.
* ಬಡತನದ ಬಗ್ಗೆ ಅಧ್ಯಯನ ನಡೆಸಿ ಸಮಸ್ಯೆ ಪರಿಹರಿಸಲು ಹೋರಾಡಿದರು.

* ಭಾರತದ ಸಂಪತ್ತು ಬ್ರಿಟನ್‌ಗೆ ಹರಿದು ಹೋಗುವ ಹಾಗು ಅದರ ಆತಂಕಕಾರಿ ಪರಿಣಾಮವನ್ನು ಎತ್ತಿಹಿಡಿದರು.
* ಮಂದಗಾಮಿಗಳ ಈ ಹೋರಾಟದ ಸ್ವರೂಪವು ಉದಾರ ರಾಷ್ಟ್ರವಾದದ ಕಾಲವೆಂದೇ ಹೆಸರುವಾಸಿಯಾಯಿತು.

2. ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಹೆಚ್ಚಿಸುವಲ್ಲಿ ತೀವ್ರವಾದಿಗಳ ಪಾತ್ರವೇನು?

ಉ. * ಮಂದಗಾಮಿಗಳ ಮೃದುಧೋರಣೆಯ ಬದಲಾಗಿ ತೀವ್ರಪ್ರತಿಭಟನೆಗಳನ್ನು ಹೋರಾಟ ಮಂತ್ರವಾಗಿಸಿಕೊಂಡರು.
* ಬಂಗಾಳದ ವಿಭಜನೆಯ ವಿರುದ್ಧ ದೇಶದಾದ್ಯಂತ ಪ್ರತಿರೋಧ ಆರಂಭಿಸಿದರು.
* ಸ್ವದೇಶಿ ಚಳುವಳಿಯನ್ನು ದೇಶದಾದ್ಯಂತ ಕೊಂಡೊಯ್ದರು.
* ಉತ್ತಮ ಆಳ್ವಿಕೆಯು ಎಂದೂ ಕೂಡ ಸ್ವಯಂ ಆಳ್ವಿಕೆಗೆ ಪರ್ಯಾಯವಾಗಲಾರದೆಂದು ಪ್ರತಿಪಾದಿಸಿದರು.
* ಇದರಲ್ಲಿ ತಿಲಕರು 'ಸ್ವರಾಜ್ಯ ನನ್ನ ಜನ್ಮ ಸಿದ್ಧಹಕ್ಕು' ಅದನ್ನು ಪಡೆದೇ ತಿರುವೆ' ಎಂದು ಘೋಷಿಸಿದರು.
* ಪೂರ್ವ ಸ್ವರಾಜ್ಯವನ್ನು ಪಡೆಯುವುದು ತೀವ್ರನಾದಿಗಳ ಗುರಿಯಾಗಿತ್ತು
* ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜುಗೊಳಿಸಿದರು.
* ಕೇಸರಿ, ಮರಾಠ ದಂತಹ ಪತ್ರಿಕೆಗಳ ಮೂಲಕ ಜನರನ್ನು ಉರಿದುಂಬಿಸಿ ಹೋರಾಟಕ್ಕೆ ಬಳಸಿಕೊಂಡರು.

# ಅಧ್ಯಾಯ–9
# ಸ್ವಾತಂತ್ರ್ಯೋತ್ತರ ಭಾರತ

## ಕಾರ್ಡ್–1

## I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತ ಮತ್ತು ಪಾಕೀಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳ ಅಸ್ತಿತ್ವಕ್ಕೆ ಕಾರಣವಾದ ವರದಿ

ಉ. ಎ) ಮೌಂಟ್ ಬ್ಯಾಟನ್ ವರದಿ  ಬಿ) ಸೈಮನ್ ಕಮಿಷನ್ ವರದಿ
ಸಿ) ಕ್ರಿಪ್ಸ್ ವರದಿ  ಡಿ) ಹಂಟರ್ಸ್ ವರದಿ

2. ಭಾರತದ ವಿಭಜನೆಯಿಂದಾಗಿ ಉಂಟಾದ ಒಂದು ಘೋರ ಪರಿಣಾಮ

ಉ. ಎ) ಬಡತನದ ಸಮಸ್ಯೆ  ಬಿ) ನಿರುದ್ಯೋಗ ಸಮಸ್ಯೆ
ಸಿ) ಶೈಕ್ಷಣಿಕ ಸಮಸ್ಯೆ  ಡಿ) ನಿರಾಶ್ರಿತರ ಸಮಸ್ಯೆ

3. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಕೊನೆಯ ಗವರ್ನರ್ ಜನರಲ್

ಉ. ಎ) ಲಾರ್ಡ್‌ಡಾಲ್‌ಹೌಸಿ  ಬಿ) ಲಾರ್ಡ್ ಮೌಂಟ್‌ಬ್ಯಾಟನ್
ಸಿ) ರ್‍ಯಾಡ್‌ಕ್ಲಿಫ್  ಡಿ) ಇರ್ವಿನ್

4. ಭಾರತದ ಪ್ರಥಮ ಪ್ರಧಾನಿ

ಉ. ಎ) ನೆಹರು  ಬಿ) ವಲ್ಲಭ ಬಾಯಿ ಪಟೇಲ್
ಸಿ) ಮೌಂಟ್ ಬ್ಯಾಟನ್  ಡಿ) ಡಾ॥ ರಾಜೇಂದ್ರ ಪ್ರಸಾದ್

5. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು

ಉ. ಎ) ನೆಹರು  ಬಿ) ಡಾ॥ ರಾಜೇಂದ್ರ ಪ್ರಸಾದ್
ಸಿ) ವಲ್ಲಭಭಾಯಿ ಪಟೇಲ್  ಡಿ) ಲಾಲ್ ಬಹದ್ದೂರ್ ಶಾಸ್ತ್ರಿ

6. ನಮ್ಮ ಸಂವಿಧಾನ ಜಾರಿಗೆ ಬಂದ ವರ್ಷ

ಉ. ಎ) 1950, ಜನವರಿ 26  ಬಿ) 1949 ನವೆಂಬರ್ 26
ಸಿ) 1947 ಆಗಸ್ಟ್ 25  ಡಿ) 1950 ಆಗಸ್ಟ್ 15

7. ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ಭಾರತದಲ್ಲಿದ್ದ ಒಟ್ಟು ಸಂಸ್ಥಾನಗಳ ಸಂಖ್ಯೆ

ಉ. ಎ) 572  ಬಿ) 562  ಸಿ) 652  ಡಿ) 563

8. ಭಾರತದಲ್ಲಿ 'ಉಕ್ಕಿನ ಮನುಷ್ಯ'ನೆಂದು ಖ್ಯಾತರಾದವರು

ಉ. ಎ) ದಾದಾ ಬಾಯಿ ನವರೋಜಿ
ಬಿ) ಸರ್ದಾರ್ ವಲ್ಲಭ ಬಾಯಿ ಪಟೇಲ್
ಸಿ) ಜವಹರಲಾಲ ನೆಹರು
ಡಿ) ಗೋಪಾಲ ಕೃಷ್ಣ ಗೋಖಲೆ

9. ಭಾರತದ ಪ್ರಥಮ ಗೃಹ ಮಂತ್ರಿ

ಉ. ಎ) ಜವಹರಲಾಲ ನೆಹರು ಬಿ) ಮಹಾತ್ಮ ಗಾಂಧೀಜಿ
ಸಿ) ದಾದಾಬಾಯಿ ನವರೋಜಿ ಡಿ) ಸರ್ದಾರ್ ವಲ್ಲಭಬಾಯಿ ಪಟೇಲ್

10. ಭಾರತದ ಒಕ್ಕೂಟಕ್ಕೆ ಜುನಾಗಡ ಸೇರ್ಪಡೆಯಾದ ವರ್ಷ–

ಉ. ಎ) 1947 ಬಿ) 1949 ಸಿ) 1948 ಡಿ) 1950

11. 1948ರಲ್ಲಿ ಭಾರತದ ಒಕ್ಕೂಟಕ್ಕೆ ವಿಲೀನಗೊಂಡ ಸಂಸ್ಥಾನ

ಉ. ಎ) ಜುನಾಗಡ ಬಿ) ಹೈದರಾಬಾದ್ ಸಿ) ಕಾಶ್ಮೀರ ಡಿ) ಔದ್

12. ಭಾರತದ ಒಕ್ಕೂಟಕ್ಕೆ ಸೇರ್ಪಡೆಗೊಳ್ಳದೆ ಸ್ವತಂತ್ರವಾಗಿ ಉಳಿಯಲು ಇಚ್ಛಿಸಿದ ಕಾಶ್ಮೀರ ದೊರೆ

ಉ. ಎ) ಹರಿಸಿಂಗ್ ಬಿ) ಷೇಕ್ ಅಬ್ದುಲ್ಲ
ಸಿ) ರಝಾಕ್ ಡಿ) ರಣಜಿತ್‌ಸಿಂಗ್

13. 'ಪಾಕ್ ಆಕ್ರಮಿತ ಪ್ರದೇಶ' ಎಂದು ಈಗಲೂ ಕರೆಯಲ್ಪಡುವ ಪ್ರದೇಶ

ಉ. ಎ) ಕಾಶ್ಮೀರದ ಈಶಾನ್ಯ ಭಾಗ ಬಿ) ಕಾಶ್ಮೀರದ ಆಗ್ನೇಯ ಭಾಗ
ಸಿ) ಕಾಶ್ಮೀರದ ವಾಯುವ್ಯ ಭಾಗ ಡಿ) ಕಾಶ್ಮೀರದ ನೈರುತ್ಯ ಭಾಗ

14. 1963ರಲ್ಲಿ ಭಾರತದ ಕೇಂದ್ರಾಡಳಿತಕ್ಕೆ ಒಳಪಟ್ಟ ಪ್ರದೇಶ

ಉ. ಎ) ಪಾಂಡಿಚೇರಿ ಬಿ) ದೆಹಲಿ ಸಿ) ಗೋವಾ ಡಿ) ಲಕ್ಷದ್ವೀಪ

15. ಇದು ಭಾರತದಲ್ಲಿನ ಪೋರ್ಚುಗೀಸರ ವಸಾಹತು

ಉ. ಎ) ಮಾಹೆ ಬಿ) ಗೋವಾ ಸಿ) ಮಚಲೀಪಟ್ಟಣ ಡಿ) ಕೊಚ್ಚಿನ್

16. 1987ರವೆಗೂ ಕೇಂದ್ರಾಡಳಿತ ಪ್ರದೇಶವಾಗಿ, ನಂತರ ರಾಜ್ಯದ ಸ್ಥಾನಮಾನಗಳಿಸಿದ ಪ್ರದೇಶ

ಉ. ಎ) ಗೋವಾ ಬಿ) ಪಾಂಡಿಚೇರಿ ಸಿ) ಮಾಹೆ ಡಿ) ಕಾಶ್ಮೀರ

17. ಜಸ್ಟೀಸ್ ಫಜಲ್ ಅಲಿ ಆಯೋಗವು ರಚನೆಗೊಂಡ ವರ್ಷ

ಉ. ಎ) 1935 ಬಿ) 1950 ಸಿ) 1947 ಡಿ) 1953

18. 1953ರಲ್ಲಿ ರಚನೆಗೊಂಡ ಮೊದಲ ಭಾಷಾವಾರು ರಾಜ್ಯ

ಉ. ಎ) ಕರ್ನಾಟಕ ಬಿ) ತಮಿಳುನಾಡು ಸಿ) ಆಂಧ್ರಪ್ರದೇಶ ಡಿ) ಕೇರಳ

19. ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದ ವರ್ಷ

ಉ. ಎ) 1973 ಬಿ) 1956 ಸಿ) 1955 ಡಿ) 1950

20. ರಾಜ್ಯ ಪುನರ್ವಿಂಗಡಣಾ ಕಾನೂನಿನ ಪ್ರಕಾರ ಅಸ್ತಿತ್ವಕ್ಕೆ ಬಂದ ರಾಜ್ಯಗಳ ಸಂಖ್ಯೆ

ಎ) 14 ರಾಜ್ಯಗಳು ಬಿ) 28 ರಾಜ್ಯಗಳು ಸಿ) 15 ರಾಜ್ಯಗಳು ಡಿ) 30 ರಾಜ್ಯಗಳು

21. 'ಮೈಸೂರು ರಾಜ್ಯ' ಅಸ್ತಿತ್ವಕ್ಕೆ ಬಂದ ವರ್ಷ

ಎ) 1956, ಆಗಸ್ಟ್ 15 ಬಿ) 1956, ನವೆಂಬರ್ 1

ಸಿ) 1973, ನವೆಂಬರ್ 1 ಡಿ) 1950, ಜನವರಿ 26

22. ಮೈಸೂರು ರಾಜ್ಯ 'ಕರ್ನಾಟಕ'ವೆಂದು ನಾಮಕರಣಗೊಂಡ ವರ್ಷ

ಎ) 1956 ಬಿ) 1973 ಸಿ) 1937 ಡಿ) 1950

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭಾರತ ಸ್ವತಂತ್ರ ಪಡೆದಾಗ ಎದುರಿಸಿದ ಸಮಸ್ಯೆಗಳು ಯಾವುವು?

ಉ. ನಿರಾಶ್ರಿತರ ಸಮಸ್ಯೆ, ಕೋಮುಗಲಭೆಗಳು, ಸರ್ಕಾರದ ರಚನೆ, ದೇಶೀಯ ಸಂಸ್ಥಾನಗಳು ವಿಲೀನೀಕರಣ, ಆಹಾರ ಉತ್ಪಾದನೆ ಕೃಷಿ ಹಾಗೂ ಕೈಗಾರಿಕೆಗಳ ಬೆಳವಣಿಗೆ.

2. ನಿರಾಶ್ರಿತರ ಸಮಸ್ಯೆಯನ್ನು ಭಾರತ ಹೇಗೆ ಎದುರಿಸಿತು?

ಉ. ನಿರಾಶ್ರಿತರಿಗೆ ವಸತಿ, ಉದ್ಯೋಗ, ಭೂಮಿ, ಶಿಕ್ಷಣ, ಆರೋಗ್ಯ, ಸಾಮಾಜಿಕ ವಾತಾವರಣ ನಿರ್ಮಿಸಿಕೊಡುವಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಲಾಯಿತು.

3. ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ ಯಾರು?

ಉ. ಮೌಂಟ್ ಬ್ಯಾಟನ್

4. ಭಾರತದ ಪ್ರಥಮ ಪ್ರಧಾನ ಮಂತ್ರಿ ಯಾರು?

ಉ. ಜವಾಹರ್‌ಲಾಲ್ ನೆಹರು

5. ಭಾರತದ ಸಂವಿಧಾನ ಯಾವಾಗ ಜಾರಿಗೆ ಬಂದಿತು?

ಉ. 1950 ಜನವರಿ 26

6. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು?

ಉ. ಡಾ.ಬಾಬು ರಾಜೇಂದ್ರ ಪ್ರಸಾದ್

7. ನಮ್ಮ ಸಂವಿಧಾನಕ್ಕೆ 42ನೇ ತಿದ್ದು ಪಡಿಯಿಂದ ಸೇರ್ಪಡೆಯಾದ ಅಂಶಗಳಯ ಯಾವುವು?

ಉ. ಜಾತ್ಯಾತೀತ ಮತ್ತು ಸಮಾಜವಾದಿ

8. ಭಾರತ ಯಾವ ಮಾದರಿಯ ಪ್ರಜಾ ಪ್ರಭುತ್ವವನ್ನು ಹೊಂದಿದೆ.

ಉ. ಸಂಪದೀಯ ಮಾದರಿ ಪ್ರಜಾಪ್ರಭುತ್ವ

9. 'ಉಕ್ಕಿನ ಮನುಷ್ಯ' ಎಂದು ಖ್ಯಾತಿ ಪಡೆದಿದ್ದವರು ಯಾರು?

ಉ. ವಲ್ಲಭಬಾಯಿ ಪಟೇಲ್

10. ಭಾರತದ ಪ್ರಥಮ ಗೃಹ ಮಂತ್ರಿ ಯಾರು?

ಉ. ವಲ್ಲಭಬಾಯಿ ಪಟೇಲ್

11. ಸ್ವಾತಂತ್ರ್ಯ ಪಡಿದಾಗ ಭಾರತದಲ್ಲಿ ಎಷ್ಟು ಸಂಸ್ಥಾನಗಳಿದ್ದವು?
ಉ. 562

12. ಬ್ರಿಟಿಷರು ದೇಶ ವಿಭಜನೆ ಮಾಡಿದಾಗ ಸಂಸ್ಥಾನಗಳಿಗೆ ನೀಡಿದ 3 ಅವಕಾಶಗಳು ಯಾವುವು?
ಉ. 1. ಭಾರತ ಒಕ್ಕೂಟಕ್ಕೆ ಸೇರಬಹುದು
2. ಸಂಸ್ಥಾನಕ್ಕೆ ಸೇರಬಹುದು.
3. ಸ್ವತಂತ್ರರಾಗಿರಬಹುದು.

13. ಭಾರತ ಒಕ್ಕೂಟದಲ್ಲಿ ವಿಲೀನವಾದ ಸಂಸ್ಥಾನಗಳಿಗೆ ನೀಡಿದ ಸೌಲಭ್ಯಗಳನ್ನು ತಿಳಿಸಿ.
ಉ. * ರಾಜಧನ ನಿಗಧಿ
* ಕೆಲವು ಸವಲತ್ತು ಮತ್ತು ಸ್ಥಾನಮಾನ ನೀಡುವುದು.

14. ಸಂಸ್ಥಾನಗಳಿಗೆ ನೀಡಿದ್ದ ರಾಜ ಧನ ಮತ್ತು ಸ್ಥಾನಮಾನಗಳನ್ನು ಭಾರತ ಯಾವಾಗ ರದ್ದು ಪಡಿಸಿತು?
ಉ. 1969

15. ಭಾರತ ಒಕ್ಕೂಟದಲ್ಲಿ ವಿಲೀನಗೊಳ್ಳಲು ಪ್ರತಿರೋಧ ತೋರಿದ ಸಂಸ್ಥಾನಗಳು ಯಾವುವು?
ಉ. ಜುನಾಗಡ, ಹೈದರಾಬಾದ್ ಮತ್ತು ಜಮ್ಮುಕಾಶ್ಮೀರ

16. ಭಾರತ ಒಕ್ಕೂಟದಲ್ಲಿ ದೇಶೀಯ ವಿಲೀನಕರನಾದ ನೇತೃತ್ವ ವಹಿಸಿದ್ದವರು ಯಾರು?
ಉ. ವಲ್ಲಭಬಾಯಿ ಪಟೇಲ್

17. ಜುನಾಗಡ ಸಂಸ್ಥಾನವು ಭಾರತದಲ್ಲಿ ಹೇಗೆ ವಿಲೀನವಾಯಿತು?
ಉ. * ಜುನಾಗಡ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ಥಾನಕ್ಕೆ ಸೇರಿಸಲು ಇಚ್ಚಿಸಿದನು.
* ಜುನಾಗಡ ಪ್ರಜೆಗಳು ನವಾಬನ ವಿರುದ್ಧ ದಂಗೆ ಎದ್ದರು.
* ನವಾಬನು ಪಾಕ್‌ಸ್ಥಾನಕ್ಕೆ ಫಲಾಯನ ಮಾಡಿದನು.
* ಜನರ ಆಶಯದಂತೆ 1949ರಲ್ಲಿ ಜುನಾಗಡ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾಯಿತು.

18. ಹೈದರಾಬಾದ್ ಸಂಸ್ಥಾನವು ಭಾರತದೊಂದಿಗೆ ಹೇಗೆ ವಿಲೀನವಾಯ್ತು?
ಉ. * ಹೈದರಾಬಾದಿನ ನಿಜಾಮನು (ಸ್ವತಂತ್ರವಾಗಿರಲು) ಭಾರತದೊಂದಿಗೆ ಸೇರಲು ನಿರಾಕರಿಸಿದನು.
* ಈ ಸಂದರ್ಭದಲ್ಲಿ ರೈತರು ನಿಜಾಮ ಮತ್ತು ಜಮೀನ್ದಾರರ ವಿರುದ್ಧ ಕಲಹಗಳು ನಡೆಯುತ್ತಿತ್ತು.
* ನಿಜಾಮರ ಪಡೆಯಾದ ರಜಾಕರ ವಿರುದ್ಧ ಜನರ ಪ್ರತಿರೋಧವಿತ್ತು.
* ಭಾರತದ ಸೈನ್ಯ ನಿಜಾಮನನ್ನು ಸೋಲಿಸಿ 1948ರಲ್ಲಿ ಹೈದರಾಬಾದನ್ನು ಭಾರತದಲ್ಲಿ ವಿಲೀನಗೊಳಿಸಲಾಯಿತು.

19. ಜಮ್ಮು ಮತ್ತು ಕಾಶ್ಮೀರದ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

ಉ. * ಜಮ್ಮುಕಾಶ್ಮೀರದ ರಾಜ ಹರಿಸಿಂಗ್ ಸ್ವತಂತ್ರವಾಗಿರಲು ನಿರ್ಧರಿಸಿದನು.

* ಪಾಕಿಸ್ಥಾನವು ಸ್ಥಳೀಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.
* ರಾಜಾ ಹರಿಸಿಂಗನ ಕೋರಿಕೆಯಂತೆ ಭಾರತ ಸಹಾಯ ಮಾಡಿತು.
* ಷೇಕ್ ಅಬ್ದುಲ್ಲಾನ ಬೆಂಬಲದೊಂದಿಗೆ ರಾಜ ಹರಿಸಿಂಗ್ ಕೆಲವು ಷರತ್ತುಗಳೊಂದಿಗೆ ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಲು ಒಪ್ಪಿಗೆ ನೀಡಿದನು.
* ಕಾಶ್ಮೀರದ ಒಂದು ಭಾಗ ಪಾಕಿಸ್ಥಾನದ ವಶದಲ್ಲಿ ಉಳಿಯಿತು.
* ಭಾರತ ವಿಶ್ವಸಂಸ್ಥೆಗೆ ದೂರು ಸಲ್ಲಿಸಿತು.
* ವಿಶ್ವಸಂಸ್ಥೆ ಜನವರಿ, 1, 1949ರಲ್ಲಿ ಕದನ ವಿರಾಮವನ್ನು ಘೋಷಿಸಿತು.

20. ಪಾಂಡಿಚೇರಿಯನ್ನು ಫ್ರೆಂಚರಿಂದ ಹೇಗೆ ವಿಮುಕ್ತಗೊಳಿಸಲಾಯಿತು?

ಉ. * ಸ್ವಾತಂತ್ರ್ಯ ನಂತರ ಫ್ರೆಂಚ್ ವಸಾಹತು ಶಾಹಿಗಳು (ಕಾರೈಕಲ್), ಮಾಹೆ ಮತ್ತು ಚಾಂದ್‌ನಗರಗಳ ಮೇಲಿನ ಹಿರಿತ ಮುಂದುವರಿಸಿದವು.

* ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ಹೋರಾಟದ ಫಲವಾಗಿ 1954ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು.

21. ಪಾಂಡಿಚೇರಿ ಯಾವಾಗ ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು?

ಉ. 1963

22. ಗೋವಾ ಯಾವಾಗ ಪೋರ್ಚುಗೀಸರಿಂದ ವಿಮೋಚನೆ ಪಡೆಯಿತು?

ಉ. 1961

23. ಗೋವಾ ರಾಜ್ಯ ರಚನೆಯಾದ ವರ್ಷ ತಿಳಿಸಿ.

ಉ. 1987

24. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?

ಉ. * ಗೋವಾ ಭಾರತಕ್ಕೆ ಸೇರಬೇಕೆಂದು ನಿರಂತರ ಚಳುವಳಿ ನಡೆಯಿತು.

* ಪೋರ್ಚುಗೀಸರು ಹೆಚ್ಚಿನ ಸೈನ್ಯ ತರಿಸಿಕೊಂಡು ಚಳುವಳಿಯನ್ನು ದಮನ ಮಾಡಲು ಪ್ರಯತ್ನಿಸಿತು.
* 1955 ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಗಳು ಬಂದು ವಿಮೋಚನಾ ಹೋರಾಟ ಮಾಡಿದರು.
* 1961ರಲ್ಲಿ ಭಾರತದ ಸೈನ್ಯ ಮಧ್ಯ ಪ್ರವೇಶಿಸಿ ಗೋವವನ್ನು ಪೋರ್ಚುಗೀಸರಿಂದ ಮುಕ್ತಗೊಳಿಸಿತು.

25. ವಿಶಾಲಾಂಧ್ರ ರಚನೆಗಾಗಿ ಉಪವಾಸದಿಂದ ಅಸುನೀಗಿದವರು ಯಾರು?
ಉ. ಪೊಟ್ಟಿ ಶ್ರೀರಾಮುಲು

26. ಫಜಲ್ ಆಯೋಗ ಯಾವಾಗ ರಚನೆಯಾಯಿತು?
ಉ. 1953

27. ಫಜಲ್ ಅಲಿ ಆಯೋಗದ ಸದಸ್ಯರುಗಳನ್ನು ತಿಳಿಸಿ.
ಉ. ಕೆ.ಎಮ್.ಪಣಿಕ್ಕರ್, ಎಚ್.ಎನ್.ಕುಂಜ್ರು

28. ಭಾರತದ ಮೊದಲ ಭಾಷಾವಾರು ರಾಜ್ಯ ಯಾವುದು?
ಉ. ಆಂದ್ರಪ್ರದೇಶ

29. ರಾಜ್ಯ ಪುನರ್ವಿಂಗಡಣಾ ಕಾನೂನು ಜಾರಿಗೆ ಬಂದ ವರ್ಷ
ಉ. 1956

30. 1956ರ ರಾಜ್ಯ ಪುನರ್ವಿಂಗಡಣಾ ಕಾನೂನಿನ ಪ್ರಕಾರ ಭಾರತದಲ್ಲಿ ರಚನೆಯಾದ ರಾಜ್ಯಗಳ ಸಂಖ್ಯೆ ಎಷ್ಟು?
ಉ. 14 ರಾಜ್ಯಗಳು 6 ಕೇಂದ್ರಾಡಳಿತ ಪ್ರದೇಶಗಳು

31. ಮೈಸೂರು ರಾಜ್ಯವು ಯಾವಾಗ ಅಸ್ತಿತ್ವಕ್ಕೆ ಬಂದಿತು?
ಉ. 1956 ನವಂಬರ್–1

32. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಯಾವಾಗ ಮರುನಾಮಕರಣ ಮಾಡಲಾಯಿತು?
ಉ. 1973 ನವಂಬರ್ – 1

# ಅಧ್ಯಾಯ–10

# ೨೦ ನೆಯ ಶತಮಾನದ ರಾಜಕೀಯ ಅಯಾಮಗಳು

## ಕಾರ್ಡ್–1

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. ಮೊದಲನೇ ಮಹಾಯುದ್ಧ ಅಂತ್ಯದಲ್ಲಿ ಈ ಒಪ್ಪಂದ ಜರುಗಿತು.

ಉ. ಎ) ವರ್ಸೈಲ್ಸ್ ಒಪ್ಪಂದ ಬಿ) ಪ್ಯಾರಿಸ್ ಒಪ್ಪಂದ
ಸಿ) ಜಿನೀವಾ ಒಪ್ಪಂದ ಡಿ) ತಾಷ್ಕೆಂಟ್ ಒಪ್ಪಂದ

2. 1905ರಲ್ಲಿ ಜಪಾನ್ ಈ ರಾಷ್ಟ್ರವನ್ನು ಸೋಲಿಸಿತು.

ಉ. ಎ) ಅಮೆರಿಕಾ ಬಿ) ಚೀನಾ ಸಿ) ರಷ್ಯಾ ಡಿ) ಟಿಬೆಟ್

3. ಕಾರ್ಲ್‌ಮಾರ್ಕ್‌ನ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದವರು

ಉ. ಎ) ಸ್ಟಾಲಿನ್ ಬಿ) ಲೆನಿನ್ ಸಿ) ರೂಸ್‌ವೆಲ್ಟ್ ಡಿ) ಗೋರ್ಬಚೆವ್

4. ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೂ ಯೆಹೂದಿಗಳೇ ಕಾರಣ ಎಂದು ಹೇಳಿದವರು

ಉ. ಎ) ಮುಸೋಲಿನಿ ಬಿ) ಸ್ಟಾಲಿನ್ ಸಿ) ಟ್ರೂಮನ್ ಡಿ) ಹಿಟ್ಲರ್

5. ಇದು ಮುಸೋಲಿನಿ ಸ್ಥಾಪಿಸಿದ ಪಕ್ಷವಾಗಿದೆ.

ಉ. ಎ) ನಾಜಿ ಪಕ್ಷ ಬಿ) ರಾಷ್ಟ್ರೀಯ ಸೋಶಿಯಲಿಸ್ಟ್ ಪಕ್ಷ
ಸಿ) ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ ಡಿ) ಡೆಮಾಕ್ರಟಿಕ್ ಪಕ್ಷ

6. ಶೀತಲ ಸಮರದ ಎರಡು ಬಣಗಳು

ಉ. ಎ) ಅಮೆರಿಕಾ ಮತ್ತು ಇಂಗ್ಲೆಂಡ್ ಬಿ) ಫ್ರಾನ್ಸ್ ಮತ್ತು ಇಂಗ್ಲೆಂಡ್
ಸಿ) ಜರ್ಮನಿ ಮತ್ತು ಇಟಲಿ ಡಿ) ಅಮೆರಿಕಾ ಮತ್ತು ರಷ್ಯಾ

7. ಈ ಕೆಳಗಿನ ಯಾವ ಒಪ್ಪಂದವು ರಷ್ಯಾ ನೇತೃತ್ವದಲ್ಲಿ ರಚನೆಯಾಯಿತು.

ಉ. ಎ) ವಾರ್ಸಾ ಬಿ) ನ್ಯಾಟೋ ಸಿ) ಸಿಯಾಟೊ ಡಿ) ಸೆಂಟೊ

8. ಶೀತಲ ಸಮರದ ನಂತರ ಈ ರಾಷ್ಟ್ರ ಏಕಮೇವ ಬಲಿಷ್ಠ ರಾಷ್ಟ್ರವಾಯಿತು.

ಉ. ಎ) ರಷ್ಯಾ ಬಿ) ಇಂಗ್ಲೆಂಡ್ ಸಿ) ಅಮೆರಿಕಾ ಡಿ) ಜರ್ಮನಿ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. 'ಕದನ ಬಾಂದವ್ಯತ್ರಯ' ಮೈತ್ರಿಕೂಟ ರಚಿಸಿಕೊಂಡ ದೇಶಗಳು ಯಾವುವು?

ಉ. ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ

2. ‘ಕದನ ಸೌಹಾರ್ದತ್ರಯ’ ಮೈತ್ರಿಕೂಟ ರಚಿಸಿಕೊಂಡ ದೇಶಗಳು ಯಾವುವು?

ಉ. ಜರ್ಮನಿ, ಆಸ್ಟ್ರಿಯಾ, ಹಂಗೇರಿ ಮತ್ತು ಇಟಲಿ

3. ಮೊದಲ ಮಹಾಯುದ್ಧದ ಅವಧಿಯನ್ನು ತಿಳಿಸಿ.

ಉ. ಕ್ರಿ.ಶ. 1914 ರಿಂದ 1918

4. ಮೊದಲನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?

ಉ. ಜುಲೈ 28–1914ರಂದು ಆಸ್ಟ್ರೀಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫರ್ಡಿನೆಂಡನ ಹತ್ಯೆ

5. ರಷ್ಯಾ ಕ್ರಾಂತಿ ನಡೆದ ವರ್ಷ ತಿಳಿಸಿ.

ಉ. ಕ್ರಿ.ಶ. 1917

6. ವರ್ಸೈಲ್ ಒಪ್ಪಂದ ಜರುಗಿದ ವರ್ಷ ತಿಳಿಸಿ.

ಉ. ಕ್ರಿ.ಶ. 1919

7. 19ನೇ ಶತಮಾನದಲ್ಲಿ ರಷ್ಯಾವನ್ನು ಯಾವ ವಂಶದ ದೊರೆಗಳು ಆಳುತ್ತಿದ್ದರು?

ಉ. ಝಾರ್ ವಂಶದ ದೊರೆಗಳು

8. ಜಗತ್ತಿನ ಮೊದಲ ಗಗನ ಯಾತ್ರಿ ಯಾರು?

ಉ. ರಷ್ಯಾದ ಯೂರಿ ಗಗಾರಿನ್

10. ರಷ್ಯಾದ ಅಕ್ಟೋಬರ್ ಕ್ರಾಂತಿಯ ನೇತೃತ್ವ ವಹಿಸಿದ್ದವರು ಯಾರು?

ಉ. ಬೋಲ್ಶೆವಿಕ್‌ನ ನೇತೃತ್ವ

11. ಭಾರತ ಪಂಚವಾರ್ಷಿಕ ಯೋಜನೆಯನ್ನು ಯಾವ ದೇಶವನ್ನು ನೋಡಿ ಅನುಸರಿಸಿತು?

ಉ. ರಷ್ಯಾ

12. ಹಿಟ್ಲರ್ ಧರಿಸಿದ ಬಿರುದು ಯಾವುದು?

ಉ. ಫ್ಯೂರರ್

13. ಹಿಟ್ಲರ್ ಸ್ಥಾಪಿಸಿದ ಪಕ್ಷ ಯಾವುದು?

ಉ. ನಾಜಿ ಪಕ್ಷ

14. ಹಿಟ್ಲರ್ ಸ್ಥಾಪಿಸಿದ ಪಡೆ ಯಾವುದು?

ಉ. ಬೂದು ಅಂಗಿ ದಳ

15. ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಹಿಟ್ಲರ್ ಯಾವ ಮಂತ್ರಿಯನ್ನು ನೇಮಕ ಮಾಡಿದನು?

ಉ. ಗೋಬೆಲ್

16. ಮುಸೋಲಿನಿ ಯಾವ ಪಕ್ಷವನ್ನು ಸ್ಥಾಪಿಸಿದನು?

ಉ. ರಾಷ್ಟ್ರೀಯ ಪ್ರಾಸಿಸ್ಟ್ ಪಕ್ಷ

17. ಎರಡನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?

ಉ. 1939 ಸೆಪ್ಟೆಂಬರ್ 1 ರಂದು ಜರ್ಮನಿ ಪೋಲೆಂಡ್ ಮೇಲೆ ದಾಳಿ ಮಾಡಿದ್ದು.

18. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಉದಯವಾದ ಎರಡು ಬಣಗಳು ಯಾವುವು?

ಉ. ಶತ್ರು ಬಣ (Axis) ಮತ್ತು ಮಿತ್ರ ಬಣ (Alies )

19. ಚೀನಾದಲ್ಲಿ ದೀರ್ಘ ಪಯಣ ಯಾರ ನೇತೃತ್ವದಲ್ಲಿ ನಡೆಯಿತು?

ಉ. ಮಾವೋತ್ಸೆ ತುಂಗ್

20. ಅಮೆರಿಕಾ ಎರಡನೇ ಮಹಾಯುದ್ಧ ಪ್ರವೇಶಿಸಲು ಕಾರಣವೇನು?

ಉ. ಅಮೆರಿಕಾದ ಪರ್ಲ್ ಹರ್ಬರ್ ಮೇಲೆ ಜಪಾನ್ ದಾಳಿ ಮಾಡಿದ್ದರಿಂದ

21. ಶೀತಲ ಸಮರ ಎಂದರೇನು?

ಉ. ಅಮೆರಿಕಾ ಮತ್ತು ರಷ್ಯಾ ಬಣಗಳ ನಡುವಿನ ಅಘೋಷಿತ ಸಮರ

22. ಹೊಲೊಕಾಸ್ಟ್ ಎಂದರೇನು?

ಉ. ಹಿಟ್ಲರ್ ನಡೆಸಿದ ಸಮೂಹಿಕ ಕಗ್ಗೊಲೆಗಳು

## II. ಎರಡು ಅಂಕದ ಪ್ರಶ್ನೆಗಳು

1. ಹಿಟ್ಲರನ ನಾಜೀವಾದದ ಸಾರಾಂಶವೇನು?

ಉ. * ಆರ್ಯ ಜರ್ಮನ್ ಜನಾಂಗ ಜಗತ್ತಿನಲ್ಲಿ ಶ್ರೇಷ್ಠರು.
* ಆರ್ಯರು ಮಾತ್ರ ಜಗತ್ತನ್ನು ಆಳಲು ಯೋಗ್ಯರು.
* ಉಳಿದ ಜನಾಂಗಗಳು ಆಳಿಸಿಕೊಳ್ಳಲು ಮಾತ್ರ ಯೋಗ್ಯರು.
* ಜರ್ಮನರ ಎಲ್ಲಾ ಸಮಸ್ಯೆಗಳಿಗೂ ಯೆಹೂದಿಗಳು, ಕಮ್ಯುನಿಷ್ಟರು, ಕ್ಯಾಥೊಲಿಕರು, ಸೋಷಿಯಲಿಸ್ಟರೇ ಕಾರಣ.

2. ಪ್ಯಾಸಿಸ್ಟ್ ವಾದದ ಲಕ್ಷಣಗಳನ್ನು ತಿಳಿಸಿ.

ಉ. * ಉಗ್ರ ರಾಷ್ಟ್ರೀಯವಾದ
* ಪರಕೀಯ ಶಕ್ತಿಗಳ ನಾಶ
* ಹಿಂಸೆಯ ವೈಭವೀಕರಣ
* ಜನಾಂಗೀಯ ಶ್ರೇಷ್ಟತೆ
* ಸಾಮ್ರಾಜ್ಯವಾದದ ವಿಸ್ತರಣೆ
* ನರಮೇಧಗಳಿಗೆ ಬೆಂಬಲ

3. ಎರಡನೇ ಮಹಾಯುದ್ಧದ ಪರಿಣಾಮಗಳು ಯಾವುವು?

ಉ. * ಅತಿ ಹೆಚ್ಚು ಸಾವು ನೋವು

* ವಿಶ್ವಸಂಸ್ಥೆಯ ರಚನೆ
* ಏಷ್ಯಾ ಮತ್ತು ಆಫ್ರಿಕಾ ವಸಾಹತುಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು.
* ಯೂರೋಪಿಯನ್ ರಾಷ್ಟ್ರಗಳು ತಮ್ಮ ವಸಾಹತುಗಳನ್ನು ಕಳೆದುಕೊಂಡವು.

4. ಚೀನಾ ಕ್ರಾಂತಿಯ ಪರಿಣಾಮಗಳು ಯಾವುವು?

ಉ. * ಸಾಮೂಹಿಕ ಕೃಷಿ ಪದ್ಧತಿಯ ಜಾರಿಗೊಂಡಿತು.

* ಎಲ್ಲರಿಗೂ ಉಚಿತ ಶಿಕ್ಷಣ ಮತ್ತು ಆರೋಗ್ಯ
* ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಒತ್ತು
* ಮುನ್ನಡೆಯ ಮಹಾಜಿಗಿತ ಯೋಜನೆ ಜಾರಿ.
* ಖಾಸಗಿ ಆಸ್ತಿ ಸಮಾಜದ ಆಸ್ತಿಯಾಯ್ತು.

(ಯಾವುದಾದರು 4 ಅಂಶಗಳು)

# ರಾಜ್ಯಶಾಸ್ತ್ರ ಅಧ್ಯಾಯ–1
# ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

## ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳು ವಿಭಜನೆಯಾದ ವರ್ಷ

ಉ. ಎ) 1965 ಬಿ) 1956 ಸಿ) 1953 ಡಿ) 1950

2. ದೇಶದಾದ್ಯಂತ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದ ವರ್ಷ

ಉ. ಎ) 2009 ಬಿ) 1986 ಸಿ) 1961 ಡಿ) 2010

3. ಭಾರತ ಸರ್ಕಾರವು 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಸ್ಥಾಪಿಸಿದ ವರ್ಷ

ಉ. ಎ) 2001 ಬಿ) 2011 ಸಿ) 1988 ಡಿ) 2002

4. ಶಿಕ್ಷಣ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದ ಸಂವಿಧಾನದ ವಿದಿ

ಉ. ಎ) 42ನೇ ಬಿ) 21ನೇ ಸಿ) 41ನೇ ಡಿ) 93ನೇ

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕೋಮುವಾದ ಎಂದರೇನು?

ಉ. ಅನ್ಯಧರ್ಮದ ಬಗ್ಗೆ ಸ್ಯೆರಣಾ ಮನೋಭಾವನೆ ಇಲ್ಲದಿರುವುದೇ ಕೋಮುವಾದ.

2. ಪ್ರಾದೇಶಿಕ ವಾದ ಎಂದರೇನು?

ಉ. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು ಪ್ರಾದೇಶಿಕವಾದ ಎನ್ನುತ್ತೇವೆ.

3. ಭ್ರಷ್ಟಾಚಾರ ಎಂದರೇನು?

ಉ. ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವಿಕೆ ಎಂದರ್ಥ.

4. ಕರ್ನಾಟಕ ಸರ್ಕಾರ ಭಷ್ಟಾಚಾರ ನಿರ್ಮೂಲನೆಗೆ ಸ್ಥಾಪಿಸಿದ ಸಂಸ್ಥೆ ಯಾವುದು?

ಉ. ಲೋಕಾಯುಕ್ತ

5. ಬಡತನ ಎಂದರೇನು?

ಉ. ಜನರು ಸರಿಯಾದ ಆಹಾರ ಬಟ್ಟೆ ವಸತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದದೆ ಪಡುವ ಕಷ್ಟವನ್ನು ಬಡತನ ಎನ್ನುತ್ತಾರೆ.

6. ಲಾಭ ಬಡುಕತನ ಎಂದರೇನು?

ಉ. ಜನ ಸಾಮಾನ್ಯರ ಅಥವಾ ಬಳಕೆದಾರರಿಂದ ಅತ್ಯಂತ ಹೆಚ್ಚಿನ ಲಾಭಗಳಿಸುವ ಧೋರಣೆಯನ್ನು ಲಾಭ ಬಡುಕತನ ಎನ್ನುತ್ತಾರೆ.

## III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಮಹಿಳೆಯರ ಸ್ಥಾನ ಮಾನ ಉತ್ತಮ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಉ. ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷ ಬಾಲ್ಯವಿವಾಹ ನಿಷೇದ ವರದಕ್ಷಿಣೆ ನಿಷೇದ & ಬಹು ಪತ್ನಿತ್ವ ನಿಷೇದ ಕಾಯ್ದ ಜಾರಿಗೆ ತಂದಿದೆ.

* ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ 'ಸ್ತ್ರೀ ಶಕ್ತಿ' ಕಾರ್ಯಕ್ರಮ ರೂಪಿಸಿದೆ.
* ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲಾಗುತ್ತಿದೆ.
* ತಂದೆಯ ಆಸ್ತಿಯಲ್ಲಿ ಸ್ತ್ರೀಯರಿಗೆ ಭಾಗ ನೀಡುವ ಕಾನೂನು ಜಾರಿಗೆ ತಂದಿದೆ.

2. ಕಳ್ಳ ಸಾಗಾಣೆಯನ್ನು ನಿಯಂತ್ರಿಸುವ ಕ್ರಮಗಳಾವುವು?

ಉ. ರಾಷ್ಟ್ರದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವಿಕೆ

* ಸುಯೋಗ್ಯ ಆಮದು – ರಫ್ತು ಧೋರಣೆ
* ಕಟ್ಟುನಿಟ್ಟಿನ ಕರಾವಳಿ ಗಸ್ತು ನಡೆಯ ಕಾರ್ಯಚರಣೆ
* ಆರ್ಥಿಕ ಅಪರಾದಕ್ಕೆ ಕಠಿಣ ಶಿಕ್ಷೆ

3. ಜನ ಸಂಖ್ಯಾ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳಾವುವು?

ಉ. * ನಿರುದ್ಯೋಗ * ಅನಕ್ಷರತೆ * ಆರೋಗ್ಯ ಸಮಸ್ಯೆ
* ಬಡತನ * ವಸತಿಸಮಸ್ಯೆ * ನೀರಿನ ಸಮಸ್ಯೆ

4. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಳ್ಳುವ ಕ್ರಮಗಳಾವುವು?

ಉ. * ಉತ್ತಮ ಆರ್ಥಿಕ ಸುಧಾರಣೆಗಳು
* ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ
* ಒಳ್ಳೆಯ ತೆರಿಗೆ ವಿಧಾನ
* ಸಣ್ಣ ಮತ್ತು ಗ್ರಾಮೀಣ ಮಟ್ಟದ ಗುಡಿ ಕೈಗಾರಿಕೆಗಳ ಅಭಿವೃದ್ಧಿ

# ಅಧ್ಯಾಯ–2
# ಭಾರತದ ವಿದೇಶಾಂಗ ನೀತಿ

## ಕಾರ್ಡ್–1

## I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ವಿದೇಶಾಂಗ ನೀತಿ ಎಂದರೇನು?

ಉ. ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿ

2. ಸಾರ್ವಭೌಮ ರಾಷ್ಟ್ರ ಎಂದರೇನು?

ಉ. ಯಾವುದೇ ರಾಷ್ಟ್ರ ಆಂತರಿಕವಾಗಲಿ ಬಾಹ್ಯವಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು

3. ಭಾರತದ ವಿದೇಶಾಂಗ ನೀತಿಯನ್ನು ರೂಪಿಸಿದವರು ಯಾರು?

ಉ. ಜವಾಹರಲಾಲ್ ನೆಹರು

4. ಆಫ್ರಿಕಾ ಗಾಂಧಿ ಎಂದು ಪ್ರಸಿದ್ಧರಾದವರು ಯಾರು?

ಉ. ನೆಲ್ಸನ್ ಮಂಡೇಲ

## II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. ಭಾರತದ ವಿದೇಶಾಂಗ ನೀತಿಯ ಉದ್ದೇಶ/ಗುರಿಗಳಾವುವು?

ಉ. * ರಾಷ್ಟ್ರಭದ್ರತೆ * ರಾಷ್ಟ್ರದ ಆರ್ಥಿಕ ಸಂವರ್ದನೆ
* ನಮ್ಮ ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸುವುದು.
* ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿ ಕೊಂಡು ವಿರೋಧಿ ರಾಷ್ಟ್ರಗಳನ್ನು ನಿರ್ಭಂದಿಸುವುದು
* ವಿಶ್ವಶಾಂತಿ ಹಾಗೂ ಸಹಬಾಳ್ವೆಯನ್ನು ಸಾದಿಸುವುದು.

2. ಪಂಚಶೀಲ ತತ್ವಗಳೆಂದರೇನು? ಪಂಚಶೀಲ ತತ್ವಗಳಾವುವು?

ಉ. 1954ರಲ್ಲಿ ಚೀನಾ ಪ್ರದಾನಿ – ಚೌ ಎನ್ ಲಾಯ್ & ಭಾರತದ ಪ್ರದಾನಿ ನೆಹರು ನಡುವೆ ಪರಸ್ಪರ ಅಂತರರಾಷ್ಟ್ರೀಯ ಸಂಬಂಧ ವೃದ್ಧಿಗಾಗಿ ಅಳವಡಿಸಿಕೊಂಡಿರುವ ಐದು ತತ್ವಗಳೇ

1) ಪರಸ್ಪರ ಪರಮಾಧಿಕಾರ ಮತ್ತು ಪ್ರಾದೇಶಿಕ ಐಕ್ಯತೆಗಳನ್ನು ಗೌರವಿಸುವುದು.
2) ಪರಸ್ಪರ ಮೇಲೆ ಆಕ್ರಮಣ ಮಾಡದೇ ಇರುವುದು.
3) ದೇಶಗಳ ಒಳಾಡಳಿತದಲ್ಲಿ ಹಸ್ತಕ್ಷೇಪ ಮಾಡದೆ ಇರುವುದು.
4) ಸಮಾನತೆ ಮತ್ತು ಪರಸ್ಪರ ಹಿತಸಾಧನೆಗೆ ಶ್ರಮಿಸುವುದು
5) ಶಾಂತಿಯುತ ಸಹ ಜೀವನ

# ಅಧ್ಯಾಯ–3
# ಅನ್ಯ ರಾಷ್ಟ್ರಗಳೊಂದಿಗೆ ಭಾರತ ಸಂಬಂಧ

## ಕಾರ್ಡ್–1

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಚೀನಾ ಕಮ್ಯುನಿಷ್ಟ್ ರಾಷ್ಟ್ರ ಎಂದು ಘೋಷಿಸಿ ಕೊಂಡದ್ದು ಯಾವಾಗ?
ಉ. 1949

2. ರಷ್ಯಾದ ಸಹಕಾರದಿಂದ ಭಾರತದಲ್ಲಿ ಸ್ಥಾಪನೆಯಾದ ಉಕ್ಕಿನ ಕಾರ್ಖಾನೆಗಳಾವುವು?
ಉ. ಭಿಲ್ಯಾ ಮತ್ತು ಭೋಕಾರೋ

3. ಶ್ರೀಲಂಕಾದ ಜಾಪ್ನ ಭಾಗದಲ್ಲಿದ್ದ ತಮಿಳು ಪ್ರತ್ಯೇಕತವಾದಿ ಸಂಘಟನೆ ಯಾವುದು?
ಉ. ಎಲ್.ಟಿ.ಟಿ.ಇ.

4. ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳನ್ನು ಹೆಸರಿಸಿರಿ.
ಉ. ಭಾರತ–ಪಾಕಿಸ್ತಾನ

5. ಕಾರ್ಗಿಲ್ ಯುದ್ಧ ನಡೆದ ವರ್ಷ ಯಾವುವು?
ಉ. 1999

**II. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸಂಬಂಧ ಸೌಹಾರ್ದ ಯುತವಾಗಿಲ್ಲ' ವೆಂದು ಹೇಗೆ ಹೇಳುವಿರಿ?
ಉ.
* ಪಾಕಿಸ್ತಾನದ ಮಿಲಿಟರಿ ಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆಯಿಂದ
* 1947ರಿಂದ 1999ರವರೆಗಿನ ಅನೇಕ ಯುದ್ಧಗಳಿಂದಾಗಿ
* ಕಾಶ್ಮೀರದ ಸಮಸ್ಯೆ
* ಭಯೋತ್ಪಾದನಾ ಸಮಸ್ಯೆ
* ಪಾಕಿಸ್ತಾನದ ಮಿಲಿಟರಿ ಕೂಟಗಳೊಂದಿಗಿನ ಸಂಬಂಧ
* ಚೀನಾ–ಪಾಕ್ ಮೈತ್ರಿ

2. 'ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಸಂಬಂಧ ಹೊಂದಿದೆ' ಈ ಹೇಳಿಕೆ ಸಮರ್ಥಿಸಿರಿ.
ಉ.
* ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿದಂತೆ ಬೆಂಬಲ ನೀಡಿದೆ.
* 1962ರ ಚೀನಾ ದಾಳಿಯನ್ನು ಖಂಡಿಸಿದೆ.
* 1971ರಲ್ಲಿ ಶಾಂತಿ ಹಾಗೂ ಸಹಕಾರಗಳ 20 ವರ್ಷದ ಒಪ್ಪಂದ.
* ರಷ್ಯಾದ ಸಹಕಾರದಿಂದ ಬಲಾಯ್–ಬೋಕಾರೋಗಳಲ್ಲಿ ಉಕ್ಕಿನ ಕಾರ್ಖಾನೆಗಳ ಸ್ಥಾಪನೆ.
* ಹರಿದ್ವಾರದಲ್ಲಿ ಭಾರಿ ವಿದ್ಯುತ್ ಸ್ಥಾವರ ಸ್ಥಾಪನೆಗೆ ನೆರವು.
* ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವಕ್ಕೆ ಪ್ರತಿಪಾದನೆ.

# ಅಧ್ಯಾಯ–4
# ಜಾಗತಿಕ ಸಮಸ್ಯೆಗಳು ಹಾಗೂ ಭಾರತದ ಪಾತ್ರ

## ಕಾರ್ಡ್–1

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ವಿಶ್ವ ಸಂಸ್ಥೆಯು ಮಾನವ ಹಕ್ಕುಗಳನ್ನು ಘೋಷಣೆ ಮಾಡಿದ ವರ್ಷ ಯಾವುದು?

ಉ. 1948ರ ಡಿಸೆಂಬರ್ 10

2. ಆಫ್ರಿಕಾದಲ್ಲಿ ವರ್ಣಬೇದನೀತಿಯ ವಿರುದ್ಧ ಹೋರಾಟ ನಡೆಸಿದವರು ಯಾರು?

ಉ. ನೆಲ್ಸನ್ ಮಂಡೇಲ

**II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. 2ನೇ ಮಹಾಯುದ್ಧದ ನಂತರದ ಮುಖ್ಯ ಜಾಗತೀಕ ಸಮಸ್ಯೆಗಳಾವುವು?

ಉ.
* ಮಾನವ ಹಕ್ಕುಗಳ ನಿರಾಕರಣೆ
* ಶಸ್ತ್ರಾಸ್ತ್ರಗಳ ಪೈಪೋಟಿ
* ಆರ್ಥಿಕ ಅಸಮಾನತೆ
* ವರ್ಣಬೇಧ ನೀತಿ
* ಭಯೋತ್ಪಾದಕತೆ

2. ವರ್ಣಭೇದ ನೀತಿಯ ವಿರುದ್ಧ ಹೋರಾಡಿದ ಪ್ರಪಂಚದ ಪ್ರಮುಖ ವ್ಯಕ್ತಿಗಳು ಯಾರು?

ಉ.
* ಮಹಾತ್ಮ ಗಾಂಧೀಜಿ
* ಅಬ್ರಹಾಂಲಿಂಕನ್
* ನೆಲ್ಸನ್ ಮಂಡೇಲಾ
* ಮಾರ್ಟಿನ್ ಲೂಥರ್ ಕಿಂಗ್
* ಜಾನ್ ಎಫ್ ಕೆನಡಿ

3. ಪ್ರಪಂಚದ ಯಾವ ಪ್ರಮುಖ ಘಟನೆಗಳು ಮಾನವಹಕ್ಕುಗಳ ಹೋರಾಟಕ್ಕೆ ಪುಷ್ಠಿ ನೀಡಿದವು ?

ಉ.
* 1776ರ ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮ
* 1789ರ ಫ್ರಾನ್ಸಿನ ಮಹಾಕ್ರಾಂತಿ
* 1917ರ ರಷ್ಯಾದ ಕ್ರಾಂತಿ
* 20ನೇ ಶತಮಾನದ ಭಾರತ ಹಾಗೂ ಇನ್ನಿತರ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ.

# ಅಧ್ಯಾಯ–5
# ಜಾಗತಿಕ ಸಂಸ್ಥೆಗಳು

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. 'ವಿಶ್ವಸಂಸ್ಥೆ' ಎಂಬ ಶಬ್ಧವನ್ನು ಬಳಕೆಗೆ ತಂದವರು

ಉ. ಎ) ಚರ್ಚಿಲ್ ಬಿ) ಸ್ಟ್ಯಾಲಿನ್ ಸಿ) ಎಫ್.ಡಿ.ರೂಸ್‌ವೆಲ್ಟ್ ಡಿ) ಕೆನಡಿ

2. ವಿಶ್ವಸಂಸ್ಥೆಯ ಈಗಿನ ಮಹಾ ಕಾರ್ಯದರ್ಶಿ

ಉ. ಎ) ಟ್ರೀಗ್ವೇಲಿ ಬಿ) ಕೋಫಿ ಅನ್ನನ್

ಸಿ) ಬಾನ್–ಕೀ–ಮೂನ್ ಡಿ) ನೆಲ್ಸನ್ ಮಂಡಲ

3. ವಿಶ್ವಸಂಸ್ಥೆಯ ಮುಖ್ಯ ಕಛೇರಿ ಇರುವ ನಗರ

ಉ. ಎ) ವಾಸಿಂಗ್ಟನ್ ಬಿ) ನ್ಯೂಯರ್ಕ್ ಸಿ) ಜಿನೇವಾ ಡಿ) ಹೇಗ್

4. ವಿಶ್ವ ಕುಟುಂಬದ ಆರ್ಥಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ

ಉ. ಎ) ಅಂತರರಾಷ್ಟ್ರೀಯ ಕಾರ್ಮಿಕರ ಸಂಘ ಬಿ) ವಿಶ್ವ ವ್ಯಾಪಾರ ಸಂಘ

ಸಿ) ವಿಶ್ವಸಂಸ್ಥೆಯ ವ್ಯಾಪಾರ ಮತ್ತು ವಾಣಿಜ್ಯ ಸಮಿತಿ ಡಿ) ಯುನಿಸೆಫ್

5. ಸಾರ್ಕ್‌ನ ಕೇಂದ್ರ ಕಛೇರಿ ಇರುವ ಸ್ಥಳ

ಉ. ಎ) ಲಂಡನ್ ಬಿ) ರೋಂ ಸಿ) ಕಠ್ಮಂಡು ಡಿ) ಪ್ಯಾರೀಸ್

6. ವಿಶ್ವ ಸಂಸ್ಥೆಯ ಸಮಸ್ಯತ್ವ ಹೊಂದಿದ ಸುಮಾರು ರಾಷ್ಟ್ರಗಳ ಸಂಖ್ಯೆ

ಉ. ಎ) 150 ಬಿ) 193 ಸಿ) 198 ಡಿ) 200

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕಾಮನ್‌ವೆಲ್ತ್ ಒಕ್ಕೂಟದ ಕೇಂದ್ರ ಕಛೇರಿ ಇಲ್ಲಿದೆ?

ಉ. ಲಂಡನ್‌ನಲ್ಲಿದೆ

2. ಅಂತರ ರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಛೇರಿ ಎಲ್ಲಿದೆ?

ಉ. ನೆದರ್ ಲ್ಯಾಂಡಿನ್ ಹೇಗ್

3. ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ಸಾಧನೆ ಯಾವುದು?

ಉ. ಸಿಡುಬು ರೋಗ ನಿವಾರಣೆ

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ವಿಶ್ವಸಂಸ್ಥೆಯ ಪ್ರಮುಖ ಅಂಗ ಸಂಸ್ಥೆಗಳನ್ನು ತಿಳಿಸಿ.

ಉ. 1) ಸಾಮಾನ್ಯ ಸಭೆ 2) ಭದ್ರತಾ ಸಮಿತಿ 3) ದತ್ತಿ ಸಮಿತಿ
4) ಆರ್ಥಿಕ ಮತ್ತು ಸಾಮಾಜಿಕ ಸಮಿತಿ
5) ಅಂತರ ರಾಷ್ಟ್ರೀಯ ನ್ಯಾಯಾಲಯ
6) ಸಚಿವಾಲಯ

2. ಭದ್ರತಾ ಸಮಿತಿಯ ಖಾಯಂ ಸದಸ್ಯ ರಾಷ್ಟ್ರಗಳು ಯಾವುವು?

ಉ. ಅಮೇರಿಕಾ, ರಷ್ಯಾ, ಬ್ರಿಟನ್, ಪ್ರಾನ್ಸ್, ಚೀನಾ

3. ಸಾರ್ಕ್‌ನ ಸದಸ್ಯ ರಾಷ್ಟ್ರಗಳನ್ನು ತಿಳಿಸಿ.

ಉ. ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಭೂತಾನ್, ಮಾಲ್‌ಡಿವ್ಸ್, ಅಫ್‌ಘಾನಿಸ್ತಾನ

## ಸಮಾಜಶಾಸ್ತ್ರ : ಅಧ್ಯಾಯ–1

# ಅನ್ಯ ರಾಷ್ಟ್ರಗಳೊಂದಿಗೆ ಭಾರತ ಸಂಬಂಧ

### ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಸಂವಿಧಾನದ ಈ ಕೆಳಕಂಡ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ

ಉ. ಎ) <u>17ನೇ ವಿಧಿ</u> ಬಿ) 19ನೇ ವಿಧಿ ಸಿ) 23ನೇ ವಿಧಿ ಡಿ) 45ನೇ ವಿಧಿ

2. ಅಸ್ಪೃಶ್ಯತಾ ಅಪರಾಧಿಗಳ ಕಾಯ್ದೆ 1955 ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ

ಉ. ಎ) 1973 ಬಿ) <u>1976</u> ಸಿ) 1980 ಡಿ) 1982

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಅಸ್ಪೃಶ್ಯತೆಯನ್ನು ಸಮಾಜಕ್ಕೆ ಹತ್ತಿದ ಕಳಂಕ ಎಂದು ಹೇಳಿದವರು ಯಾರು?

ಉ. ಮಹಾತ್ಮ ಗಾಂಧೀಜಿ

2. 'ಮಾನವಕುಲಂ ತಾನೊಂದೆ ವಲಂ' ಎಂದು ಹೇಳಿದವರು ಯಾರು?

ಉ. ಆದಿಕವಿ ಪಂಪ

3. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?

ಉ. ಜನರನ್ನು ಆದಾಯ ಶಿಕ್ಷಣ ಜಾತಿ, ಬಣ್ಣ, ಲಿಂಗ ಉದ್ಯೋಗ ಬುದ್ಧಿಶಕ್ತಿಗಳ ಆಧಾರದ ಮೇಲೆ ವರ್ಗೀಕರಿಸುವುದು.

### III. ಈ ಕೆಳಗಿನ ಪ್ರಶ್ನೆಗಳಿಗೆ 3 ವಾಕ್ಯಗಳಲ್ಲಿ ಉತ್ತರಿಸಿರಿ.

1. ಅಸ್ಪೃಶ್ಯತಾ ನಿವಾರಣೆಗೆ ಸರ್ಕಾರವು ತೆಗೆದುಕೊಂಡಿರುವ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ತಿಳಿಸಿ.

ಉ.
* ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ತೊಡೆದು ಹಾಕಿದೆ.
* ಅಸ್ಪೃಶ್ಯತಾ ಅಪರಾಧಿಗಳ ಕಾಯಿದೆಯನ್ನು 1955ರಲ್ಲಿ ಜಾರಿಗೊಳಿಸಲಾಗಿದೆ.
* ಅಸ್ಪೃಶ್ಯತಾ ಅಪರಾಧಿಗಳ ಕಾಯಿದೆಯನ್ನು ತಿದ್ದುಪಡಿ ಮಾಡಿ 1976ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತರಲಾಗಿದೆ.
* ಸಾರ್ವತ್ರಿಕ ಮತದಾನ ಹಾಗೂ ಸಮಾನತೆಯ ಹಕ್ಕನ್ನು ಎಲ್ಲನಾಗರಿಕರಿಗೂ ನೀಡಲಾಗಿದೆ.
* ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ ರಾಜಕೀಯ ಆರ್ಥಿಕ ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.
* 1989ರ ಶಾಸನವು ಅಸ್ಪೃಶ್ಯತೆ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯಸರ್ಕಾರಗಳಿಗೆ ವಹಿಸಿದೆ.

# ಅಧ್ಯಾಯ–2
# ದುಡಿಮೆ ಮತ್ತು ಆರ್ಥಿಕ ಜೀವನ

## ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಯಾವುದಾದರೊಂದು ಕ್ಷೇತ್ರದಲ್ಲಿನ ಆಳವಾದ ಪರಿಣಿತಿ ಮತ್ತು ತರಬೇತಿ

ಉ. ಎ) ಆಸಕ್ತಿ ಬಿ) ಸಾಮರ್ಥ್ಯ ಸಿ) <u>ವಿಶೇಷ ಪರಿಣಿತಿ</u> ಡಿ) ಸಾಧನೆ

2. ಕೇಂದ್ರ ಸರ್ಕಾರವು ಸಮಾನ ವೇತನ ಕಾಯ್ದೆಯನ್ನು ಜಾರಿಗೆ ತಂದ ವರ್ಷ

ಉ. ಎ) <u>1976</u> ಬಿ) 1978 ಸಿ) 1980 ಡಿ) 1982

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಶ್ರಮ ವಿಭಜನೆ ಎಂದರೇನು?

ಉ. ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು ವಿಶೇಷ ಪರಿಣಿತಿಗೆ ಕೌಶಲ, ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದು.

2. ನಿರುದ್ಯೋಗ ಪದವನ್ನು ಅರ್ಥೈಸಿ

ಉ. ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿ.

3. ದುಡಿಮೆ ಎಂದರೇನು?

ಉ. ವ್ಯಕ್ತಿಯ ಪರಿಶ್ರಮದಿಂದ ಆರ್ಥಿಕ ಅಥವಾ ವಸ್ತುರೂಪದ ಪ್ರತಿಫಲವು ದೊರೆಯುವುದನ್ನು ದುಡಿಮೆ ಎನ್ನುವರು.

### III. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿರಿ.

1. ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಸಿ.

ಉ.
* ಜನಸಂಖ್ಯಾ ನಿಯಂತ್ರಣದ ಕ್ರಮಗಳು
* ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ
* ಕೃಷಿ ಕ್ಷೇತ್ರದ ಅಭಿವೃದ್ಧಿ
* ಶೈಕ್ಷಣಿಕ ಸುಧಾರಣಾ ಯೋಜನೆಗಳು
* ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
* ಉದ್ಯೋಗ ಖಾತರಿ ಯೋಜನೆಗಳು
* ಗ್ರಾಮೀಣಾಭಿವೃದ್ಧಿ ಯೋಜನೆಗಳು
* ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ

# ಅಧ್ಯಾಯ–3
# ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಗೊಂದಲವನ್ನು ಸೃಷ್ಟಿ ಮಾಡುವ ಉದ್ದೇಶವನ್ನು ಹೊಂದಿರುವ ಜನರ ಗುಂಪಿಗೆ ಉದಾಹರಣೆ

ಉ. ಎ) ಜನಮಂದೆ ಬಿ) <u>ದೊಂಬಿ</u>
ಸಿ) ಚಳುವಳಿ ಡಿ) ಸ್ವಸಹಾಯ ಸಮೂಹಗಳು

2. ಡಾ. ಶಿವರಾಮ ಕಾರಂತರ ನೇತೃತ್ವದಲ್ಲಿ ಪರಿಸರವಾಸಿಗಳು ಈ ಅಣುಸ್ಥಾವರ ಸ್ಥಾಪನೆಯ ವಿರುದ್ಧ ಚಳುವಳಿ ನಡೆಸಿದರು

ಉ. ಎ) ಶ್ರೀಶೈಲಂ ಅಣುಸ್ಥಾವರ ಬಿ) <u>ಕೈಗಾ ಅಣುಸ್ಥಾವರ</u>
ಸಿ) ಕಲ್ಪಾಕಂ ಅಣುಸ್ಥಾವರ ಡಿ) ಕೂಡರಿಕುಳಂ ಅಣುಸ್ಥಾವರ

3. ಚಿಪ್ಕೋ ಚಳುವಳಿಯು ಈ ರಾಜ್ಯದಲ್ಲಿ ಪ್ರಾರಂಭಗೊಂಡಿತು.

ಉ. ಎ) ಒರಿಸ್ಸಾ ಬಿ) ಕರ್ನಾಟಕ ಸಿ) <u>ಉತ್ತರ ಪ್ರದೇಶ</u> ಡಿ) ಬಿಹಾರ

4. 1983ರಲ್ಲಿ ಅಪ್ಪಿಕೋ ಚಳುವಳಿಯು ಕರ್ನಾಟಕದ ಈ ಕೆಳಕಂಡ ಜಿಲ್ಲೆಯಲ್ಲಿ ಸಂಘಟಿಸಲ್ಪಟ್ಟಿತು

ಉ. ಎ) ದಕ್ಷಿಣ ಕನ್ನಡ ಬಿ) ಕೊಡಗು ಸಿ) ಹಾಸನ ಡಿ) <u>ಉತ್ತರಕನ್ನಡ</u>

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸಾಮೂಹಿಕ ವರ್ತನೆ ಎಂದರೇನು?

ಉ. ಸಮೂಹದಲ್ಲಿ ಇರುವಾಗ ಮಾಡುವ ವ್ಯಕ್ತಿಯ ವರ್ತನೆಯನ್ನು ಸಾಮೂಹಿಕ ವರ್ತನೆ ಎಂದು ಕರೆಯುತ್ತೇವೆ.

2. ಪರಿಸರ ಮಾಲಿನ್ಯದ ಅರ್ಥವನ್ನು ತಿಳಿಸಿ.

ಉ. ಭೂಮಿ, ನೀರು, ಗಾಳಿ ಮತ್ತು ಜೀವ ಮಂಡಲವನ್ನು ಒಳಗೊಂಡ ನಮ್ಮ ಸುತ್ತ ಮುತ್ತಲಿನ ಪರಿಸರವು ವಿಷಕಾರಕ ಹಾಗೂ ರಾಸಾಯನಿಕ ಅಂಶಗಳಿಂದ ಕಲುಷಿತವಾಗುವುದನ್ನು ಪರಿಸರ ಮಾಲಿನ್ಯ ಎನ್ನುವರು.

3. ಚಿಪ್ಕೋ ಚಳುವಳಿ ಸಂಘಟಿಸಿದ ಇಬ್ಬರು ನಾಯಕರನ್ನು ಹೆಸರಿಸಿ.

ಉ. ಸುಂದರ್‌ಲಾಲ್ ಬಹುಗುಣ ಮತ್ತು ಚಂಡೀ ಪ್ರಸಾದ್ ಭಟ್ಟರು

4. ಮೌನಕಣಿವೆ ಆಂದೋಲನವು ಯಾವ ರಾಜ್ಯದಲ್ಲಿ ನಡೆಯಿತು?

ಉ. ಕೇರಳ

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1. ಜನಮಂದೆ ಎಂದರೇನು? ಉದಾಹರಣೆ ಕೊಡಿ.

ಉ. ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ. ಉದಾ. ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನಸಮೂಹ ಚಲನ ಚಿತ್ರ ಮಂದಿರದ ಹತ್ತಿರ ಟಿಕೆಟ್ ಪಡೆಯಲು ಸೇರಿರುವ ಜನಸಮೂಹ.

**ಸೂಚನೆ :** ವಿದ್ಯಾರ್ಥಿಯು ಈ ಮೇಲ್ಕಂಡ ಪರಿಕಲ್ಪನೆ ಪೂರಕವಾದ ಬೇರೆ ಯಾವುದೇ ಉದಾಹರಣೆ ನೀಡಿದರು ಅದನ್ನು ಪರಿಗಣಿಸುವುದು.

2. ಜನಮಂದೆಯ ಸ್ವರೂಪವನ್ನು ತಿಳಿಸಿ.

ಉ.
* ಜನಮಂದೆಯ ತಾತ್ಕಾಲಿಕ ಸ್ವರೂಪದ ಸಮೂಹವಾಗಿರುತ್ತದೆ.
* ಇದರಲ್ಲಿ ಜನರು ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಒಟ್ಟಾಗಿ ಸೇರಿರುತ್ತಾರೆ.
* ಸದಸ್ಯರು ಪರಸ್ಪರ ಅಭಿಪ್ರಾಯ ಭಾವನೆಗಳು ಕ್ರಿಯೆಗಳ ಪ್ರಭಾವಕ್ಕೆ ಒಳಗಾಗುತ್ತಾರೆ.
* ಕೆಲವೊಮ್ಮೆ ಜನಮಂದೆಯ ಮೂಲಕ ವ್ಯಕ್ತಿಯ ಅಂತರಾಳದ ಭಾವನೆಗಳು ಸ್ಫೋಟಗೊಳ್ಳುತ್ತದೆ.

3. ಪರಿಸರ ಮಾಲಿನ್ಯಕ್ಕೆ ಕಾರಣಗಳನ್ನು ತಿಳಿಸಿ.

ಉ.
* ಜನಸಂಖ್ಯೆಯ ಹೆಚ್ಚಳ
* ಮಾನವನ ಅಗತ್ಯತೆಗಳ ಹೆಚ್ಚಳ
* ಪರಿಸರದ ಮೇಲೆ ಆಕ್ರಮಣ ಮತ್ತು ಒತ್ತಡದ ಹೆಚ್ಚಳ
* ಸಾರಿಗೆ ವ್ಯವಸ್ಥೆಯ ಬೆಳವಣಿಗೆ

(ಯಾವುದಾದರೂ ನಾಲ್ಕು ಅಂಶಗಳು)

# ಅಧ್ಯಾಯ–4
# ಸಾಮಾಜಿಕ ಸಮಸ್ಯೆಗಳು

## ಕಾರ್ಡ್–1

**I. ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. ದುಡಿಮೆಯಲ್ಲಿ ತೊಡಗಿರುವ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೀಗೆಂದು ಕರೆಯಲಾಗುತ್ತದೆ.

ಉ. ಎ) ಕೆಲಸಗಾರರು ಬಿ) ಬಾಲಕಾರ್ಮಿಕರು
ಸಿ) ಕುಶಲಕರ್ಮಿಗಳು ಡಿ) ವಿದ್ಯಾರ್ಥಿಗಳು

2. ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆ

ಉ. ಎ) ಬಾ ಮರಳಿ ಶಾಲೆಗೆ ಬಿ) ಬಾ ಬಾಲೆ ಶಾಲೆಗೆ
ಸಿ) ಚಿಣ್ಣರ ಅಂಗಳ ಡಿ) ಕೂಲಿಯಿಂದ ಶಾಲೆಗೆ

3. ಶಿಕ್ಷಣ ಹಕ್ಕು ಕಾಯಿದೆ ಜಾರಿಗೆ ಬಂದ ವರ್ಷ

ಉ. ಎ) 2006 ಬಿ) 2007 ಸಿ) 2008 ಡಿ) 2009

4. ಸಂವಿಧಾನದ ಈ ವಿಧಿಯು '14 ವರ್ಷಕ್ಕೂ ಕಿರಿಯ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದನ್ನು ಶಿಕ್ಷಾರ್ಹ ಅಪರಾಧ' ಎಂದು ಘೋಷಿಸಿದೆ

ಉ. ಎ) 24ನೇ ವಿಧಿ ಬಿ) 26ನೇ ವಿಧಿ ಸಿ) 28ನೇ ವಿಧಿ ಡಿ) 30ನೇ ನಿಧಿ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿಯನ್ನು ಘೋಷಿಸಿದ ವರ್ಷ ಯಾವುದು?

ಉ. 1987

2. ಕೇಂದ್ರ ಸರ್ಕಾರವು ವರದಕ್ಷಿಣೆ ನಿಷೇಧ ಶಾಸನವನ್ನು ಯಾವ ವರ್ಷ ಜಾರಿಗೆ ತಂದಿತು?

ಉ. 1961

3. ಬಾಲಕಾರ್ಮಿಕ ನಿಷೇಧ ಕಾಯಿದೆ ಜಾರಿಗೆ ಬಂದ ವರ್ಷ ಯಾವುದು?

ಉ. 1986

4. ವರದಕ್ಷಿಣೆ ಎಂದರೇನು?

ಉ. ವಿವಾಹದ ಉಡುಗೊರೆಯಾಗಿ ವಧುವಿನ ಕುಟುಂಬದವರಿಂದ ಅಪೇಕ್ಷಿಸಲಾಗುವ ಸ್ವತ್ತು. ಚಿನ್ನಾಭರಣ ನಗದು ವಾಹನ ಇತ್ಯಾದಿಗಳು.

5. ಹೆಣ್ಣು ಭ್ರೂಣ ಹತ್ಯೆ ಎಂದರೇನು?

ಉ. ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು ಅದು ತಂದೆ–ತಾಯಿಯಂದರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದು.

6. ಹೆಣ್ಣು ಶಿಶು ಹತ್ಯೆ ಎಂದರೇನು?

ಉ. ಜನನ ನಂತರ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿ

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಭಾರತೀಯ ಸಮಾಜದಲ್ಲಿರುವ ಯಾವುದಾದರೂ ನಾಲ್ಕು ಸಾಮಾಜಿಕ ಸಮಸ್ಯೆಗಳನ್ನು ತಿಳಿಸಿ.

ಉ.
* ಮಿತಿಮೀರಿದ ಜನಸಂಖ್ಯೆ
* ಬಡತನ
* ನಿರುದ್ಯೋಗ
* ಭಿಕ್ಷಾಟನೆ
* ಬಾಲಪರಾಧ
* ಬಾಲಕಾರ್ಮಿಕರ ಸಮಸ್ಯೆ
* ಭ್ರಷ್ಟಾಚಾರ
* ಮಹಿಳೆಯ ಶೋಷಣೆ
* ವರದಕ್ಷಿಣೆ ಕಿರುಕುಳ
* ಯುವಜನರ ಅಶಾಂತಿ

(ಮೇಲಿನ ಯಾವುದಾದರೂ ನಾಲ್ಕು ಅಂಶಗಳು)

2. ಬಾಲಕಾರ್ಮಿಕ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಸಂವಿಧಾನಿಕ ಪರಿಹಾರ ಕ್ರಮಗಳು ಯಾವುವು?

ಉ.
* ಸಂವಿಧಾನದ 24ನೇ ವಿಧಿ ಬಾಲಕಾರ್ಮಿಕತನವನ್ನು ನಿಷೇಧಿಸಿದೆ.
* ಬಾಲಕಾರ್ಮಿಕ ನಿಷೇಧ ಕಾಯ್ದೆಯನ್ನು 1986ರಲ್ಲಿ ಜಾರಿಗೆ ತರಲಾಗಿದೆ.
* 1987ರಲ್ಲಿ ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿ
* ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಬಾಲಮಂದಿರಗಳ ಸ್ಥಾಪನೆ.
* ಕೂಲಿಯಿಂದ ಶಾಲೆಗೆ ಕಾರ್ಯಕ್ರಮ
* 2009ರ ಶಿಕ್ಷಣ ಹಕ್ಕು ಕಾಯಿದೆ
* 2006ರ ಬಾಲಶ್ರಮ ನಿರ್ಮೂಲನ ಮತ್ತು ಪುನರ್‌ವಸತೀಕರಣ ಕಾಯ್ದೆ.

(ಮೇಲಿನ ಯಾವುದಾದರೂ ನಾಲ್ಕು ಅಂಶಗಳು)

3. ಬಾಲಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು?

ಉ.
* ಅನಾರೋಗ್ಯ
* ಪೌಷ್ಟಿಕ ಆಹಾರದ ಕೊರತೆ
* ವೈದ್ಯಕೀಯ ಸೌಲಭ್ಯಗಳ ಕೊರತೆ
* ಒತ್ತಾಯದ ದುಡಿತ
* ಒತ್ತಾಯದ ದುಡಿತ
* ಆರ್ಥಿಕ ಮತ್ತು ಸಾಮಾಜಿಕ ಶೋಷಣೆ

(ಮೇಲಿನ ಯಾವುದಾದರೂ ನಾಲ್ಕು ಅಂಶಗಳು)

# ಭೂಗೋಳ ಶಾಸ್ತ್ರ : ಅಧ್ಯಾಯ–1
# ಭಾರತ ನಮ್ಮ ಮಾತೃಭೂಮಿ

## ಕಾರ್ಡ್–1

## I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಇದು ಭಾರತದ ಅತ್ಯಂತ ದಕ್ಷಿಣದ ತುದಿಯಾಗಿದೆ.

ಉ. ಎ) ತಿರುವನಂತಪುರ ಬಿ) ಇಂದಿರಾ ಪಾಯಿಂಟ್
ಸಿ) ತೂತುಕುಡಿ ಡಿ) ಲಕ್ಷದ್ವೀಪ

2. ಈ ರೇಖಾಂಶವನ್ನು ಆಧರಿಸಿ ಭಾರತದ ವೇಳೆಯನ್ನು ನಿರ್ಧರಿಸಲಾಗುತ್ತದೆ.

ಉ. ಎ) $82^1/_2{}^0$ ಪಶ್ಚಿಮ ರೇಖಾಂಶ ಬಿ) $82^1/_2{}^0$ ಪೂರ್ವ ರೇಖಾಂಶ
ಸಿ) 82 ಪೂರ್ವ ರೇಖಾಂಶ ಡಿ) 82 ಪಶ್ಚಿಮ ರೇಖಾಂಶ

3. ಭಾರತದ ಮಧ್ಯದಲ್ಲಿ ಹಾದು ಹೋಗಿರುವ ಪ್ರಮುಖ ಅಕ್ಷಾಂಶವಾಗಿದೆ.

ಉ. ಎ) $66\ ^1/_2{}^0$ ಉ. ಅಕ್ಷಾಂಶ ಬಿ) $66\ ^1/_2{}^0$ ದ. ಅಕ್ಷಾಂಶ
ಸಿ) $23\ ^1/_2{}^0$ ಉ. ಅಕ್ಷಾಂಶ ಡಿ) $23\ ^1/_2{}^0$ ದ. ಅಕ್ಷಾಂಶ

4. ಭಾರತದ ಮಧ್ಯದಲ್ಲಿ ಹಾದು ಹೋಗಿರುವ $82^1/_2{}^0$ ಪೂರ್ವ ರೇಖಾಂಶವನ್ನು ಹೀಗೂ ಕರೆಯುತ್ತಾರೆ.

ಉ. ಎ) ಅಹಮದಾ ಬಾದ್‌ರೇಖೆ ಬಿ) ಅಲಹಾಬಾದ್ ರೇಖೆ
ಸಿ) ಜಬ್ಬಲ್ ಪುರರೇಖೆ ಡಿ) ಹೈದರಾಬಾದ್ ರೇಖೆ

## II. ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಭಾರತದ ಮಧ್ಯದಲ್ಲಿ ಹಾದು ಹೋಗಿರುವ ರೇಖಾಂಶ ಯಾವುದು?

ಉ. $82^1/_2{}^0$ ಪೂರ್ವರೇಖಾಂಶ ಅಥವಾ ಅಲಹಾಬಾದ್‌ರೇಖೆ

2. ಭಾರತವು ವಿಸ್ತೀರ್ಣದಲ್ಲಿ ಪ್ರಪಂಚದ ಎಷ್ಟನೇ ದೊಡ್ಡ ರಾಷ್ಟ್ರ?

ಉ. 7ನೇ

3. ಭಾರತದ ಕಾಲಮಾನವು ಗ್ರೀನ್ವಿಚ್ ಕಾಲ ಮಾನಕ್ಕಿಂತ ಎಷ್ಟು ಸಮಯ ಮುಂದಿದೆ?

ಉ. 5 ಗಂಟೆ 30 ನಿಮಿಷ

# ಅಧ್ಯಾಯ–2
# ಭಾರತದ ಪ್ರಾಕೃತಿಕ ಲಕ್ಷಣಗಳು

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಹಿಮಾಲಯ ಶ್ರೇಣಿಗಳಲ್ಲಿ ಇದು ಇತ್ತೀಚೆಗೆ ನಿರ್ಮಿತವಾದುದು.

ಉ. ಎ) ಹಿಮಾಲಯ ಬಿ) ಮಹಾ ಹಿಮಾಲಯ

ಸಿ) ಶಿವಾಲಿಕ್ ಶ್ರೇಣಿ ಡಿ) ಹಿಮಾದ್ರಿ

2. ಇದು ಭಾರತದಲ್ಲಿರುವ ಅತಿ ಎತ್ತರದ ಶಿಖರವಾಗಿದೆ.

ಉ. ಎ) $K_2$– ಗಾಡ್ವಿನ್ ಆಸ್ಟಿನ್ ಬಿ) ಮೌಂಟ್ ಎವರೆಸ್ಟ್

ಸಿ) ಧವಳಗಿರಿ ಡಿ) ಕಾಂಚನ ಗಂಗಾ

3. ಇದು ಭಾರತದ ಭೂ ಸ್ವರೂಪಗಳಲ್ಲಿ ಅತಿ ಪುರಾತನವಾದುದಾಗಿದೆ.

ಉ. ಎ) ಕರಾವಳಿ ಮೈದಾನ ಬಿ) ಪರ್ಯಾಯ ಪ್ರಸ್ಥಭೂಮಿ

ಸಿ) ಉತ್ತರದ ಮಹಾ ಮೈದಾನ ಡಿ) ಉತ್ತರದ ಪರ್ವತಗಳು

4. ಉತ್ತರದ ಮಹಾಮೈದಾನವನ್ನು ಹೀಗೂ ಕರೆಯುತ್ತಾರೆ.

ಉ. ಎ) ರಾವಿ–ಗಂಗಾ ಬಿ) ನರ್ಮದಾ–ಗಂಗಾ

ಸಿ) ಸಟ್ಲೇಜ್–ಗಂಗಾ ಡಿ) ಸಟ್ಲೇಜ್–ಯಮುನಾ

5. ಉತ್ತರ ಭಾರತದ ಮೈದಾನವು ಈ ಮಣ್ಣಿನಿಂದ ಕೂಡಿದೆ

ಉ. ಎ) ಕೆಂಪುಮಣ್ಣು ಬಿ) ಮೆಕ್ಕಲು ಮಣ್ಣು

ಸಿ) ಜಂಬಿಟ್ಟಿಗೆ ಮಣ್ಣು ಡಿ) ಪರ್ವತ ಮಣ್ಣು

6. ಪಶ್ಚಿಮ ಘಟ್ಟಗಳನ್ನು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಈ ಹೆಸರಿನಿಂದಲೂ ಕರೆಯುತ್ತಾರೆ.

ಉ. ಎ) ಆನೈಮುಡಿ ಬಿ) ಸಹ್ಯಾದ್ರಿ ಸಿ) ನೀಲಗಿರಿ ಡಿ) ಅರಾವಳಿ

7. ಇದು ದಕ್ಷಿಣ ಭಾರತದಲ್ಲಿಯೇ ಅತಿ ಎತ್ತರವಾದ ಶಿಖರ

ಉ. ಎ) ಆನೈಮುಡಿ ಬಿ) ಮೌಂಟ್ ಎವರೆಸ್ಟ್

ಸಿ) ಮಹಾದೇವ ಡಿ) ಅಮರ ಕಂಟಕ

8. ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳು ಸಂಧಿಸುವ ಸ್ಥಳ

ಉ. ಎ) ನೀಲಗಿರಿ ಬಿ) ಆನೈಮುಡಿ ಸಿ) ಅಣ್ಣಾಮಲೈ ಡಿ) ಅಮರಕಂಟಕ

9. ಇದು ಗಂಗಾನದಿಯ ಉಗಮಸ್ಥಾನವಾಗಿದೆ.

ಉ. ಎ) ಹಿಮಾದ್ರಿ ಬಿ) ಗಂಗೋತ್ರಿ ಸಿ) ಗಂಗಾಮುಖ ಡಿ) ವಿಂಧ್ಯಾ

10. ಪುಲಿಕಾಟ್ ಸರೋವರವು ಈ ರಾಜ್ಯದಲ್ಲಿದೆ

ಉ. ಎ) ಒಡಿಸ್ಸಾ ಬಿ) ತಮಿಳುನಾಡು ಸಿ) ಕರ್ನಾಟಕ ಡಿ) ಕೇರಳ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಹಿಮಾಚಲದಲ್ಲಿರುವ ಯಾವುದಾದರೂ ಎರಡು ಪ್ರಸಿದ್ಧ ಕಣಿವಿಗಳನ್ನು ಹೆಸರಿಸಿ.

ಉ. ಕಂಗ್ರಾ, ಕುಲ

2. ಹಿಮಾಲಯದ ಪಾದ ಬೆಟ್ಟಗಳೆಂದು ಯಾವ ಶ್ರೇಣಿಯನ್ನು ಕರೆಯುತ್ತಾರೆ?

ಉ. ಶಿವಾಲಿಕ್

3. ಭಾರತದಲ್ಲಿ ಇತ್ತೀಚಿನ ಅವಧಿಯಲ್ಲಿ ನಿರ್ಮಿತ್ವಾದ ಭೂ ಸ್ವರೂಪ ಯಾವುದು?

ಉ. ಶಿವಾಲಿಕ್

4. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಯಾವ ಶಿಲೆಗಳಿಂದ ರಚನೆಯಾಗಿದೆ?

ಉ. ಜ್ವಾಲಾಮುಖಿ ಶಿಲೆಗಳಿಂದ

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಭಾರತದ ಜನ ಜೀವನದ ಮೇಲೆ ಹಿಮಾಲಯ ಪರ್ವತದ ಪ್ರಭಾವವೇನು?

ಉ.
* ರಕ್ಷಣೆ
* ಏಷ್ಯಾದಿಂದ ಬೀಸುವ ಶೀತಗಾಳಿಗೆ ತಡೆ
* ನದಿಗಳ ಉಗಮ ಸ್ಥಳ
* ಜಲವಿದ್ಯುತ್ ಉತ್ಪಾದನೆಗೆ ಸಹಕಾರಿ
* ವಿಶಾಲ ಮೈದಾನಗಳ ನಿರ್ಮಾಣ
* ವೈದಿಧ್ಯಮಯ ಸಸ್ಯ, ಪ್ರಾಣಿ ಮತ್ತು ಪಕ್ಷಿಗಳಿಗೆ ಆಶ್ರಯ ತಾಣ
* ಖನಿಜ ಸಂಪನ್ಮೂಲಗಳ ಲಭ್ಯತೆ

2. 'ಭಾರತದ ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ'. ಈ ಹೇಳಿಕೆಯನ್ನು ಸಮರ್ಥಿಸಿರಿ.

ಉ.
* ಅಪಾರವಾದ ಖನಿಜ ಸಂಪನ್ಮೂಲಗಳಿವೆ.
* ಜಲಪಾತಗಳಿಂದ ಕೂಡಿದ್ದು, ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅವಕಾಶ

3. ಪಶ್ಚಿಮ ಘಟ್ಟಗಳು ಪೂರ್ವ ಘಟ್ಟಗಳಿಗಿಂತ ಹೇಗೆ ಭಿನ್ನವಾಗಿವೆ?

ಉ.

| ಪಶ್ಚಿಮ ಘಟ್ಟಗಳು | ಪೂರ್ವ ಘಟ್ಟಗಳು |
|---|---|
| * ಪಶ್ಚಿಮ ಘಟ್ಟಗಳು ಎತ್ತರವಾಗಿವೆ | * ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ |
| * ನಿರಂತರವಾಗಿವೆ | * ನಿರಂತರವಾಗಿಲ್ಲ |
| * ದಖನ್ ಪ್ರಸ್ಥಭೂಮಿಯ ಪಶ್ಚಿಮಕ್ಕಿವೆ. | * ಅಲ್ಲಲ್ಲಿ ನದಿ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿವೆ. |

4. ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಯನ್ನು ವ್ಯತ್ಯಸಿಸಿ.

ಉ.

| **ಪಶ್ಚಿಮ ಕರಾವಳಿ** | **ಪೂರ್ವ ಕರಾವಳಿ** |
|---|---|
| * ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಗುಜಾರಾತ್‌ನ ಕಛ್‌ನಿಂದ ಕನ್ಯಾಕುಮಾರಿವರೆಗೆ ಹಬ್ಬಿದೆ. | * ಪೂರ್ವಘಟ್ಟ ಹಾಗೂ ಬಂಗಾಳ ಕೊಲ್ಲಿ ನಡುವೆ ಹಬ್ಬಿದೆ. |
| * ಇದನ್ನು ಮಲಬಾರ್, ಕೊಂಕಣ ಹಾಗೂ ಗುಜರಾಜ್ ಕರಾವಳಿಗಳೆಂದು ವಿಂಗಡಿಸಿದೆ. | * ಇದನ್ನು ಉತ್ಕಲ ತೀರ ಮತ್ತು ಕೋರಮಂಡಲ ತೀರ ಎಂದು ವಿಂಗಡಿಸಿದೆ. |

## ಅಧ್ಯಾಯ–3

# ಭಾರತದ ಮಾನ್ಸೂನ್ ವಾಯುಗುಣದ ಋತು ಮಾನಗಳು ಮತ್ತು ಲಕ್ಷಣಗಳು

## ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚು ಮಳೆ ಬೀಳುವ ಪ್ರದೇಶ ಇದಾಗಿದೆ.

ಉ. ಎ) ಆಗುಂಬೆ ಬಿ) ಚಿರಾಪುಂಜಿ

ಸಿ) ಮೌಸಿನ್‌ರಾಮ್ ಡಿ) ಹುಲಿಕಲ್

2. ಬಂಗಾಳಕೊಲ್ಲಿ ಮತ್ತು ಅರಬ್ಬೀ ಸಮುದ್ರಗಳಲ್ಲಿ ಈ ಅವಧಿಯಲ್ಲಿ ಆವರ್ತಗಾಳಿ (ಚಂಡಮಾರುತ) ನಿರ್ಮಿತಗೊಳ್ಳುತ್ತವೆ.

ಉ. ಎ) ನೈರುತ್ಯಮಾನ್ಸೂನ್

ಬಿ) ನಿರ್ಗಮನ ಮಾನ್ಸೂನ್ ಕಾಲ (ಹಿಂಗಾರು ಮಳೆಗಾಳ)

ಸಿ) ಬೇಸಿಗೆ ಕಾಲ

ಡಿ) ಚಳಿಗಾಲ

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಬೇಸಿಗೆಯಲ್ಲಿ ಬೀಳುವ ಮಳೆಯನ್ನು ಪಶ್ಚಿಮ ಬಂಗಾಳದಲ್ಲಿ ಏನೆಂದು ಕರೆಯುವರು?

ಉ. ಕಾಲಾಬೈಸಾಕಿ

2. ಬೇಸಿಗೆ ಕಾಲದಲ್ಲಿ ಬೀಳುವ ಮಳೆಯನ್ನು ದಕ್ಷಿಣ ಭಾರತದಲ್ಲಿ ಏನೆಂದು ಕರೆಯುತ್ತಾರೆ?

ಉ. ಮಾವಿನ ಹೊಯ್ಲು ಅಥವಾ ಕಾಫಿ ತುಂತುರು

3. ಭಾರತದಲ್ಲಿ ಅತೀ ಕಡಿಮೆ ಮಳೆ ಬೀಳುವ ಪ್ರದೇಶ ಯಾವುದು?

ಉ. ರೂಯ್ಲಿ

4. ಭಾರತದಲ್ಲಿ ಅತೀ ಹೆಚ್ಚು ಉಷ್ಣಾಂಶ ಹೊಂದಿದೆ ಪ್ರದೇಶ ಯಾವುದು?

ಉ. ಗಂಗಾನಗರ

### II. ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿರಿ.

1. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳು ಯಾವುವು?

ಉ. * ಅಕ್ಷಾಂಶ

* ಸಮುದ್ರ ಮಟ್ಟದಿಂದ ಇರುವ ಎತ್ತರ
* ಸಾಗರಗಳಿಂದ ಇರುವ ದೂರ

* ಮಾರುತಗಳ ದಿಕ್ಕು
* ಪರ್ವತ ಸರಣಿರಗಳು ಹಬ್ಬಿರುವ ರೀತಿ
* ಸಾಗರ ಪ್ರವಾಹಗಳು

2. ಭಾರತದಲ್ಲಿ ಕಂಡು ಬರುವ ವಾರ್ಷಿಕ ವಾಯುಗುಣದ ನಾಲ್ಕು ಋತುಮಾನಗಳನ್ನು ಹೆಸರಿಸಿರಿ.

ಉ. * ಬೇಸಿಗೆ ಕಾಲ – ಮಾರ್ಚ್‌ನಿಂದ – ಮೇವರೆಗೆ
* ನೈರುತ್ಯ ಮಾನ್ಸೂನ್ ಕಾಲ ಅಥವಾ ಮುಂಗಾರು ಮಳೆಗಾಲ – ಜೂನ್‌ನಿಂದ – ಸೆಪ್ಟಂಬರ್‌ವರೆಗೆ
* ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಅಥವಾ ಹಿಂಗಾರು.
* ಚಳಿಗಾಲ – ಡಿಸೆಂಬರ್ – ಫೆಬ್ರವರಿವರೆಗೆ

3. ಭಾರತದಲ್ಲಿ ಅಧಿಕ ಮಳೆ ಬೀಳುವ ಪ್ರದೇಶಗಳಾವುವು?

ಉ. ಪಶ್ಚಿಮ ಘಟ್ಟಗಳ ಪಶ್ಚಿಮಭಾಗ, ಆಸ್ಸಾಂ ಹಾಗೂ ಇತರ ಈಶಾನ್ಯ ರಾಜ್ಯಗಳು ಹಾಗೂ ಪಶ್ಚಿಮ ಬಂಗಾಳ

4. ಭಾರತದಲ್ಲಿ ಕಡಿಮೆ ಮಳೆ ಪಡೆಯುವ ಪ್ರದೇಶಗಳಾವುವು?

ಉ. ರಾಜಸ್ತಾನದ ಥಾರ್ ಮರುಭೂಮಿ, ಪಂಜಾಬ್, ಹರಿಯಾಣ, ಗುಜರಾತಿನ ಕಛ್‌ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಹಾರಾಷ್ಟ್ರದ ಪೂರ್ವಭಾಗ ಹಾಗೂ ಕರ್ನಾಟಕದ ಒಳನಾಡು.

5. ಭಾರತದ ವ್ಯವಸಾಯವು ಮಾನ್ಸೂನ್ ಮಳೆಯೊಡನೆ ಆಡುವ ಜೂಜಾಟವಾಗಿದೆ. ಹೇಗೆ?

ಉ. * ಭಾರತವು ವ್ಯವಸಾಯ ಪ್ರಧಾನ ರಾಷ್ಟ್ರ
* ನೈರುತ್ಯ ಮಾನ್ಸೂನ್ ಮಳೆ ಸರಿಯಾದ ಸಮಯಕ್ಕೆ ಬಂದರೆ ಉತ್ತಮ ಫಸಲು
* ಮಳೆ ವಿಫಲವಾದರೆ ಬರಗಾಲ
* ಅತಿ ಹೆಚ್ಚಾದ ಮಳೆ ಬಂದರೆ ಪ್ರವಾಹ ಉಂಟಾಗಿ ಪ್ರಾಣ ಹಾನಿ ಮತ್ತು ಆಸ್ತಿಪಾಸ್ತಿಗಳಿಗೆ ಹಾನಿ ಉಂಟಾಗುತ್ತದೆ.

# ಅಧ್ಯಾಯ–4
# ಭಾರತದ ಮಣ್ಣುಗಳು

## ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಒಣ ಬೇಸಾಯಕ್ಕೆ ಸೂಕ್ತವಾದ ಮಣ್ಣು

ಉ. ಎ) ಕಪ್ಪುಮಣ್ಣು  ಬಿ) ಕೆಂಪುಮಣ್ಣು

ಸಿ) ಮೆಕ್ಕಲು ಮಣ್ಣು  ಡಿ) ಮರುಭೂಮಿ ಮಣ್ಣು

2. ಭಾರತದಲ್ಲಿ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವ ಮಣ್ಣು

ಉ. ಎ) ಕಪ್ಪು ಮಣ್ಣು  ಬಿ) ಕೆಂಪು ಮಣ್ಣು

ಸಿ) ಜಂಬಿಟ್ಟಿಗೆ ಮಣ್ಣು  ಡಿ) ಮೆಕ್ಕಲು ಮಣ್ಣು

3. ಈ ಮಣ್ಣುಗಳು ಕಾಫಿ, ಟೀ ಮುಂತಾದ ತೋಟಗಾರಿಕೆ ಬೆಳೆಗಳಿಗೆ ಸೂಕ್ತವಾಗಿವೆ.

ಉ. ಎ) ಮೆಕ್ಕಲು ಮತ್ತು ಜಂಬ್ಬಿಟಿಗೆ (ಲ್ಯಾಟರೈಟ್) ಮಣ್ಣು

ಬಿ) ಜಂಬಿಟ್ಟಿಗೆ (ಲ್ಯಾಟರೈಟ್) ಮತ್ತು ಪರ್ವತ ಮಣ್ಣು

ಸಿ) ಕಪ್ಪು ಮಣ್ಣು ಮತ್ತು ಕೆಂಪು ಮಣ್ಣು

ಡಿ) ಪರ್ವತ ಮಣ್ಣು ಮತ್ತು ಕಪ್ಪುಮಣ್ಣು

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕಪ್ಪು ಮಣ್ಣು ಯಾವ ಬೆಳೆಗೆ ಹೆಚ್ಚು ಸೂಕ್ತವಾಗಿದೆ?

ಉ. ಹತ್ತಿ

2. ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚಾಗಿ ಹರಡಿರುವ ಮಣ್ಣು ಯಾವುದು?

ಉ. ಕೆಂಪುಮಣ್ಣು

3. ಮೆಕ್ಕಲು ಮಣ್ಣು ಎಂದರೇನು?

ಉ. ನದಿಗಳು ಪರ್ವತ ಮತ್ತು ಬೆಟ್ಟ ಪ್ರದೇಶಗಳಿಂದ ಹರಿಯುವಾಗ ಹೊತ್ತು ತಂದು ಸಂಚಯಿಸಿರುವ ಮಣ್ಣು.

4. ರಾಗಿ ಮತ್ತು ಎಣ್ಣೆಕಾಳು ಬೆಳೆಯಲು ಸೂಕ್ತವಾದ ಮಣ್ಣು ಯಾವುದು?

ಉ. ಕೆಂಪು ಮಣ್ಣು

5. ಕಪ್ಪು ಮಣ್ಣು ಹೇಗೆ ಉಂಟಾಗುತ್ತದೆ?

ಉ. ಅಗ್ನಿ ಶಿಲೆಗಳ ಶಿಥಿಲೀಕರಣದಿಂದ

**II. ಈ ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿರಿ.**

1. ಭಾರತದಲ್ಲಿ ಕಂಡುಬರುವ ಪ್ರಮುಖ ಮಣ್ಣಿನ ಪ್ರಕಾರಗಳನ್ನು ಹೆಸರಿಸಿರಿ.

ಉ. * ಮೆಕ್ಕಲುಮಣ್ಣು
* ಕಪ್ಪುಮಣ್ಣು
* ಜಂಬಿಟ್ಟಿಗೆ (ಲ್ಯಾಟರೇಟ್) ಮಣ್ಣು
* ಪರ್ವತ ಮಣ್ಣು
* ಮರುಭೂಮಿ ಮಣ್ಣು

2. ಮಣ್ಣನ್ನು ಸಂರಕ್ಷಿಸುವ ವಿಧಾನಗಳಾವುವು?

ಉ. * ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.
* ಅಡ್ಡ ಬದುಗಳನ್ನು ನಿರ್ಮಿಸುವುದು.
* ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ
* ಅರಣ್ಯ ನಾಶವನ್ನು ತಡೆಗಟ್ಟುವುದು.
* ಹೆಚ್ಚು ಅರಣ್ಯಗಳನ್ನು ಬೆಳೆಸಲು ಪ್ರೋತ್ಸಾಹಿಸುವುದು.
* ಪ್ರಾಣಿಗಳನ್ನು ಮೇಯಿಸುವುದನ್ನು ನಿಯಂತ್ರಿಸುವುದು.
* ನೀರಿನ ಸಮರ್ಪಕ ಬಳಕೆ
* ಚೆಕ್ ಡ್ಯಾ ಗಳ ನಿರ್ಮಾಣ

3. ಮಣ್ಣಿನ ಸವೆತಕ್ಕೆ ಕಾರಣಗಳೇನು?

ಉ. * ಅರಣ್ಯನಾಶ
* ಪ್ರಾಣಿಗಳನ್ನು ಅತಿಯಾಗಿ ಮೇಯಿಸುವುದು
* ಅವೈಜ್ಞಾನಿಕ ಬೇಸಾಯ
* ಅಧಿಕ ನೀರಿನ ಬಳಕೆ
* ಇಟ್ಟಿಗೆ, ಹೆಂಚು ಮತ್ತು ಮಡಿಕೆ ಇತ್ಯಾದಿಗಳ ತಯಾರಿಕೆಯಿಂದ ಮೇಲ್ಪದರದ ಮಣ್ಣಿನ ನಾಶ

# ಅಧ್ಯಾಯ–5
# ಭಾರತದ ಅರಣ್ಯಗಳು

## ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಅತೀ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ರಾಜ್ಯ

ಉ. ಎ) ಕರ್ನಾಟಕ ಬಿ) ಮಧ್ಯಪ್ರದೇಶ ಸಿ) ಅಸ್ಸಾಂ ಡಿ) ಕೇರಳ

2. ಈ ಕೆಳಗಿನ ಯಾವುದು ಉಷ್ಣವಲಯದ ಸಸ್ಯ ವರ್ಗಕ್ಕೆ ಸೇರಿಲ್ಲ

ಉ. ಎ) ಲಾರೆಲ್ ಬಿ) ಬಬೂಲ್ ಸಿ) ಶೀಷಮ್ ಡಿ) ಸಭಾಯ್

3. ಅತೀ ಕಡಿಮೆ ಅರಣ್ಯ ಪ್ರದೇಶ ಹೊಂದಿರುವ ರಾಜ್ಯ

ಎ) ಪಂಜಾಬ ಬಿ) ಮೇಘಾಲಯ ಸಿ) ಹರಿಯಾನಾ ಡಿ) ತಮಿಳುನಾಡು

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಸ್ವಾಭಾವಿಕ ಸಸ್ಯವರ್ಗ ಎಂದರೇನು?

ಉ. ಒಂದು ಪ್ರದೇಶದಲ್ಲಿ ಪ್ರಕೃತಿ ದತ್ತವಾಗಿ ಬೆಳೆದಿರುವ ಎಲ್ಲಾ ಬಗ್ಗೆಯ ಸಸ್ಯ ಸಮೂಹವನ್ನು ಸ್ವಾಭಾವಿಕ ಸಸ್ಯವರ್ಗ ಎನ್ನುವರು.

2. ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು?

ಉ. ಉತ್ತರಾಂಚಲ ರಾಜ್ಯದ

3. ಅರಣ್ಯ ಸಂರಕ್ಷಣೆ ಎಂದರೇನು?

ಉ. ಅರಣ್ಯಗಳನ್ನು ಮಾನವ, ಪ್ರಾಣಿಗಳು ಹಾಗೂ ನೈಸರ್ಗಿಕ ವಿಕೋಪಗಳಿಂದ ಕಾಪಾಡುವುದನ್ನೇ ಅರಣ್ಯ ಸಂರಕ್ಷಣೆ ಎನ್ನುವರು.

4. ಭಾರತದಲ್ಲಿ ಸುಮಾರು ಎಷ್ಟು ವನ್ಯ ಜೀವಿಧಾಮಗಳಿವೆ?

ಉ. ಸುಮಾರು 523

### II. ಈ ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿರಿ.

1. ಭಾರತದಲ್ಲಿ ಕಂಡುಬರುವ ವಿವಿಧ ಪ್ರಕಾರದ ಅರಣ್ಯಗಳನ್ನು ಹೆಸರಿಸಿ.

ಉ.
* ನಿತ್ಯಹರಿದ್ವರ್ಣ ಅರಣ್ಯ
* ಎಲೆ ಉದುರಿಸುವ ಮಾನ್ಸೂನ್ ಅರಣ್ಯ
* ಉಷ್ಣವಲಯ ಹುಲ್ಲುಗಾವಲು
* ಮ್ಯಾಂಗ್ರೋವ್ ಅರಣ್ಯ
* ಮರುಭೂಮಿ ಅರಣ್ಯ
* ಹಿಮಾಲಯದ ಅಲ್ಪೈನ್ ಅರಣ್ಯ

2. ಅರಣ್ಯ ಸಂರಕ್ಷಣೆಯ ಕ್ರಮಗಳನ್ನು ಬರೆಯಿರಿ.

ಉ. * ಕಾಡ್ಗಿಚ್ಚು ಉಂಟು ಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.

* ಮರಗಳಿಗೆ ತಗುಲುವ ರೋಗಗಳನ್ನು ನಿಯಂತ್ರಿಸುವುದು.
* ಸಾಮಾಜಿಕ ಅರಣ್ಯ ಯೋಜನೆಯ ಯಶಸ್ವಿ ಕಾರ್ಯಗತ
* ಬೀಜಗಳನ್ನು ಹರಡುವುದು.
* ಸಸಿಗಳನ್ನು ನೆಡುವುದು.
* ಕಾನೂನು ಬಾಹಿರವಾಗಿ ಮರಕಡಿಯುವುದನ್ನು ನಿಯಂತ್ರಿಸುವುದು.
* ಪ್ರಾಣಿಗಳ ಮೇಯಿಸುವಿಕೆ ನಿಯಂತ್ರಣ
* ಸಾರ್ವಜನಿಕರಿಗೆ ಮರನೆಡಲು ಪ್ರೋತ್ಸಾಹ
* ಮರಗಳ ಪ್ರಾಮುಖ್ಯತೆ ಬಗ್ಗೆ ತಿಳುವಳಿಕೆ ನೀಡುವುದು.

# ಅಧ್ಯಾಯ–6
# ಜಲಸಂಪನ್ಮೂಲಗಳು

## ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಪಶ್ಚಿಮ ಬಂಗಾಳದ ಕಣ್ಣೀರಿನ ನದಿ ದಾಮೋದರ್ ಆದರೆ ಒರಿಸ್ಸಾದ ಕಣ್ಣೀರಿನ ನದಿ ಇದಾಗಿದೆ.

ಉ. ಎ) ಕೃಷ್ಣಾ    ಬಿ) ಮಹಾನದಿ    ಸಿ) ಗೋದಾವರಿ    ಡಿ) ಗಂಗಾ

2. ಭಾರತದಲ್ಲಯೇ ಅತ್ಯಂತ ಎತ್ತರವಾದ ಅಣೆಕಟ್ಟು

ಉ. ಎ) ಭಕ್ರಾ    ಬಿ) ನಾಗಾರ್ಜುನಸಾಗರ

ಸಿ) ಕೋಸಿ    ಡಿ) ಹಿರಾಕುಡ್

3. ಬಿಹಾರಿನ ಕಣ್ಣೀರಿನ ನದಿ ಎಂದು ಕರೆಯಲ್ಪಡುವುದು

ಎ) ಸಟ್ಲೇಜ್    ಬಿ) <u>ಕೋಸಿ</u>    ಸಿ) ದಾಮೋದರ್    ಡಿ) ಮಹಾನದಿ

4. ಭಾರತದಲ್ಲಿಯೇ ಅತ್ಯಂತ ಉದ್ದವಾದ ಅಣೆಕಟ್ಟು ಇದಾಗಿದೆ.

ಎ) ನಾಗಾರ್ಜುನ ಸಾಗರ    ಬಿ) <u>ಹಿರಾಕುಡ್</u>

ಸಿ) ತುಂಗಭದ್ರಾ    ಡಿ) ಭಕ್ರಾನಂಗಲ್

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ನೀರಾವರಿ ಎಂದರೇನು?

ಉ. ವ್ಯವಸಾಯದ ಭೂಮಿಗೆ ಕೃತಕವಾಗಿ ಕಾಲುವೆ, ಬಾವಿ ಹಾಗೂ ಕೆರೆಗಳಿಂದ ನೀರು ಸರಬರಾಜು ಮಾಡುವುದು.

2. ನೀರಾವರಿಯ ವಿಧಗಳಾವುವು?

ಉ. * ಬಾವಿ ನೀರಾವರಿ   * ಕೆರೆ ನೀರಾವರಿ   * ಕಾಲುವೆ ನೀರಾವರಿ

3. ಬಾವಿನೀರಾವರಿಯ ಎರಡು ವಿಧಗಳಾವುವು?

ಉ. * ತೆರೆದ ಬಾವಿ ನೀರಾವರಿ   * ಕೊಳವೆ ಬಾವಿ ನೀರಾವರಿ

4. ಕಾಲುವೆ ನೀರಾವರಿಯ ಎರಡು ಪ್ರಕಾರಗಳನ್ನು ತಿಳಿಸಿರಿ.

ಉ. * ಪ್ರವಾಹ ಕಾಲುವೆ   * ಸರ್ವ ಕಾಲಿಕ ಕಾಲುವೆ

5. ಸ್ವತಂತ್ರ ಭಾರತದ ಮೊದಲ ವಿವಿಧೋದ್ದೇಶ ನದಿ ಕಣಿವೆಯೋಜನೆ ಯಾವುದು?

ಉ. * ದಾವೋದರ ನದಿ ಕಣಿವೆ ಯೋಜನೆ

6. ಏಷಿಯಾದಲ್ಲಿಯೇ ಅತ್ಯಂತ ಎತ್ತರವಾದ ಅಣೆಕಟ್ಟು ಯಾವುದು?

ಉ. * ಭಕ್ರಾ

**II. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕರ್ನಾಟಕದ ಜಲ ವಿದ್ಯುತ್ ಯೋಜನೆಗಳನ್ನು ಹೆಸರಿಸಿರಿ.

ಉ. * ಶಿವನ ಸಮುದ್ರ, ತುಂಗಭದ್ರಾ, ಜೋಗ, ಕಾಳಿ, ಭದ್ರಾ, ಕೃಷ್ಣಾ ಮೇಲ್ದಂಡೆ ಇತ್ಯಾದಿ.

2. ವಿವಿದೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳೇನು?

ಉ. * ನೀರಾವರಿ ಸೌಲಭ್ಯ
* ಜಲವಿದ್ಯುತ್ ಉತ್ಪಾದನೆ
* ಪ್ರವಾಹ ನಿಯಂತ್ರಣ
* ನೌಕಾಯಾನದ ಸೌಲಭ್ಯ
* ಗೃಹ ಬಳಕೆ
* ಕೈಗಾರಿಕೆಗ ಳಿಗೆ ನೀರು ಒದಗಿಸುವುದು.
* ಮಣ್ಣಿನ ಸವಕಳಿ ನಿಯಂತ್ರ
* ಮೀನುಗಾರಿಕೆ
* ಅರಣ್ಯ ಸಂಪತ್ತಿನ ಅಭಿವೃದ್ಧಿ

# ಅಧ್ಯಾಯ–7
# ಭಾರತದ ಭೂಗೋಳ ಶಾಸ್ತ್ರ

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ವಾಣಿಜ್ಯ ಬೇಸಾಯದ ಬೆಳೆಗೆ ಇದು ಉದಾಹರಣೆಯಾಗಿದೆ.

ಉ. ಎ) ಭತ್ತ ಬಿ) ಗೋಧಿ ಸಿ) ಹೊಗೆಸೊಪ್ಪು ಡಿ) ರಾಗಿ

2. ಭಾರತದ ಗೋಧಿಯ ಕಣಜ

ಉ. ಎ) ಹರಿಯಾಣ ಬಿ) ಪಂಜಾಬ್ ಸಿ) ಉತ್ತರ ಪ್ರದೇಶ ಡಿ) ರಾಜಸ್ತಾನ

3. ಇದು ಭಾರತದ ಪ್ರಾಚೀನ ವೃತ್ತಿಗಳಲ್ಲಿ ಒಂದಾಗಿದೆ

ಎ) ಗಣಿಗಾರಿಕೆ ಬಿ) ಗುಡಿಕೈಗಾರಿಕೆ ಸಿ) ಜೇನುಸಾಕಾಣಿಕೆ ಡಿ) ವ್ಯವಸಾಯ

4. ಭಾರತದಲ್ಲಿ ಅತಿ ಹೆಚ್ಚು ಕಬ್ಬು ಉತ್ಪಾದಿಸುವ ರಾಜ್ಯ

ಎ) ಉತ್ತರಪ್ರದೇಶ ಬಿ) ಮಹಾರಾಷ್ಟ್ರ ಸಿ) ಕರ್ನಾಟಕ ಡಿ) ತಮಿಳುನಾಡು

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭೂ ಬಳಕೆ ಎಂದರೇನು?

ಉ. ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವುದೇ ಭೂ ಬಳಕೆ.

2. ಭಾರತದಲ್ಲಿ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ ಯಾವುದು?

ಉ. ಪಶ್ಚಿಮ ಬಂಗಾಳ

3. ವ್ಯವಸಾಯದ ಅರ್ಥ ತಿಳಿಸಿ.

ಉ. ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗ ಪಡೆಯುವುದೇ ವ್ಯವಸಾಯ.

4. ಜೀವನಾಧಾರ ಬೇಸಾಯ ಎಂದರೇನು?

ಉ. ರೈತರು ತಮ್ಮ ಜೀವನಕ್ಕೆ ಅವಶ್ಯವಿರುವ ಬೆಳೆಗಳನ್ನು ಬೆಳೆಯುವುದಕ್ಕೆ ಜೀವಧಾರ ಬೇಸಾಯ ಎನ್ನುತ್ತಾರೆ.

5. ಕರ್ನಾಟಕದಲ್ಲಿ ಪ್ರಮುಖ ಹೊಗೆಸೊಪ್ಪು ಮಾರಾಟ ಕೇಂದ್ರ ಎಲ್ಲಿದೆ?

ಉ. ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿದೆ.

**III. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ವ್ಯವಸಾಯದ ವಿಧಗಳಾವುವು?

ಉ. * ಸಾಂದ್ರ ಬೇಸಾಯ * ಜೀವನಾಧಾರ ಬೇಸಾಯ
* ವಾಣಿಜ್ಯ ಬೇಸಾಯ * ತೋಟಗಾರಿಕೆ ಬೇಕಾಯ

2. ರಬಿ ಮತ್ತು ಖರೀಫ್ ಬೇಸಾಯಗಳನ್ನು ವ್ಯತ್ಯಸಿಸಿ.

ಉ.

| ರಬಿ | ಖರೀಫ್ |
|---|---|
| * ಚಳಿಗಾಲದಲ್ಲಿನ ಬೇಸಾಯ | * ನೈರುತ್ಯ ಮಾನ್ಸೂನ್ ಮಾರುತಗಳ ಅವಧಿಯ ಬೇಸಾಯ |
| * ಗೋದಿ ಬೆಳೆಗೆ ಹೆಚ್ಚು ಸೂಕ್ತ | * ಭತ್ತ, ರಾಗಿ, ಜೋಳ, ಎಣ್ಣೆಗಳಿಗೆ ಸೂಕ್ತ |
| * ಗೃಹ ಬಳಕೆ | * ಕೈಗಾರಿಕೆಗಳಿಗೆ ನೀರು ಒದಗಿಸುವುದು. |
| * ಅಕ್ಟೋಬರ್–ನವೆಂಬರ್‌ನಲ್ಲಿ ಬಿತ್ತನೆ | * ಜೂನ್–ಜುಲೈನಲ್ಲಿ ಬಿತ್ತನೆ. |

3. ಭಾರತದ 3 ವ್ಯವಸಾಯದ ಅವಧಿಗಳು ಯಾವುವು?

ಉ. * ಮುಂಗಾರು ಅಥವಾ ಖರೀಫ್ ಬೇಸಾಯ
* ಹಿಂಗಾರು ಅಥವಾ ರಬಿ ಬೇಸಾಯ
* ಬೇಸಿಗೆಯ ಅಥವಾ ಜೇಡ್ ಬೇಸಾಯ

**IV. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಭೂ ಬಳಕೆಯ ಪ್ರಕಾರಗಳಾವುವು?

ಉ. * ನಿವ್ವಳ ಸಾಗುವಳಿ ಕ್ಷೇತ್ರ * ಅರಣ್ಯ ಭೂಮಿ
* ವ್ಯವಸಾಯೇತರ ಭೂ ಬಳಕೆ * ಬೀಳು ಭೂಮಿ
* ಹುಲ್ಲುಗಾವಲು * ಬಳಕೆಯಾಗದ ವ್ಯವಸಾಯ ಯೋಗ ಭೂಮಿ

2. ಭತ್ತದ ಬೆಳೆಗೆ ಅವಶ್ಯಕವಾದ ಭೌಗೋಳಿಕ ಅಂಶಗಳಾವುವು?

ಉ. * 2500 ಉಷ್ಣತೆ ಇರಬೇಕು
* 100 ರಿಂದ 200 ಸೆಂ.ಮೀ. ಮಳೆ ಅವಶ್ಯಕ
* ಫಲವತ್ತಾದ ಮೆಕ್ಕಲು ಮಣ್ಣು ಅಥವ ಜೇಡಿಮಣ್ಣು ಬೇಕು
* ಸಮತಟ್ಟಾದ ಭೂಮಿ
* ಫೈರಿನ ತಳದಲ್ಲಿ ನೀರು ನಿಂತಿರಬೇಕು.
* ಕೆಲವು ಕಡೆ ನೀರಾವರಿ ಅವಶ್ಯಕ

# ಅಧ್ಯಾಯ–8
# ಖನಿಜ ಮತ್ತು ಶಕ್ತಿ ಸಂಪನ್ಮೂಲ

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಇದು ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲ

ಉ. ಎ) ಕಲ್ಲಿದ್ದಲು ಬಿ) ಸೌದೆ ಸಿ) ಗಾಳಿ ಶಕ್ತಿ ಡಿ) ಪೆಟ್ರೋಲಿಯಂ ಶಕ್ತಿ

2. ಇದು ಕಬ್ಬಿಣದ ಮಿಶ್ರಲೋಹವಾಗಿದೆ.

ಉ. ಎ) ಮ್ಯಾಂಗನೀಸ್ ಬಿ) ಮೆಗ್ನೀಷಿಯಂ ಸಿ) ಬಾಕ್ಸೈಟ್ ಡಿ) ಅಭ್ರಕ

3. ಬಾಕ್ಸೈಟ್ ಈ ಕೆಳಗಿನ ಲೋಹದ ಅದಿರು.

ಉ. ಎ) ತಾಮ್ರ ಬಿ) ಅಲ್ಯುಮಿನಿಯಂ

ಸಿ) ಕಬ್ಬಿಣ ಡಿ) ಅಭ್ರಕ

4. ಇದನ್ನು ಅದ್ಭುತ ಲೋಹ ಎಂದು ಕರೆಯಲಾಗುತ್ತದೆ.

ಉ. ಎ) ಮ್ಯಾಂಗನೀಸ್ ಬಿ) ಕಬ್ಬಿಣ ಸಿ) ಬಾಕ್ಸೈಟ್ ಡಿ) ಅಭ್ರಕ

5. ಕರ್ನಾಟಕದಲ್ಲಿ ಬಾಕ್ಸೈಟ್ ದೊರೆಯುವ ಸ್ಥಳ

ಉ. ಎ) ಬೆಳಗಾವಿ ಬಿ) ಕೋಲಾರ

ಸಿ) ಕಪ್ಪತ ಗದಗ ಗುಡ್ಡ ಡಿ) ಬಳ್ಳಾರಿ ಕುದುರೆ ಮುಖ

6. 'ಕಾಗೆ ಬಂಗಾರ' ಎಂದು ಕರೆಯಲ್ಪಡುವ ಖನಿಜ ಅಭ್ರಕವಾದರೆ ಕಪ್ಪುಬಂಗಾರ ಎಂದು ಕರೆಯಲ್ಪಡುವ ಖನಿಜ

ಎ) ಕಬ್ಬಿಣ ಬಿ) ನಿಕ್ಕಲ್ ಸಿ) ಕಲ್ಲಿದ್ದಲು ಡಿ) ಬಾಕ್ಸೈಟ್

7. ಭಾರತದ ಮೊದಲನೇ ತೈಲಬಾವಿ

ಎ) ದಿಗ್ಬಾಯ್ ಬಿ) ಬಾಂಬೆ ಹೈ ಸಿ) ಲಿಕಿಮ್‌ಪುರ ಡಿ) ಅಂಕಲೇಶ್ವರ

8. ಚಿನ್ನವು ಇಲ್ಲಿ ಬೆಣಚುರಲ್ಲಿನ ಶಿಲಾಸ್ತರಗಳಲ್ಲಿ ಎಳೆಗಳ ರೂಪದಲ್ಲಿ ದೊರೆಯುತ್ತದೆ.

ಉ. ಎ) ಹಟ್ಟಿ ಬಿ) ಕೋಲಾರ

ಸಿ) ಅನಂತಪುರಿ ಡಿ) ಗದಗ ಬಳಿಯ ಕಪ್ಪತಗುಡ್ಡ

9. ಭಾರತದ ಅತಿ ದೊಡ್ಡ ತೈಲ ನಿಕ್ಷೇಪ

ಎ) ದಿಗ್ಬಾಯ್ ಬಿ) ಬಾಂಬೆಹೈ ಸಿ) ಅಂಕಲೇಶ್ವರಿ ಡಿ) ಲಕಿಮ್‌ಪುರ

10. ಭಾರತದಲ್ಲಿನ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರ

ಎ) <u>ರಾಜಸ್ತಾನದ ಬಾರಾಮಾರ್</u> ಬಿ) ಮಹಾರಾಷ್ಟ್ರದ ಬಾಂಬೆಹೈ

ಸಿ) ತಮಿಳುನಾಡಿನ ಕಲ್ಪಕಂ ಡಿ) ಕರ್ನಾಟಕದ ರಾಯಚೂರು

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕಚ್ಚಾ ತೈಲ ಎಂದರೇನು?

ಉ. ಭೂಮಿಯಿಂದ ಹೊರತೆಗೆದ ಹಲವಾರು ಬಗೆಯ ಮಿಶ್ರಣಗಳಿಂದ ಕೂಡಿರುವ ಪೆಟ್ರೋಲಿಯಂ ವಸ್ತುವನ್ನು ಕಚ್ಚಾತೈಲ ಎನ್ನುತ್ತಾರೆ.

2. ಭಾರತದಲ್ಲಿ ಪೆಟ್ರೋಲಿಯಂನ್ನು ಮೊದಲು ಪತ್ತೆ ಮಾಡಲಾದ ಸ್ಥಳ ಯಾವುದು?

ಉ. ಅಸ್ಸಾಂ ದಿಗ್ಬಾಯ್

**III. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಭಾರತದಲ್ಲಿ ದೊರೆಯುವ ಪ್ರಮುಖ ಖನಿಜಗಳಾವುವು?

ಉ. ಕಬ್ಬಿಣ, ಮ್ಯಾಂಗನೀಸ್, ಬಾಕ್ಸೈಟ್, ಅಭ್ರಕ, ಚಿನ್ನ, ಕಲ್ಲಿದ್ದಲು, ಪೆಟ್ರೋಲಿಯಂ, ಅಣುಖನಿಜಗಳು ಇತ್ಯಾದಿ. (ಯಾವುದಾದರು ನಾಲ್ಕು)

2. ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ.

ಉ. ಸೌರಶಕ್ತಿ, ಗಾಳಿಶಕ್ತಿ, ಭೂ ಅಂತರಾಳದ ಶಕ್ತಿ, ಜೈವಿಕ ಅನಿಲ ಶಕ್ತಿ, ಉಬ್ಬರವಿಳಿತ ಶಕ್ತಿ ಇತ್ಯಾದಿ. (ಯಾವುದಾದರು ನಾಲ್ಕು)

3. ಕಬ್ಬಿಣದ ಅದಿರಿನ ನಿಕ್ಷೇಪ ಹೊಂದಿರುವ ಕರ್ನಾಟಕ ಸ್ಥಳಗಳಾವುವು?

ಉ. ಕೆಮ್ಮಣ್ಣು ಗುಂಡಿ, ಹೊಸಪೇಟೆ, ಸೊಂಡುರು, ಕುದುರೆ ಮುಖ

4. ಭಾರತವು ಕಚ್ಚಾ ತೈಲವನ್ನು ಯಾವ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತದೆ.

ಉ. ಇರಾನ್, ಇರಾಕ್, ಸೌದಿ ಅರೇಬಿಯಾ, ರಷ್ಯಾ

## ಅಧ್ಯಾಯ–9
# ಭಾರತದ ಸಾರಿಗೆ

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತದ ಹೆಬ್ಬಾಗಿಲು ಎಂದು ಈ ಬಂದರನ್ನು ಕರೆಯುತ್ತಾರೆ.

ಉ. ಎ) ಕೋಲ್ಕತ್ತಾ ಬಿ) ಮುಂಬೈ ಸಿ) ಚೆನ್ನೈ ಡಿ) ಮಂಗಳೂರು

2. ಭಾರತದ ಅತ್ಯಂತ ಹಳೆಯ ಕೃತಕ ಬಂದರು

ಉ. ಎ) ಚೆನ್ನೈ ಬಿ) ಮುಂಬೈ ಸಿ) ಕೊಲ್ಕತ್ತ ಡಿ) ವಿಶಾಖಪಟ್ಟಣ

3. ಭಾರತದ ಚಹಾದ ಬಂದರು

ಉ. ಎ) ಮಂಗಳೂರು ಬಿ) ಪಾರದೀಪ್ ಸಿ) ನವಶೇವಾ ಡಿ) ಕೋಲ್ಕತ್ತಾ

4. ಕೋಲ್ಕತ್ತಾದ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರು

ಉ. ಎ) ಪಾರದೀಪ್ ಬಿ) ಹಾಲ್ದಿಯಾ ಸಿ) ವಿಶಾಖಪಟ್ಟಣ ಡಿ) ನವಶೇವಾ

5. ಮುಂಬೈ ಬಂದರಿನ ಒತ್ತಡ ಕಡಿಮೆ ಮಾಡಲು ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಿಸಿರುವ ಬಂದರು

ಉ. ಎ) ಕೊಚ್ಚಿ ಬಿ) ಮಂಗಳೂರು ಸಿ) ನವಶೇವಾ ಡಿ) ಕಾಂಡ್ಲ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸಾರಿಗೆ ವ್ಯವಸ್ಥೆ ಎಂದರೇನು?

ಉ. ವಸ್ತುಗಳು, ಸೇವೆಗಳು ಮತ್ತು ಮಾಹಿತಿಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ವ್ಯವಸ್ಥೆಯನ್ನು ಸಾರಿಗೆ ಎನ್ನುತ್ತಾರೆ.

**III. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಸಾರಿಗೆಯ ವಿಧಗಳನ್ನು ಹೆಸರಿಸಿ.

ಉ. * ರಸ್ತೆ ಸಾರಿಗೆ * ರೈಲು ಸಾರಿಗೆ
* ವಾಯುಸಾರಿಗೆ * ಜಲಸಾರಿಗೆ

2. ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆಯೇನು?

ಉ.
* ಕಚ್ಚಾ ವಸ್ತುಗಳನ್ನು ಕಾರ್ಖಾನೆಗೆ ಸಾಗಿಸಲು
* ಸಿದ್ಧವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು
* ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು
* ಹಳ್ಳಿಗಳಿಗೆ ಅಗತ್ಯವಾದ ವಸ್ತುಗಳನ್ನು ಪಡೆಯಲು
* ರಸ್ತೆ ಸಾರಿಗೆಗಳು ರೈಲುಸಾರಿಗೆಗಳಿಗೆ ಪೂರಕ
* ಎಲ್ಲಾ ಬಗೆಯ ಸ್ಥಳಗಳಿಗೂ ಸಂಪರ್ಕ ಒದಗಿಸಬಹುದು.

# ಅಧ್ಯಾಯ–10
# ಭಾರತದ ಪ್ರಮುಖ ಕೈಗಾರಿಕೋದ್ದಿಮೆಗಳು

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭೌಗೋಳಿಕ ಮಾಹಿತಿ ವ್ಯವಸ್ಥೆಯು ಮೊದಲಿಗೆ ಈ ರಾಷ್ಟ್ರದಲ್ಲಿ ಆರಂಭಗೊಂಡಿತು

ಉ. 1) ಅಮೆರಿಕಾ — ಎ) ಕಬ್ಬು

2) ಸಕ್ಕರೆ — ಡಿ) ಹತ್ತಿ

3) ಅಲ್ಯೂಮಿನಿಯಂ — ಎ) ಮರದ ತಿರುಳು

4) ಕಾಗದ — ಡಿ) ಬಾಕ್ಸೈಟ್

| | | | |
|---|---|---|---|
| ಎ) 1–ಬಿ | 2–ಎ | 3–ಸಿ | 4–ಡಿ |
| ಬಿ) 1–ಡಿ | 2–ಬಿ | 3–ಎ | 4–ಸಿ |
| ಸಿ) 1–ಬಿ | 2–ಎ | 3–ಡಿ | 4–ಸಿ |
| ಡಿ) 1–ಎ | 2–ಡಿ | 3–ಸಿ | 4–ಬಿ |

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭಾರತದ ಮ್ಯಾಂಚೆಸ್ಟರ್ ಎಂದು ಯಾವ ಸ್ಥಳವನ್ನು ಕರೆಯುತ್ತಾರೆ?

ಉ. ಮುಂಬೈ

2. ಸಕ್ಕರೆ ಉತ್ಪಾದನೆಯಲ್ಲಿ ಭಾರತ ಪ್ರಪಂಚದಲ್ಲಿ ಎಷ್ಟನೇ ಸ್ಥಾನವನ್ನು ಪಡೆದಿದೆ?

ಉ. ದ್ವಿತೀಯ

3. ಭಾರತದಲ್ಲಿ ಬಹುತೇಕ ಸಕ್ಕರೆ ಕೈಗಾರಿಕೆಗಳು ಸ್ಥಾಪಿತವಾದ ಸ್ಥಳ ಯಾವುದು?

ಉ. ಗಂಗಾ ನದಿಯ ಬಯಲು ಪ್ರದೇಶ

4. ಭಾರತದಲ್ಲಿ ಮೊದಲು ಸ್ಥಾಪನೆಗೊಂಡ ಕಾಗದದ ಕೈಗಾರಿಕೆ ಯಾವುದು?

ಉ. ಪಶ್ಚಿಮ ಬಂಗಾಳದ ಸೆರಾಂಪುರದ ಹೂಗ್ಲಿನದಿದಡ

5. ದೇಶದಲ್ಲಿ ಕಾಗದ ಕೈಗಾರಿಕೆ ಕಂಡು ಬರುವ ಸ್ಥಳ ಯಾವುದು?

ಉ. ಪಶ್ಚಿಮ ಬಂಗಾಳ

6. ಭಾರತದಲ್ಲಿ ಪ್ರಥಮ ಉಕ್ಕಿನ ಕೈಗಾರಿಕೆ ಎಲ್ಲಿ ಸ್ಥಾಪಿತವಾಯಿತು?

ಉ. ಪಶ್ಚಿಮ ಬಂಗಾಳದ ಕುಲ್ಟಿ

7. ದ ಮೈಸೂರ್ ಐರನ್ ಅಂಡ್ ಸ್ಟೀಲ್ ವರ್ಕ್ಸ್' ಎಲ್ಲಿ ಸ್ಥಾಪಿತವಾಯಿತು?

ಉ. ಕರ್ನಾಟಕದ ಭದ್ರಾವತಿ

8. ಕೇಂದ್ರ ಸರ್ಕಾರವು ಉನ್ನತ ತಂತ್ರಜ್ಞಾನವನ್ನು ಅಧಿಕೃತವಾಗಿ ಜಾರಿಗೆ ತಂದ ವರ್ಷ ಯಾವುದು?

ಉ. 1990

9. ಯಾವ ಕೈಗಾರಿಕೆಯನ್ನು ಮೂಲ ಕೈಗಾರಿಕೆ ಎನ್ನುವರು?

ಉ. ಕಬ್ಬಿಣ ಮತ್ತು ಉಕ್ಕು

10. ಕೈಗಾರಿಕಾ ವಲಯ ಎಂದರೇನು?

ಉ. ದೇಶದ ಯಾವ ಭಾಗದಲ್ಲಿ ಹೆಚ್ಚು ಕೈಗಾರಿಕೆಗಳು ಸ್ಥಾಪಿತವಾಗಿರುವ ವಲಯ

11. ದೇಶದ ರಾಷ್ಟ್ರಾದಾಯದಲ್ಲಿ ಕೈಗಾರಿಕೆಗಳ ಪಾಲು ಎಷ್ಟು?

ಉ. ಶೇ 35

12. ಬೆಂಗಳೂರನ್ನು 'ಸಿಲಿಕಾನ್ ಸಿಟಿ' ಎಂದು ಕರೆಯಲು ಕಾರಣವೇನು?

ಉ. ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿರುವುದರಿಂದ

13. ಕಬ್ಬಿಣೇತರ ಲೋಹಗಳಲ್ಲಿ ಮುಖ್ಯವಾದ ಲೋಹ ಯಾವುದು?

ಉ. ಅಲ್ಯೂಮಿನಿಯಂ

# ಅಧ್ಯಾಯ–11
# ಸಂಪರ್ಕ

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭೌಗೋಳಿಕ ಮಾಹಿತಿ ವ್ಯವಸ್ಥೆಯು ಮೊದಲಿಗೆ ಈ ರಾಷ್ಟ್ರದಲ್ಲಿ ಆರಂಭಗೊಂಡಿತು.

ಉ. ಎ) ಅಮೆರಿಕಾ ಬಿ) ಭಾರತ ಸಿ) <u>ಕೆನಡಾ</u> ಡಿ) ರಷ್ಯಾ

2. ಕೆಳಗಿನವುಗಳಲ್ಲಿ ಯಾವುದು ಸಮೂಹ ಮಾಧ್ಯಮವಾಗಿದೆ.

ಉ. ಎ) ದೂರವಾಣಿ ಬಿ) <u>ರೇಡಿಯೋ</u> ಸಿ) ಅಂಚೆ ಡಿ) ಇ–ಮೇಲ್

3. ಭಾರತವು ಪ್ರಾದೇಶಿಕ ಜಿ.ಪಿ.ಎಸ್. ವ್ಯವಸ್ಥೆ ಹೊಂದಲು ಉಡಾಯಿಸಿರುವ ಉಪಗ್ರಹಗಳ ಸಂಖ್ಯೆ

ಉ. ಎ) ಆರು ಬಿ) ಹತ್ತು ಸಿ) ಇಪ್ಪತ್ನಾಲ್ಕು ಡಿ) <u>ಏಳು</u>

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸಮೂಹ ಮಾಧ್ಯಮ ಎಂದರೇನು?

ಉ. ವಿವಿಧ ಪ್ರದೇಶಗಳ ಜನರೊಂದಿಗೆ ಸುಲಭವಾಗಿ ಸಂಪರ್ಕಿಸಬಹುದಾದ ಸಂಪರ್ಕ ಮಾಧ್ಯಮವೇ ಸಮೂಹ ಮಾಧ್ಯಮ

2. ಸಮೂಹ ಮಾಧ್ಯಮಕ್ಕೆ ಯಾವುದಾದರೂ ಎರಡು ಉದಾಹರಣೆ ಕೊಡಿ.

ಉ. ದೂರದರ್ಶನ, ರೇಡಿಯೋ, ಅಂಚೆ ಇತ್ಯಾದಿ.

3. ಭೌಗೋಳಿಕ ಮಾಹಿತಿ ವ್ಯವಸ್ಥೆಯು ಯಾವಾಗ ಆರಂಭಗೊಂಡಿತು?

ಉ. 1960ರಲ್ಲಿ ಆರಂಭವಾಯಿತು.

4. ಜಿ.ಪಿ.ಎಸ್.ನ ವಿಸ್ತೃತ ರೂಪವೇನು?

ಉ. ಗ್ಲೋಬಲ್ ಪೋಜಿಶನಿಂಗ್ ಸಿಸ್ಟಂ

5. ಜಿ.ಪಿ.ಎಸ್.ನ್ನು ಏನೆಂದು ಕರೆಯಲಾಗುತ್ತದೆ?

ಉ. ಮಾರ್ಗಸೂಚಿ ಅಥವಾ ಪಾಥ್ ಫೈಂಡರ್

6. ಸಂಪರ್ಕದ ಪ್ರಧಾನ ವಿಧಗಳನ್ನು ಹೆಸರಿಸಿ.

ಉ. ಅಂಚೆ, ದೂರವಾಣಿ, ಇಮೇಲ್ ಫ್ಯಾಕ್ಸ್.

7. 'ದೂರ ಸಂವೇದಿ' ಎಂದರೇನು?

ಉ. ವಸ್ತುಗಳನ್ನು ಭೌತಿಕವಾಗಿ ಸ್ಪರ್ಶಿಸದೆ ದೂರದಿಂದಲೇ ಅವುಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆಯನ್ನು ದೂರ ಸಂವೇದಿ ಎನ್ನುವರು.

## ಅಧ್ಯಾಯ–12
# ನೈಸರ್ಗಿಕ ವಿನಾಶಕಾರಕಗಳು

### ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತದಲ್ಲಿ ಚಂಡಮಾರುತಗಳು ಈ ಅವಧಿಯಲ್ಲಿ ಹೆಚ್ಚಾಗಿ ಸಂಭವಿಸುತ್ತವೆ.

ಉ. ಎ) <u>ಅಕ್ಟೋಬರ್–ನವೆಂಬರ್</u>  ಬಿ) ಜೂನ್–ಜುಲೈ

ಸಿ) ಏಪ್ರಿಲ್–ಮೇ  ಡಿ) ಜುಲೈ–ಆಗಸ್ಟ್

2. ನೈಸರ್ಗಿಕ ವಿನಾಶಕಾರಕಗಳೆಂದರೇನು?

ಉ. ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ ಹಾಗೂ ಆಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳಾಗಿವೆ.

3. ನೈಸರ್ಗಿಕ ವಿನಾಶಕಾರಕಗಳನ್ನು ಹೆಸರಿಸಿ.

ಉ. ಭೂಕಂಪಗಳು, ಪ್ರವಾಹಗಳು, ಕ್ಷಾಮಗಳು, ಚಂಡಮಾರುತಗಳು, ಭೂಕುಸಿತ, ಕರಾವಳಿ ಕೊರೆತ, ಹಿಮಪಾತ ಮುಂತಾದವುಗಳು.

4. ಚಂಡಮಾರುತದ ಯಾವುದಾದರೂ ನಾಲ್ಕು ಪರಿಣಾಮಗಳನ್ನು ತಿಳಿಸಿ.

ಉ. * ಜನಜೀವನದಲ್ಲಿ ಸಂಪೂರ್ಣ ಮಾರ್ಪಾಡಾಗುವುದು.

* ಅಪಾರ ಸಾವು ನೋವು ಸಂಭವಿಸುತ್ತದೆ.
* ಒಳನಾಡಿನ ಜಲರಾಶಿಗಳು ಲವಣಯುಕ್ತವಾಗುತ್ತವೆ.
* ಬೆಳೆಗಳು ನಾಶವಾಗುತ್ತವೆ.

5. ನದಿ ಪ್ರವಾಹಗಳೆಂದರೇನು?

ಉ. ಅತ್ಯಧಿಕ ಮಳೆ ಸುರಿದಾಗ, ಹಿಮಕರಗಿದಾಗ ನದಿಗಳ ನೀರಿನ ಪ್ರಮಾಣವು ಅವುಗಳ ಪಾತ್ರದ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ನದಿದಂಡೆಗಳ ಇಕ್ಕೆಲಗಳಲ್ಲಿ ಉಕ್ಕಿ ಹರಿಯುವುದನ್ನು ನದಿ ಪ್ರವಾಹ ಎನ್ನುವರು.

6. ಪ್ರವಾಹಗಳುಂಟಾಗಲು ಕಾರಣಗಳಾವುವು?

ಉ. * ಅತ್ಯಧಿಕ ಮಳೆ ಬೀಳುವುದು

* ನದಿ ಪಾತ್ರಗಳಲ್ಲಿ ಹೂಳು ತುಂಬುವುದು
* ಅಣೆಕಟ್ಟೆಗಳು ಹಾಗು ಇತರ ಅಡ್ಡಗಟ್ಟೆಗಳು ಒಡೆಯುವುದು.
* ನದಿ ಪಾತ್ರಗಳನ್ನು ಬದಲಾಯಿಸುವುದು.

* ಚಂಡಮಾರುತಗಳು
* ಸಮುದ್ರಗಳಲ್ಲಿ ಭೂಕಂಪಗಳು ಸಂಭವಿಸುವುದು.
* ಅರಣ್ಯನಾಶ, ಅಕ್ರಮ ಭೂ ಬಳಕೆ ಇತ್ಯಾದಿ.

7. ಪ್ರವಾಹಗಳಿಂದಾಗುವ ಪರಿಣಾಮಗಳನ್ನು ತಿಳಿಸಿ.

ಉ. * ಜನರ ಆಸ್ತಿ, ಮನೆ, ಭೂಮಿ ಮತ್ತು ಬೆಳೆಗಳ ಹಾನಿ
* ದೂರಸಂಪರ್ಕ, ವಿದ್ಯುತ್ ಪೂರೈಕೆ, ಸಾರಿಗೆ ಸೌಲಭ್ಯಗಳು ಅಸ್ತವ್ಯಸ್ಥಗೊಳ್ಳುತ್ತವೆ.
* ಮಣ್ಣಿನ ಸವೆತ ಹಾಗೂ ಮರಗಿಡಗಳು ನಾಶವಾಗುತ್ತವೆ.
* ಅನೇಕ ರೋಗಗಳ ಉಲ್ಬಣಕ್ಕೆ ಕಾರಣವಾಗುತ್ತವೆ.

8. ಪ್ರವಾಹ ನಿಯಂತ್ರಣ ಕ್ರಮಗಳನ್ನು ತಿಳಿಸಿ ಅಥವಾ ಪ್ರವಾಹ ನಿಯಂತ್ರಣಕ್ಕಿರುವ ಮಾರ್ಗೋಪಾಯಗಳು ಯಾವುವು?

ಉ. * ನದಿಗಳ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸುವುದು.
* ನದಿಗಳಿಗೆ ಅಣೆಕಟ್ಟೆಗಳನ್ನು ನಿರ್ಮಿಸುವುದು.
* ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸುವುದು.
* ಹೂಳು ತೆಗೆಯುವುದು.

9. ಭೂ ಕುಸಿತ ಎಂದರೇನು?

ಉ. ಪರ್ವತ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕೆಳಕ್ಕೆ ಜಾರುವ ಭೂರಾಶಿಯನ್ನು ಭೂಕುಸಿತ ಎನ್ನಬಹುದು.

10. ಭೂ ಕುಸಿತಕ್ಕೆ ಕಾರಣಗಳನ್ನು ತಿಳಿಸಿ.

ಉ. * ಪರ್ವತ ಪ್ರದೇಶದಲ್ಲಿ ಹರಿಯುವ ನೀರು, ಸಮುದ್ರ ತೀರಗಳಲ್ಲಿ ಅಲೆಗಳು ಭೂಮಿಯನ್ನು ಕೊರೆದು ಇಳಿಜಾರನ್ನು ನಿರ್ಮಿಸುವುದು.
* ಪರ್ವತ ವಲಯಗಳಲ್ಲಿ ರಸ್ತೆ, ರೈಲು ಮಾರ್ಗ, ಕಾಲುವೆ ಮೊದಲಾದವುಗಳನ್ನು ನಿರ್ಮಿಸುವುದು.
* ಜೇಡಿಮಣ್ಣಿನ ಪದರದ ಮೇಲೆ ಸಡಿಲವಾದ ಮಣ್ಣಿನ ಪದರವಿದ್ದಲ್ಲಿ ಇಳಿಜಾರು ಕಡಿದಾಗಿರುವುದು.
* ಗಣಿಗಾರಿಕೆ ಮತ್ತು ಅರಣ್ಯನಾಶ

11. ಭೂ ಕುಡಿತದ ಪರಿಣಾಮಗಳನ್ನು ತಿಳಿಸಿ.

ಉ. * ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿಯಾಗುತ್ತದೆ.
* ಸಾರಿಗೆ ಸಂಚಾರಕ್ಕೆ ಅಡ್ಡಿಯಾಗುತ್ತದೆ.
* ಹಳ್ಳಗಳು ಹಾಗೂ ಅನೇಕ ಸಸ್ಯವರ್ಗಗಳು ಭೂಗತವಾಗುತ್ತವೆ.
* ಅನೇಕ ಜೀವಹಾನಿ ಮತ್ತು ಆಸ್ತಿ ಹಾನಿಯನ್ನುಂಟು ಮಾಡುತ್ತದೆ.

12. ಕಡಲಕೊರೆತ ಎಂದರೇನು?

ಉ. ಸಮುದ್ರದ ಅಲೆಗಳ ಹೊಡೆತದಿಂದ ತೀರ ಪ್ರದೇಶದಲ್ಲಾಗುವ ಭೂಸವೆತವನ್ನು ಕಡಲ ಕೊರೆತ ಎನ್ನುವರು.

13. ಕಡಲ ಕೊರೆತದಿಂದಾಗುವ ಪರಿಣಾಮಗಳನ್ನು ತಿಳಿಸಿ.

ಉ. * ಅಪಾರ ಭೂಪ್ರದೇಶ ಸಮುದ್ರದ ಪಾಲಾಗುವುದು.
* ಮನೆ, ರಸ್ತೆ ಮೊದಲಾದವು ಮುಳುಗಿ ಅಪಾರ ನಷ್ಠ ಉಂಟಾಗುತ್ತದೆ.

14. 'ಭೂಕಂಪ' ಎಂದರೇನು?

ಉ. ಭೂಮಿಯ ಒಳಗಿನ ಆಂತರಿಕ ಶಕ್ತಿಯಿಂದ ಭೂಮಿಯ ಮೇಲ್ಪದರವು ಕಂಪಿಸುವಿಕೆಯನ್ನು 'ಭೂಕಂಪ' ಎನ್ನುವರು.

15. ಭೂಕಂಪ ಉಂಟಾಗಲು ಕಾರಣಗಳನ್ನು ತಿಳಿಸಿ.

ಉ. * ನಗರೀಕರಣ ಭೂಮಿಯ ಬಡಲಲ್ಲಿ ಒತ್ತಡ ಹೆಚ್ಚಾಗುವುದು.
* ಅರಣ್ಯನಾಶ
* ಅಣೆಕಟ್ಟುಗಳ ನಿರ್ಮಾಣ
* ಗಣಿಗಾರಿಕೆಗಳು

16. ಭೂಕಂಪ ಪರಿಣಾಮಗಳನ್ನು ತಿಳಿಸಿ.

ಉ. * ಜನರ ಸಾವು-ನೋವು ಮತ್ತು ಆಸ್ತಿ ಹಾನಿಯಾಗುತ್ತದೆ.
* ಸಾರಿಗೆ ಸಂಪರ್ಕಗಳ ಕಡಿತ
* ರೋಗಗಳು ಹರಡುತ್ತವೆ
* ಸಾಗರದ ಅಲೆಗಳು ದಡಗಳಿಗೆ ಅಪ್ಪಳಿಸುತ್ತದೆ.
* ನದಿಗಳು ದಿಕ್ಕು ಬದಲಿಸುತ್ತವೆ.

17. ಭೂಕಂಪ ವಲಯಗಳಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಯಾವುವು?

ಉ. * ಬಹು ಅಂತಸ್ಥಿನ ಕಟ್ಟಡ ನಿರ್ಮಾಣವನ್ನು ನಿಷೇಧಿಸುವುದು.
* ಹಗುರವಾದ ವಸ್ತುಗಳನ್ನು ಬಳಸಿ ಕಟ್ಟಡಗಳನ್ನು ನಿರ್ಮಿಸುವುದು.
* ಕಟ್ಟಡಗಳು ಸ್ಥಿತಿ ಸ್ಥಾಪಕತ್ವ ಗುಣ ಹೊಂದುವಂತೆ ನಿರ್ಮಿಸುವುದು.
* ಭೂಕಂಪ ಸಂಭವಿಸಿದಾಗ ಶೀಘ್ರವಾಗಿ ವಿದ್ಯುತ್ ಸಂಪರ್ಕವನ್ನು ಕತ್ತರಿಸುವುದು.

18. ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಕೈಗೊಳ್ಳಬಹುದಾದ ಪರಿಹಾರೋಪಾಯಗಳನ್ನು ತಿಳಿಸಿ.

ಉ. ಸಿದ್ಧಪಡಿಸಿದ ಆಹಾರ, ಆಹಾರದ ಹಂಚಿಕೆ, ಶುದ್ಧಕುಡಿಯುವ ನೀರಿನ ಪೂರೈಕೆ, ಔಷಧಿ ಹಂಚಿಕೆ, ತಾತ್ಕಾಲಿಕ ವಸತಿ ವ್ಯವಸ್ಥೆ ಹಾಗು ಅಗತ್ಯ ಮೂಲಭೂತ ಸೌಲಭ್ಯಗಳನ್ನು ತುರ್ತಾಗಿ ಒದಗಿಸುವ ಕ್ರಮಗಳನ್ನು ಕೈಗೊಳ್ಳುವುದು.

# ಅಧ್ಯಾಯ–13
# ಭಾರತದ ಜನಸಂಖ್ಯೆ

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯ

ಉ. ಎ) ಉತ್ತರ ಪ್ರದೇಶ ಬಿ) ಬಿಹಾರ ಸಿ) ರಾಜಸ್ಥಾನ ಡಿ) ಮಹಾರಾಷ್ಟ್ರ

2. ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯ

ಉ. ಎ) ಪಶ್ಚಿಮ ಬಂಗಾಳ ಬಿ) ಬಿಹಾರ ಸಿ) ಕೇರಳ ಡಿ) ಕರ್ನಾಟಕ

3. ಭಾರತದಲ್ಲಿ ಅತಿ ಹೆಚ್ಚು ಸಾಕ್ಷರತೆ ಹೊಂದಿರುವ ರಾಜ್ಯ

ಉ. ಎ) ಬಿಹಾರ ಬಿ) ತಮಿಳುನಾಡು ಸಿ) ಕೇರಳ ಡಿ) ಮಧ್ಯಪ್ರದೇಶ

4. ಭಾರತದಲ್ಲಿ ವರ್ಷಗಳಿಗೊಮ್ಮೆ ಜನಗಣತಿ ನಡೆಸಲಾಗುತ್ತದೆ.

ಉ. ಎ) 5 ವರ್ಷ ಬಿ) 10 ವರ್ಷ ಸಿ) 15 ವರ್ಷ ಡಿ) 20 ವರ್ಷ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. 2011ರ ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ ಎಷ್ಟು?

ಉ. 121 ಕೋಟಿ

2. ವಲಸೆ ಎಂದರೇನು?

ಉ. ಮಾನವನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಾಸಸ್ಥಳವನ್ನು ಬದಲಾಯಿಸುವುದಕ್ಕೆ ವಲಸೆ ಎನ್ನುವರು.

3. ಜನಗಣತಿ ಎಂದರೇನು?

ಉ. ಜನರಿಗೆ ಸಂಬಂಧಿಸಿದ ಸಂಖ್ಯೆ ಹಾಗೂ ವಿಶ್ಲೇಷಣೆಯನ್ನು ಜನಗಣತಿ ಎನ್ನುವರು.

4. ಜನಸಾಂದ್ರತೆ ಎಂದರೇನು?

ಉ. ಒಂದು ಪ್ರದೇಶದಲ್ಲಿ 1 ಚ.ಕಿ.ಮೀನಲ್ಲಿ ವಾಸಿಸುವ ಜನಸಂಖ್ಯೆಯನ್ನು ಜನಸಾಂದ್ರತೆ ಎನ್ನುವರು.

5. ಆಂತರಿಕ ವಲಸೆ ಎಂದರೇನು?

ಉ. ಒಂದು ರಾಷ್ಟ್ರದೊಳಗೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಿ ನೆಲಸುವುದಕ್ಕೆ ಆಂತರಿಕ ವಲಸೆ ಎನ್ನುವರು.

5. ಆಂತರಿಕ ವಲಸೆ ಎಂದರೇನು?

ಉ. ಒಂದು ರಾಷ್ಟ್ರದೊಳಗೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಿ ನೆಲಸುವುದಕ್ಕೆ ಆಂತರಿಕ ವಲಸೆ ಎನ್ನುವರು.

6. ಅಂತರಾಷ್ಟ್ರೀಯ ವಲಸೆ ಎಂದರೇನು?

ಉ. ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಹೋಗಿ ನೆಲಸುವುದಕ್ಕೆ ಅಂತರರಾಷ್ಟ್ರೀಯವಲಸೆ ಎನ್ನುವರು.

**III. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಭಾರತದಲ್ಲಿ ಜನಸಂಖ್ಯೆ ಹೆಚ್ಚಳಕ್ಕೆ ಕಾರಣಗಳನ್ನು ತಿಳಿಸಿ.

ಉ.
* ಬಡತನ
* ಅನಕ್ಷರತೆ
* ವಾಣಿಜ್ಯ ಬೇಸಾಯ
* ತೋಟಗಾರಿಕೆ ಬೇಕಾಯ

2. ವಲಸೆಗೆ ಕಾರಣಗಳನ್ನು ತಿಳಿಸಿ.

ಉ.
* ನೌಕರಿ ಉದ್ದೇಶ
* ವ್ಯಾಪಾರ ಉದ್ದೇಶ
* ಉತ್ತಮ ಜೀವನ
* ಸಾಮಾಜಿಕ ಭದ್ರತೆ
* ಉತ್ತಮ ಆರೋಗ್ಯ

## ಅರ್ಥಶಾಸ್ತ್ರ : ಅಧ್ಯಾಯ–1
# ಅಭಿವೃದ್ಧಿ

### ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. 2011ರ ಜನಗಣತಿ ಪ್ರಕಾರ ಭಾರತದ ಲಿಂಗಾನುಪಾತ

ಉ. ಎ) 933 ಬಿ) 940 ಸಿ) 859 ಡಿ) 917

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಆರ್ಥಿಕ ಅಭಿವೃದ್ಧಿಯ ಮುಖ್ಯ ಗುರಿ ಯಾವುದು?

ಉ. ಮಾನವ ಅಭಿವೃದ್ಧಿ

2. ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ ಇರುವ ಮಾನದಂಡ ಯಾವುದು?

ಉ. ಮಾನವ ಅಭಿವೃದ್ಧಿ ಸೂಚಿ

3. ರಾಷ್ಟ್ರೀಯ ಆದಾಯವನ್ನು ಅರ್ಥೈಸಿರಿ.

ಉ. ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲ ಸರಕು–ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯ.

4. ಮಾನವ ಅಭಿವೃದ್ಧಿ ಸೂಚಿ (HDI)ಯನ್ನು ರೂಪಿಸಿರುವ ಸಂಸ್ಥೆ ಯಾವುದು?

ಉ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (UNDP)

5. ನಿರೀಕ್ಷಿತ ಜೀವಿತಾವಧಿ ಎಂದರೇನು?

ಉ. ದೇಶದ ಜನರು ಬದುಕುಳಿಯಬಹುದಾದ ಸರಾಸರಿ ವಯಸ್ಸು

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಜನರು ಗುಣಮಟ್ಟದ ಜೀವನವನ್ನು ನಡೆಸಲು ಯಾವ ಸೌಲಭ್ಯಗಳು ದೊರೆಯಬೇಕಾಗಿದೆ?

ಉ. ಪೌಷ್ಠಿಕ ಆಹಾರ, ಸಾಕಷ್ಟು ಬಟ್ಟೆ, ವಸತಿ, ಗುಣಾತ್ಮಕ ಶಿಕ್ಷಣ, ಆರೋಗ್ಯದ ಸುರಕ್ಷತೆ, ಶುದ್ಧವಾದ ಕುಡಿಯುವ ನೀರು, ಶುದ್ಧವಾದ ಗಾಳಿ, ಶೌಚಾಲಯ ವ್ಯವಸ್ಥೆ, ಉತ್ತಮ ಪರಿಸರ, ನಿಷ್ಪಕ್ಷಪಾತ ನ್ಯಾಯಿಕ ವ್ಯವಸ್ಥೆ

2. ಮಾನವ ಅಭಿವೃದ್ಧಿಯ ಸೂಚಕಗಳಾವುವು?

ಉ. 1. ನಿರೀಕ್ಷಿತ ಜೀವತಾವಧಿ 2. ಶೈಕ್ಷಣಿಕ ಸಾಧನೆ 3. ಜೀವನ ಮಟ್ಟ

3. ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗುವ ಅಂಶಗಳಾವುವು?

ಉ. ಪೌಷ್ಠಿಕ ಆಹಾರದ ಲಭ್ಯತೆ, ಉತ್ತಮ ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳು, ಶುದ್ಧವಾದ ಪರಿಸರ ಮುಂತಾದವು.

4. ಮಹಿಳಾ ಸಬಲೀಕರಣದ ಅರ್ಥ ತಿಳಿಸಿ.

ಉ. ಪರುಷರಷ್ಟೇ ಮಹಿಳೆಯರನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಬಲರನ್ನಾಗಿ ಮಾಡುವುದು.

# ಅರ್ಥಶಾಸ್ತ್ರ : ಅಧ್ಯಾಯ–2
# ಅರ್ಥ ವ್ಯವಸ್ಥೆ ಮತ್ತು ಸರ್ಕಾರ

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಮೊಟ್ಟ ಮೊದಲು ಆರ್ಥಿಕ ಯೋಜನೆಗಳನ್ನು ಜಾರಿಗೆ ತಂದ ದೇಶ

ಉ. ಎ) <u>ಸೋವಿಯತ್ ರಷ್ಯಾ</u> ಬಿ) ಅಮೇರಿಕಾ
ಸಿ) ಇಂಗ್ಲೆಂಡ್ ಡಿ) ಜರ್ಮನಿ

2. 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಯಾರು?

ಉ. ಎ) <u>ಸರ್.ಎಂ.ವಿಶ್ವೇಶ್ವರಯ್ಯ</u> ಬಿ) ಜವಹರಲಾಲ್ ನೆಹರು
ಸಿ) ಮಹಾತ್ಮ ಗಾಂಧೀಜಿ ಡಿ) ಡಾ.ಎಂ.ಎಸ್.ಸ್ವಾಮಿನಾಥನ್

3. ಭಾರತದ ಹಸಿರು ಕ್ರಾಂತಿಯ ಪಿತಾಮಹ

ಉ. ಎ) ಮಹಾತ್ಮ ಗಾಂಧೀಜಿ ಬಿ) <u>ಎಂ.ಎಸ್.ಸ್ವಾಮಿನಾಥನ್</u>
ಸಿ) ಡಾ. ನಾರ್ಮನ್ ಬೋರ್ಲಾಗ್ ಡಿ) ವರ್ಗಿಸ್ ಕುರಿಯನ್

4. ರಾಷ್ಟ್ರೀಯ ಯೋಜನಾ ಆಯೋಗದ ಅಧ್ಯಕ್ಷರು ಇವರಾಗಿರುತ್ತಾರೆ?

ಉ. ಎ) ರಾಷ್ಟ್ರಪತಿ ಬಿ) ರಾಜ್ಯಪಾಲ
ಸಿ) <u>ಪ್ರಧಾನ ಮಂತ್ರಿ</u> ಡಿ) ಮುಖ್ಯಮಂತ್ರಿ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವ ಸಂಸ್ಥೆ ಯಾವುದು?

ಉ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

2. ಹಸಿರುಕ್ರಾಂತಿ ಎಂದರೇನು?

ಉ. ಆಹಾರ ಧಾನ್ಯಗಳ ಉತ್ಪಾದನೆದಲ್ಲಿ ಆದಂತಹ ಶೀಘ್ರ ಪ್ರಗತಿ.

3. ಸುಗ್ಗಿ ನಂತರದ ತಂತ್ರಜ್ಞಾನ ಎಂದರೇನು?

ಉ. ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತು ಮಾರಾಟದಲ್ಲಿ ಬಳಕೆಗೆ ತರಲಾದ ಸುಧಾರಿತ ತಂತ್ರಜ್ಞಾನ

4. ಜಾಗತೀಕರಣ ಎಂದರೇನು?

ಉ. ಭಾರತದ ಅರ್ಥವ್ಯವಸ್ಥೆಯನ್ನು ವಿಶ್ವದ ಅರ್ಥವ್ಯವಸ್ಥೆಯೊಂದಿಗೆ ಒಗ್ಗೂಡಿಸುವ ಪ್ರಕ್ರಿಯೆ.

5. ಸುಗ್ಗಿ ಪೂರ್ವ ತಂತ್ರಜ್ಞಾನ ಎಂದರೇನು?

ಉ. ಕೃಷಿ ಉತ್ಪಾದನೆಯಲ್ಲಿ ಬಳಸಲಾದ ಸುಧಾರಿತ ತಂತ್ರಜ್ಞಾನ

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಆರ್ಥಿಕ ಯೋಜನೆಯ ಅರ್ಥ ತಿಳಿಸಿ.

ಉ. ಸರ್ಕಾರವು ಕೆಲವು ನಿರ್ದಿಷ್ಟ ಧ್ಯೇಯೋದ್ದೇಶಗಳೊಂದಿಗೆ, ದೇಶದಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ಜನರ ಸುಖವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲು, ಪ್ರಜ್ಞಾಪೂರ್ವಕವಾಗಿ ಮತ್ತು ವಿವೇಕಯುತವಾಗಿ ಜಾರಿಗೊಳಿಸುವ ಪ್ರಕ್ರಿಯೆ.

2. ಪಂಚವಾರ್ಷಿಕ ಯೋಜನೆಯ ಉದ್ದೇಶಗಳೇನು?

ಉ. 1. ಉತ್ಪಾದನೆಯ ಗರಿಷ್ಟ ಮಟ್ಟಕ್ಕೆ ಹೆಚ್ಚಿಸುವುದು.
2. ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
3. ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
4. ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
5. ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು.

3. ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳಾವುವು?

ಉ. * ಗೋಧಿಯ ಹೆಚ್ಚು ಇಳುವರಿ ಕೊಡುವ ಬೀಜಗಳು
* ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆ
* ನೀರಾವರಿ ಸೌಲಭ್ಯಗಳ ವಿಸ್ತರಣೆ.

# ಅರ್ಥಶಾಸ್ತ್ರ : ಅಧ್ಯಾಯ–3
# ಗ್ರಾಮೀಣಾಭಿವೃದ್ಧಿ

## ಕಾರ್ಡ್–1

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ಯಾರು?

ಉ. ಎ) ಜವಹರಲಾಲ್ ನೆಹರು　　ಬಿ) <u>ಮಹಾತ್ಮಗಾಂಧೀಜಿ</u>
ಸಿ) ಡಾ.ಬಿ.ಆರ್.ಅಂಬೇಡ್ಕರ್　　ಡಿ) ಸರ್.ಎಂ.ವಿಶ್ವೇಶ್ವರಯ್ಯ

2. ಪಂಚಾಯತ್ ಸಂಸ್ಥೆಗಳು ಈ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ.

ಉ. ಎ) <u>ಪ್ರಜಾಪ್ರಭುತ್ವ</u>　　ಬಿ) ಸರ್ವಾಧಿಕಾರತ್ವ
ಸಿ) ನಿರಂಕುಶಾಧಿಕಾರತ್ವ　　ಡಿ) ಕೇಂದ್ರೀಕೃತ

3. ಮಹಿಳೆಯರ ಈ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ.

ಉ. ಎ) <u>ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆ</u>
ಬಿ) ಕೃಷಿ ಕ್ಷೇತ್ರದಲ್ಲಿ ಮಾಡುವ ದುಡಿಮೆ
ಸಿ) ಕೈಗಾರಿಕೆಗಳಲ್ಲಿ ಮಾಡುವ ದುಡಿಮೆ
ಡಿ) ಸಾರ್ವಜನಿಕ ಕ್ಷೇತ್ರಗಳಲ್ಲಿ ಮಾಡುವ ದುಡಿಮೆ

### II. ಒಂದು ವಾಕ್ಯದಲ್ಲಿ ಉತ್ತರಿಸಿ.

1. ಮೂರು ಹಂತದ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಹೆಸರಿಸಿ.

ಉ. ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ

2. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.

ಉ. ಇಂದಿರಾ ಆವಾಸ್‌ಯೋಜನೆ, ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ, ಆಶ್ರಯ ಯೋಜನೆ (ಯಾವುದಾದರೂ ಎರಡು)

### III. ಈ ಕೆಳಗಿನ ಪ್ರಶ್ನೆಗಳಿಗೆ ಆರು–ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.

1. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.

ಉ. * ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿದೀಪ, ಶೌಚಾಲಯ, ಶಾಲೆ, ಆಸ್ಪತ್ರೆ, ಮಾರುಕಟ್ಟೆ ಮುಂತಾದ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು.

* ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕ ಶಿಕ್ಷಣ, ತಾಂತ್ರಿಕ ಹಾಗು ವೃತ್ತಿ ತರಬೇತಿಗೆ ಪ್ರೋತ್ಸಾಹ, ಆರೋಗ್ಯ ಮತ್ತು ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದು.
* ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ ಸಾಮಾಜಿಕ ಅರಣ್ಯಗಳ ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳ ಹೆಚ್ಚಿಸುವುದು.
* ಕೆರೆಕಟ್ಟೆಗಳ ನಿರ್ಮಾಣ, ಅವುಗಳ ಹೂಳು ತಗೆಯುವುದು. ಕಿರು ನೀರಾವರಿ ಯೋಜನೆಗಳ ನಿರ್ವಹಣೆ ಮೂಲಕ ಕೃಷಿ ನೀರಾವರಿ ವಿಸ್ತರಿಸುವುದು.
* ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು.
* ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ
* ಗ್ರಾಮೀಣಾಭಿವೃದ್ಧಿಗಾಗಿ ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳ ಏರ್ಪಡಿಸುವುದು.

2. ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಿ.

ಉ. * ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಿರುವುದರಿಂದ ಅಧಿಕಾರ ಚುಕ್ಕಾಣಿ ಹಿಡಿದು ಗ್ರಾಮಗಳ ಅಭಿವೃದ್ಧಿಗೆ ದುಡಿಯುತ್ತಾರೆ.
* ಗ್ರಾಮೀಣ ಭಾಗಗಳಲ್ಲಿ ಮಹಿಳಾ ಸ್ವಸಹಾಯ ಸಂಘ (ಸ್ತ್ರೀ ಶಕ್ತಿಸಂಘ)ಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.
* ಸಂಘಗಳ ಸದಸ್ಯರಾಗಿರುವ ಮಹಿಳೆಯರು ಸುಲಭವಾಗಿ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯಾವಾಗಿ ದುಡಿಯುತ್ತಿದ್ದಾರೆ.
* ಗ್ರಾಮೀಣ ಭಾಗದಲ್ಲಿ ಉಳಿತಾಯ ಸಂಗ್ರಹದಲ್ಲಿ ಮತ್ತು ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆಯಾಗುತ್ತಿದೆ.
* ಹಳ್ಳಿಗಳಲ್ಲಿ ಕುಡಿತ, ಜೂಜು ಮುಂತಾದ ದುಶ್ಚಟಗಳ ತೊಡೆದು ಹಾಕುವಲ್ಲಿ ಮಹಿಳಾ ಸಂಘಗಳು ಮುಖ್ಯ ಪಾತ್ರ ವಹಿಸುತ್ತಿವೆ.
* ಬಾಲ್ಯವಿವಾಹ, ವರದಕ್ಷಿಣೆ, ಜಾತಿಪದ್ಧತಿ, ಮೂಢನಂಬಿಕೆ, ಮಹಿಳೆ ಮತ್ತು ಮಕ್ಕಳ ಶೋಷಣೆ ಮೊದಲಾದ ಸಾಮಾಜಿಕ ಪಿಡುಗುಗಳ ವಿರುದ್ಧ ಸಂಘಟಿತ ಹೋರಾಟ ಮಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.
* ಸ್ವಚ್ಛ ಹಾಗು ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ನೆರವಾಗುತ್ತಾರೆ.

## ಅರ್ಥಶಾಸ್ತ್ರ : ಅಧ್ಯಾಯ–4
# ಸಾರ್ವಜಿಕ ಹಣಕಾಸು ಮತ್ತು ಆಯ–ವ್ಯಯ

### ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಪ್ರಜೆಗಳು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾದ ಕಡ್ಡಾಯ ವಂತಿಗೆ

ಉ. ಎ) ದೇಣಿಗೆ ಬಿ) <u>ತೆರಿಗೆ</u> ಸಿ) ಸಹಾಯ ಧನ ಡಿ) ಪ್ರೋತ್ಸಾಹಧನ

**II. ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸಾರ್ವಜನಿಕ ಹಣಕಾಸು ಎಂದರೇನು?

ಉ. ಸರ್ಕಾರದ ಆದಾಯ ವೆಚ್ಚ ಹಾಗು ಸಾಲಗಳ ನಿರ್ವಹಣೆಯನ್ನು ಕುರಿತ ಅಧ್ಯಯನ

2. ಸಾರ್ವಜನಿಕ ವೆಚ್ಚ ಎಂದರೇನು?

ಉ. ಸರ್ಕಾರವು ರಾಷ್ಟ್ರ ರಕ್ಷಣೆ, ಆಡಳಿತ ನಿರ್ವಹಣೆ, ಆರ್ಥಿಕ ಅಭಿವೃದ್ಧಿ ಹಾಗೂ ಜನರ ಯೋಗಕ್ಷೇಮದ ದೃಷ್ಠಿಯಿಂದ ವಿವಿಧ ಚಟುವಟಿಕೆಗಳಿಗಾಗಿ ಹಣವನ್ನು ವೆಚ್ಚ ಮಾಡುವುದು.

3. ಪ್ರತ್ಯಕ್ಷ ತೆರಿಗೆ ಎಂದರೇನು?

ಉ. ಸರ್ಕಾರ ಯಾರ ಮೇಲೆ ತೆರಿಗೆಯನ್ನು ವಿಧಿಸುತ್ತದೆಯೋ ಅವರೇ ಆ ಹೊರೆಯನ್ನು ಹೊರುವುದು.

4. ಪರೋಕ್ಷ ತೆರಿಗೆ ಎಂದರೇನು?

ಉ. ಸರ್ಕಾರವು ವಿಧಿಸುವ ತೆರಿಗೆಯ ಹೊರೆಯನ್ನು ಇತರರ ಮೇಲೆ ವರ್ಗಾಯಿಸುವುದು.

5. ಕಂದಾಯ ಆದಾಯ ಎಂದರೇನು?

ಉ. ಸರ್ಕಾರವು ವಿವಿಧ ತೆರಿಗೆಗಳು ಮತ್ತು ತೆರಿಗೆಯೇತರ ಮೂಲಗಳಿಂದ ಸಂಗ್ರಹಿಸುವ ಆದಾಯ

**III. ಈ ಕೆಳಗಿನ ಪ್ರಶ್ನೆಗಳಿಗೆ ಆರು–ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

ಉ.
* ದೇಶದ ನೈಸರ್ಗಿಕ ಸಂಪತ್ತು, ಶ್ರಮ ಮತ್ತು ಭೌತಿಕ ಬಂಡವಾಳವು ಉತ್ಪಾದಕರ ನಡುವೆ ಸಮರ್ಪಕವಾಗಿ ಹಂಚಿಕೆಯಾಗುವಂತೆ ತಂತ್ರಗಳ ರೂಪಿಸುವುದು.
* ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.
* ಆದಾಯವು ಪ್ರಜೆಗಳಿಗೆ ಸಮಾನವಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳುವುದು.
* ಕೃಷಿ, ಸಣ್ಣ ಕೈಗಾರಿಕೆ, ಮೂಲ ಸೌಕರ್ಯ ವಲಯಗಳ ಬಂಡವಾಳ ಹೂಡಿಕೆ ಹೆಚ್ಚಳ.
* ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸುವುದು.
* ಆರ್ಥಿಕ ಸ್ಥಿರತೆ ಸಾಧಿಸುವುದು..

# ವ್ಯವಹಾರ ಅಧ್ಯಯನ : ಅಧ್ಯಾಯ–1
# ಬ್ಯಾಂಕು ವ್ಯವಹಾರಗಳು

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಬ್ಯಾಂಕುಗಳ ಬ್ಯಾಂಕ್

ಉ. ಎ) ಇಂಡಿಯನ್ ಬ್ಯಾಂಕ್ ಬಿ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
ಸಿ) ರಿಸರ್ವ್ ಬ್ಯಾಂಕ್ ಡಿ) ಕೆನರಾ ಬ್ಯಾಂಕ್

2. ನಮ್ಮ ದೇಶದ ಕೇಂದ್ರ ಬ್ಯಾಂಕ್ ಇದಾಗಿದೆ.

ಉ. ಎ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬಿ) ರಿಸರ್ವ್ ಬ್ಯಾಂಕ್
ಸಿ) ಸಿಟಿ ಬ್ಯಾಂಕ್ ಡಿ) ಅಲಹಾಬಾದ್ ಬ್ಯಾಂಕ್

**II. ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಬ್ಯಾಂಕ್ ಎಂಬ ಪದ ಯಾವ ಇಟಾಲಿಯನ್ ಮೂಲ ಪದದಿಂದ ಬಂದಿದೆ?

ಉ. ಬ್ಯಾಂಕೋ

2. ಬ್ಯಾಂಕ್ ವ್ಯವಹಾರ ಎಂದರೇನು?

ಉ. ಬ್ಯಾಂಕಿನಲ್ಲಿಯ ಸೇವೆಗಳನ್ನು ಜನರು ಉಪಯೋಗಿಸಿಕೊಳ್ಳುವ ವ್ಯವಹಾರವನ್ನು ಬ್ಯಾಂಕ್ ವ್ಯವಹಾರ ಎನ್ನುವರು. ಅಥವಾ ಯಾವುದೇ ಒಂದು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಲೆಕ್ಕಗಳನ್ನು ಬ್ಯಾಂಕು ವ್ಯವಹಾರ ಎನ್ನುವರು.

3. ಚಾಲ್ತಿ ಖಾತೆಯನ್ನು ಸಾಮಾನ್ಯವಾಗಿ ಯಾರು ತೆರೆಯುತ್ತಾರೆ?

ಉ. ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ.

**III. ಈ ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬ್ಯಾಂಕುಗಳ ಸೇವೆಗಳನ್ನು ಪಟ್ಟಿಮಾಡಿರಿ.

ಉ.
* ಜಮಾ ಕಾರ್ಡ್‌ಗಳನ್ನು ಕೊಡುವುದು.
* ಖಾಸಗಿಸಾಲಗಳು
* ಮನೆಕಟ್ಟಲು ಅಥವಾ ವಾಹನ ಖರೀದಿಗೆ ಸಾಲ
* ಪರಸ್ಪರ ನಿಧಿ ನಿರ್ವಹಣೆ
* ವ್ಯಾಪಾರಕ್ಕೆ ಬೇಕಾದ ಸಾಲ
* ಭದ್ರತಾ ಅಥವಾ ರಕ್ಷಣಾ ಕಪಾಟು

* ಭರವಸೆ ಸೇವೆಗಳು
* ಸಹಿಗಳಿಗೆ ಜವಾಬ್ದಾರಿ

2. ಅಂಚೆ ಇಲಾಖೆಯು ಅನೇಕ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ ಎಂದು ಹೇಗೆ ಹೇಳುವಿರಿ?

ಉ. * ರಾಷ್ಟ್ರೀಯ ಉಳಿತಾಯ ಪತ್ರಗಳು
* ಅಂಚೆ ಉಳಿತಾಯ ಖಾತೆ
* ಕಿಸಾನ್ ವಿಕಾಸ್ ಪತ್ರ
* ಮಾಹೆಯಾನ ತೀರು ಠೇವಣಿ
* ಅಂಚೆವಿಮೆ
* ನಿವೃತ್ತಿ ವೇತನ
* ಹಣವನ್ನು ವರ್ಗಾಯಿಸುವುದು.

ಇತ್ಯಾದಿ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ.

# ಅಧ್ಯಾಯ–2
# ವಿಮೆ

## ಕಾರ್ಡ್–1

**I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

1. ವಿಮೆಯಲ್ಲಿ ನಷ್ಟ ಪರಿಹಾರ ಕೊಡಲು ಒಪ್ಪುವವನು

ಉ. ಎ) ವಿಮಾದಾರ ಬಿ) ವಿಮಾ ಏಜೆಂಟ್

ಸಿ) ವಿಮಾ ಕರ್ತ ಡಿ) ವಿಮಾ ನಿರ್ದೇಶಕ

2. ವಿಮೆಯಲ್ಲಿ ನಷ್ಟ ಪರಿಹಾರ ಪಡೆಯುವವನು

ಉ. ಎ) ವಿಮಾ ನಿರ್ದೇಶಕ ಬಿ) ವಿಮಾಕರ್ತ

ಸಿ) ವಿಮಾ ಏಜೆಂಟ್ ಡಿ) ವಿಮಾದಾರ

3. ಇದು ಸಾಮಾನ್ಯವಿಮೆಗೆ ಸೇರಿಲ್ಲ

ಉ. ಎ) ವಾಹನ ವಿಮೆ ಬಿ) ಮನುಷ್ಯನ ಜೀವದ ವಿಮೆ

ಸಿ) ಮನೆಯ ಮೇಲಿನ ವಿಮೆ ಡಿ) ಬೆಳೆವಿಮೆ

4. ಈ ಕೆಳಗಿನ ಯಾವುದು ದೊರೆತ ನಂತರವೇ ವಿಮಾ ಪಾಲಿಸಿ ಅಂಗೀಕಾರವಾಗಿದೆ ಎಂದು ಅರ್ಥ

ಉ. ಎ) ನಾಮಿನೇಷನ್ ಫಾರಂ ಬಿ) ಪ್ರಪೋಸಲ್ ಫಾರಂ

ಸಿ) ವಿಮಾಪಾಲಿಸಿ ಅರ್ಜಿ ಡಿ) ವಿಮಾಬಾಂಡ್

**II. ಒಂದು ವಾಕ್ಯದಲ್ಲಿ ಉತ್ತರಿಸಿ.**

1. ವಿಮೆ ಎಂದರೇನು?

ಉ. ಒಂದು ನಿರ್ಧಿಷ್ಟ ಹಣ ಮೌಲ್ಯದ ಕಂತನ್ನು ಪಾವತಿಸಿ ಒಬ್ಬ ಮನುಷ್ಯನು ತನಗಾಗಲೀ ಅಥವಾ ತನ್ನ ವಸ್ತುಗಳಿಗಾಗಲಿ ಒಳಗಾಗುವ ಅಪಾಯಗಳಿಂದ ಅಥವಾ ಹಾನಿಗಳಿಂದ ರಕ್ಷಿಸಿಕೊಳ್ಳಲು ಒಂದು ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವುದು.

2. ವಿಮಾ ಪಾಲಿಸಿ ಎಂದರೇನು?

ಉ. ವಿಮಾ ಕರ್ತ ಮತ್ತು ವಿಮಾದಾರನ ನಡುವೆ ಏರ್ಪಡುವ ಒಂದು ಬರವಣಿಗೆ ಮೂಲಕದ ಕರಾರು ಪತ್ರ.

**III. ಈ ಕೆಳಗಿನ ಪ್ರಶ್ನೆಗಳಿಗೆ ಆರು–ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

1. ವಿಮೆಯು ಅತ್ಯಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಈ ಹೇಳಿಕೆಯನ್ನು ಸಮರ್ಥಿಸಿರಿ.

ಉ. * ಅಪಾಯ, ಹಾನಿ ಅಥವಾ ಮರಣ ಸಂಭವನೀಯತೆಯನ್ನು ರಕ್ಷಿಸುತ್ತದೆ.

* ಕಡ್ಡಾಯ ಉಳಿತಾಯಕ್ಕೆ ಪ್ರೋತ್ಸಾಹ
* ವಿಮಾದಾರನ ಅಭೀಷ್ಟತೆಯನ್ನು ಈಡೇರಿಸಲು ಸಹಾಯ.
* ಜೀವ ಮತ್ತು ವಸ್ತು ನಷ್ಟಗಳನ್ನು ಭರಿಸುವುದರಿಂದ ವಿಮಾದಾರನಿಗೆ ಶಾಂತಿ
* ಜೀವನಷ್ಟದ ನಿವಾರಣೆಗೆ ಸಹಾಯ
* ಸಾಮಾಜಿಕ ಒಳತಿಗಾಗಿ ಸಹಾಯ
* ಹಣದ ಠೇವಣಿಗಳಿಗೆ ಪ್ರೋತ್ಸಾಹ
* ಋಣ ಸಂದಾಯಗಳಿಗೆ ಅನುವು
* ಸಾಲ ನೀಡಿಕೆ
* ತೆರಿಗೆ ವಿನಾಯಿತಿಗೆ ಸಹಾಯ

2. ವಿಮಾ ಸಂಸ್ಥೆಗಳು ಒಬ್ಬ ವ್ಯಕ್ತಿಗೆ ಅತ್ಯಂತ ಅನುಕೂಲಕಾರಿಯಾಗಿವೆ ಎಂದು ಹೇಗೆ ಹೇಳುವಿರಿ?

ಉ. * ವ್ಯಕ್ತಿಗೆ ವಿಪತ್ತು/ಅನಾಹುತ ಸಂಭವಿಸಿದಾಗ ಕುಟುಂಬಕ್ಕೆ ತಕ್ಷಣಕ್ಕೆ ಬೇಕಾದ ಹಣದ ಸಂರಕ್ಷಣೆಗಾಗಿ
* ಮಕ್ಕಳ ವಿದ್ಯಾಭ್ಯಾಸ ಅಥವಾ ಇತರೆ ಅವಶ್ಯಕತೆಗಾಗಿ
* ನಿವೃತ್ತಿ ಹೊಂದಿದ ಮೇಲೆ ಒಂದು ನಿರಂತರ ಆದಾಯದ ಮೂಲಕ್ಕಾಗಿ/ಉಳಿತಾಯದ ಯೋಜನೆಗಾಗಿ
* ಏನಾದರೂ ಅಪಘಾತ/ಗಂಭೀರ ಖಾಯಿಲೆಯಿಂದಾಗಿ ಆದಾಯ ಕುಂಠಿತಗೊಂಡಾಗ ಬೇಕಾಗುವ ಹಣದ ಭರವಸೆಗಾಗಿ
* ಜೀವನ ಶೈಲಿಯ ಬದಲಾವಣೆಗಳಿಗೆ ಅನುಗುಣವಾಗಿ ಅಥವಾ ಇತರೆ ಏನಾದರೂ ಹಣದ ಅನಿಶ್ಚಿತತೆಯ ಸಂಭವಗಳಿಗಾಗಿ

3. ವಿಮಾ ಪಾಲಿಸಿಯ ಪ್ರಕಾರಗಳಾವುವು?

* ರಸ್ತೆ ಸಾರಿಗೆಗಳು ರೈಲು ಸಾರಿಗೆಗಳಿಗೆ ಪೂರಕ
* ಎಲ್ಲಾ ಬಗೆಯ ಸ್ಥಳಗಳಿಗೂ ಸಂಪರ್ಕ ಒದಗಿಸಬಹುದು.

2. ರಸ್ತೆ ಸಾರಿಗೆಯ ತೊಡಕುಗಳೇನು?

ಉ. * ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಕೆಲವು ವೇಳೆ ಅನುಪಯುಕ್ತ
* ಪರಿಸರ ಮಾಲಿನ್ಯ ಉಂಟುಮಾಡುತ್ತದೆ.
* ವಾಹನ ದಟ್ಟಣೆ ಹಾಗೂ ಅಪಘಾತಗಳಿಗೂ ಕಾರಣವಾಗುತ್ತದೆ.
* ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಅಸಮರ್ಪಕ
* ಮಳೆ, ಪ್ರವಾಹ ಮತ್ತು ಚಂಡಮಾರುತಗಳಿಂದ ಹಾಳಾಗುತ್ತಿರುತ್ತದೆ.
* ರಸ್ತೆಗಳ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆ ಇದೆ.

## ಅಧ್ಯಾಯ–10

# ಭಾರತದ ಪ್ರಮುಖ ಕೈಗಾರಿಕೋದ್ದಿಮೆಗಳು

### ಕಾರ್ಡ್–2

## I. ಸರಿಯಾದ ಆಯ್ಕೆಯನ್ನು ಆರಿಸಿ ಬರೆಯಿರಿ.

1. ಸರಿಯಾದ ಉತ್ತರದ ಗುಂಪು

ಉ.

| ಎ | ಬಿ |
|---|---|
| 1) ಪ್ರಥಮ ಉಕ್ಕಿನ ಕೈಗಾರಿಕೆ | ಎ) 1840 |
| 2) ಮೊದಲ ಹತ್ತಿ ಕೈಗಾರಿಕೆ | ಬಿ) 1991 |
| 3) ಮೊದಲ ಕಾಗದದ ಕೈಗಾರಿಕೆ | ಸಿ) 1854 |
| 4) ಸಾಫ್ಟ್‌ವೇರ್ ಟೆಕ್ನಾಲಜಿ ಸ್ಥಾಪನೆ | ಡಿ) 1870 |

| | | | |
|---|---|---|---|
| ಎ) 1–ಡಿ | 2–ಸಿ | 3–ಬಿ | 4–ಎ |
| ಬಿ) 1–ಎ | 2–ಬಿ | 3–ಡಿ | 4–ಸಿ |
| ಸಿ) 1–ಬಿ | 2–ಸಿ | 3–ಸಿ | 4–ಎ |
| ಡಿ) 1–ಡಿ | 2–ಸಿ | 3–ಎ | 4–ಬಿ |

## II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.

1. ದ ಇಂಡಿಯನ್ ಐರನ್ ಅಂಡ್ ಸ್ಟೀಲ್ ಕಂಪನಿಯು ಉಕ್ಕಿನ ಸ್ಥಾವರವನ್ನು ಎಲ್ಲಿ ಸ್ಥಾಪಿಸಲಾಯಿತು?

ಉ. ಪಶ್ಚಿಮ ಬಂಗಾಳದ ಬರ್ನ್‌ಪುರ

2. ಜವಳಿ ಕೈಗಾರಿಕೆ ಎಂದರೇನು?

ಉ. ವಿವಿಧ ಬಗೆಯ ನಾರುಗಳಿಂದ ಬಟ್ಟೆಯನ್ನು ತಯಾರಿಸುವ ಕೈಗಾರಿಕೆ

3. ಜವಳಿ ಕೈಗಾರಿಕೆಯ ಬಗೆಗಳಾವುವು?

ಉ. ಹತ್ತಿ ಕೈಗಾರಿಕೆ, ರೇಷ್ಮೆ ಕೈಗಾರಿಕೆ, ಸೆಣಬಿನ ಕೈಗಾರಿಕೆ, ಉಣ್ಣೆ ಕೈಗಾರಿಕೆ

4. ಕೈಗಾರಿಕೆ ಎಂದರೇನು?

ಉ. ಕಚ್ಚಾ ವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ಪರಿವರ್ತಿಸುವ ಮಾನವನ ಎಲ್ಲಾ ಉದ್ಯೋಗಗಳು

5. ದೇಶದಲ್ಲಿ ಸ್ಥಾಪಿತವಾದ ಮೊದಲ ಜವಳಿ ಕೈಗಾರಿಕೆ ಎಲ್ಲಿದೆ?

ಉ. ಮುಂಬೈ ಮತ್ತು ಬರೂಚ್

6. ಮುಂಬೈನ್ನು ಭಾರತದ ಮ್ಯಾಂಚೆಸ್ಟರ್ ಎನ್ನಲು ಕಾರಣವೇನು?

ಉ. ಇಲ್ಲಿ ಅತಿ ಹೆಚ್ಚು ಹತ್ತಿ ಗಿರಣಿಗಳು ಸ್ಥಾಪಿತವಾಗಿರುವುದರಿಂದ

7. ಭಾರತವು ಸಕ್ಕರೆಯನ್ನು ಯಾವ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದೆ?
ಉ. ಯು.ಎಸ್.ಎ., ಬ್ರಿಟನ್, ಇರಾನ್, ಕೆನಡ, ಮಲೇಷಿಯಾ.

8. ನ್ಯೂಸ್ ಪ್ರಿಂಟ್ ಕಾಗದವನ್ನು ಭಾರತ ಯಾವ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ?
ಉ. ನಾರ್ವೆ, ಸ್ವೀಡನ್, ಕೆನಡಾ, ಯು.ಎಸ್.ಎ

9. ದೇಶದಲ್ಲಿ ಪ್ರಥಮ ಉಕ್ಕಿನ ಕೈಗಾರಿಕೆ ಎಷ್ಟರಲ್ಲಿ ಸ್ಥಾಪಿತವಾಯಿತು?
ಉ. 1870

10. ದ ಮೈಸೂರ್ ಅಂಡ್ ಸ್ಟೀಲ್ ಕಂಪನಿ ಸ್ಥಾಪನೆಗೊಂಡ ವರ್ಷ ಯಾವುದು?
ಉ. 1923

11. ಭಾರತದ 'ಕಾಟನೋ ಪೋಲಿಸ್' ಯಾವುದು?
ಉ. ಮುಂಬೈ

12. ಇತ್ತೀಚೆಗೆ ಶೋಧಿಸಲ್ಪಟ್ಟ ಲೋಹ ಯಾವುದು?
ಉ. ಅಲ್ಯೂಮಿನಿಯಂ

13. ದೇಶದ ಮೊದಲ ಕಾಗದ ಕೈಗಾರಿಕೆ ಸ್ಥಾಪಿತಗೊಂಡ ಸ್ಥಳ ಯಾವುದು?
ಉ. ಕೊಲ್ಕತ್ತಾದ ಬಳಿ ಬಾಲ್ವಿ ನಗರ

14. ಮಾಹಿತಿ ತಂತ್ರಜ್ಞಾನ ಕೈಗಾರಿಕೆಯನ್ನು ಜ್ಞಾನಧಾರಿತ ಕೈಗಾರಿಕೆ ಎಂದು ಕರೆಯಲು ಕಾರಣವೇನು?
ಉ. ಜ್ಞಾನಧಾರಿತಾ ಕೈಗಾರಿಕೆ

15. ಮಾಹಿತಿ ತಂತ್ರ ಜ್ಞಾನ ಕೈಗಾರಿಕೆಯನ್ನು ಜ್ಞಾನಾಧಾರಿತ ಕೈಗಾರಿಕೆ ಎಂದು ಕರೆಯಲು ಕಾರಣವೇನು?
ಉ. ಈ ಕೈಗಾರಿಕೆಗಳಿಗೆ ಮಾನವ ಜ್ಞಾನವೇ ಆಧಾರವಾಗಿರುವುದರಿಂದ

16. ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ ಸ್ಥಾಪನೆಗೊಂಡ ಸ್ಥಳ ಯಾವುದು?
ಉ. ಜಮ್‌ಷಡ್‌ಪುರ

17. ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆಗೊಂಡ ವರ್ಷ ಯಾವುದು?
ಉ. 1991

18. ಜೈವಿಕ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆ ಎಷ್ಟರಲ್ಲಿ ಸ್ಥಾಪಿತವಾಯಿತು?
ಉ. 1980

## ಅಧ್ಯಾಯ–11

## ಸಂಪರ್ಕ

### ಕಾರ್ಡ್–2

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1. ಜಿ.ಐ.ಎಸ್. (ಭೌಗೋಳಿಕ ಮಾಹಿತ ವ್ಯವಸ್ಥೆ)ನ ಮೂಲ ಉದ್ದೇಶವೇನು?

ಉ. ಭೂ ಮೇಲ್ಮೈನ ವೈವಿಧ್ಯಮಯ ಅಂತಿ ಅಂಶಗಳನ್ನು ಸಂಸ್ಕರಿಸುವುದು ಹಾಗೂ ವಿಶ್ಲೇಷಿಸುವುದು.

2. ಭೌಗೋಳಿಕ ಮಾಹಿತ ವ್ಯವಸ್ಥೆ ನಕ್ಷೆಗಳ ರಚನೆಯ ಮುಖ್ಯ ತಂತ್ರಾಂಶಗಳಾವುವು?

ಉ. ಆ್ಯಪಲ್, ಆರ್ಕ್‌ಇನ್‌ಫೋ, ಆ್ಯಟೋಕ್ಯಾಡ್, ಮ್ಯಾಪ್ ಇನ್‌ಫೋ, ಆರ್ಕ್‌ವ್ಯೂ

3. ಜಿ.ಪಿ.ಎಸ್.ನ ಮುಖ್ಯ ಕಾರ್ಯವೇನು?

ಉ. ಭೂ ಮೇಲ್ಮೈನಲ್ಲಿನ ಯಾವುದೇ ಒಂದು ಸ್ಥಿರವಾಗಿರುವ, ಚಲಿಸುತ್ತಿರುವ ವಸ್ತು, ವ್ಯಕ್ತಿಯ ಸ್ಥಾನವನ್ನು ಅಕ್ಷಾಂಶ ಮತ್ತು ರೇಖಾಂಶಗಳ ಮೂಲಕ ನಿಖರವಾಗಿ ಸೂಚಿಸುವುದರ ಜೊತೆಗೆ ವಸ್ತುವಿನ ಸ್ಥಾನದ ಎತ್ತರವನ್ನು ಸೂಚಿಸುವುದಾಗಿದೆ.

4. ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿ.

ಉ. * ವಿವಿಧ ಪ್ರದೇಶದ ವಿಷಯಗಳನ್ನು ಜನರಿಗೆ ತಿಳಿಸಲು ಸಹಾಯಕ.
* ಸರ್ಕಾರದ ನೀತಿ ನಿಯಮಗಳನ್ನು ತಿಳಿಸುವುದರ ಜೊತೆಗೆ ಅವುಗಳ ಬಗ್ಗೆ ತಿಳುವಳಿಕೆ ಮೂಡಿಸುತ್ತದೆ.
* ವ್ಯವಸಾಯ, ಕೈಗಾರಿಕೆ, ಸೇವಾ ವಲಯಗಳ ಮಾಹಿತಿ ನೀಡುತ್ತವೆ.
* ವಾಣಿಜ್ಯ ವ್ಯಾಪಾರದ ಅಭಿವೃದ್ಧಿಗೆ ಸಹಾಯಕ
* ದೇಶದ ಏಕತೆ ಹಾಗು ಸ್ಥಿರತೆ ಕಾಪಾಡಲು ಅನುಕೂಲ.

5. ಭೌಗೋಳಿಕ ಮಾಹಿತಿ ವ್ಯವಸ್ಥೆಯ ಉಪಯೋಗಗಳೇನು?

ಉ. * ಈ ತಂತ್ರಜ್ಞಾನ ಆಧಾರಿತ ನಕ್ಷೆಗಳು ಆಕರ್ಷಕ ಹಾಗು ಸ್ಪಷ್ಟ ಮಾಹಿತಿ ನೀಡುತ್ತವೆ.
* ವಿವಿಧ ಬಗೆಯ ಭೌಗೋಳಿಕ, ಸಾಮಾಜಿಕ ಹಾಗು ಆರ್ಥಿಕ ಭೂ ಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು ಮತ್ತು ಅವುಗಳ ಮಾದರಿ ರಚಿಸಬಹುದು.
* ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಗೆ ಸಹಾಯಕ.
* ಈ ನಕ್ಷೆಗಳನ್ನು ನಕ್ಷಾ ಶಾಸ್ತ್ರಜ್ಞರ ನೆರವಿಲ್ಲದೆ ಶೀಘ್ರವಾಗಿ ಅಗತ್ಯಕ್ಕೆ ತಕ್ಕಂತೆ ಪಡೆಯಬಹುದು ಮತ್ತು ಮಾರ್ಪಡಿಸಬಹುದು.

6. ಜಿ.ಪಿ.ಎಸ್. ವ್ಯವಸ್ಥೆಯ ಉಪಯೋಗಗಳಾವುವು?

ಉ. * ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕಂಡುಕೊಳ್ಳಲು ಸಹಾಯಕ.

* ಅರಣ್ಯ ಹಾಗು ಪರ್ವತ ಚಾರಣ ಮಾಡುವವರಿಗೆ ಸಹಾಯಕ.
* ಸೈನಿಕರು, ವೈಮಾನಿಕರು, ಮೀನುಗಾರರು, ನಾವಿಕರಿಗೆ ಸಹಾಯಕ.
* ಸಾರಿಗೆ ಸಿಬ್ಬಂದಿ ನಿರ್ವಹಣೆಗೂ ಸಹಾಯಕ.

7. ದೂರ ಸಂವೇದಿ ತಂತ್ರಜ್ಞಾನದ ನಾಲ್ಕು ಉಪಯೋಗ ತಿಳಿಸಿ.

ಉ. * ಈ ಚಿತ್ರಗಳಿಂದ ನಿರ್ಧಿಷ್ಟ ಅವಧಿಯ ನೈಜ ಹಾಗು ಸ್ಪಷ್ಠ ಮಾಹಿತಿ ಲಭ್ಯ
* ಇದು ಭೂ ಮೇಲ್ಮೈನ ಸರ್ವೇಕ್ಷಣೆಗಿಂತ ಶೀಘ್ರ, ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣಾ ವಿಧಾನ.
* ಈ ಮಾಹಿತಿಗಳನ್ನು ಕಂಪ್ಯೂಟರ್ ಮೂಲಕ ಸುಲಭವಾಗಿ ವಿಶ್ಲೇಷಿಸಲು ಸಾಧ್ಯ.
* ಹವಾಮಾನದ ತೊಂದರೆ ಹಾಗು ಭೂ ಮೇಲ್ಮೈನ ಅಡಚಣೆಗಳಿದ್ದರೂ ಉಪಗ್ರಹಗಳಿಂದ ಚಿತ್ರಗಳನ್ನು ಪಡೆಯಬಹುದು.

# ಅಧ್ಯಾಯ–12

# ನೈಸರ್ಗಿಕ ವಿನಾಶಕಾರಕಗಳು

## ಕಾರ್ಡ್–2

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1. ಚಂಡಮಾರುತಗಳು ಬಂಗಾಳಕೊಲ್ಲಿಯಲ್ಲಿ ಉಂಟಾಗುತ್ತವೆ. ಏಕೆ?

ಉ. * ಬಂಗಾಳಕೊಲ್ಲಿಯ ಮೂರು ಕಡೆ ಭೂ ಭಾಗವಿದೆ

* ಭೂಮಿ ಮತ್ತು ಸಾಗರ ಭಾಗಗಳ ನಡುವೆ ಉಷ್ಣಾಂಶ ಹಾಗು ಒತ್ತಡದಲ್ಲಿ ತೀವ್ರ ವ್ಯತ್ಯಾಸ ಉಂಟಾಗುತ್ತದೆ.

2. ಚಂಡಮಾರುತಗಳ ಹಾನಿಯನ್ನು ತಡೆಗಟ್ಟಲು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಸೂಚಿಸುವಿರಿ.

ಉ. * ಅಪಾಯಕಾರಿ ತಗ್ಗು ಪ್ರದೇಶದ ಜನರನ್ನು ಸ್ಥಳಾಂತರಿಸುವುದು.

* ವಿದ್ಯುಜನಕ ಯಂತ್ರಗಳು, ದೋಣಿಗಳು, ಹೆಲಿಕಾಪ್ಟರ್ ಮೊದಲಾದ ಸಾರಿಗೆಗಳನ್ನು ಸಜ್ಜಾಗಿರಿಸುವುದು.
* ರೈಲು–ಬಸ್ಸು ಮೊದಲಾದ ಮಾರ್ಗಗಳನ್ನು ಚಂಡಮಾರುತ ಪ್ರಭಾವ ವಲಯದಿಂದ ಬದಲಾಯಿಸುವುದು.
* ಸಮೂಹ ಮಾಧ್ಯಮಗಳ ಮೂಲಕ ಜನರಿಗೆ ನಿರಂತರ ಮಾಹಿತಿ ನೀಡುವುದು.
* ಅಗತ್ಯ ಸೇನಾ ತುಕಡಿಗಳನ್ನು ಸಿದ್ಧಗೊಳಿಸುವುದು.
* ಔಷಧ ಹಾಗು ಇತರ ವೈದ್ಯಕೀಯ ನೆರವಿಗಾಗಿ ಸಿದ್ಧರಾಗಿರುವುದು.
* ಸಾಕಷ್ಟು ಸಿಹಿ ನೀರು ಹಾಗೂ ಉಡುಪುಗಳನ್ನು ಸಂಗ್ರಹಿಸಿಡುವುದು.

3. ಕಡಲ ಕೊರೆತ ತಡೆಗಟ್ಟಲು ನೀವು ಯಾವ ಪರಿಹಾರ ಕ್ರಮಗಳನ್ನು ಸೂಚಿಸುವಿರಿ.

ಉ. * ತೀರಪ್ರದೇಶದಲ್ಲಿ ಮರಳು ತೆಗೆಯುವುದನ್ನು ನಿಯಂತ್ರಿಸುವುದು.

* ಅಲೆಗಳು ಪ್ರಬಲವಾಗಿರುವ ಕಡೆ ತಡೆಗೋಡೆಯನ್ನು ನಿರ್ಮಿಸುವುದು.
* ದಪ್ಪ ಬಂಡೆಗಳ ರಾಶಿ ಹಾಕಿ ಅಲೆಗಳ ಪ್ರಭಾವವನ್ನು ಕಡಿಮೆ ಮಾಡುವುದು.
* ತೀರದುದ್ದಕ್ಕೂ 'ಮ್ಯಾಂಗ್ರೋವ್' ಅರಣ್ಯಗಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸುವುದು.

4. ಸಂಪರ್ಕದ ಪ್ರಾಮುಖ್ಯತೆಯನ್ನು ತಿಳಿಸಿ?

ಉ. ಎ) ಕೇರಳ, ಮಹಾರಾಷ್ಟ್ರ, ಗುಜರಾತ್

ಬಿ) ಕರ್ನಾಟಕ, ಕೇರಳ, ಗೋವಾ

ಸಿ) ಗೋವಾ, ಕರ್ನಾಟಕ, ಮಹಾರಾಷ್ಟ್ರ

ಡಿ) ಕರ್ನಟಕ, ಮಹಾರಾಷ್ಟ್ರ, ಗುಜರಾತ್

5. ಮ್ಯಾಂಗ್ರೋವ್ ಅರಣ್ಯಗಳನ್ನು ಹೆಚ್ಚಾಗಿ ಬೆಳೆಸುವುದರಿಂದ ಈ ಕೆಳಗಿನ ಯಾವ ನಯಸರ್ಗಿಕ ವಿಕೋಪವನ್ನು ತಡೆಗಟ್ಟ ಬಹುದು.

ಉ. ಎ) ಕಡಲ ಕೊರೆತ ಬಿ) ಭೂಕಂಪ

ಸಿ) ಚಂಡಮಾರುತಗಳು ಡಿ) ಭೂಕುಸಿತ

# ಅಧ್ಯಾಯ–13
# ಭಾರತದ ಜನಸಂಖ್ಯೆ

## ಕಾರ್ಡ್–2

**I. ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1. ಭಾರತದ ಜನಸಂಖ್ಯೆಯಲ್ಲಿ ಋಣಾತ್ಮಕ ಕಂಡ ವರ್ಷ
ಉ. 1911–12
2. ಭಾರತದಲ್ಲಿ ಅತೀ ಕಡಿಮೆ ಜನಸಾಂದ್ರತೆ ಹೊಂದಿರುವ ರಾಜ್ಯ ಯಾವುದು?
ಉ. ಅರುಣಾಚಲ ಪ್ರದೇಶ
3. ಭಾರತದಲ್ಲಿ ಅತೀ ಹೆಚ್ಚು ಜನಸಾಂದ್ರತೆ ಹೊಂದಿರುವ ರಾಜ್ಯ ಯಾವುದು?
ಉ. ಬಿಹಾರ
4. ಪುರ ಯೋಜನೆ ಎಂದರೇನು?
ಉ. ನಗರ ಪ್ರದೇಶದಲ್ಲಿರುವ ಮೂಲ ಸೌಕರ್ಯಗಳನ್ನು ಹಳ್ಳಿಗಳು ಮತ್ತು ಪಟ್ಟಣಗಳಿಗೆ ವಿಸ್ತರಿಸುವುದಕ್ಕೆ ಪುರಯೋಜನೆ ಎನ್ನುವರು.

**II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.**

1. ವಲಸೆಯ ವಿಧಗಳು ಯಾವುವು?
ಉ. (1) ಆಂತರಿಕ ವಲಸೆ (2) ಅಂತರಾಷ್ಟ್ರೀಯ ವಲಸೆ
2. ಜನಸಂಖ್ಯೆಯ ವಿರಳತೆಗೆ ಕಾರಣವಾದ ಅಂಶಗಳು ಯಾವುವು?
ಉ. 1) ಪ್ರವಾಹಗಳು 2) ಚಂಡಮಾರುತಗಳು
3) ಭೂಕಂಪಗಳು 4) ಇತರ ನೈಸರ್ಗಿಕ ವಿಕೋಪಗಳು
5) ಮರುಭೂಮಿ ಪ್ರದೇಶಗಳು
3. ಜನಸಂಖ್ಯಾ ನಿಯಂತ್ರಣದಲ್ಲಿ ಭಾರತ ಸರ್ಕಾರ ಮಾಡಲು ಕೈಗೊಂಡಿರುವ ಕ್ರಮಗಳಾವುವು?
ಉ. 1) ಕುಟುಂಬ ಕಲ್ಯಾಣ ಯೋಜನೆ 2) ಮಹಿಳಾ ಕಲ್ಯಾಣ ಯೋಜನೆ
3) ಶಿಶು ಮರಣ ತಡೆಗಟ್ಟುವುದು 4) ಕ್ಷೇತ್ರಯೋಜನೆ
5) ಪ್ರಚಾರ ಮತ್ತು ಜಾಹಿರಾತು
4. ಆಂತರಿಕ ವಲಸೆ ಮತ್ತು ಅಂತರಾಷ್ಟ್ರೀಯ ವಲಸೆಗೆ ಇರುವ ವ್ಯತ್ಯಾಸ ತಿಳಿಸಿ.
ಉ. ಒಂದು ರಾಷ್ಟ್ರದ ಒಳಗೆ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಿ ನೆಲೆಸುವುದು ಆಂತರಿಕ ವಲಸೆ ಎನಿಸುತ್ತದೆ.
5. ಪುರಯೋಜನೆ ಜಾರಿಗೊಳಿಸುವುದರಿಂದ ಗ್ರಾಮೀಣ ಪ್ರದೇಶಗಳಿಗೆ ದೊರೆಯುವ ಪ್ರಯೋಜನಗಳಾವುವು?

# ಅರ್ಥಶಾಸ್ತ್ರ : ಅಧ್ಯಾಯ–1

# ಅಭಿವೃದ್ಧಿ

## ಕಾರ್ಡ್–2

**I. ಸೂಕ್ತ ಉತ್ತರಗಳನ್ನು ಆಯ್ದು ಬರೆಯಿರಿ.**

1. ಭಾರತ ಇಂದು ಈ ದೇಶಗಳ ಗುಂಪಿಗೆ ಸೇರಿದೆ.

ಉ. ಎ) ಹೆಚ್ಚು ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳ ಗುಂಪು

ಬಿ) <u>ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳ ಗುಂಪು</u>

ಸಿ) ಕಡಿಮೆ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳ ಗುಂಪು

ಡಿ) ಅತ್ಯಂತ ಕಡಿಮೆ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳ ಗುಂಪು

2. 2011ರ ಜನಗಣತಿ ಪ್ರಕಾರ ಪುರುಷರ ಸಾಕ್ಷರ ಪ್ರಮಾಣ ಶೇ 82.4 ಇದ್ದರೆ, ಮಹಿಳೆಯರ ಸಾಕ್ಷರ ಪ್ರಮಾಣ ಎಷ್ಟಿದೆ?

ಉ. ಎ) <u>ಶೇ 54.17</u> ಬಿ) ಶೇ 58.21 ಸಿ) ಶೇ 65.46 ಡಿ) ಶೇ 62.81

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. 'ಅನಾಭಿವೃದ್ಧಿ' ಎಂಬ ಶಬ್ಧವು ಏನನ್ನು ಸೂಚಿಸುತ್ತದೆ?

ಉ. ಹಿಂದುಳಿದ, ಅಭಿವೃದ್ಧಿ ಹೊಂದದೇ ಇರುವ ನಿಶ್ಚಲ ಸ್ಥಿತಿಯನ್ನು

2. ಆರ್ಥಿಕ ಅಭಿವೃದ್ಧಿಯ ಉದ್ದೇಶವೇನು?

ಉ. ಜನರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಲು ಅನುವು ಮಾಡುವುದು.

3. ಅರ್ಥವ್ಯವಸ್ಥೆಯಲ್ಲಿ 'ರಚನಾತ್ಮಕ ಬದಲಾವಣೆ' ಎಂದರೇನು?

ಉ. ಕೃಷಿ ವಲಯದಿಂದ ಕೃಷಿಯೇತರ ವಲಯಗಳಲ್ಲಿ ಹೆಚ್ಚಿನ ಜನರು ಕೆಲಸ ಮಾಡಿ, ರಾಷ್ಟ್ರೀಯ ಆದಾಯಕ್ಕೆ ಹೆಚ್ಚಿನ ಕೊಡುಗೆ ನೀಡುವುದು.

4. HDI ಯನ್ನು ವಿಸ್ತರಿಸಿ.

ಉ. 'ಹ್ಯೂಮನ್ ಡೆವಲಪ್‌ಮೆಂಟ್ ಇಂಡಿಕೇಟರ್ಸ್ (ಮಾನವ ಅಭಿವೃದ್ಧಿ ಸೂಚಿ)

(Hm aD ee lop entI d cators)

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿರಿ.**

1. ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು?

ಉ. * ದೇಶದ ಒಟ್ಟು ಉತ್ಪಾದನೆ ಕಡಿಮೆಯಿದ್ದು ಜನರ ಆದಾಯವು ಅತ್ಯಂತ ಕಡಿಮೆ ಇರುತ್ತದೆ.
* ಬಹುತೇಕ ಜನರಿಗೆ ಕನಿಷ್ಠ ಮೂಲಭೂತ ಅವಶ್ಯಕತೆಗಳನ್ನು ಪಡೆಯುವುದು ಕಷ್ಟವಾಗಿರುತ್ತದೆ.
* ಜನರು ಅನಾರೋಗ್ಯದಿಂದ ಬಳಲುತ್ತಿದ್ದು, ನಾಗರೀಕ ಸೌಲಭ್ಯಗಳಿರುವುದಿಲ್ಲ.

2. ವಿಶ್ವ ಅಭಿವೃದ್ಧಿ ವರದಿಯ ಪ್ರಕಾರ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅರ್ಥ ತಿಳಿಸಿ.

ಉ. ಮಧ್ಯಮ ವರಮಾನದ ಹಾಗು ಕಡಿಮೆ ವರಮಾನದ ದೇಶಗಳೆಂದು ಗುರುತಿಸಲ್ಪಡುವ ಎಲ್ಲಾ ದೇಶಗಳು.

3. ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವುದು ಸಮಂಜಸವಲ್ಲ ಹೇಗೆ?

ಉ. * ಒಂದು ದೇಶದ ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಜನಸಂಖ್ಯೆಯಲ್ಲಿ ಹೆಚ್ಚಳವಾದರೆ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುವುದಿಲ್ಲ.
* ಬೇರೆ ಬೇರೆ ಪ್ರಮಾಣದ ಜನಸಂಖ್ಯೆ ಹೊಂದಿರುವ ದೇಶಗಳ ಅಭಿವೃದ್ಧಿಯನ್ನು ರಾಷ್ಟ್ರೀಯ ಆದಾಯದಿಂದ ಅಳೆಯುವುದು ಸಮಂಜಸವಲ್ಲ.

## ಅಧ್ಯಾಯ–2

# ಅರ್ಥ ವ್ಯವಸ್ಥೆ ಮತ್ತು ಸರ್ಕಾರ

## ಕಾರ್ಡ್–2

**I. ಸೂಕ್ತ ಉತ್ತರಗಳನ್ನು ಆಯ್ದು ಬರೆಯಿರಿ.**

1. ಭಾರತ ಸರ್ಕಾರವು 'ರಾಷ್ಟ್ರೀಯ ಯೋಜನಾ ಆಯೋಗ'ವನ್ನು ರಚಿಸಿದ ವರ್ಷ

ಉ. ಎ) 1955 ಬಿ) 1962 ಸಿ) <u>1950</u> ಡಿ) 1964

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಆರ್ಥಿಕ ಏರಿಳಿತಗಳು ಎಂದರೇನು?

ಉ. ಅರ್ಥವ್ಯವಸ್ಥೆಯಲ್ಲಿನ ರಾಷ್ಟ್ರೀಯ ಆದಾಯ, ಉತ್ಪಾದನೆ, ಉದ್ಯೋಗ, ಹೂಡಿಕೆ, ಬೆಲೆ ಮುಂತಾದವುಗಳ ನಿರಂತರ ಏರಿಳಿತಗಳು

2. ಆರ್ಥಿಕ ಸ್ಥಿರತೆ ಎಂದರೇನು ?

ಉ. ಅರ್ಥವ್ಯವಸ್ಥೆಯೂ ಹೆಚ್ಚಿನ ಏರಿಳಿತಗಳಿಲ್ಲದೆ ಪ್ರಗತಿಯತ್ತ ಸಾಗುವುದು.

3. 'ರಾಷ್ಟ್ರೀಯ ಅಭಿವೃದ್ಧಿ ಮಂಡಳಿ' ಯಾವಾಗ ಸ್ಥಾಪನೆಯಾಯಿತು?

ಉ. 1952

4. ಭಾರತ ಸರ್ಕಾರವು ರೈತರಿಗೆ ಸಾವಯವ ಕೃಷಿ ವಿಧಾನವನ್ನು ಪ್ರೋತ್ಸಾಹಿಸುತ್ತಿದೆ ಏಕೆ?

ಉ. ಪರಿಸರ ಸ್ನೇಹಿ ಹಾಗು ಸುಸ್ಥಿರ ಕೃಷಿಗಾಗಿ.

5. ಎರಡನೇ ಹಸಿರು ಕ್ರಾಂತಿ ಅಥವಾ ಸದಾ ಹಸಿರು ಕ್ರಾಂತಿ ಎಂದರೇನು?

ಉ. ಕೃಷಿಯಲ್ಲಿ ಪರಿಸರ ಸ್ನೇಹಿ ತಂತ್ರಗಳ ಬಳಸುವ ಮೂಲಕ ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸುವುದು

6. ಉದಾರೀಕರಣ ಎಂದರೇನು?

ಉ. ಸರ್ಕಾರವು ಜನರ ಆರ್ಥಿಕ ಚಟುವಟಿಕೆಗಳ ಮೇಲಿನ ಅನಗತ್ಯ ನಿಯಂತ್ರಣ ಮತ್ತು ನಿರ್ಬಂಧಗಳನ್ನು ಸಡಿಲಗೊಳಿಸಿ, ಮುಕ್ತ ಅರ್ಥವ್ಯವಸ್ಥೆಗೆ ಅವಕಾಶ ಮಾಡಿಕೊಡುವುದು.

## II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿರಿ.

1. ಕಲ್ಯಾಣ ರಾಜ್ಯಗಳಲ್ಲಿ ಸರ್ಕಾರಗಳ ಕಾರ್ಯಕ್ಷೇತ್ರ ವಿಸ್ತರಣೆಗೊಂಡಿದೆ. ಹೇಗೆ?

ಉ. * ಎಲ್ಲ ಪ್ರಜೆಗಳಿಗೆ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ ಸಂಪರ್ಕ ಮುಂತಾ ಹಲವು ಸೌಕರ್ಯಗಳ ಒದಗಿಸುವುದು.

* ನಿರುದ್ಯೋಗ, ಬಡತನ, ಕೃಷಿಯ ಹಿಂದುಳಿದಿರುವಿಕೆ, ಆದಾಯ ಮತ್ತು ಸಂಪತ್ತಿನ ಅಸಮಾನ ಹಂಚಿಕೆಯಂತಹ ಸಮಸ್ಯೆಗಳಿಗೆ ಪರಿಹಾರ

2. ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?

ಉ. * ರೈತರು ಸಾವಯವ ಕೃಷಿ ವಿಧಾನ ಬಳಸಲು ಪ್ರೋತ್ಸಾಹಿಸುವುದು.

* ರಾಸಾಯನಿಕ ಗೊಬ್ಬರಗಳ ಬದಲಾಗಿ ಜೈವಿಕ ಗೊಬ್ಬರ ಬಳಕೆ.

* ರಾಸಾಯನಿಕ ಕ್ರಿಮಿನಾಶಕಗಳ ಬದಲಾಗಿ ಜೈವಿಕ ಕ್ರಿಮಿನಾಶಕಗಳ ಬಳಕೆ.

# ಅಧ್ಯಾಯ–3
# ಗ್ರಾಮೀಣಾಭಿವೃದ್ಧಿ

## ಕಾರ್ಡ್–2

## I. ಸರಿಯಾದ ಆಯ್ಕೆಯನ್ನು ಆರಿಸಿ ಬರೆಯಿರಿ.

1. ಭಾರತದಲ್ಲಿ ಮೂಲಭೂತ ಸೌಕರ್ಯಗಳನ್ನು ಬಲಪಡಿಸಲು ಜಾರಿಗೆ ತಂದಿರುವ ಯೋಜನೆ

ಉ. ಎ) ಆಶ್ರಯ ಯೋಜನೆ ಬಿ) ಇಂದಿರಾ ಆವಾಸ್ ಯೋಜನೆ

ಸಿ) ಸ್ವರ್ಣ ಜಯಂತಿ ಗ್ರಾಮ ಸ್ವ–ಉದ್ಯೋಗ ಯೋಜನೆ

ಡಿ) <u>ಸುವರ್ಣ ಗ್ರಾಮೋದಯ ಯೋಜನೆ</u>

## II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.

1. ಅಧಿಕಾರ ವಿಕೇಂದ್ರೀಕರಣ ಎಂದರೇನು?

ಉ. ಪ್ರತಿಯೊಂದು ಹಳ್ಳಿಯ ಆಡಳಿತ ಅಧಿಕಾರ ಹಾಗು ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೇ ವಹಿಸುವುದು.

2. ಗ್ರಾಮೀಣ ಜನರಿಗೆ ದುಡಿಯುವ ಅವಕಾಶವನ್ನು ಹೇಗೆ ಹೆಚ್ಚಿಸಬಹುದು?

ಉ. ಕೃಷಿ, ಪಶುಪಾಲನೆ, ಕೋಳಿಸಾಕಣೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದವುಗಳನ್ನು ಅಭಿವೃದ್ಧಿ ಪಡಿಸುವ ಮೂಲಕ

## III. 6 ಅಥವಾ 8 ವಾಕ್ಯಗಳಲ್ಲಿ ಉತ್ತರಿಸಿ.

1. ಭಾರತದ ಗ್ರಾಮೀಣ ಪರಿಸ್ಥಿತಿಯನ್ನು ಕುರಿತು ವಿವರಿಸಿ.

ಉ. * ಬಹುತೇಕ ಜನರು ಕೃಷಿಯ ಮೇಲೆ ಅವಲಂಬನೆ
* ಜನರು ಕಡುಬಡತನದಲ್ಲಿ ಬದುಕುತ್ತಿದ್ದಾರೆ
* ಆಧುನಿಕತೆಯ ಪರಿಣಾಮ ಗುಡಿಕೈಗಾರಿಕೆಗಳ ನಾಶ
* ಗ್ರಾಮೀಣ ಜನರು ನಗರಗಳಿಗೆ ವಲಸೆ
* ರಾಷ್ಟ್ರೀಯ ಆದಾಯಕ್ಕೆ ಕೃಷಿಯ ಕೊಡುಗೆ ಅತ್ಯಂತ ಕಡಿಮೆಯಿದೆ ಮತ್ತು ನಿರಂತರ ಕಡಿಮೆಯಾಗುತ್ತಿದೆ.
* ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ಹೆಚ್ಚುತ್ತದೆ.

2. ಗ್ರಾಮೀಣಾಭಿವೃದ್ಧಿಗೆ ಪಂಚಾಯತ್‌ರಾಜ್ ಸಂಸ್ಥೆಗಳ ಅಡಿಯಲ್ಲಿ ಕೈಗೊಂಡಿರುವ ಯೋಜನೆಗಳನ್ನು ಪಟ್ಟಿ ಮಾಡಿ.

ಉ. * ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
* ಇಂದಿರಾ ಆವಾಸ್ ಯೋಜನೆ
* ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ
* ಆಶ್ರಯ ಯೋಜನೆ
* ಸುವರ್ಣ ಗ್ರಾಮೋದಯ ಯೋಜನೆ
* ಪಡಿತರ ವ್ಯವಸ್ಥೆ
* ಸಾಮಾಜಿಕ ಕಲ್ಯಾಣ ಯೋಜನೆಗಳು
* ಮಹಿಳಾ ಸ್ವಸಹಾಯ ಸಂಘಗಳ ಅಭಿವೃದ್ಧಿಗೆ ಯೋಜನೆಗಳು
* ಗ್ರಾಮೀಣ ಕಲೆಗಳು ಮತ್ತು ಸಂಸ್ಕೃತಿ ಬೆಳವಣಿಗೆಗೆ ಯೋಜನೆಗಳು

# ಅಧ್ಯಾಯ–4
# ಸಾರ್ವಜನಿಕ ಹಣಕಾಸು ಮತ್ತು ಆಯ–ವ್ಯಯ

## ಕಾರ್ಡ್–2

## I. ಒಂದು ವಾಕ್ಯದಲ್ಲಿ ಉತ್ತರಿಸಿ.

1. ವೈಯಕ್ತಿಕ ಹಣಕಾಸು ಎಂದರೇನು?

ಉ. ವ್ಯಕ್ತಿ ಅಥವಾ ಕುಟುಂಬದ ಆದಾಯ, ವೆಚ್ಚ ಮತ್ತು ಸಾಲದ ನಿರ್ವಹಣೆಯ ಬಗ್ಗೆ ತಿಳಿಸಿ ಕೊಡುವುದು.

2. ಯೋಜನಾ ವೆಚ್ಚದ ಅರ್ಥ ತಿಳಿಸಿ.

ಉ. ಸರ್ಕಾರದ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಸೇವೆಗಳು, ರಾಷ್ಟ್ರನಿರ್ಮಾಣ ಕಾರ್ಯಗಳು ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಮಾಡುವ ವೆಚ್ಚ

3. ಸಾರ್ವಜನಿಕ ಆದಾಯ ಎಂದರೇನು?

ಉ. ಸರ್ಕಾರವು ತನ್ನ ವೆಚ್ಚಗಳನ್ನು ಭರಿಸಲು ವಿವಿಧ ಮೂಲಗಳಿಂದ ಹಣವನ್ನು ಸಂಗ್ರಹಿಸುವುದು.

4. ತೆರಿಗೆಯೇತರ ಆದಾಯದ ಅರ್ಥ ತಿಳಿಸಿ.

ಉ. ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದಲೂ ಆದಾಯವನ್ನು ಸಂಗ್ರಹಿಸುವುದು.

## II. 6 ಅಥವಾ 8 ವಾಕ್ಯಗಳಲ್ಲಿ ಉತ್ತರಿಸಿ.

1. ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸು ನಡುವಿನ ಭಿನ್ನತೆಗಳನ್ನು ತಿಳಿಸಿ.

ಉ. **ವೈಯಕ್ತಿಕ ಹಣಕಾಸು**

* ಒಬ್ಬ ವ್ಯಕ್ತಿ ಅಥವಾ ಕುಟುಂಬದ ಆದಾಯ ವೆಚ್ಚಗಳಿಗೆ ಸಂಬಂಧಿಸಿದೆ.
* ಮೊದಲು ತಮ್ಮ ಆದಾಯವನ್ನು ಅಂದಾಜು ಮಾಡಿ, ನಂತರ ಅದಕ್ಕೆ ಅನುಗುಣವಾಗಿ ವೆಚ್ಚ ಮಾಡುತ್ತಾರೆ.
* ಹಣಕಾಸು ವ್ಯವಹಾರಗಳನ್ನು ಆದಷ್ಟು ಗೌಪ್ಯವಾಗಿಡಲಾಗುತ್ತದೆ.
* ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕವಾಗಿರುತ್ತದೆ.

**ಸಾರ್ವಜನಿಕ ಹಣಕಾಸು**

* ಸರ್ಕಾರದ ಆದಾಯ–ವೆಚ್ಚಗಳಿಗೆ ಸಂಬಂಧಿಸಿದೆ.
* ಮೊದಲು ತನ್ನ ವೆಚ್ಚವನ್ನು ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಆದಾಯವನ್ನು ಹೊಂದಿಸುತ್ತದೆ.
* ಹಣಕಾಸನ್ನು ಶಾಸನ ಸಭೆಗಳಲ್ಲಿ ಚರ್ಚಿಸಿ, ಮಾಧ್ಯಮಗಳಲ್ಲಿ ಎಲ್ಲರಿಗೂ ತಿಳಿಯುವಂತೆ ಪ್ರಚಾರ ಮಾಡಲಾಗುತ್ತದೆ.
* ಉಳಿತಾಯ ಮಾಡಿದರೆ ದೇಶದ ಪ್ರಗತಿಯೂ ಕುಂಠಿತವಾಗುವುದರಿಂದ ತಮ್ಮ ಆದಾಯಕ್ಕಿಂತ ಹೆಚ್ಚಿನ ಹಣವನ್ನು ಅಭಿವೃದ್ಧಿ ಕೆಲಸಗಳಿಗಾಗಿ ವೆಚ್ಚ ಮಾಡುತ್ತವೆ.

# ವ್ಯವಹಾರ ಅಧ್ಯಯನ : ಅಧ್ಯಾಯ–1

# ಬ್ಯಾಂಕು ವ್ಯವಹಾರಗಳು

## ಕಾರ್ಡ್–2

## I. ಸರಿಯಾದ ಆಯ್ಕೆಯನ್ನು ಆರಿಸಿ ಬರೆಯಿರಿ.

1. ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ಸಾಮಾನ್ಯವಾಗಿ ಈ ಖಾತೆ ತೆರೆಯುವರು?

ಉ. ಎ) ಆವರ್ತ ಠೇವಣಿ ಖಾತೆ ಬಿ) ಉಳಿತಾಯ ಖಾತೆ

ಸಿ) <u>ಚಾಲ್ತಿ ಖಾತೆ</u> ಡಿ) ನಿಶ್ಚಿತ ಠೇವಣಿ ಖಾತೆ

2. ಸಾಮಾನ್ಯವಾಗಿ ವೇತನ ಪಡೆಯುವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಈ ಖಾತೆ ತೆರೆಯಲ್ಪಡುತ್ತದೆ.

ಉ. ಎ) <u>ಉಳಿತಾಯಖಾತೆ</u> ಬಿ) ಆವರ್ತ ಠೇವಣಿ ಖಾತೆ

ಸಿ) ನಿಶ್ಚಿತ ಠೇವಣಿ ಖಾತೆ ಡಿ) ಚಾಲ್ತಿ ಖಾತೆ

## II. ಈ ಕೆಳಗಿನ ಪ್ರಶ್ನೆಗಳಿಗೆ 6–8 ವಾಕ್ಯದಲ್ಲಿ ಉತ್ತರಿಸಿರಿ.

1. ಕೆಲವು ಮುಖ್ಯ ಬ್ಯಾಂಕುಗಳ ವಿಧಗಳನ್ನು ಹೆಸರಿಸಿರಿ.

ಉ.
* ಕೇಂದ್ರ ಬ್ಯಾಂಕು ಅಥವಾ ರಿಸರ್ವ್‌ಬ್ಯಾಂಕು
* ವಾಣಿಜ್ಯ ಬ್ಯಾಂಕು
* ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
* ಭೂ ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕು
* ಸ್ಥಳೀಯ ಬ್ಯಾಂಕು
* ಸಹಕಾರಿ ಬ್ಯಾಂಕು

2. ಬ್ಯಾಂಕ್‌ನಲ್ಲಿ ಖಾತೆ ತೆಗೆಯುವುದು ಅತ್ಯಂತ ಅನುಕೂಲಕಾರಿ ಈ ಹೇಳಿಕೆಯನ್ನು ಸಮರ್ಥಿಸಿ.

ಉ.
* ಹಣದ ಭದ್ರತೆ ಕಾಪಾಡುತ್ತದೆ.
* ಹಣದ ಪಾವತಿ
* ಹಣದ ವಸೂಲಾತಿ
* ಸಾಲಸೌಲಭ್ಯ
* ಸುಗಮ ವ್ಯವಹಾರ
* ಭದ್ರತಾ ಕಪಾಟು

# ಅಧ್ಯಾಯ–2

# ವಿಮೆ

## ಕಾರ್ಡ್–2

**I. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿರಿ.**

1. ವಿಮಾಕರ್ತನು ವಿಮೆಯನ್ನು ಪಾಲಿಸಲು ಯಾವ ಯಾವ ತತ್ವಗಳನ್ನು ಅನುಸರಿಸಬೇಕು?

ಉ.
* ಅತ್ಯಧಿಕ ವಿಶ್ವಾಸಾರ್ಹತೆ
* ನಷ್ಟ ಪರಿಹಾರ
* ಸಮಾನ ಅನುಭೋಗ
* ನಿಕಟ ಕಾರಣ
* ವಿಮಾರ್ಹ ಹಿತಾಸಕ್ತಿ
* ಕೊಡುಗೆಯ ತತ್ವ
* ಕನಿಷ್ಟ ದಷ್ಟ ಶಮನ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1. ಬೆಂಕಿ ಅಪಘಾತ, ವಾಹನ ಅಪಘಾತ ಇತ್ಯಾದಿಗಳ ನಷ್ಟ ತುಂಬಿ ಕೊಡುವ ವಿಮೆ ಯಾವುದು?

ಉ. ಸಾಮಾನ್ಯ ವಿಮೆ

# ಅಧ್ಯಾಯ–3

# ವ್ಯವಹಾರ ಅಧ್ಯಯನ ಉದ್ಯಮಗಾರಿಕೆ

## ಕಾರ್ಡ್–2

### I. ಸೂಕ್ತ ಉತ್ತರಗಳನ್ನು ಆಯ್ದು ಬರೆಯಿರಿ.

1. ಭಾರತದ ದೂರದರ್ಶ ಕ್ಷೇತ್ರದಲ್ಲಿ "ಅಧಿಪತ್ಯ ಸಾಧಿಸಿದ ರಾಣಿ" ಎಂದೇ ಹೆಸರು ಮಾಡಿದವರು.

ಉ. ಎ) ಅಜೀಂ ಪ್ರೇಮ್‌ಜಿ ಬಿ) ಕಿರಣ್ ಮುಜಮ್‌ದಾರ್‌ಷಾ
ಸಿ) <u>ಏಕ್ತಾ ಕಪೂರ್</u> ಡಿ) ಧೀರು ಭಾಯಿ ಅಂಬಾನಿ

2. ಇವರು ಜೀವ ವಿಜ್ಞಾನ ತಂತ್ರಜ್ಞಾನದ 'ಬಯೋಕಾನ್' ನಿಗಮದ ಅಧ್ಯಕ್ಷರು

ಉ. ಎ) ವರ್ಗಿಸ್ ಕುರಿಯನ್ ಬಿ) ನಾರಾಯಣ ಮೂರ್ತಿ
ಸಿ) ಧೀರು ಭಾಯಿ ಅಂಬಾನಿ ಡಿ) <u>ಕಿರಣ್ ಮುಜಮ್‌ದಾರ್ ಷಾ</u>

### II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಉದ್ಯಮಗಾರಿಕೆ ಎಂದರೇನು?

ಉ. ಒಬ್ಬ ಉದ್ಯಮಿಯು ತನ್ನ ಉದ್ದಿಮೆಯನ್ನು ಸ್ಥಾಪಿಸಲು ಕೈಗೊಳ್ಳುವ ಕ್ರಿಯೆಗಳು

2. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯಾದ ವರ್ಷ ಯಾವುದು?

ಉ. 1978

### III. ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಉದ್ಯಮಿಯ ಕಾರ್ಯಗಳನ್ನು ತಿಳಿಸಿರಿ.

ಉ.
* ವ್ಯಾಪಾರ ಚಟುವಟಿಕೆಗಳನ್ನು ಅನೇಕ ಯೋಜನೆಗಳ ಮೂಲಕ ಪ್ರಾರಂಭಿಸುವುದು.
* ಉತ್ಪಾದನಾಂಗಗಳನ್ನು ಸಂಯೋಜಿಸುವುದು.
* ಉತ್ಪಾದಿಸುವ ವಸ್ತುಗಳ ಬಗ್ಗೆ, ತಾಂತ್ರಿಕತೆ ಬಗ್ಗೆ, ಮಾರುಕಟ್ಟೆ ಮತ್ತು ಉದ್ಯೋಗಗಳ ಬಗ್ಗೆ ನಿರ್ಧರಿಸುವುದು.
* ಎಲ್ಲಾ ಅಂಶಗಳನ್ನು ಸಮಂಜಸವಾಗಿ ಸಂಯೋಜಿಸುವುದು
* ಹೊಸ ಹೊಸ ವಿಧಾನಗಳನ್ನು ರೂಢಿಗೆ ತರುವುದು.
* ತನ್ನ ಉದ್ಯಮದ ಹಣಕಾಸಿನ ಆಯವ್ಯಯವನ್ನು ನಿಭಾಯಿಸುವುದು.
* ಕಷ್ಟನಷ್ಟಗಳನ್ನು ಮತ್ತು ಅನಿಶ್ಚಿತೆಗಳನ್ನು ಎದುರಿಸುವುದು.
* ವ್ಯಾಪಾರದ ಮಾರ್ಗಗಳನ್ನು ತಿಳಿದು, ಅದು ಸರಿಯಾದ ರೀತಿಯಲ್ಲಿ ಕಾರ್ಯಗೊಳ್ಳಲು ಮಾರ್ಗದರ್ಶನ ನೀಡುವುದು.

2. ವರ್ಗಿಸ್ ಕುರಿಯನ್‌ರವರನ್ನು 'ಬಿಳಿ ಕ್ರಾಂತಿ ಪಿತಾಮಹ' ಎನ್ನಲು ಕಾರಣಗಳೇನು?

ಉ. * ಲಕ್ಷಾಂತರ ಲೀಟರ್ ಹಾಲಿನ ಉತ್ಪಾದನೆ ಕಲ್ಪನೆ ಹಾಲಿನ ಹೊಳೆ ಹರಿಸುವ ಮೂಲಕ ಬೇಕಾಯದ ಅಭಿವೃದ್ಧಿಯ ಅತ್ಯಂತ ಹಿರಿಯವ್ಯಕ್ತಿ.

* ಅಮುಲ್ ಹಾಲು ಮತ್ತು ಹಾಲಿನ ಉತ್ಪನ್ನಗಳ ತಯಾರಿಕೆಯಲ್ಲಿ ಇವರ ಸಾಧನೆ ಆಗಾಧ
* ಗುಜರಾತಿನ ಕೈರಾ ಜಿಲ್ಲೆಯ ಆನಂದ್ ಹೈನುಗಾರಿಕೆಯನ್ನು ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿ, ಹೈನುಗಾರಿಕೆಯಲ್ಲಿ ಅಭಿವೃದ್ಧಿ ಸಾಧಿಸಿದರು. (ಭಾರತದಲ್ಲೇ ದೊಡ್ಡ ಹೈನುಗಾರಿಕೆ)

3. ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಯಾವ ಯಾವ ಸೇವೆಗಳನ್ನು ಪಡೆಯಬಹುದಾಗಿದೆ?

ಉ. * ಉದ್ದಿಮೆ ಸ್ಥಾಪಿಸಲು ಮೊದಲು ಸಿದ್ಧ ಪಡಿಸಬೇಕಾದ ಯೋಜನಾ ವರದಿ

* ಯಂತ್ರಗಳು ಮತ್ತು ಸಾಧನ ಸಲಕರಣೆಗಳ ಬಗ್ಗೆ ಮಾಹಿತಿ
* ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ
* ವಿಶೇಷ ರೀತಿಯ ಯೋಜನಾ ವರದಿಗಳ ಅಂಗೀಕಾರ
* ಉದ್ದಿಮೆ ಅಭಿವೃದ್ಧಿ ಕಾರ್ಯಕ್ರಮದೆಡೆ ತರಬೇತಿ
* ಕಚ್ಚಾ ಪದಾರ್ಥಗಳ ಹಂಚಿಕೆ
* ಸ್ವಯಂ ಉದ್ಯೋಗದಡಿಯಲ್ಲಿನ ವ್ಯವಸ್ಥೆಯಲ್ಲಿ ಹಣಕಾಸಿನ ನೆರವು
* ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಯಮದ ಮೂಲಕ ಸಾಧನ ಸಲಕರಣಿಗಳನ್ನು ಗುತ್ತಿಗಡ ಮೂಲಕ ವ್ಯವಸ್ಥೆ ಮಾಡುವುದು.
* ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾರುಕಟ್ಟೆ ಸಹಾಯ
* ವಸ್ತು ಪ್ರದರ್ಶನಗಳಲ್ಲಿ, ವ್ಯಾಪಾರಿ ಜಾತ್ರೆಗಳಲ್ಲಿ ಮತ್ತು ಕೊಳ್ಳುವವರು ಮತ್ತು ಮಾರುವವರು ಸಂಧಿಸುವ ಭೇಟಿಗಳಲ್ಲಿ ಮಾರುಕಟ್ಟೆ ವ್ಯವಸ್ಥೆ ಮಾಡುವುದು.
* ಸಣ್ಣ ಕೈಗಾರಿಕೆಗಳ ನೋಂದಣಿ ವ್ಯವಸ್ಥೆಯಲ್ಲಿ, ಬ್ಯಾಂಕು ಸಾಲಗಳಲ್ಲಿ ಮತ್ತು ಉತ್ಪಾದಿತ ವಸ್ತುಗಳ ಮಾರುಕಟ್ಟೆ ಸಮಸ್ಯೆಗಳ ಕಡೆ ಗಮನ ಹರಿಸುವುದು.
* ಉದ್ದಿಮೆಯನ್ನು ಆಧುನಿಕರಿಸುವಲ್ಲಿ ಸಹಾಯ ಮಾಡುವುದು.
* ವಸ್ತುಗಳನ್ನು ರಫ್ತು ಮಾಡಲು ಸಹಾಯ
* ಅತಂತ್ರಗೊಳ್ಳುತ್ತಿರುವ ಉದ್ದಿಮೆಗಳಿಗೆ ಸಹಾಯ
* ಬದಲಾವಣೆ/ಮಾರ್ಪಾಡು ಮಾಡಿರುವ ವಸ್ತುಗಳಿಗೆ ಉತ್ತೇಜನ ಕೊಟ್ಟು, ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳನ್ನು ಕೊಡಿಸುವುದು.
* ಸಾಂಪ್ರದಾಯಿಕವಲ್ಲದ ಶಕ್ತಿ ಸಾಧನಗಳನ್ನು ಉಪಯೋಗಿಸಿ ವಸ್ತುಗಳ ತಯಾರಿಕೆಗೆ ಉತ್ತೇಜನ ನೀಡುವುದು.
* ಪ್ರಮಾಣ ಬದ್ಧ ವಸ್ತುಗಳ ತಯಾರಿಕೆಯಲ್ಲಿ ಸಹಾಯ
* ಕುಶಲ ಕೈಗಾರಿಕಾ ವಸ್ತುಗಳ ತಯಾರಿಕೆಯಲ್ಲಿ ಮಾದರಿ ವಸ್ತುಗಳ ತಯಾರಿಕೆಗೆ ಸಹಾಯ

4. ಸ್ವಯಂ ಉದ್ಯೋಗಕ್ಕಾಗಿ ಹಣಕಾಸಿನ ನೆರವು ನೀಡುವ ಸಂಸ್ಥೆಗಳಾವುವು?

ಉ. * ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು

* ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕು
* ಆಮದು ಮತ್ತು ರಫ್ತು ಬ್ಯಾಂಕು
* ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
* ಭಾರತೀಯ ಕೈಗಾರಿಕಾ ಹಣಕಾಸು ನಿಗಮ
* ಭಾರತೀಯ ಕೈಗಾರಿಕೆಗೆ ಹಣಕಾಸಿನ ಹೂಡಿಕೆ ಮತ್ತು ಸಾಲ ನಿಗಮ
* ಭಾರತೀಯ ಕೈಗಾರಿಕೆ ಮರು ನಿರ್ಮಾಣ ಬ್ಯಾಂಕು
* ಭಾರತೀಯ ವಾಣಿಜ್ಯ ಮತ್ತು ಇತರೆ ಬ್ಯಾಂಕು
* ರಾಜ್ಯ ಹಣಕಾಸು ನಿಗಮಗಳು
* ಭಾರತೀಯ ಜೀವ ವಿಮಾ ನಿಗಮ
* ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ

# ಅಧ್ಯಾಯ–4
# ವ್ಯವಹಾರದ ಜಾಗತೀಕರಣ

## ಕಾರ್ಡ್–2

**I. ಸೂಕ್ತ ಉತ್ತರಗಳನ್ನು ಆಯ್ದು ಬರೆಯಿರಿ.**

1. ಈ ಸಂಸ್ಥೆಯು ವಿಶ್ವದ ವ್ಯಾಪಾರಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತದೆ

ಉ. ಎ) ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಬಿ) ವಿಶ್ವಬ್ಯಾಂಕು
ಸಿ) <u>ವಿಶ್ವವ್ಯಾಪಾರ ಸಂಘಟನೆ</u> ಡಿ) ಅಂತರರಾಷ್ಟ್ರೀಯ ಹಣಕಾಸಿನ ತುರ್ತುನಿಧಿ

**II. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯದಲ್ಲಿ ಉತ್ತರಿಸಿರಿ.**

1. ಜಾಗತೀಕರಣ ಉಂಟು ಮಾಡಬಹುದಾದ ದುಷ್ಪರಿಣಾಮಗಳು ಯಾವುವು?

ಉ. * ಅಭಿವೃದ್ಧಿ ಹೊಂದಿತ್ತಿರುವ ರಾಷ್ಟ್ರಗಳಲ್ಲಿ ಗುಲಾಮಿತನ ಮತ್ತು ಬಾಲಕಾರ್ಮಿಕ ಪದ್ದತಿಗಳು ಉಂಟಾಗುವಿಕೆ
* ವ್ಯವಹಾರ ವಹಿವಾಟುಗಳಲ್ಲಿ ನೀತಿಬಾಹಿರ ಪದ್ಧತಿಗಳು
* ಭಯೋತ್ಪಾದನೆ ಮತ್ತು ಪಾತಕಿಗಳಿಗೆ ಸಹಾಯ
* ಪಟ್ಟಣಗಳಲ್ಲಿ ಕೈಗಾರಿಕಾ ತ್ಯಾಜ್ಯಗಳ ಶೇಖರಣೆ
* ಜನರ ಆರೋಗ್ಯದ ಅವನತಿ
* ಮಾರಣಾಂತಿಕ ರೋಗಗಳ ಹರಡುವಿಕೆ
* ಪರಿಸರ ಮಾಲಿನ್ಯ
* ಬಡವ ಶ್ರೀಮಂತರ ನಡುವಿನ ಅಂತರದಲ್ಲಿ ಹೆಚ್ಚಳ

(ಮೇಲಿನ ಯಾವುದಾದರೂ ನಾಲ್ಕು ಅಂಶಗಳು)

2. ಜಾಗತೀಕರಣದ ಮುಖ್ಯ ಲಕ್ಷಣಗಳನ್ನು ಪಟ್ಟಿ ಮಾಡಿ.

ಉ. * ಅಂತರರಾಷ್ಟ್ರೀಯ ವ್ಯಾಪಾರದ ಹೆಚ್ಚಳ
* ಅಂತರರಾಷ್ಟ್ರೀತಯ ಬಂಡವಾಳದ ಹರಿವು ನೇರಹೂಡಿಕೆಯ ಹೆಚ್ಚಳ
* ಅಂತರರಾಷ್ಟ್ರೀಯ ವ್ಯಾಪಾರ ಕರಾರುಗಳ ಸೃಷ್ಟಿ
* ವಿಶ್ವ ಹಣಕಾಸು ನೀತಿಯ ಅಭಿವೃದ್ಧಿ
* IMF ಮತ್ತು WTO ಗಳ ಪಾತ್ರದ ಹೆಚ್ಚಳ
* ಹೊರನೆರವಿನ ಹೆಚ್ಚಳ
* ಸಾಂಸ್ಕೃತಿಕ ವಿನಿಮಯಗಳ ಹೆಚ್ಚಳ

(ಮೇಲಿನ ಯಾವುದಾದರೂ ನಾಲ್ಕು ಅಂಶಗಳು)

# ಸಮರ್ಥ

## ಸಮಾಜ ವಿಜ್ಞಾನ

## ಪ್ರಶ್ನಾ ಕಾರ್ಡ್‌ಗಳು

## ಕನ್ನಡ ಮಾಧ್ಯಮ

## ಕಾರ್ಡ್ : 3

# ಇತಿಹಾಸ : ಅಧ್ಯಾಯ–1
# ಭಾರತಕ್ಕೆ ಯೂರೋಪಿಯನ್ನರ ಆಗಮನ

## ಕಾರ್ಡ್–3

## I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತದಲ್ಲಿ ಇವರ ಪ್ರವೇಶದಿಂದ ಪೋರ್ಚುಗೀಸರ ಏಕಸಾಮ್ಯತೆ ಶಿಥಿಲಗೊಂಡಿತು.

ಉ. ಎ) ಡಚ್ಚರು ಮತ್ತು ಫ್ರೆಂಚರು ಬಿ) ಡಚ್ಚರು ಮತ್ತು ಇಂಗ್ಲೀಷರು

ಸಿ) ಫ್ರೆಂಚರು ಮತ್ತು ಇಂಗ್ಲೀಷರು ಡಿ) ಇಂಗ್ಲೀಷರು ಮತ್ತು ಸ್ಪೇನರು

2. ದಖನ್ ಪ್ರಾಂತ್ಯದ ಮೇಲೆ ಫ್ರೆಂಚರ ಪ್ರಭಾವವನ್ನು ಮಾಡಿದ ಯುದ್ಧವೆಂದರೆ.

ಉ. ಎ) 2ನೇ ಕರ್ನಾಟಿಕ್ ಯುದ್ಧ ಬಿ) ಬಕ್ಸಾರ್ ಕದನ

ಸಿ) 3ನೇ ಕರ್ನಾಟಿಕ್ ಯುದ್ಧ ಡಿ) ಪ್ಲಾಸಿಕದನ

3. ಬ್ರಿಟಿಷ್ ವ್ಯಾಪಾರಿಗಳು ಸಾಮ್ರಾಜ್ಯದ ಒಡೆಯರಾದದ್ದು ಈ ಪ್ರಮುಖ ಅಂಶದಿಂದ

ಉ. ಎ) ಕಂಪೆನಿಯ ಸೈನದಿಂದ ಬಿ) ರಾಜಕೀಯ ಅನುಭವದಿಂದ

ಸಿ) ಬ್ರಿಟಿಷ್ ಅಧಿಕಾರಿಗಳಿಂದ ಡಿ) ರಾಜಕೀಯ ಕುಟಿಲತೆಯಿಂದ

4. ಭಾರತದ ಮೇಲೆ ಅಧಿಪತ್ಯ ಸ್ಥಾಪಿಸಲು ದೇಶೀಯ ಸಂಸ್ಥಾನಗಳ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದವರು.

ಉ. ಎ) ಪೋರ್ಚುಗೀಸರು ಬಿ) ಬ್ರಿಟಿಷರು ಮತ್ತು ಫ್ರೆಂಚರು

ಸಿ) ಪೋರ್ಚುಗೀಸರು ಮತ್ತು ಫ್ರೆಂಚರು ಡಿ) ಡಚ್ಚರು ಮತ್ತು ಬ್ರಿಟಿಷರು

## II. ಒಂದು ವಾಕ್ಯದಲ್ಲಿ ಉತ್ತರಿಸಿ:

1. ವ್ಯಾಪಾರದ ಸಂಬಂಧವನ್ನು ಮರು ಸ್ಥಾಪಿಸುವಲ್ಲಿ ಭಾರತಕ್ಕೆ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗನಾರು?

ಉ. ವಾಸ್ಕೋಡಿಗಾಮ

2. ಬ್ರಿಟಿಷ್ ಸಾಮ್ರಾಜ್ಯ ಸ್ಥಾಪನೆಯನ್ನು ವಿರೋಧಿಸಿದ ಮೊದಲ ದೊರೆ ಯಾರು?

ಉ. ಬಂಗಾಳದ ಸಿರಾಜುದ್ದೌಲ

3. ಯಾವ ಯುದ್ಧದ ಪರಿಣಾಮವಾಗಿ ಬ್ರಿಟಿಷರಿಗೆ ಹೈದರಾಬಾದ್ ವಶವಾಯಿತು?

ಉ. 2ನೇ ಕರ್ನಾಟಿಕ್ ಯುದ್ಧ

## II. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ:

1. 'ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ' ಈ ಹೇಳಿಕೆಯನ್ನು ಸಮರ್ಥಿಸಿರಿ.

ಉ. * ವೈಜ್ಞಾನಿಕ ಬೆಳವಣಿಗೆಯಿಂದ ಹೊಸ ಆವಿಷ್ಕಾರಗಳಾದವು.
* ಸಮುದ್ರಯಾನಕ್ಕೆ ಅಗತ್ಯವಾದ ವೈಜ್ಞಾನಿಕ ಸಲಕರಣೆಗಳ ಆವಿಷ್ಕಾರವಾಯಿತು.
* ನಾವಿಕರಿಗೆ ಅಗತ್ಯವಾದ ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟಗಳು, ಸಮುದ್ರಯಾನಕ್ಕೆ ಸಹಾಯಕವಾದವು.

2. ಕರ್ನಾಟಿಕ್ ಯುದ್ಧಗಳು ಇಂಗ್ಲಿಷರು ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು?

ಉ. * ಮೊದಲ ಕರ್ನಾಟಿಕ್ ಯುದ್ಧ : ಬ್ರಿಟಿಷ್ ಮತ್ತು ಫ್ರೆಂಚರು ತಮ್ಮ ಸೆಣಸಾಟದಲ್ಲಿ ಕರ್ನಾಟಿಕ್ ನವಾಬನನ್ನು ದಾಳವನ್ನಾಗಿ ಬಳಸಿಕೊಂಡರು. ಫ್ರೆಂಚರು ವಶಪಡಿಸಿಕೊಂಡ ಮದ್ರಾಸ್‌ನ್ನು ಈ ಒಪ್ಪಂದದ ಮೂಲಕ ಬ್ರಿಟಿಷರು ಪಡೆದರು.
* ಎರಡನೆ ಕರ್ನಾಟಿಕ್ ಯುದ್ಧದಿಂದಾಗಿ ಕರ್ನಾಟಿಕ್ ಪ್ರದೇಶವು ಬ್ರಿಟಿಷರ ವಶವಾಯಿತು. ಫ್ರೆಂಚರ ಪ್ರಭಾವ ಕಡಿಮೆಯಾಯಿತು.
* ಮೂರನೆ ಕರ್ನಾಟಿಕ್ ಯುದ್ಧದಲ್ಲಿ ಫ್ರೆಂಚರು ಪರಾಭವಗೊಂಡು ಎಲ್ಲಾ ಅಧಿಕಾರ ಕಳೆದುಕೊಂಡರು.

## ಅಧ್ಯಾಯ–2

# ವಸಾಹತು ಆಳ್ವಿಕೆಯಲ್ಲಿ ಕನ್ನಡ ಮಾತನಾಡುವ ಪ್ರದೇಶಗಳು

## ಕಾರ್ಡ್–3

### I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಟಿಪ್ಪು ತನ್ನ ಸೈನ್ಯಕ್ಕೆ ತರಬೇತಿ ನೀಡಲು ನೆರವು ಪಡೆದ ದೇಶ

ಉ. ಎ) ಇಂಗ್ಲೆಂಡ್ ಬಿ) ಟರ್ಕಿ ಸಿ) ಫ್ರಾನ್ಸ್ ಡಿ) ಸ್ಪೇನ್

2. ಟಿಪ್ಪು ಈ ಪ್ರದೇಶವನ್ನು ರಾಜಧಾನಿಯನ್ನಾಗಿಸಿಕೊಂಡನು

ಉ. ಎ) ಕೊಪ್ಪಳ ಬಿ) ಮೈಸೂರು ಸಿ) ಹೈದರಾಬಾದ್ ಡಿ) ಶ್ರೀರಂಗಪಟ್ಟಣ

3. 1784ರಲ್ಲಿ ಟಿಪ್ಪು ಬ್ರಿಟಿಷರೊಂದಿಗೆ ಈ ಸ್ಥಳದಲ್ಲಿ ಒಪ್ಪಂದ ಮಾಡಿಕೊಂಡನು

ಉ. ಎ) ಮದ್ರಾಸ್ ಬಿ) ಶ್ರೀರಂಗಪಟ್ಟಣ ಸಿ) ಮೈಸೂರು ಡಿ) ಮಂಗಳೂರು

4. ಮೂರನೆ ಮೈಸೂರು ಯುದ್ಧಕ್ಕೆ ತತ್‌ಕ್ಷಣದ ಕಾರಣ

ಉ. ಎ) ಇಂಗ್ಲೀಷರ ಮಾಹೆಯನ್ನು ವಶ ಪಡಿಸಿಕೊಂಡದ್ದು
ಬಿ) ಟಿಪ್ಪು ತಿರುವಾಂಕೂರಿನ ಮೇಲೆ ದಾಳಿ ಮಾಡಿದ್ದು
ಸಿ) ಇಂಗ್ಲೀಷರು ಹೈದರಾಲಿ ಮೇಲೆ ಆಕ್ರಮಣ
ಡಿ) ಟಿಪ್ಪು ಸಹಾಯಕ ಸೈನ್ಯ ಪದ್ಧತಿ ತಿರಸ್ಕರಿಸಿದ್ದು

5. ಬಿದನೂರಿನ ಅರಸನಿಂದ ಬ್ರಿಟಿಷರು ಈ ಸಾಂಬಾರ ಪದಾರ್ಥಗಳಿಗೆ ಏಕಸ್ವಾಮ್ಯತೆ ಪಡೆದರು

ಉ. ಎ) ಮೆಣಸು ಮತ್ತು ದಾಲ್ಚಿನ್ನಿ ಬಿ) ಏಲಕ್ಕಿ ಮತ್ತು ಶುಂಠಿ
ಸಿ) ಮೆಣಸು ಮತ್ತು ಏಲಕ್ಕಿ ಡಿ) ಶುಂಠಿ ಮತ್ತು ಮೆಣಸು

6. ಬ್ರಿಟಿಷರು ಟಿಪ್ಪುವಿನೊಂದಿಗೆ ನಡೆಸಿದ ಯುದ್ಧದಲ್ಲಿ ಗಳಿಸಿದ ಮುಂಬೈ ಕರ್ನಾಟಕದ ಒಂದು ಪ್ರದೇಶ

ಉ. ಎ) ಇಕ್ಕೇರಿ ಬಿ) ಹೊನ್ನಾವರ ಸಿ) ಧಾರವಾಡ ಡಿ) ಬಿಜಾಪುರ

7. ಗುಡ್ಡೇಮನೆ ಅಪ್ಪಯ್ಯಗೌಡನು ಈ ಪ್ರದೇಶದಲ್ಲಿ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ನೇತೃತ್ವ ವಹಿಸಿದನು.

ಉ. ಎ) ಕೆಳದಿ ಬಿ) ಸುರಪುರ ಸಿ) ಕೊಡಗು ಡಿ) ಧಾರವಾಡ

8. ಮರಾಠರು ಕೆನರಾ ಪ್ರದೇಶವನ್ನು ವಶಪಡಿಸಿಕೊಂಡಿದ್ದು.

ಉ. ಎ) 1686 ಬಿ) 1763 ಸಿ) 1707 ಡಿ) 1700

### II. ಒಂದು ವಾಕ್ಯದಲ್ಲಿ ಉತ್ತರಿಸಿ:

1. 1857 ರಲ್ಲಿ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ನಡೆದ ಪ್ರಮುಖ ಬಂಡಾಯ ಯಾವುದು?

ಉ. ನರಗುಂದ ಬಂಡಾಯ

2. 18ನೇಯ ಶತಮಾನದಲ್ಲಿ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾದೇಶಿಕ ಶಕ್ತಿಗಳಾವುವು?

ಉ. ಮೈಸೂರು, ಮರಾಠರು, ಹೈದರಾಬಾದಿನ ನಿಜಾಮರು, ಕರ್ನಾಟಿಕ್ ನವಾಬರು

3. ಆರಂಭಿಕ ಒಡೆಯರಲ್ಲಿ ಪ್ರಮುಖರಾದವರು ಯಾರು?

ಉ. ಕಂಠೀರವ ನರಸರಾಜ ಮತ್ತು ಚಿಕ್ಕದೇವರಾಜ

4. ಬ್ರಿಟಿಷರು ಕೊಡಗಿನ ಯಾವ ದೊರೆಯನ್ನು ಗಡೀಪಾರು ಮಾಡಿದರು?

ಉ. ಚಿಕ್ಕವೀರ ರಾಜ

**III. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಶ್ರೀರಂಗಪಟ್ಟಣ ಒಪ್ಪಂದವು ಟಿಪ್ಪುವಿಗೆ ಅನಿವಾರ್ಯವಾಗಿತ್ತು ವಿಮರ್ಶಿಸಿರಿ.

ಉ.
* ಇಂಗ್ಲೀಷರು ಪ್ರಬಲರಾಗಿದ್ದರು
* ಟಿಪ್ಪುವಿಗೆ ಯಾವ ದೇಶೀಯ ಸಂಸ್ಥಾನಗಳ ನೆರವು ದೊರಕಲಿಲ್ಲ.
* ಎರಡು ವರ್ಷಗಳ ದೀರ್ಘಕಾಲ ಹೋರಾಟದಿಂದ ಟಿಪ್ಪು ಬಳಲಿದ್ದನು.
* 3ನೇ ಮೈಸೂರು ಯುದ್ಧದಲ್ಲಿ ಟಿಪ್ಪು ತೀವ್ರವಾಗಿ ಸೋಲನ್ನು ಅನುಭವಿಸಿದ್ದನು.

2. ಕೊಡಗಿನ ದಂಗೆಯಲ್ಲಿ ಗುಡ್ಡೇಮನೆ ಅಪ್ಪಯ್ಯ ಗೌಡರ ಪಾತ್ರವನ್ನು ವಿವರಿಸಿ.

ಉ.
* ಕೊಡಗಿನ ಒಳಗೆ ಅಪ್ಪಯ್ಯ ಗೌಡರು ಹೋರಾಟದ ನೇತೃತ್ವ ವಹಿಸಿಕೊಂಡರು
* ಬ್ರಿಟಿಷರು ದಿವಾನರ ಮೂಲಕ ಹೋರಾಟವನ್ನು ಹತ್ತಿಕ್ಕಿದರು.
* ಮದ್ರಾಸಿನಿಂದ ಬಂದ ಸೈನ್ಯ ಮಂಗಳೂರಿನಿಂದ ಹೋರಾಟಗಾರರನ್ನು ಹಿಮ್ಮೆಟ್ಟಿಸಿತು.
* ಹೋರಾಟಗಾರರನ್ನು ಗಡೀಪಾರು ಮಾಡಲಾಯಿತು ಹಾಗೂ ನೇಣುಗಂಭಕ್ಕೆ ಹಾಕಲಾಯಿತು.

3. ಎರಡನೆ ಮೈಸೂರು ಯುದ್ಧಕ್ಕೆ ಕಾರಣಗಳೇನು?

ಉ.
* ಮಾಹೆಯು ಫ್ರೆಂಚರ ವಸಾಹತುವಾಗಿತ್ತು.
* ಮಾಹೆ ಹೈದರಾಲಿಯ ನಿಯಂತ್ರಣಕ್ಕೆ ಒಳಪಟ್ಟಿತ್ತು.
* ಮಾಹೆಯನ್ನು ಬ್ರಿಟಿಷರು ವಶಪಡಿಸಿಕೊಂಡರು

4. ನಾಲ್ಕನೆ ಆಂಗ್ಲೋ–ಮೈಸೂರು ಯುದ್ಧದ ಪರಿಣಾಮಗಳೇನು?

ಉ.
* ಮೈಸೂರು ರಾಜ್ಯದ ಪ್ರದೇಶವನ್ನು ಬ್ರಿಟಿಷರು ಮತ್ತು ನಿಜಾಮನು ಹಂಚಿಕೊಂಡರು
* ಹಳೇ ಮೈಸೂರು ಭಾಗವನ್ನು ಮುಮ್ಮಡಿ ಕೃಷ್ಣ ರಾಜ ಒಡೆಯರಿಗೆ ಒಪ್ಪಿಸಲಾಯಿತು.
* ಕೊಡಗಿನ ಅನೇಕ ಪ್ರದೇಶಗಳನ್ನು ಕೊಡಗಿನ ರಾಜನಿಗೆ ನೀಡಲಾಯಿತು.

5. ಲಾರ್ಡ್ ವೆಲ್ಲೆಸ್ಲಿ ಟಿಪ್ಪುವಿನ ಮೇಲೆ ಯುದ್ಧ ಸಾರಲು ಕಾರಣಗಳೇನು?

ಉ.
* ಸಹಾಯಕ ಸೈನ್ಯ ಪದ್ಧತಿಯನ್ನು ಟಿಪ್ಪು ತಿರಸ್ಕರಿಸಿದನು.
* ಟಿಪ್ಪು ರಾಜಧಾನಿ ರಕ್ಷಣೆಗಾಗಿ ಕ್ರಮಕೊಂಡಿದ್ದು.
* ಫ್ರೆಂಚರಿಂದ ಸೈನಿಕರಿಗೆ ತರಬೇತಿ ಕೊಡಿಸಿದ್ದು.
* ಟರ್ಕಿ, ಫ್ರಾನ್ಸ್ ಮುಂತಾದ ದೇಶಗಳನ್ನು ಸಹಾಯಕ್ಕಾಗಿ ಸಂಪರ್ಕಿಸಿದ್ದು.

# ಅಧ್ಯಾಯ–3

# ಜನಪದ ಚರಿತ್ರೆ

## ಕಾರ್ಡ್–3

## I. ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

1. ಮೌಖಿಕ ಚರಿತ್ರೆಯನ್ನು ನಿರೂಪಿಸುವ ಒಂದು ಆಕರ

ಉ. ಎ) ನಾಣ್ಯಗಳು ಬಿ) ಶಾಸನಗಳು ಸಿ) ಲಾವಣಿಗಳು ಡಿ) ಪ್ರವಾಸಿ ಕಥನಗಳು

2. ಒಂದು ಕಾಲ ಚಕ್ರದ ಆವರ್ತನ ಮುಗಿದ ಮೇಲೆ ಮತ್ತೊಂದು ಕಾಲ ಚಕ್ರ ಆವರ್ತನವಾಗುವುದನ್ನು ಹೀಗೆಂದು ಕರೆಯುವರು.

ಉ. ಎ) ಕಾಲ ಬಿ) ಯುಗ ಸಿ) ಶತಮಾನ ಡಿ) ವರ್ಷ

## II. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಪಾಶ್ಚಿಮಾತ್ಯರ ಪ್ರಭಾವದಿಂದುಟಾದ ಚರಿತ್ರೆ ಬರವಣಿಗೆಯ ಮಾದರಿ ಯಾವುದು?

ಉ. ಸರಳ ರೇಖಾತ್ಮಕ ಕಾಲದ ಮಾದರಿ

2. ಚರಿತ್ರೆ ಬರವಣಿಗೆಯ ರೇಖಾತ್ಮಕ ಮಾದರಿಯನ್ನು ಅರ್ಥೈಸಿ.

ಉ. * ಒಂದನೇ ಇಸವಿ ಆದ ಮೇಲೆ ಎರಡನೆಯ ಇಸವಿ ಬರಬೇಕು.

* 17ನೇಯ ಶತಮಾನದ ಘಟನೆಯನ್ನು ನಿರೂಪಿಸಿದ ನಂತರ 18ನೆಯ ಶತಮಾನದ ಘಟನೆಯನ್ನು ನಿರೂಪಿಸುವುದು.

3. ಆಫ್ರಿಕನ್ನರಿಗೆ ಚರಿತೆಯನ್ನು ಬರೆಯಲು ಸಹಾಯವಾದ ಅಂಶ ಯಾವುದು?

ಉ. ಮೌಖಿಕ ಪರಂಪರೆಯ ಮೂಲಕ, ಸಮುದಾಯಗಳು ವ್ಯಕ್ತ ಪಡಿಸುವ ಸಂವೇದನೆಗಳ ಸಹಾಯದಿಂದ ಚರಿತ್ರೆ ರಚಿಸಲಾಯಿತು.

# ಅಧ್ಯಾಯ–4

# ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

## ಕಾರ್ಡ್–3

## I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

1. ಸಾಗರೋತ್ತರ ಆಕ್ರಮಣ ಮತ್ತು ವಸಾಹತು ಸ್ಥಾಪನೆಗೆ ಕಾರಣವಾದ ಒಂದು ಪ್ರಮುಖ ಅಂಶ

ಉ. ಎ) ರಾಷ್ಟ್ರಗಳ ವಿಸ್ತರಣಾ ನೀತಿ   ಬಿ) ಸರಕು ವ್ಯಾಪಾರೀಕರಣ

ಸಿ) ಕಚ್ಚಾ ವಸ್ತುವನ್ನು ಪಡೆಯಲು   ಡಿ) ರಾಷ್ಟ್ರಗಳಲ್ಲಿನ ಪೈಪೋಟಿ

2. ಬಂಡವಾಳ ಶಾಹಿತ್ವ ವ್ಯವಸ್ಥೆಯಿಂದ ಕಣ್ಮರೆಯಾದ ಸಮಾಜದ ಒಂದು ವರ್ಗ

ಉ. ಎ) ವರ್ತಕ ವರ್ಗ   ಬಿ) ಪ್ರಭುತ್ವ ವರ್ಗ

ಸಿ) ಕರಕುಶಲಕರ್ಮಿವರ್ಗ   ಡಿ) ರೈತಾಪಿ ವರ್ಗ

3. 1909ರ ಮಿಂಟೋ–ಮಾರ್ಲೆ ಶಾಸನ ಈ ಅಂಶವನ್ನು ಒಳಗೊಂಡಿಲ್ಲ

ಉ. ಎ) ಕೇಂದ್ರ ಶಾಸಕಾಂಗದ ವಿಸ್ತರಣೆ

ಬಿ) ಪ್ರಾಂತ್ಯ ಶಾಸನ ಸಭೆ ವಿಸ್ತರಣೆ

ಸಿ) ಮತೀಯ ಆಧಾರದಲ್ಲಿ ಪ್ರತ್ಯೇಕ ಚುನಾವಣಾ ಕ್ಷೇತ್ರ

ಡಿ) ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿಕೆ

4. ಸಹಾಯಕ ಸೈನ್ಯ ಪದ್ಧತಿಯನ್ನು ಮೊದಲು ಅಂಗೀಕರಿಸಿದವರು

ಉ. ಎ) ಮೈಸೂರಿನ ಒಡೆಯರು   ಬಿ) ಔದ್‌ನ ನವಾಬು

ಸಿ) ಹೈದರಾಬಾದ್‌ನ ನಿಜಾಮ   ಡಿ) ಬಂಗಾಳದ ನವಾಬ

## II. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಸಹಾಯಕ ಸೈನ್ಯ ಪದ್ಧತಿಯನ್ನು ಅರ್ಥೈಸಿರಿ.

ಉ. * ಒಪ್ಪಂದ ಒಳಪಟ್ಟವರು ಇಂಗ್ಲೀಷ್ ಸೈನ್ಯದ ತುಕಡಿಯನ್ನು ಇಟ್ಟು ಕೊಳ್ಳುವುದು (ನಿರ್ವಹಣೆ ಮಾಡುವುದು)

* ಆ ರಾಜ್ಯದಲ್ಲಿ ಬ್ರಿಟಿಷ್ ರೆಸಿಡೆಂಟನ ನೇಮಕದ ಮೂಲಕ ಆಂತರಿಕ ವ್ಯವಹಾರದಲ್ಲಿ ಬ್ರಿಟಿಷರ ಹಸ್ತಕ್ಷೇಪ

2. ಸಹಾಯಕ ಸೈನ್ಯ ಪದ್ಧತಿಯ ಮುಖ್ಯ ಉದ್ದೇಶವೇನು?

ಉ. ಇಂಗ್ಲೀಷರ ದೊಡ್ಡ ಸೈನ್ಯವನ್ನು ದೇಶೀಯ ಅರಸರ ವೆಚ್ಚದಲ್ಲಿ ನಿರ್ವಹಿಸುವುದು.

3. ಸರಕುಗಳ ಆಮದು ಮತ್ತು ರಫ್ತಿನಿಂದಾದ ವ್ಯತ್ಯಾಸವನ್ನು ಯಾವ ರೂಪದಲ್ಲಿ ನೀಡಬೇಕಾಗಿತ್ತು?

ಉ. ಅಮೂಲ್ಯವಾದ ಲೋಹಗಳ ರೂಪ

4. ಭಾರತದ ಸಂವಿಧಾನ ಬೆಳವಣಿಗೆಯಲ್ಲಿ 1861ರ ಕಾಯ್ದೆ ಏಕೆ ಮಹತ್ವವನ್ನು ಪಡೆದಿದೆ?

ಉ. ಕಾರ್ಯಕಾರಿ ಸಮಿತಿಯಲ್ಲಿ ಭಾರತೀಯರನ್ನು ನಾಮಕರಣ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಯಿತು.

5. ಆಡಳಿತ ಇಲಾಖೆಯಲ್ಲಿ ವಿಷಯಗಳನ್ನು ವಿಂಗಡಿಸಿದ ಶಾಸನ ಯಾವುದು?

ಉ. 1919ರ ಭಾರತ ಸರ್ಕಾರದ ಶಾಸನ (ಮಾಂಟೆಗ್ಯೂ ಚೆಮ್ಸ್ ಫರ್ಡ್ ಸುಧಾರಣೆ).

6. ಹೋಳ್ಕರ್ ವಿರುದ್ಧ ಹೋರಾಡಿದ ಮರಾಠ ನಾಯಕರುಗಳಾರು?

ಉ. ಸಿಂಧ್ಯಾ, ಪೇಶ್ವೆ ಮತ್ತು ಎರಡನೆಯ ಬಾಜೀರಾವ್

7. ಬಂಡವಾಳ ಶಾಹಿತ್ವಕ್ಕೆ ಕಾರಣವಾದ ಅಂಶಗಳಾವುವು?

ಉ. ಯುರೋಪಿನಲ್ಲಿನ ಹೊಸ ತಂತ್ರ ಜ್ಞಾನ ಮತ್ತು ಅನ್ವೇಷಣೆಗಳು.

8. ಉತ್ತರಾಧಿಕಾರತ್ವಕ್ಕಾಗಿ ನಡೆದ ಯುದ್ಧದಲ್ಲಿ ನಾನಾ ಪಡ್ನವೀಸನು ಯಾರನ್ನು ಬೆಂಬಲಿಸಿದನು?

ಉ. ಎರಡನೇ ಪೇಶ್ವೆ ಮಾಧವರಾವ್

9. ಭಾರತದಲ್ಲಿ ಆಧುನಿಕ ಕೈಗಾರಿಕೆಗಳು ಹಾಗೂ ಸಾರಿಗೆಯಿಂದ ಉದಯವಾದ ವರ್ಗಗಳಾವುವು?

ಉ. ಭೂ ಹಿಡುವಳಿದಾದರು, ಗೇಣಿದಾರರು, ಬಂಡವಾಳ ಶಾಹಿಗಳು, ಕಾರ್ಮಿಕ ವರ್ಗ, ಸಾರಿಗೆ ವರ್ಗ, ಕೃಷಿ ಕಾರ್ಮಿಕ ವರ್ಗ.

10. 1773ರ ರೆಗ್ಯುಲೇಟಿಂಗ್ ಶಾಸನದ ಮುಖ್ಯಾಂಶಗಳೇನು?

ಉ.
* ದ್ವಿಮುಖ ಸರ್ಕಾರದ ರದ್ದು
* ಬಂಗಾಳದ ಗವರ್ನರ್ ಹುದ್ದೆ 'ಭಾರತದ ಗರ್ವನರ್ ಜನರಲ್' ಎಂದು ಕರೆಯಲಾಯಿತು.
* ಸಲಹೆಗಾಗಿ ಸಲಹಾ ಸಮಿತಿ ನೇಮಕ
* ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯ ಸ್ಥಾಪನೆ

11. 1784ರ ಪಿಟ್ಸ್ ಇಂಡಿಯಾ ಶಾಸನದ ಮುಖ್ಯಾಂಶಗಳೇನು?

ಉ.
* ಉತ್ತಮ ಆಡಳಿತಕ್ಕಾಗಿ ನಿಯಂತ್ರಣ ಮಂಡಳಿ ನೇಮಕಕ್ಕಾಗಿ ಅವಕಾಶ
* ಸಲಹಾ ಸಮಿತಿಯಲ್ಲಿ ಪ್ರೈವಿ ಕೌನ್ಸಿಲ್ ಸ್ಥಾಪಿಸಲು ಅವಕಾಶ
* ಬ್ರಿಟಿಷ್ ಸರ್ಕಾರದ ನಿಯಮಕ್ಕೆ ಈಸ್ಟ್ ಇಂಡಿಯಾ ಕಂಪೆನಿ ಒಳಪಟ್ಟಿತು.

12. 1861 ರ ಇಂಡಿಯನ್ ಕೌನ್ಸಿಲ್ ಕಾಯ್ದೆಯ ಮುಖ್ಯಾಂಶಗಳೇನು?

ಉ.
* ಕಾರ್ಯಕಾರಿ ಸಮಿತಿಯಲ್ಲಿ ಭಾರತೀಯರ ನಾಮಕರಣಕ್ಕೆ ಅವಕಾಶ
* ಪ್ರಥಮ ಬಾರಿಗೆ ಶಾಸನೀಯ ಮತ್ತು ಆಡಳಿತ ಕಾರ್ಯದಲ್ಲಿ ಬಾರತೀಯರಿಗೆ ಅವಕಾಶ.
* ಭಾರತದ ಸಂವಿಧಾನ ಬೆಳವಣಿಯಲ್ಲಿ ಪ್ರಮುಖವಾದದ್ದು

13. 1909ರ ಮಿಂಟೋ–ಮಾರ್ಲೆ ಸುಧಾರಣೆಯ ಮುಖ್ಯಾಂಶಗಳೇನು ?

ಉ. * ಕೇಂದ್ರ ಶಾಸಕಾಂಗದ ವಿಸ್ತರಣೆ

* ಪ್ರಾಂತ್ಯಗಳ ಶಾಸನ ಸಭೆಯ ವಿಸ್ತರಣೆ
* ಪ್ರಾಂತೀಯ ಶಾಸನ ಸಭೆಗಳಲ್ಲಿ ಚುನಾಯಿತರಿಗೂ ಅವಕಾಶ
* ಮತೀಯ ಆಧಾರದಲ್ಲಿ ಪ್ರತ್ಯೇಕ ಚುನಾವಣೆ ಕ್ಷೇತ್ರ ಆರಂಭ

14. 1935ರ ಭಾರತ ಸರ್ಕಾರ ಕಾಯ್ದೆಯ ಮುಖ್ಯಾಂಶಗಳೇನು?

ಉ. * ಇದು ಒಂದು ಮುಖ್ಯ ದಾಖಲೆ, ಸ್ವತಂತ್ರ್ಯ ಭಾರತ ಸಂವಿಧಾನಕ್ಕೆ ಆಧಾರ.

* ಅಖಿಲ ಭಾರತೀಯ ಸಂಯುಕ್ತ ರಾಜ್ಯಕ್ಕೆ ಅವಕಾಶ
* ಆಡಳಿತದಲ್ಲಿ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿಕೆ.

# ಅಧ್ಯಾಯ–5
# ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

## ಕಾರ್ಡ್–3

## I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

1. 'ಸತ್ಯಾರ್ಥ ಪ್ರಕಾಶ' ಕೃತಿಯನ್ನು ದಯಾನಂದ ಸರಸ್ವತಿರವರು ರಚಿಸಿದರೆ, 'ಗುಲಾಮಗಿರಿ' ಕೃತಿಯನ್ನು ರಚಿಸಿದವರು.

ಉ. ಎ) ರಾಮ್ ಮೋಹನ್ ರಾಯ್    ಬಿ) ದಯಾನಂದ ಸರಸ್ವತಿ
ಸಿ) <u>ಜ್ಯೋತಿಭಾಪುಲೆ</u>    ಡಿ) ಆತ್ಮಾರಾಂಪಾಂಡುರಂಗ

2. 'ಮೋಕ್ಷ ಸಾಧನೆಗಾಗಿ ಸಮಾಜ ಸೇವೆಯೇ ಮುಖ್ಯ'ವೆಂದು ಹೇಳಿದವರು.

ಉ. ಎ) ರಾಮಕೃಷ್ಣ ಪರಮ ಹಂಸ    ಬಿ) ಅನಿಬೆಸೆಂಟ್
ಸಿ) <u>ಸ್ವಾಮಿ ವಿವೇಕಾನಂದ</u>    ಡಿ) ಗಾಂಧೀಜಿ

3. ಇವುಗಳ ಸರಿ ಹೊಂದುವ ಉತ್ತರದ ಗುಂಪು

ಉ.

| ಎ | ಬಿ |
|---|---|
| 1) ರಾಮ್ ಮೋಹನ್‌ರಾಯ್ | ಎ) ಗುಲಾಮಗಿರಿ |
| 2) ದಯಾನಂದ ಸರಸ್ವತಿ | ಬಿ) ಯಂಗ್ ಇಂಡಿಯಾ |
| 3) ಅನಿಬೆಸೆಂಟ್ | ಸಿ) ಸಂವಾದ ಕೌಮುದಿ |
| 4) ಜ್ಯೋತಿಭಾಪುಲೆ | ಡಿ) ಸತ್ಯಾರ್ಥ ಪ್ರಕಾಶ |

| | | | |
|---|---|---|---|
| ಎ) 1–ಸಿ | 2–ಡಿ | 3–ಎ | 4–ಬಿ |
| ಬಿ) <u>1–ಸಿ</u> | <u>2–ಡಿ</u> | <u>3–ಬಿ</u> | <u>4–ಎ</u> |
| ಸಿ) 1–ಬಿ | 2–ಡಿ | 3–ಸಿ | 4–ಎ |
| ಡಿ) 1–ಡಿ | 2–ಎ | 3–ಸಿ | 4–ಬಿ |

4. ಸತಿಸಹಗಮನ ಪದ್ಧತಿಯ ವಿರುದ್ಧದ ಕಾಯ್ದೆಯನ್ನು ಬೆಂಬಲಿಸಿದವರು.

ಉ. ಎ) ಲಾರ್ಡ್‌ವಿಲಯಂ ಬೆಂಟಂಕ್    ಬಿ) <u>ರಾಮ್ ಮೋಹನ್ ರಾಯ್</u>
ಸಿ) ದಯಾನಂದ ಸರಸ್ವತಿ    ಡಿ) ಸಯ್ಯದ್ ಅಹಮದ್ ಖಾನ್

## II. ಒಂದು ವಾಕ್ಯದಲ್ಲಿ ಉತ್ತರಿಸಿ:

1. ದಯಾನಂದ ಸರಸ್ವತಿಯವರ ಕೃತಿಯನ್ನು ಹೆಸರಿಸಿ

ಉ. ಸತ್ಯಾರ್ಥ ಪ್ರಕಾಶ

2. ಭಾರತದಲ್ಲಿ ಥಿಯಾಸಾಫಿಕಲ್ ಸೊಸೈಟಿಯ ಕಾರ್ಯ ಚಟುವಟಿಕೆಯನ್ನು ಆರಂಭಿಸಿದವರಾರು?

ಉ. ಅನಿಬೆಸೆಂಟ್

3. 'ಆರ್ಯ ಸಮಾಜ'ದ ಪ್ರಮುಖ ಚಟುವಟಿಕೆ ಯಾವುದು?

ಉ. ಶುದ್ಧಿ ಚಳುವಳಿ

4. ಪಾನ ನಿಷೇಧವನ್ನು ಒತ್ತಾಯಿಸಿದ (ಸಂಸ್ಥೆ) ಸಮಾಜ ಯಾವುದು?

ಉ. ಸತ್ಯಶೋಧಕ ಸಮಾಜ

5. 'ಆಂಗ್ಲೋ ಓರಿಯಂಟಲ್' ಕಾಲೇಜ್ ಯಾವ ಹೆಸರಿನಿಂದ ಪ್ರಖ್ಯಾತವಾಯಿತು?

ಉ. ಆಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ

6. ರಾಮಕೃಷ್ಣ ಪರಮಹಂಸರ ಚಿಂತನೆಗೆ ಆಧಾರವಾದ ಅಂಶ ಯಾವುದು?

ಉ. ಭಾರತೀಯ ಸಂಸ್ಕೃತಿ

**III. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ರಾಮ್ ಮೋಹನ್‌ರಾಯ್‌ರವರನ್ನು 'ಭಾರತೀಯ ನವೋದಯ ಜನಕ' ಎಂದು ಕರೆಯಲು ಕಾರಣವೇನು?

ಉ. * ಆಧುನಿಕ ವಿಜ್ಞಾನ ಮತ್ತು ಇಂಗ್ಲೀಷ್ ಶಿಕ್ಷಣ ಭಾರತದ ನವೀಕರಣಕ್ಕೆ ಅವಶ್ಯಕವೆಂದು ಪ್ರತಿಪಾದಿಸಿದರು.
* ಸ್ತ್ರೀ ಶೋಷಣೆ, ಬಾಲ್ಯವಿವಾಹ ಮತ್ತು ಸತಿ ಪದ್ಧತಿಯನ್ನು ವಿರೋಧಿಸಿದರು.
* ಸತಿ ಸಹಗಮನ ವಿರುದ್ಧ ಕಾಯ್ದೆಯನ್ನು ಬೆಂಬಲಿಸಿದರು.
* ಯಜ್ಞ-ಯಾಗಾದಿಗಳನ್ನು ಖಂಡಿಸಿ, ಪುರೋಹಿತಶಾಹಿಯನ್ನು ವಿರೋಧಿಸಿದರು.
* ಪತ್ರಿಕೋದ್ಯಮದ ಮೂಲಕ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಿದರು.
* ಮೂರ್ತಿಪೂಜೆಯನ್ನು ಪ್ರಶ್ನಿಸಿದ ಅವರು, ಉಪನಿಷತ್ತುಗಳ ನಿಜವಾದ ಅರ್ಥವನ್ನು ತಿಳಿಸಿದರು.

2. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯಲ್ಲಿ ದಯಾನಂದ ಸರಸ್ವತಿಯ ಪಾತ್ರವೇನು?

ಉ. * ವೇದಗಳಿಗೆ ಹಿಂತಿರುಗಿ' ಎಂಬ ಕರೆಯ ಮೂಲಕ 'ಶುದ್ಧೀಕರಣ ಚಳುವಳಿ'ಯನ್ನು ಆರಂಭಿಸಿದರು.
* ಜಾತಿ ಪದ್ಧತಿ, ವಿಗ್ರಹಾರಾಧನೆಗಳನ್ನು ಖಂಡಿಸಿದರು.
* ಅರ್ಥಹೀನ ಪದ್ಧತಿಗಳನ್ನು ಮತ್ತು ಪುರೋಹಿತ ಶಾಹಿಯನ್ನು ತಿರಸ್ಕರಿಸಿದರು.
* ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು.
* ಜನರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ನೀಡಿದರು.
* ಶಾಲಾ-ಕಾಲೇಜುಗಳನ್ನು ಅನೇಕ ಕಡೆ ಸ್ಥಾಪಿಸಿದರು.
* ಸ್ವಾಭಿಮಾನ ಮತ್ತು ಸ್ವಾವಲಂಬನೆಗೆ ಕರೆ ನೀಡಿದರು.

## ಅಧ್ಯಾಯ–6
# ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

### ಕಾರ್ಡ್–3

**I. ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

1. 'ಬ್ರಿಟಿಷರಿಂದ ಪದಚ್ಯುತಗೊಂಡ ರಾಜರು'

ಉ. ಎ) ಮೊಘಲ್ ಚಕ್ರವರ್ತಿ ಮತ್ತು ಔದ್‌ನವಾಬ
ಬಿ) ಹೈದರಾಬಾದ್ ಮತ್ತು ಔದ್‌ನ ನವಾಬರು
ಸಿ) ಮೊಘಲ್ ಚಕ್ರವರ್ತಿ ಮತ್ತು ಹೈದರಾಬಾದ್ ನವಾಬ
ಡಿ) ಔದ್ ನವಾಬ ಮತ್ತು ಷಾ ಆಲಂ

2. ಭಾರತದ ವ್ಯಾಪಾರಿಗಳು ನಿರುದ್ಯೋಗಿಗಳಾಗಲು ಒಂದು ಕಾರಣ.

ಉ. ಎ) 1857ರ ಸ್ವಾತಂತ್ರ್ಯ ಹೋರಾಟ ಬಿ) ಉತ್ಪಾದನೆಯಲ್ಲಿ ಹೆಚ್ಚಳ
ಸಿ) ಇಂಗ್ಲಿಷರು ದುಬಾರಿ ಸುಂಕ ಹೇರಿದ್ದು ಡಿ) ಗೃಹ ಕೈಗಾರಿಕೆಗಳು ಅವನತಿ ಹೊಂದಿದ್ದು

3. ಬ್ರಿಟಿಷ್ ಸರ್ಕಾರ ಮತ್ತು ರೈತರ ಮಧ್ಯೆ ಇದ್ದ ಮಧ್ಯವರ್ತಿ

ಉ. ಎ) ಗವರ್ನರ್ ಜನರಲ್ ಬಿ) ಸೈನಿಕರು
ಸಿ) ವೈಸರಾಯ್ ಡಿ) ಜಮೀನ್ದಾರ

4. ಝಾನ್ಸಿಯಲ್ಲಿ ದಂಗೆಯ ನಾಯಕತ್ವ ವಹಿಸಿದರು.

ಉ. ಎ) ನಾನಾ ಸಾಹೇಬ ಬಿ) ಲಕ್ಷ್ಮೀಬಾಯಿ
ಸಿ) ತಾತ್ಯಾಟೋಪಿ ಡಿ) ಎರಡನೇ ಬಹದ್ದೂರ್ ಷಾ

**II. ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಮಂಗಲ ಪಾಂಡೆಯನ್ನು ಗಲ್ಲಿಗೇರಿಸಲು ಕಾರಣವೇನು?

ಉ. ಬ್ಯಾರಕ್ ಪುರದಲ್ಲಿ ಸೈನ್ಯಾಧಿಕಾರಿಯನ್ನು ಕೊಲೆ ಮಾಡಿದ ಕಾರಣ

2. ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು (ಸಿಪಾಯಿಗಳು) ಜನರ ವಿಶ್ವಾಸ ಕಳೆದುಕೊಳ್ಳಲು ಕಾರಣವೇನು?

ಉ. ಸಿಪಾಯಿ ಮಾಡಿದಂತಹ ದರೋಡೆ ಹಾಗೂ ಲೂಟಿಗಳಂತಹ ಗಂಭೀರವಾದ ತಪ್ಪುಗಳಿಂದ

3. 1857ರ ಸ್ವಾತಂತ್ರ್ಯ ಹೋರಾಟ ನಂತರ ಭಾರತದ ವ್ಯವಹಾರವನ್ನು ಯಾರಿಗೆ ವಹಿಸಲಾಯಿತು?

ಉ. ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿ

4. ಬ್ರಿಟನ್ ರಾಣಿಯು ಯಾವ ವರ್ಷದಲ್ಲಿ ಘೋಷಣೆ ಹೊರಡಿಸಿದಳು?

ಉ. 1858

**III. ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೀಜಾಂಕುರವಾದ ಘಟನೆಯನ್ನು ವಿವರಿಸಿ.

ಉ. * ಮೀರತ್ ಬ್ರಿಟಿಷರ ಪ್ರಬಲ ಸೇನಾನೆಲೆಯಾಗಿತ್ತು.
* ಭಾರತೀಯ ಸೈನಿಕರು ತಮಗೆ ವಿತರಿಸಿದ 'ರಾಯಲ್ ಎನ್‌ಫೀಲ್ಡ್' ಬಳಸಲು ನಿರಾಕರಿಸಿದರು.
* ನಿರಾಕರಿಸಿದ ಸಿಪಾಯಿಗಳನ್ನು ಬಂಧಿಸಲಾಯಿತು.
* ಇದರಿಂದ ಕೆರಳಿ ಸೈನಿಕರು ಸೆರೆಮನೆಯಲ್ಲಿದ್ದ ಭಾರತೀಯ ಸಿಪಾಯಿಗಳನ್ನು ಬಿಡುಗಡೆ ಮಾಡಿದರು.

2. 1858ರ ಬ್ರಿಟನ್‌ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?

ಉ. * ಕಂಪನಿಯು ದೇಶೀ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸುವುದು.
* ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈ ಬಿಡುವುದು
* ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು.
* ಕಾನೂನಿನ ಮುಂದೆ ಎಲ್ಲರಿಗೂ ಸಮಾನ ಸ್ಥಾನಮಾನ ಕಲ್ಪಿಸುವುದು.
* ಧಾರ್ಮಿಕ ಸಹಿಷ್ಣುತೆಯೊಂದಿಗೆ ಧಾರ್ಮಿಕ ವಿಷಯಗಳಲ್ಲಿ ಹಸ್ತ ಕ್ಷೇಪ ಮಾಡದಿರುವುದು.

3. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳೇನು?

ಉ. * ಇದು ದೇಶದ ಬಿಡುಗಡೆಗಾಗಿ ನಡೆದದ್ದಕ್ಕಿಂತ ವ್ಯಕ್ತಿಗಳ ಸ್ವಹಿತಾಸಕ್ತಿ ಮತ್ತು ಹಕ್ಕುಗಳಿಗಾಗಿ ನಡೆದದ್ದು
* ಯೋಜಿತ ದಂಗೆಯಾಗಿರದಿದ್ದದ್ದು
* ಭಾರತೀಯ ಸೈನಿಕರಲ್ಲಿದ್ದ ಬಿನ್ನತೆ
* ಸೂಕ್ತ ಮಾರ್ಗದರ್ಶನದ ಕೊರತೆ
* ಸೈನಿಕರು ಮತ್ತು ಹೋರಾಟಗಾರರಲ್ಲಿ ಶಿಸ್ತಿನ ಕೊರತೆ
* ನಿಶ್ಚಿತ ಗುರಿಯ ಕೊರತೆ
* ದೇಶೀಯ ಸಂಸ್ಥಾನಗಳು ಬೆಂಬಲ ನೀಡದಿದ್ದದ್ದು.

## ಅಧ್ಯಾಯ–7

# ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು

## ಕಾರ್ಡ್–3

**I. 'ಅ' ಪಟ್ಟಿಯಲ್ಲಿ ಪತ್ರಿಕೆಗಳ ಹೆಸರನ್ನು 'ಆ' ಪಟ್ಟಿಯಲ್ಲಿ ಅವುಗಳ ಸಂಪಾದಕರನ್ನು ನೀಡಿದೆ. ಇವುಗಳು ಸರಿಹೊಂದುವ ಉತ್ತರದ ಗುಂಪನ್ನು ಆರಿಸಿ ಬರೆಯಿರಿ.**

1.

| 'ಅ' ಪಟ್ಟಿ | 'ಆ' ಪಟ್ಟಿ |
|---|---|
| 1) ಸಂವಾದ ಕೌಮುದಿ | ಕ) ಸುರೇಂದ್ರನಾಥ ಬ್ಯಾನರ್ಜಿ |
| 2) ಕಲ್ಕತ್ತಾ ಜನರಲ್ | ಖ) ಈಶ್ವರ ಚಂದ್ರಾ ವಿದ್ಯಾಸಾಗರ್ |
| 3) ಸೋಮೆಪ್ರಕಾಶ | ಗ) ರಾಮ್ ಮೋಹನ್ ರಾಯ್ |
| 4) ದಿ ಬೆಂಗಾಲಿ | ಘ) ಬಕ್ಕಿಂಗ್ ಹ್ಯಾಮ್ |

ಉತ್ತರ ಗುಂಪು

ಉ) ಎ) 1–ಗ, 2–ಖ, 3–ಘ, 4–ಕ

ಬಿ) 1–ಗ, 2–ಘ, 3–ಖ, 4–ಕ

ಸಿ) 1–ಕ, 2–ಗ, 2–ಘ, 4–ಖ

ಡಿ) 1–ಘ, 2–ಖ, 3–ಕ, 4–ಗ

2. ಬ್ರಿಟಿಷರು ಭಾರತದಲ್ಲಿ ಏಕರೂಪದ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರಲು ಈ ಕೆಳಗಿನ ಯಾವ ಹೇಳಿಕೆ ಸಹಾಯಕವಾಗಿಲ್ಲ.

ಉ. ಎ) ಬ್ರಿಟಿಷರು ಒಡೆದು ಆಳುವ ನೀಡಿಯನ್ನು ಅನುಸರಿಸಿದರು.

ಬಿ) ಲಾರ್ಡ್ ಡಾಲ್ ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ ಜಾರಿಗೆ ತಂದನು.

ಸಿ) ಲಾರ್ಡ್ ವೆಲ್ಲೆಸ್ಲಿಯು ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೊಳಿಸಿದನು.

ಡಿ) ಬ್ರಿಟಿಷರು ವಿವಿಧ ಕಂದಾಯ ಪದ್ಧತಿಯನ್ನು ಜಾರಿಗೆ ತಂದರು.

**II. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

1. 'ಸಾರಿಗೆ–ಸಂಪರ್ಕವು ಸ್ವಾತಂತ್ರ್ಯ ಚಳುವಳಿಯ ಮೂಲ' ವಿವರಿಸಿ.

ಉ. * ಪರೋಕ್ಷವಾಗಿ ದೇಶೀಯರನ್ನು ಸಂಘಟಿಸಲು, ಸಂಚರಿಸಲು, ಪರಸ್ಪರ ಸಮಸ್ಯೆಗಳನ್ನು ಹಂಚಿಕೊಳ್ಳಲು ಸಹಾಯಕವಾಯಿತು.

* ದೇಶೀಯರನ್ನು ಒಂದುಗೂಡಿಸಿ ರಾಷ್ಟ್ರೀಯತೆಗೆ ಕಾರಣವಾಯಿತು.

## III. ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.

1. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳಾವುವು?

ಉ. * ವಿಲಿಯಂ ಬೆಂಟಂಕ್ ಮೆಕಾಲೆ ವರದಿಯಂತೆ ಇಂಗ್ಲೀಷ್ ಶಿಕ್ಷಣಕ್ಕೆ ಬುನಾದಿ ಹಾಕಿದನು.

* ಈಸ್ಟ್ ಇಂಡಿಯಾ ಕಂಪನಿಯು ಬಂಗಾಳದ ಹಿಂದೂ ಕಾಲೇಜಿನಲ್ಲಿ ಪಾಶ್ಚಿಮಾತ್ಯ ಸಾಹಿತ್ಯ, ಮಾನವ ಶಾಸ್ತ್ರ ಮತ್ತು ವಿಜ್ಞಾನವನ್ನು ಬೋಧಿಸಲು ಪ್ರಾರಂಭಿಸಿತು.
* ಕಲ್ಕತ್ತಾ, ಮದ್ರಾಸ್ ಮತ್ತು ಮುಂಬೈಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದರು.
* ರೂರ್ಕಿಯಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲಾಯಿತು.
* ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಸ್ಥಾಪಿಸಿದರು
* ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಿದರು.

# ಅಧ್ಯಾಯ–8
# ಸ್ವಾತಂತ್ರ್ಯ ಹೋರಾಟ

## ಕಾರ್ಡ್–3

## I. ಒಂದು ವಾಕ್ಯದಲ್ಲಿ ಉತ್ತರಿಸಿ:

1. ಭಾರತೀಯರನ್ನು ಬ್ರಿಟನ್ನಿನ ಪ್ರಜೆಗಳೆಂದು ಪರಿಗಣಿಸಿದ ಸನ್ನದು ಯಾವುದು?

ಉ. 1858ರ ರಾಣಿ ಮಹಾಸನ್ನದು

2. ಮಂದಗಾಮಿಗಳ ನಂಬಿಕೆ ಏನಾಗಿತ್ತು?

ಉ. ಬ್ರಿಟಿಷರ ಆಳ್ವಿಕೆ ಮತ್ತು ನ್ಯಾಯಪರತೆ

3. ಲಾರ್ಡ್ ಕರ್ಜನ್ ಆಡಳಿತಾತ್ಮಕ ನೆಪವೊಡ್ಡಿ ಬಂಗಾಳದ ವಿಭಜನೆಯ ಯೋಜನೆಯನ್ನು ರೂಪಿಸಲು ಕಾರಣವೇನು?

ಉ. ಬಂಗಾಳವು ಬ್ರಿಟಿಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು.

4. ಕ್ರಾಂತಿಕಾರಿಗಳ ಯಾವ ಕನಸನ್ನು ಕಂಡಿದ್ದರು?

ಉ. ಪೂರ್ಣ ಸ್ವಾತಂತ್ರ್ಯ

5. ತೀವ್ರವಾದಿಯಾಗಿದ್ದು ನಂತರ ಕ್ರಾಂತಿಕಾರಿಯಾಗಿ ರೂಪುಗೊಂಡ ಪ್ರಮುಖ ನಾಯಕ ಯಾರು?

ಉ. ಅರವಿಂದೋ ಘೋಷ್

## II. ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.

1. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ' ಈ ಹೇಳಿಕೆಯ ಹಿನ್ನೆಲೆಯಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಹೋರಾಟವನ್ನು ಪುಷ್ಠೀಕರಿಸಿ.

ಉ. 1. ನಮ್ಮ ದೇಶವನ್ನು ಆಳುವವರು ನಮ್ಮವರೇ ಆಗಿದ್ದರೂ ಸಹ ಅಸಮಾನತೆ ಮತ್ತು ಬಡತನಗಳು ಹಾಗೆಯೇ ಉಳಿದಿವೆ.

2. ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ, ಅದರ ವಿನಾಶಕ್ಕೆ ಹೋರಾಟಗಳನ್ನು ರೂಪಿಸಿದರು.

3. 'ಮಹದ್ ಮತ್ತು ಕಾಲಾರಾಂ' ಚಳುವಳಿಗಳನ್ನು ರೂಪಿಸಿದರು.

4. '3 ದುಂಡು ಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿ ಹರಿಜನೋದ್ಧಾರಕ್ಕೆ ಅಮೂಲ್ಯ ಸಲಹೆಗಳನ್ನು ನೀಡಿದ್ದಾರೆ.

5. ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳ ಮೀಸಲಾತಿಗಾಗಿ ಹೋರಾಡಿದರು.

6. 'ಬಹಿಷ್ಕೃತ ಹಿತಕಾರಣಿ ಸಭಾ' ಎಂಬ ಸಂಘಟನೆಯ ಜೊತೆಗೆ 'ಸ್ವತಂತ್ರ ಕಾರ್ಮಿಕ ಪಕ್ಷ'ದ ಮೂಲಕ ಅಸ್ಪೃಶ್ಯತೆ ನಿವಾರಣೆಗೆ ಹೋರಾಡಿದರು.
7. 'ಪ್ರಬುದ್ಧ ಭಾರತ, ಮೂಕನಾಯಕ, ಜನತಲ, ಬಹಿಷ್ಕೃತ ಭಾರತ ಇತ್ಯಾದಿ ಪತ್ರಿಕೆಗಳ ಮೂಲಕ ಸಾಮಾಜಿಕ, ಆರ್ಥಿಕ, ಅಸಮಾನತೆ ನಿವಾರಣೆಗೆ ಹೋರಾಡಿದರು.
8. ಸಂವಿಧಾನದಲ್ಲಿ ಸಮಾನತೆಯನ್ನು ಪ್ರತಿಪಾದಿಸಿ ಅಸ್ಪೃಶ್ಯತಾ ಆಚರಣೆಯ ವಿರುದ್ಧ ಕಾನೂನು ರಕ್ಷಣೆ ನೀಡಿದರು.

2. ಜವಹರಲಾಲ್ ನೆಹರುರವರನ್ನು 'ನವಭಾರತದ ಶಿಲ್ಪಿ' ಎಂದು ಕರೆಯಲಾಗಿದೆ. ಈ ಹೇಳಿಕೆಯನ್ನು ಸಮರ್ಥಿಸಿ.

ಅಥವಾ

ನೆಹರುರವರು ಪ್ರಧಾನ ಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.

ಉ. 1. ದೇಶೀ ಸಂಸ್ಥಾನಗಳ ವಿಲೀನಕ್ಕೆ ಶ್ರಮಿಸಿದರು.
2. ಭಾಷಾವಾರು ಪ್ರಾಂತ್ಯಗಳನ್ನು ರಚಿಸಿ, ಪ್ರಜಾಪ್ರಭುತ್ವಕ್ಕೆ ತಳಹದಿ ಹಾಕಿದರು.
3. ಮಿಶ್ರ ಆರ್ಥಿಕ ನೀತಿಯ ಮೂಲಕ ಭಾರತದ ಆರ್ಥಿಕಾಭಿವೃದ್ಧಿಗೆ ಶ್ರಮಿಸಿದರು.
4. ಬೃಹತ್ ಕೈಗಾರಿಕೆಗಳ ಸ್ಥಾಪನೆ ಮೂಲಕ ಕೈಗಾರೀಕರವಾದ ಪಿತಾಮಹ ಎನಿಸಿಕೊಂಡರು.
5. ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ದೇಶದ ಅಭಿವೃದ್ಧಿಗೆ ಮುನ್ನುಡಿ ಬರೆದರು.
6. ಆಲಿಪ್ತ ನೀತಿಯ ಮೂಲಕ ಭಾರತದ ವಿದೇಶಾಂಗ ನೀತಿಯ ಶಿಲ್ಪಿ ಎನಿಸಿಕೊಂಡರು
7. ಪಂಚಶೀಲತತ್ವಗಳ ಆಧಾರದ ಮೇಲೆ ಯುದ್ಧದಿಂದ ದೂರ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳ ಆಡಳಿತವನ್ನು ಜಾರಿಗೊಳಿಸಿದರು.
8. ಸಮಾಜವಾದಿ ಹಾಗೂ ಕಮ್ಯುನಿಸ್ಟ್ ವಿಚಾರಗಳ ಬಗ್ಗೆ ಮೃದು ಧೋರಣೆ ತಿಳಿಯುವ ಮೂಲಕ ಪೂರ್ಣ ಪ್ರಜಾಪ್ರಭುತ್ವಕ್ಕೆ ಒತ್ತು ನೀಡಿದರು.

3. ರೈತ ಹಾಗೂ ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರ ವಹಿಸಿದ್ದವೆಂಬುದನ್ನು ಹೇಗೆ ಹೇಳುವಿರಿ.

ಉ. 1. ಜಮೀನ್ದಾರರು ಮತ್ತು ಯುರೋಪಿಯನ್ ಪ್ಲಾಂಟರುಗಳ ವಿರುದ್ಧ ರೈತರು ಹಲವಾರು ಕಡೆ ದಂಗೆಗಳನ್ನು ನಡೆಸಿದ್ದರು.
2. ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆ ಬೆಳೆಯುವುದನ್ನು ವಿರೋಧಿಸಿದರು.
3. ಅಧಿಕ ಭೂಕಂದಾಯ ಹೇರಿಕೆಯ ವಿರುದ್ಧ ಹರತಾಳ ನಡೆಸಿದರು.

4. ಅಸಹಕಾರ ಆಂದೋಲನ, ಕರನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ರೈತರು ಸಕ್ರೀಯವಾಗಿ ಭಾಗವಹಿಸಿದ್ದರು.
5. ಎಡ ಪಂಥೀಯ ವಿಚಾರಧಾರೆಗಳಿಂದ ರಚಿತವಾದ 'ಕಿಸಾನ್‌ಸಭಾ'ದ ಮೂಲಕ ಹೋರಾಟಗಳನ್ನು ರೂಪಿಸಿದರು.
6. ಮಹಾರಾಷ್ಟ್ರದಲ್ಲಿ ರೈತರು ಕಡಿಮೆ ಕೂಲಿ ವಿರುದ್ಧ ಚಳುವಳಿ ನಡೆಸಿದರು.
7. ಕಾರ್ಮಿಕ ಸಂಘಟನೆಗಳು ತಮ್ಮ ಹಕ್ಕಿಗಾಗಿ ಹೋರಾಟುತ್ತಾ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿದವು.
8. ಸೆಣಬು, ಬಟ್ಟೆಗಿರಣಿ ಮತ್ತು ರೈಲ್ವೆ ಕೂಲಿ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗ ತೋಡಗಿದರು.

4. ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ಸಂತಾಲರ ಬುಡಕಟ್ಟು ದಂಗೆಯನ್ನು' ಭಾರತದ ಆದ್ಯ ಹೋರಾಟ ಎಂದು ಹೇಗೆ ಹೇಳುವಿರಿ.

ಉ. * ಬ್ರಿಟಿಷರ ಕಾಯಂ ಜಮೀನ್ದಾರಿ ಪದ್ಧತಿಯಿಂದ ಈ ಜನರು ನಿರ್ಗತಿಕರಾದರು.
* ಇವರ ಭೂಮಿಯು ಜಮೀನ್ದಾರರ ಕೈ ಸೇರಿತು.
* ಬಂಗಾಳಿ ಜಮೀನ್ದಾರರು, ಲೇವಾದೇವಿಗಾರರು & ಕಂಪನಿ ಸರ್ಕಾರವು ಇವರ ನೇರ ಶೋಷಣೆಗೆ ಕಾರಣರಾದರು.
* ಕಂಪನಿಯು ಸಂತಾಲರ ಶಾಂತಿಪ್ರಿಯತೆ ಮತ್ತು ಸಭ್ಯತೆಯನ್ನು ಶೋಷಣೆ ಉಪಯೋಗಿಸಿಕೊಂಡಿತು.
* ಅಸಮಧಾನಿತರಾದ ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ, ಜಮೀನ್ದಾರರು ಮತ್ತು ಮಹಾಜನರನ್ನು ಲೂಟಿಮಾಡಿದರು.
* ಬುಡಕಟ್ಟು ಜನರು ಅವರ ಶತೃಗಳನ್ನು ಹತ್ಯೆ ಮಾಡಿದರು.
* ಇವರಿಂದ ಜಮೀನ್ದಾರರು, ಲೇವಾದೇವಿದಾರರು ಪಲಾಯನ ಮಾಡಿದರು.
* ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯ ಬಳಸಿಕೊಂಡರು.
* ಸಂತಾಲರ ದಂಗೆಯು ಕೊನೆಗೊಂಡರೂ, ಅದರ ಸ್ಫೂರ್ತಿಯು ಮುಂದಿನ ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು.

5. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರ ಪಾತ್ರವು ಒಂದು ದಿಟ್ಟ ಮೈಲಿಗಲ್ಲು' ನಿರೂಪಿಸಿ.

ಉ. * ಗಾಂಧೀಜಿಯವರ ಸೌಮ್ಯ ಹೋರಾಟಕ್ಕೆ ಬದಲಾಗಿ ವಿದ್ಯೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಿಸಿ ಹೋರಾಡಲು ಪ್ರೇರೇಪಿಸಿದರು.
* ಸಮಾಜವಾದಿ ಎಡಪಂಥೀಯತೆ ವಿಚಾರದ ಹಿನ್ನೆಲೆಯಲ್ಲಿ ನೆಹರು ಮತ್ತು ಬೋಸರು ಕಾಂಗ್ರೇಸ್ ಸಮಾಜವಾದ ಪಕ್ಷ ಸ್ಥಾಪಿಸಿದರು.

* ಪ್ರಗತಿಪರ ಮತ್ತು ತೀವ್ರತರ ಆಶಯಗಳನ್ನು ಹೊತ್ತ ಫಾರ್ವರ್ಡ್ ಬ್ಲಾಕ್ ಎಂಬ ಪಕ್ಷ ಕಟ್ಟಿದರು.
* ಜರ್ಮನಿಯ ಹಿಟ್ಲರ್‌ನ ಸಹಾಯ ಪಡೆಯುವ ಮೂಲಕ ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿಕರು.
* ಆಜ಼ಾದ್ ಹಿಂದ್ ರೇಡಿಯೋ ಮೂಲಕ ತಮ್ಮ ಭಾಷಣಗಳನ್ನು ಪ್ರಸಾರ ಮಾಡಿ ಹೋರಾಟಕ್ಕೆ ಪ್ರೇರೇಪಿಸಿದರು.
* ರಾಸ್ ಬಿಹಾರಿ ಬೋಸರ ಜೊತೆ ಕೈಜೋಡಿಸಿ ಐ.ಎನ್.ಎ.ಯನ್ನು ಸ್ಥಾಪಿಸಿದರು.
* ಭಾರತೀಯ ರಾಷ್ಟ್ರೀಯ ಸೇನೆಯ ಮಹಿಳಾ ರೆಜಿಮೆಂಟ್‌ಗೆ ಕ್ಯಾಪ್ಟನ್ ಲಕ್ಷ
* ಭಾರತೀಯ ರಾಷ್ಟ್ರೀಯ ಸೇನೆಯ ಮಹಿಳಾ ರೆಜಿಮೆಂಟ್‌ಗೆ ಕ್ಯಾಪ್ಟನ್ ಲಕ್ಷ್ಮಿಯವರು ನೇತೃತ್ವ ವಹಿಸುವಂತೆ ಮಾಡಿದರು.
* 'ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ.' ಎಂಬ ಘೋಷಣೆ ಮೂಲಕ ದೆಹಲಿ ಚಲೋ ಚಳುವಳಿಗೆ ಚಾಲನೆ ನೀಡಿದರು.

6. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರವೇನು?.

ಉ. * ಗಾಂಧೀಜಿಯವರು ತಮ್ಮ ಹೋರಾಟದಲ್ಲಿ 'ಅಹಿಂಸೆ' ಮತ್ತು 'ಸತ್ಯಾಗ್ರಹ'ವನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಂಡರು.
* ಘಟನೆಯ ನೇತೃತ್ವ ವಹಿಸಿದರು.
* ರೌಲತ್ ಕಾಯಿದೆ ವಿರೋಧಿಸಿ ಸತ್ಯಾಗ್ರಹ ನಡೆಸಿದರು.
* ಮುಸ್ಲೀಮರ ಸಹಭಾಗಿತ್ವಕ್ಕಾಗಿ ಖಿಲಾಫತ್ ಚಳುವಳಿ ಬೆಂಬಲಿಸಿದರು.
* ಅಸಹಕಾರ ಚಳವಳಿಯ ಮುಖಾಂತರ ಬ್ರಿಟೀಷ್ ಸರ್ಕಾರದಲ್ಲಿ ಆತಂಕದ ವಾತಾವರಣ ಉಂಟುಮಾಡಿದರು.
* ಕಾನೂನುಭಂಗ ಚಳವಳಿಯ ಪೂರ್ಣ ಜವಬ್ದಾರಿ ಹೊತ್ತ ದಂಡಿ ಸತ್ಯಾಗ್ರಹಕ್ಕೆ ಚಾಲನೆ ನೀಡಿದರು.
* 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' ಚಳುವಳಿಗೆ ಕರೆ ಕೊಟ್ಟರು.
* ಸ್ವದೇಶಿ ಚಳವಳಿಗೆ ಕರೆಯಿತ್ತರು.

7. ಅಸಹಕಾರ ಚಳುವಳಿಯನ್ನು ವಿವರಿಸಿ.

ಉ. * ಗಾಂಧೀಜಿಯವರು ಬ್ರಿಟೀಷರ ವಿರುದ್ಧ 1920ರಲ್ಲಿ ಈ ಚಳವಳಿಗೆ ಕರೆಯಿತ್ತರು.
* ವಿದ್ಯಾರ್ಥಿಗಳು, ವಕೀಲರು, ಗಣ್ಯರು ಚಳವಳಿಯನ್ನು ಬೆಂಬಲಿಸಿ ಶಾಲಾ ಕಾಲೇಜುಗಳನ್ನು, ನ್ಯಾಯಾಲಯಗಳನ್ನು, ಪುರಸ್ಕಾರಗಳನ್ನು ಬಹಿಷ್ಕರಿಸಿದರು.
* ಬ್ರಿಟನ್ ರಾಜಕುಮಾರನ ಭಾರತ ಭೇಟಿ ವಿರೋಧಿ ದೇಶಾದ್ಯಂತ ಹರತಾಳಗಳು ನಡೆದವು.
* ಉತ್ತರ ಪ್ರದೇಶದ ಚೌರಿಚಾರ ಎಂಬಲ್ಲಿ, 1922ರಲ್ಲಿ ಚಳವಳಿ ನಡೆದು, ಗೋಲಿಬಾರ್ ನಡೆದು ಪೊಲೀಸರ ಸಜೀವ ದಹನವಾಯಿತು.

* ಚೌರಿಚಾರ ಘಟನೆಗೆ ಗಾಂಧೀಜಿಯವರನ್ನು ನೇರ ಹೊಣೆಗಾರರನ್ನಾಗಿಸಿದ ಬ್ರಿಟಿಷ್ ಸರ್ಕಾರ ಅವರನ್ನು ಸೆರೆಮನೆಗೆ ದೂಡಿತು.
* 1922ರಲ್ಲಿ ಮೋತಿಲಾಲ್ ನೆಹರು, ಸಿ.ಆರ್.ದಾಸ್‌ರವರು 'ಸ್ವರಾಜ್ಯಪಕ್ಷ'ವನ್ನು ಸ್ಥಾಪಿಸಿದರು.
* ಭಾರತೀಯರನ್ನು ಒಳಗೊಂಡಿರದ ಸೈಮನ್ ಆಯೋಗವನ್ನು ಬಹಿಷ್ಕರಿಸಲಾಯಿತು.
* ಸೈಮನ್ ಆಯೋಗ ವಿರೋಧಿಸಿ ನಡೆದ ಪ್ರತಿಭಟನೆಯಲ್ಲಿ ಲಾಲ ಲಜಪತ್‌ರಾಯರು ಲಾಟಿ ಏಟಿನಿಂದ ಮರಣ ಹೊಂದಿದರು.

8. ಸವಿನಯ ಕಾನೂನುಭಂಗ ಚಳುವಳಿಯನ್ನು ವಿವರಿಸಿ.

ಉ. * ಗಾಂಧೀಜಿಯವರು ವೈಸರಾಯ್ ಇರ್ವಿನ್ನನ ಮುಂದೆ ಉಪ್ಪಿನ ಮೇಲಿನ ತೆರಿಗೆಯ ಪದ್ಧತಿ ಸೇರಿದಂತೆ ಹನ್ನೊಂದು ಬೇಡಿಕೆಗಳನ್ನು ಇಟ್ಟರು. ಇದನ್ನು ಇರ್ವಿನ್ ತಿರಸ್ಕರಿಸಲಿಲ್ಲ.
* ಉಪ್ಪಿನ ಮೇಲಿನ ತೆರಿಗೆಯನ್ನು ವಿರೋಧಿಸಿ ತಾವೇ ಉಪ್ಪು ತಯಾರಿಸಿ ಕಾನೂನುಭಂಗ ಚಳವಳಿ ಆರಂಭಿಸಿದರು.
* ಈ ಚಳವಳಿಯಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರಾದ ವಿಜಯಲಕ್ಷ್ಮಿ ಪಂಡಿತ್, ಕಮಲಾನೆಹರು, ವಲ್ಲಭಾಯಿ ಪಟೇಲ್ ಮುಂತಾದವರನ್ನು ಬಂಧಿಸಿದರು.
* ಈ ಚಳುವಳಿಯು ದೇಶದ ನಾನಾ ಭಾಗಗಳಲ್ಲಿ ಬ್ರಿಟೀಷರ ಕಾನೂನುಗಳನ್ನು ವಿರೋಧಿಸಲು ವ್ಯಾಪಿಸಿ ಪ್ರೇರೇಪಿಸಿತು.

9. 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ವಿವರಿಸಿ.

ಉ. * ಕ್ರಿಪ್ಸ್ ಆಯೋಗವನ್ನು ವಿರೋಧಿಸಿ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಚಳುವಳಿ ರೂಪುಗೊಂಡಿತು.
* ಗಾಂಧೀಜಿಯವರು ಭಾರತೀಯರಿಗೆ 'ಮಾಡು ಇಲ್ಲವೇ ಮಡಿ' ಕರೆ ಕೊಟ್ಟರು.
* ಚಳುವಳಿಯ ಹಿನ್ನೆಲೆಯಲ್ಲಿ ಹೋರಾಟದ ನಾಯಕರನ್ನು ಬಂಧನಕ್ಕೊಳಪಡಿಸಿದರು.
* ಕಾಂಗ್ರೇಸ್ ನಾಯಕರು ಬಂಧನದಲ್ಲಿದ್ದ ಕಾರಣ ಕಾಂಗ್ರೇಸ್ಸೇತರ ಸಂಘಟನೆಗಳು ಹೋರಾಟದಲ್ಲಿ ಮುಖ್ಯ ಪಾತ್ರವಹಿಸಿದವು.
* ಮುಂದಿನ ಚಳುವಳಿಯ ನೇತೃತ್ವವನ್ನು ಜಯಪ್ರಕಾಶ್ ನಾರಾಯಣರವರು ವಹಿಸಿಕೊಂಡರು.
* ಸಮಾಜವಾದಿಗಳು 'ದಿ ಫ್ರೀಡಂ ಸ್ಟ್ರಗಲ್ ಫ್ರಾಟ್' ಎಂಬ ದಾಖಲೆಯ ಮೂಲಕ ಕಾರ್ಯತಂತ್ರ ಅನುಷ್ಠಾನಕ್ಕೆ ತಂದರು.
* ಕಾರ್ಮಿಕರಿಗೆ ತರಬೇತಿಯನ್ನು ನೀಡುವ ಮೂಲಕ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಕರೆಯಿತ್ತರು.
* ಈ ಚಳುವಳಿಯಲ್ಲಿ ಮುಸ್ಲಿಂ ಲೀಗ್ ಭಾಗವಹಿಸಲಿಲ್ಲ.

# ಅಧ್ಯಾಯ–9

# ಸ್ವಾತಂತ್ರ್ಯೋತ್ತರ ಭಾರತ

## ಕಾರ್ಡ್–3

1. ದೇಶೀಯ ಸಂಸ್ಥಾನಗಳ ವಿಲೀನೀಕರಣವನ್ನು ಸರ್ದಾರ್ ವಲ್ಲಬಾಯ್ ಪಟೇಲರು ಸಮರ್ಥವಾಗಿ ನಿರ್ವಹಿಸಿದರು. ಈ ಹೇಳಿಕೆಯನ್ನು ಸಮರ್ಥಿಸಿ.

ಉ. * ಭಾರತ ಸ್ವತಂತ್ರವಾದಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು

* ಬ್ರಿಟಿಷರು ಈ ಸಂಸ್ಥಾನಗಳಿಗೆ ಭಾರತ, ಪಾಕಿಸ್ಥಾನದಲ್ಲಿ ವಿಲೀನವಾಗುವ ಅಥವಾ ಸ್ವತಂತ್ರವಾಗಿರುವ ನಿರ್ಧಾರ ಕೈಗೊಳ್ಳಲು ಸ್ವತಂತ್ರ ನೀಡಿತು.
* ಭಾರತ 1947ರ ವಿಲೀನ ಕಾಯ್ದೆಯಂತೆ ಭಾರತ ಕೆಲವು ಸವಲತ್ತು ಮತ್ತು ಸ್ಥಾನಮಾನಗಳನ್ನು ನೀಡಿ ಭಾರತದಲ್ಲಿ ವಿಲೀನವಾಗಲು ಆಹ್ವಾನ ನೀಡಿತು.
* ಜುನಾಗಡ್, ಹೈದರಾಬಾದ್ ಮತ್ತು ಕಾಶ್ಮೀರಗಳು ಭಾರತ ಒಕ್ಕೂಟದಲ್ಲಿ ವಿಲೀನವಾಗಲು ನಿರಾಕರಿಸಿದವು.
* ಭಾರತದ ಗೃಹಮಂತ್ರಿಯಾಗಿದ್ದ ವಲ್ಲಬಾಯ್ ಪಟೇಲರು ದೇಶೀಯ ಸಂಸ್ಥಾನ ವಿಲೀನಿಕರಣದ ನೇತೃತ್ವ ವಹಿಸಿದರು.
* ಜುನಾಗಡದ ದಿವಾನರ ಬೇಡಿಕೆ ಹಾಗೂ ಜನರ ಇಚ್ಚೆಯಂತೆ ಸೈನ್ಯದ ಸಹಾಯದಿಂದ ಶಾಂತಿ ಸ್ಥಾಪನೆ ಮಾಡಿ 1949ರಲ್ಲಿ ಭಾರತದಲ್ಲಿ ವಿಲೀನವಾಯಿತು.
* ಹೈದರಾಬಾದ್‌ನ ನಿಜಾಮ ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಸ್ವತಂತ್ರವಾಗಿರಲು ನಿರ್ಧರಿಸಿ ಕ್ರೂರ ಕ್ರಮ ಕೈಗೊಂಡನು.
* ಭಾರತೀಯ ಸೇನೆ ನಿಜಾಮನನ್ನು ಸೋಲಿಸಿ 1948ರಲ್ಲಿ ಹೈದರಾಬಾದನ್ನು ವಿಲೀನಗೊಳಿಸಲಾಯಿತು.
* ಜಮ್ಮು ಕಾಶ್ಮೀರದಲ್ಲಿ ಪಾಕಿಸ್ಥಾನ ಆಕ್ರಮಣ ಮಾಡಿದಾಗ ಹರಿಸಿಂಗನ ಕೋರಿಕೆಯಂತೆ ಭಾರತೀಯ ಸೈನ್ಯ ಕಾರ್ಯಚರಣೆ ನಡೆಸಿ 1949ರಂದು ಕಾಶ್ಮೀರವನ್ನು ಭಾರತದಲ್ಲಿ ವಿಲೀನಗೊಳಿಸಲಾಯಿತು.
* ಈ ಎಲ್ಲಾ ಸಂದರ್ಭಗಳಲ್ಲೂ ಸರ್ದಾರ್ ಪಟೇಲರ ಪಾತ್ರ ಅದ್ವಿತೀಯವಾದುದಾಗಿತ್ತು.

# ಅಧ್ಯಾಯ–10

# 20ನೆ ಶತಮಾನದ ರಾಜಕೀಯ ಆಯಾಮಗಳು

## ಕಾರ್ಡ್–3

1. ನಾಜಿ ಸಿದ್ಧಾಂತ ಜರ್ಮನಿಯ ನಾಶಕ್ಕೆ ಕಾರಣ ಸಮರ್ಥಿಸಿ.

ಉ. * ನಾಜಿ ಸಿದ್ಧಾಂತದ ಪ್ರಕಾರ ಜರ್ಮನರು ಶ್ರೇಷ್ಟರು
* ಜಗತ್ತನ್ನು ಆಳಲು ಜರ್ಮನರು ಮಾತ್ರ ಯೋಗ್ಯರು
* ಬೇರೆ ಜನಾಂಗವನ್ನು ಹೀನಾಯವಾಗಿ ಕಂಡಿತು.
* ಹಿಟ್ಲರನ ಸಾಮೂಹಿಕ ...... ಖ್ಯಾತಿ ಪಡೆದವು.
* ಈ ಸಿದ್ಧಾಂತದಿಂದ 2ನೇ ಮಹಾಯುದ್ಧ ಜರುಗಿತು.
* 2ನೇ ಮಹಾಯುದ್ಧದಲ್ಲಿ ಜರ್ಮನಿ ಸರ್ವನಾಶವಾಯಿತು.

2. ಶೀತಲ ಸಮರ ಜಗತ್ತಿನಲ್ಲಿ ಯುದ್ಧದ ಆತಂಕವನ್ನು ಸೃಷ್ಟಿಸಿತು ಈ ಹೇಳಿಕೆಯನ್ನು ಸಮರ್ಥಿಸಿ.

ಉ. * ಎರಡೂ ಬಣಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ ತೀವ್ರಗೊಂಡಿತು.
* ಜಗತ್ತಿನಾದ್ಯಂತ ಶಸ್ತ್ರಾಸ್ತ್ರಗಳ ಮಾರಾಟ ವ್ಯಾಪಕವಾಯಿತು.
* ಮಿಲಿಟರಿ ಮೈತ್ರಿಕೂಟಗಳ ರಚನೆ
* ಯುದ್ಧಾಸ್ತ್ರಗಳ ಕಾರ್ಖಾನೆಗಳು ಬೆಳೆದವು.
* ಗೂಢಚರ್ಯ ವ್ಯಾಪಕವಾಯಿತು.
* ವ್ಯೋಮ ಸಮರದಂತಹ ವಿಜ್ಞಾನ ತಂತ್ರಜ್ಞಾನದ ಪೈಪೋಟಿ.
* ಹಲವು ರಾಷಟ್ರಗಳ ನಡುವೆ ಯುದ್ಧಗಳು ಸಂಭವಿಸಿದವು.

## ರಾಜ್ಯ ಶಾಸ್ತ್ರ : ಅಧ್ಯಾಯ–1

# ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

### ಕಾರ್ಡ್–3

## I. ಈ ಕೆಳಗಿನ ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ.

1. ಭಾರತ ಸರ್ಕಾರವು 1988ರಲ್ಲಿ 'ರಾಷ್ಟ್ರೀಯ ಸಾಕ್ಷರತಾಮಿಷನ್' ಸ್ಥಾಪನೆಯ ಉದ್ದೇಶ.

ಉ. ಎ) ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು

ಬಿ) ಮಹಿಳೆಯರನ್ನು ಸಾಕ್ಷರರನ್ನಾಗಿ ಮಾಡಲು

ಸಿ) ಮಹಿಳೆಯರಲ್ಲಿ ಜಾಗೃತಿ ಮೂಡಿಸಲು

ಡಿ) ಪುರುಷರನ್ನು ಮಾತ್ರ ಸಾಕ್ಷರರನ್ನಾಗಿ ಮಾಡಲು

2. ಕರ್ನಾಟಕ ಸರ್ಕಾರ 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮ ಜಾರಿಗೆ ತಂದ ಉದ್ದೇಶ

ಉ. ಎ) ಭ್ರಷ್ಟಾಚಾರ ನಿರ್ಮೂಲನೆಗಾಗಿ

ಬಿ) ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ

ಸಿ) ನಗರ ಪ್ರದೇಶಗಳ ಮಹಿಳೆಯರ ವಿಕಾಸಕ್ಕಾಗಿ

ಡಿ) ನಗರ ಮತ್ತು ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ

3. 2001 ರಿಂದ ಇಡೀ ದೇಶಾದ್ಯಂತ 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣದ ವ್ಯವಸ್ಥೆಗಾಗಿ ಜಾರಿಗೆ ತಂದ ಕಾರ್ಯಕ್ರಮ

ಉ. ಎ) ಕೂಲಿಗಾಗಿ ಕಾಳು ಯೋಜನೆ ಬಿ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ

ಸಿ) ಸರ್ವ ಶಿಕ್ಷಣ ಅಭಿಯಾನ ಡಿ) ಸಾಕ್ಷರ ಭಾರತ ಕಾರ್ಯಕ್ರಮ

## II. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.

1. ಕೋಮುವಾದ ದೇಶದ ಐಕ್ಯತೆಗೆ/ಏಕತೆಗೆ ಮಾರಕವಾಗಿದೆ ಹೇಗೆ?

ಉ. * ಸಾಮಾಜಿಕವಾಗಿ ಭಿನ್ನತೆ ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣ ಮೂಡಿಸುತ್ತದೆ.

* ಕೋಮುವಾದವು ಗುಂಪುಗಾರಿಕೆ & ರಾಜಕೀಯ ಪೈಪೋಟಿ ಉಂಟುಮಾಡುತ್ತದೆ.
* ಕೋಮುವಾದವು ರಾಷ್ಟ್ರೀಯ ಸಮಗ್ರತೆಯನ್ನು ಭಂಗಪಡಿಸುತ್ತದೆ.
* ಸಮಾಜದ ನೆಮ್ಮದಿಯನ್ನು ಕೆಡಿಸುವುದಲ್ಲದೆ ವ್ಯಕ್ತಿಗಳು ಜೀವನ ಹಾಗೂ ಸೊತ್ತುಗಳ ನಾಶಕ್ಕೆ ಕಾರಣವಾಗುತ್ತದೆ.

# ಅಧ್ಯಾಯ–2

# ಭಾರತದ ವಿದೇಶಾಂಗ ನೀತಿ

## ಕಾರ್ಡ್–3

1. ನಿಶ್ಯಸ್ತ್ರೀಕರಣ ಎಂದರೇನು?

ಉ. ಕೆಲವು ನಿರ್ದಿಷ್ಟ ಬಗೆಯ ಅಥವಾ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತ ಹಂತವಾಗಿ ಇಲ್ಲವಾಗಿಸುವುದೇ

**II. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿರಿ.**

1. ಪ್ರಚಲಿತ ಜಗತ್ತಿಗೆ ನಿಶ್ಯಸ್ತ್ರೀಕರಣ ಅತಿ ಅಗತ್ಯ ಎಂದು ಭಾರತ ಪ್ರತಿಪಾದಿಸುತ್ತಿದೆ. ಏಕೆ?

ಉ. * ನಿಶ್ಯಸ್ತ್ರೀಕರಣವೆಂದರೆ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ಆಗಿದೆ.
* ಜಗತ್ತಿನಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆ ಮಾರಾಟ ಸಂಗ್ರಹಣೆಯಲ್ಲಿ ಭಾರಿ ಪೈಪೋಟಿ ನಡೆದಿದೆ.
* ಶಸ್ತ್ರಾಸ್ತ್ರಗಳ ಪೈಪೋಟಿಯಿಂದ 3ನೇ ಮಹಾಯುದ್ಧ ನಡೆಯಬಹುದೆಂಬ ಆತಂಕ ಹಲವು ರಾಷ್ಟ್ರಗಳಲ್ಲಿ ಉಂಟಾಗಿದೆ.
* ಶಸ್ತ್ರಾಸ್ತ್ರಗಳ ಪೈಪೋಟಿಗೆ ಒಳಗಾದ ರಾಷ್ಟ್ರಗಳು ತಪ್ಪು ಗ್ರಹಿಕೆಯಿಂದಲೂ, ಬೇಕಂತಲೂ ಒಂದರ ಮೇಲೊಂದು ಯುದ್ಧ ಶಸ್ತ್ರಾಸ್ತ್ರಗಳನ್ನು, ಅಣ್ವಸ್ತ್ರಗಳನ್ನು ತಯಾರಿಸಿ ಉಪಯೋಗಿಸುವ ಸಂಭವವಿರುತ್ತದೆ.
* ಭಾರತ ಶಾಂತಿ, ಪ್ರಿಯ ರಾಷ್ಟ್ರವಾಗಿದ್ದು ಶಾಂತಿ ಸೌಹಾರ್ದತೆಗೆ ಒತ್ತು ನೀಡಿದೆ.

2. ವಸಾಹತು ಶಾಹಿತ್ವವನ್ನು ಭಾರತವು ವಿರೋಧಿಸಲು ಕಾರಣಗಳೇನು?

ಉ. * ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನ ಸ್ವಾಧೀನ ತೆಗೆದುಕೊಂಡು ಆದೇಶದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುತ್ತದೆ.
* ವಸಾಹತು ಶಾಹಿತ್ವವು ಆದೇಶವನ್ನು ರಾಜಕೀಯವಾಗಿ & ಆರ್ಥಿಕವಾಗಿ ಶೋಷಣೆಗೆ ಒಳಪಡಿಸುತ್ತದೆ.
* ಒಂದು ದೇಶದ ಧಾರ್ಮಿಕ & ಸಾಮಾಜಿಕ ಹಿತಾಸಕ್ತಿಗೆ ಧಕ್ಕೆ ಉಂಟಾಮಾಡುತ್ತವೆ.
* ಭಾರತವು ಯುರೋಪಿಯನ್ನ ವಸಾಹತು ಶಾಹಿತ್ವ ನೀತಿಗೆ ಒಳಗಾದ ರಾಷ್ಟ್ರವಾಗಿತ್ತು.
* ಆದ್ದರಿಂದ ಭಾರತ ಸ್ವಾಭಾಮಿಕವಾಗಿಯೇ ಪ್ರಪಂಚದ ಯಾವುದೇ ಮೂಲೆಯಲ್ಲೂ ವಸಾಹತು ಷಾಹಿತ್ವ ಇರಕೂಡದೆಂಬ ನಿಲುವನ್ನು ಪ್ರತಿಪಾದಿಸುತ್ತದೆ.

3. ಅಲಿಪ್ತ ನೀತಿ ಎಂದರೇನು? ಭಾರತ ಅಲಿಪ್ತ ನೀತಿಯನ್ನು ಪ್ರತಿಪಾದಿಸುತ್ತಿದೆ. ಏಕೆ?

ಉ. * ಯಾವುದೇ ಶಕ್ತಿ ಶಾಲಿ ಬಣಗಳ ಗುಂಪಿಗೆ ಸೇರದೇ ತಟಸ್ಥ ನೀತಿಯನ್ನು ಅನುಸರಿಸುವುದು.

* 2ನೇ ಜಾಗತಿಕ ಮಹಾಯುದ್ಧ ನಂತರ ಜಗತ್ತು ಅಮೇರಿಕಾ & ರಷ್ಯಾ ಒಕ್ಕೂಟದಲ್ಲಿ ನೇತೃತ್ವದಲ್ಲಿ ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು.
* ಜಗತಿನಲ್ಲಿ ಉಂಟಾಗಿರುವ ವೈರತ್ವ ಸಂಘರ್ಷ ಭಯ ಮುಂತಾದುವುಗಳನ್ನು ನಿಯಂತ್ರಿಸಲು
* 3ನೇ ಮಹಾಯುದ್ಧದ ಕಡೆ ಸಾಗುತ್ತಿರುವ ಜಗತ್ತನ್ನು ತಡೆಗಟ್ಟಲು ಹಾಗೂ ಯುದ್ಧದ ವಾತಾವರಣ ತಗ್ಗಿಸಲು
* ನ್ಯಾಯ ಅನ್ಯಾಯ ಎರಡನ್ನು ನಿಷ್ಪಕ್ಷವಾಗಿ ತೂಗಿ ನೋಡಿ ತೀರ್ಮಾನಿಸಲು.

# ಅಧ್ಯಾಯ–3

# ಅನ್ಯ ರಾಷ್ಟ್ರಗಳೊಂದಿಗೆ ಭಾರತ ಸಂಬಂಧ

## ಕಾರ್ಡ್–3

**I. ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿರಿ.**

1. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ಭಾರತದ ಬಾಂಧವ್ಯ ಉತ್ತಮವಾಗಿಲ್ಲ ಏಕೆ?

ಉ. * ಚೀನಾ ಟಿಬೇಟನ್ನು ವಶಪಡಿಸಿಕೊಂಡದ್ದು
* 1962ರಲ್ಲಿ ಚೀನಾ ಭಾರತದ ಮೇಲೆ ದಾಳಿ ಮಾಡಿದ್ದು
* ಭಾರತ, ಚೀನಾ ನಡುವಿನ ಗಡಿ ಸಮಸ್ಯೆ
* ಅರುಣಾಚಲ ಪ್ರದೇಶವನ್ನು ತನ್ನದೆಂದು ವಾದಿಸುತ್ತಿರುವುದು
* ಅಣ್ವಸ್ತ್ರಗಳ ತಯಾರಿ
* ಗಡಿಯಲ್ಲಿ ಚೀನಾ ಮಿಲಿಟರಿ ಪಡೆಗಳ ಅತೀಕ್ರಮಣ

2. 'ಭಾರತ ಮತ್ತು ಶ್ರೀಲಂಕಾ ಬಾಂದವ್ಯ ಐತಿಹಾಸಿಕವಾದದ್ದು' ಈ ಹೇಳಿಕೆಯನ್ನು ಸಮರ್ಥಿಸಿರಿ.

ಉ. * ರಾಮಾಯಣ ಕಾಲದಿಂದಲೂ ಭಾರತ & ಶ್ರೀಲಂಕಾ ಉತ್ತಮ ಸಂಬಂಧ ಇದೆ.
* ಬೌದ್ಧ ಧರ್ಮ ಭಾರತೀಯ ಬಿಕ್ಷುಗಳಿಂದ ಶ್ರೀಲಂಕಾದಲ್ಲಿ ಹರಿಡಿತ್ತು.
* ರಾಜಕೀಯ & ಆರ್ಥಿಕ ರಂಗದಲ್ಲಿ ಭಾರತ ಶ್ರೀಲಂಕಾದೊಂದಿಗೆ ಬಾಂಧವ್ಯ ಹೊಂದಿದೆ.
* ಸಮುದ್ರ ವ್ಯಾಪಾರ ಒಪ್ಪಂದ
* ಎಲ್.ಟಿ.ಟಿ.ಇ ಎಂಬ ತಮಿಳು ಪ್ರತ್ಯೇಕವಾದಿಗಳನ್ನು ನಿಯಂತ್ರಿಸಲು ಮಿಲಿಟರಿ ಸಹಾಯ
* ಸಿಂಹಳಿಯರ ಮತ್ತು ತಮಿಳರ ನಡುವೆ ಉತ್ತಮ ಬಾಂಧವ್ಯ

# ಅಧ್ಯಾಯ–4

# ಜಾಗತಿಕ ಸಮಸ್ಯೆಗಳು ಹಾಗೂ ಭಾರತ ಪಾತ್ರ

## ಕಾರ್ಡ್–3

**I. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ಮಾನವ ಹಕ್ಕುಗಳನ್ನು ಭಾರತ ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ' ಹೇಗೆ?

ಉ. * ಸಂವಿದಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ.
* ವಿಶ್ವಸಂಸ್ಥೆ ಹಾಗೂ ಜಾಗತಿಕ ವೇದಿಕೆಗಳಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಯನ್ನು ಸಮರ್ಥಿಸಿರಿ.
* ಜನಾಂಗ ಹತ್ಯೆ ಹಾಗೂ ದಬ್ಬಾಳಿಕೆ, ಶೋಷಣೆಗಳನ್ನು ವಿರೋದಿಸಿದೆ.
* ಗುಲಾಮಗಿರಿ ಪದ್ಧತಿ, ಮಾನವರ ಮಾರಾಟ ಮಹಿಳಾ ಶೋಷಣೆಯನ್ನು ನಿಷೇದಿಲಾಗಿದೆ.

2. ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ತಗ್ಗಿಸಲು ಪ್ರಪಂಚದಲ್ಲಿ ಆದ ಒಪ್ಪಂದಗಳಾವುವು?

ಉ. * 1963ರ ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧ ಒಪ್ಪಂದ
* ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ
* ಪಾಕ್ಷಿಕ ಪ್ರಯೋಗ ನಿಷೇದ ಒಪ್ಪಂದ
* ಸಮಗ್ರ ಪರೀಕ್ಷಣಾ ನಿಷೇದ ಒಪ್ಪಂದ
* ಫಲಿಕ ನಿಷೇದ ಒಪ್ಪಂದ

3. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು?

ಉ. * ಈ ರಾಷ್ಟ್ರಗಳು ಸ್ವಾತಂತ್ರ್ಯಗೊಂಡರು ಆರ್ಥಿಕ & ಸಾಮಾಜಿಕವಾಗಿ ಹಿಂದುಳಿದಿವೆ.
* ಔದ್ಯೋಗಿಕ, ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಹಿಂದೆ ಉಳಿದಿವೆ.
* ಜನರ ಜೀವನ ಮಟ್ಟ ಕೆಳಮಟ್ಟದಲ್ಲಿದೆ
* ಶಿಕ್ಷಣ ಆರೋಗ್ಯ ಕೃಷಿ ಕ್ಷೇತ್ರದಲ್ಲಿ ಹಿಂದೆ ಇದೆ.
* ರಾಷ್ಟ್ರೀಯ ಆದಾಯ & ತಲಾ ಆದಾಯ ಕಡಿಮೆ ಇರುತ್ತದೆ

4. ಜಾಗತಿಕ ಆರ್ಥಿಕ ಅಸಮಾನತೆಯ ನಿವಾರಣೆಗೆ ಭಾರತ ಪ್ರತಿಪಾದಿಸಿಧ ಅಂಶಗಳಾವುವು?

ಉ. * ಷರತ್ತುಗಳಿಲ್ಲದ ಮುಂದುವರೆದ ರಾಷ್ಟ್ರಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡುವುದು.
